ಭಾನುವಾರ, ಜುಲೈ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 207 | ಪುಟ 18
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತನ್ವಿ ಶರ್ಮಾಗೆ ಕಂಚು

ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿ ತನ್ವಿ ಶರ್ಮಾ ಇಂಡೊನೇಷ್ಯಾದ ಸೋಲೊದಲ್ಲಿ ನಡೆದ ಏಷ್ಯಾ ಜೂನಿಯರ್ ವೈಯಕ್ತಿಕ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು

ಹಿಮಲಿಂಗ ದರ್ಶನ

ಅಮರನಾಥ ಗುಹಾ ದೇಗುಲಕ್ಕೆ ಶನಿವಾರ 8,300 ಯಾತ್ರಾರ್ಥಿಗಳು ಭೇಟಿ ನೀಡಿದ್ದು, ಈ ವರ್ಷ ಹಿಮಲಿಂಗದ ದರ್ಶನ ಪಡೆದ ಭಕ್ತರ ಸಂಖ್ಯೆ 3.68 ಲಕ್ಷ ತಲುಪಿದೆ

‘ಭಯ ಹುಟ್ಟಿಸುತ್ತಿರುವ ನಾರಿಯರ ನಡೆ’ 7

ಭಾರಿ ಮಳೆ: ಉಕ್ಕಿ ಹರಿದ ನದಿಗಳು 5

"THE LEADER IN RURAL EDUCATION EXCELLENCE"

ನಮ್ಮ ಎಕ್ಸೆಲ್ ಅಕಾಡೆಮಿಕ್ಸ್® ಬೆಂಗಳೂರು

IIT-Main & Advanced | NEET | BITS | AIIMS | JIPMER | CET | COMED-K

ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್, ನಂ.326, ಪೀಪಲ್ ಟ್ರೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ, ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು

7676-91-7777, 9513657041, 9535656277

SCAN QR CODE FOR MORE DETAILS

REG. OPEN FOR REGULAR

NEET, K-CET, IIT-JEE

LONG TERM COURSE

2ND PUC/12TH, +2 STUDYING / PASSED STUDENTS

POSTAL COACHING

1ST PUC & 2ND PUC, 11TH & 12, +1 & +2 STUDYING STUDENTS

CELEBRATING 15 SUCCESSFUL YEARS Hardwork & Dedication

EXCEL ACADAMICS

ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು

ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

‘ಉತ್ತರ’ದ ಪ್ರತಿಭಾ ವಲಸೆ

ಗುಣಮಟ್ಟದ ಶಿಕ್ಷಣದ ಸೆಳೆತ, ಅವಿಭಜಿತ ದಕ್ಷಿಣ ಕನ್ನಡಕ್ಕೆ ಕಿರೀಟ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ದ್ವಿತೀಯ ಪಿಯು 2024ರ ಫಲಿತಾಂಶದಲ್ಲಿ ಉತ್ತಮ ಅಂಕ ಪಡೆದಿದ್ದ ಧಾರವಾಡದ ಸಂಪಿಗೆ ನಗರದ ವಿದ್ಯಾರ್ಥಿನಿ ಮನೆಯಲ್ಲಿ ಸಂಭ್ರಮ ತುಂಬಿತ್ತು. ಸ್ಥಳೀಯ ಗಣ್ಯರು, ಬಂಧುಗಳು, ಸ್ನೇಹಿತರು, ಕುಟುಂಬದ ಹಿತೈಷಿಗಳು ಆಕೆಯ ಮನೆಗೆ ಭೇಟಿ ನೀಡಿ ಅಭಿನಂದನೆ ಸಲ್ಲಿಸುತ್ತಿದ್ದರು.

ಆದರೆ.. ಧಾರವಾಡ ಜಿಲ್ಲೆಯ ಯಾವುದೇ ಪಿಯು ಕಾಲೇಜಿನ ಮುಂದೆ ಹಾಕಿದ್ದ ಸಾಧನಾ ಫಲಕದಲ್ಲಿ ಆಕೆಯ ಭಾವಚಿತ್ರ ಕಾಣಲಿಲ್ಲ. ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು, ಯಾವುದೇ ಕಾಲೇಜಿನ ಆಡಳಿತ ಮಂಡಳಿ, ಉಪನ್ಯಾಸಕ ವರ್ಗ ಅಲ್ಲಿ ಸುಳಿಯಲಿಲ್ಲ. ಕಾರಣ.. ಆ ಜಿಲ್ಲೆಯ ರ್‍ಯಾಂಕ್‌ಗಳಿಕೆ, ಫಲಿತಾಂಶ ವೃದ್ಧಿಗೆ ಆಕೆಯ ಕೊಡುಗೆ ಇರಲಿಲ್ಲ. ಆ ವಿದ್ಯಾರ್ಥಿನಿ ಪಿಯು ಓದಿದ್ದು ಉಡುಪಿ ಜಿಲ್ಲೆಯ ಒಂದು ವಸತಿ ಶಾಲೆಯಲ್ಲಿ. ಆಕೆಯಷ್ಟೇ ಅಲ್ಲ. ಉಡುಪಿ ಮತ್ತು ಮಂಗಳೂರಿನ ಬಹುತೇಕ ವಸತಿ ಶಾಲೆಗಳಲ್ಲಿ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದ ಸಾವಿರಾರು ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆಯುತ್ತಿದ್ದಾರೆ.



ಒಳನೋಟ

ಪ್ರತಿ ಬಾರಿ ದ್ವಿತೀಯ ಪಿಯು ಫಲಿತಾಂಶ ಬಂದಾಗಲೂ ಜಿಲ್ಲಾವಾರು ಫಲಿತಾಂಶದಲ್ಲಿ ಕರಾವಳಿಯ ಅವಳಿ ಜಿಲ್ಲೆಗಳಾದ ಉಡುಪಿ, ಮಂಗಳೂರಿಗೆ ಮೊದಲ ಎರಡು ಸ್ಥಾನ ಕಾಯಂ. ಮೊದಲ 10 ಸ್ಥಾನ ಪಡೆಯುತ್ತಿರುವುದು ದಕ್ಷಿಣ ಕರ್ನಾಟಕದ ಜಿಲ್ಲೆಗಳೇ. ಪ್ರತಿ ವರ್ಷವೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಉನ್ನತ ಸ್ಥಾನದ ಶ್ರೇಯ ದೊರಕಿಸುವಲ್ಲಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಕೊಡುಗೆ ಗಣನೀಯ.

‘ಪ್ರಾಥಮಿಕ, ಪ್ರೌಢಶಾಲಾ ಹಂತದಲ್ಲಿ ನಮ್ಮಲ್ಲೂ ಉತ್ತಮ ಶಾಲೆಗಳಿವೆ. ಪದವಿಪೂರ್ವ ಕಾಲೇಜುಗಳಲ್ಲೂ ಪ್ರತಿಭಾವಂತ ಶಿಕ್ಷಕರು ಸಿಗುತ್ತಾರೆ. ಆದರೆ, ರಾಜ್ಯ ಪರೀಕ್ಷಾ ಮಂಡಳಿಗಳ ದ್ವಿತೀಯ ಪಿಯು ಪರೀಕ್ಷೆ ಜತೆಗೆ, ಸ್ಪರ್ಧಾತ್ಮಕ ಶಿಕ್ಷಣ ಜಗತ್ತಿನಲ್ಲಿ ಸಿಇಟಿ, ನೀಟ್, ಜೆಇಇ, ಐಐಟಿಯಂತಹ ಪ್ರವೇಶ ಪರೀಕ್ಷೆಗಳಿಗೂ ಏಕಕಾಲಕ್ಕೆ ಮಕ್ಕಳನ್ನು ಸಿದ್ಧಪಡಿಸುವುದು ಬಹುಮುಖ್ಯ. ಮಂಗಳೂರು, ಉಡುಪಿ ಜಿಲ್ಲೆಯ ಹಲವೆಡೆ ಇರುವ ವಸತಿ ಶಾಲೆಗಳು ಎರಡಕ್ಕೂ ಆದ್ಯತೆ ನೀಡಿವೆ. ಹಾಗಾಗಿ, ಉಡುಪಿ ಜಿಲ್ಲೆಯ ಕಾರ್ಕಳದ ಬಳಿಯ ಖಾಸಗಿ ವಸತಿ ಕಾಲೇಜಿಗೆ ಮಗಳನ್ನು ಸೇರಿಸಿದ್ದೆವು. ಆಕೆ ಉತ್ತಮ ಫಲಿತಾಂಶವನ್ನೂ ಪಡೆದಿದ್ದಾಳೆ. ನೀಟ್ ರ್‍ಯಾಂಕಿಂಗ್‌ನಲ್ಲೂ ಉನ್ನತ ಶ್ರೇಣಿ ಪಡೆದಿದ್ದಾಳೆ. ವೈದ್ಯಕೀಯ ಕೋರ್ಸ್ ಪ್ರವೇಶದ ನಿರೀಕ್ಷೆಯಲ್ಲಿ ಇದ್ದೇವೆ’ ಎನ್ನುತ್ತಾರೆ ಧಾರವಾಡದ ಪೋಷಕರಾದ ಸುಧಾ–ಸಂಜೀವ್ ಕುಮಾರ್ ದಂಪತಿ.

2024ರ ಪಿಯು ಫಲಿತಾಂಶದಲ್ಲಿ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳು ಮೊದಲೆರಡು ಸ್ಥಾನ ಪಡೆದಿವೆ. ▶6

ಮೊದಲ 10 ಸ್ಥಾನ ಪಡೆದ ಜಿಲ್ಲೆಗಳು

ಪಿಯು 2024 ಶೇಕಡಾವಾರು ಫಲಿತಾಂಶ	
ಉಡುಪಿ	93.90
ದಕ್ಷಿಣ ಕನ್ನಡ	93.57
ಬೆಂಗಳೂರು ದಕ್ಷಿಣ	85.36
ಕೊಡಗು	83.84
ಬೆಂಗಳೂರು ಉತ್ತರ	83.31
ಉತ್ತರ ಕನ್ನಡ	82.93
ಶಿವಮೊಗ್ಗ	79.91
ಬೆಂಗಳೂರು ಗ್ರಾಮಾಂತರ	79.70
ಚಿಕ್ಕಮಗಳೂರು	79.56
ಹಾಸನ	77.56

ಎಸ್‌ಎಸ್‌ಎಲ್‌ಸಿ 2024ರ ಶೇಕಡವಾರು ಫಲಿತಾಂಶ	
ದಕ್ಷಿಣ ಕನ್ನಡ	91.12
ಉಡುಪಿ	89.96
ಉತ್ತರ ಕನ್ನಡ	83.19
ಶಿವಮೊಗ್ಗ	82.29
ಕೊಡಗು	82.21
ಹಾಸನ	82.12
ಶಿರಸಿ	80.47
ಚಿಕ್ಕಮಗಳೂರು	77.09
ಬೆಂಗಳೂರು ಗ್ರಾಮಾಂತರ	74.02
ಬೆಂಗಳೂರು ದಕ್ಷಿಣ	72.03

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಂದು ಪಠ್ಯ ವಿಷಯಕ್ಕೂ ಪ್ರತ್ಯೇಕ ಅಧ್ಯಾಪಕರ ಸಂಘಗಳಿದ್ದು, ಅವು ವಿಷಯವಾರು ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳುತ್ತವೆ. ಮಾದರಿ ಪ್ರಶ್ನೆಪತ್ರಿಕೆ, ನಿಖರ ಉತ್ತರ, ಅಂಕ ಹಂಚಿಕೆ ಬಗ್ಗೆ ತರಬೇತಿ ನೀಡುತ್ತವೆ. ಅಣಕು ಪರೀಕ್ಷೆಗಳನ್ನು ನಡೆಸಿ ವಿದ್ಯಾರ್ಥಿಗಳಲ್ಲಿ ಸ್ಥೈರ್ಯ ತುಂಬುತ್ತವೆ. ಸಮರ್ಪಣಾ ಭಾವದ ಅಧ್ಯಾಪಕ ವೃಂದವೂ ಇಲ್ಲಿನ ಶೈಕ್ಷಣಿಕ ಗುಣಮಟ್ಟಕ್ಕೆ ಕಾರಣ

ಜಯಾನಂದ ಎನ್. ಸುವರ್ಣ, ಅಧ್ಯಕ್ಷ, ದಕ್ಷಿಣ ಕನ್ನಡ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ

ಧರ್ಮಸ್ಥಳ: ಮೃತದೇಹ ಹೂತು ಹಾಕಿದ ಪ್ರಕರಣ • ತನಿಖೆ ಆರಂಭಿಸಿದ ಎಸ್‌ಐಟಿ

ದೂರುದಾರನ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತುಹಾಕಲಾಗಿದೆ ಎಂಬ ಕುರಿತು ದಾಖಲಾದ ಪ್ರಕರಣದ (ಸಂಖ್ಯೆ 39/2025) ಸಾಕ್ಷಿ ದೂರುದಾರ ಇಲ್ಲಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳ ಮುಂದೆ ಶನಿವಾರ ಹಾಜರಾದರು.

ಬಾಡಿಗೆ ಕಾರಿನಲ್ಲಿ ಇಬ್ಬರು ವಕೀಲರೊಂದಿಗೆ ಬಂದ ಸಾಕ್ಷಿ ದೂರುದಾರ ವ್ಯಕ್ತಿ ಇಲ್ಲಿನ ಮಲ್ಲಿಕಟ್ಟೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ಪ್ರವಾಸಿ ಬಂಗಲೆಯಲ್ಲಿ ಉಳಿದುಕೊಂಡಿರುವ ಎಸ್‌ಐಟಿ ಅಧಿಕಾರಿಗಳನ್ನು ಶನಿವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಭೇಟಿಯಾದರು. ಸುಮಾರು 8 ಗಂಟೆ ಪ್ರವಾಸಿ ಮಂದಿರದಲ್ಲೇ ಇದ್ದು ಹೇಳಿಕೆ ನೀಡಿದರು. ಎಸ್‌ಐಟಿಯಲ್ಲಿರುವ ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್. ಅನುಚೇತ್ ಮತ್ತು ಆಂತರಿಕ ಭದ್ರತಾ ವಿಭಾಗದ ಎಸ್.ಪಿ ಜಿತೇಂದ್ರ ಕುಮಾರ್ ದಯಾಮ ನೇತೃತ್ವದ ಪೊಲೀಸರ ತಂಡವು ಸಾಕ್ಷಿ ದೂರುದಾರನಿಂದ ಹೇಳಿಕೆ ದಾಖಲಿಸಿಕೊಂಡಿತು.

ಸಾಕ್ಷಿ ದೂರುದಾರನನ್ನು ಕರೆದುಕೊಂಡು ಬಂದಿದ್ದ ವಕೀಲರು, ಅವರಿಂದ ಎಸ್‌ಐಟಿ ಹೇಳಿಕೆ ದಾಖಲಿಸಿಕೊಂಡ ಬಗ್ಗೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಬಂದ ಬಾಡಿಗೆ ಕಾರಿನಲ್ಲಿ ಸಾಕ್ಷಿ ದೂರುದಾರನ ಜೊತೆ ಅವರು ಸಂಜೆ 7.25ರ ಸುಮಾರಿಗೆ ನಿರ್ಗಮಿಸಿದರು.

ಎಸ್‌ಐಟಿ ಅಧಿಕಾರಿಗಳ ಮುಂದೆ ಹೇಳಿಕೆ ದಾಖಲಿಸಲು ಮಲ್ಲಿಕಟ್ಟೆಯ ಪ್ರವಾಸಿ ಬಂಗಲೆಗೆ ಬರುವಾಗ ಹಾಗೂ ಅಲ್ಲಿಂದ ನಿರ್ಗಮಿಸುವಾಗ ಸಾಕ್ಷಿ ದೂರುದಾರ ಮುಖಗವಸು ಹಾಕಿಕೊಂಡಿದ್ದರು. ಅವರಿಂದ ಹೇಳಿಕೆ ದಾಖಲಿಸಿಕೊಂಡ ಬಗ್ಗೆ ಮಾಹಿತಿ ಹಂಚಿಕೊಳ್ಳಲು ಎಸ್‌ಐಟಿಯ ಅಧಿಕಾರಿಗಳು ನಿರಾಕರಿಸಿದರು.

ಧರ್ಮಸ್ಥಳ ಠಾಣೆಗೆ ಅಧಿಕಾರಿಗಳ ಭೇಟಿ: ಎಸ್‌ಐಟಿ ಅಧಿಕಾರಿಗಳು ಶುಕ್ರವಾರ ರಾತ್ರಿ ಧರ್ಮಸ್ಥಳ ಪೊಲೀಸ್ ಠಾಣೆಗೆ ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡರು.

ಜಿತೇಂದ್ರ ಕುಮಾರ್ ದಯಾಮ, ಡಿವೈಎಸ್ಪಿ ಲೋಕೇಶ್, ಇನ್‌ಸ್ಪೆಕ್ಟರ್ ಮಂಜುನಾಥ್ ಹಾಗೂ ಇಬ್ಬರು ಸಿಬ್ಬಂದಿ ಧರ್ಮಸ್ಥಳ ಠಾಣೆಗೆ ಭೇಟಿ ನೀಡಿದ್ದರು. ಸುಮಾರು 2 ಗಂಟೆ ಠಾಣೆಯಲ್ಲೇ ಇದ್ದ ಅಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಕಲೆಹಾಕಿದರು. ಬಳಿಕ ಧರ್ಮಸ್ಥಳ ಠಾಣೆಯ ಪಿ.ಎಸ್.ಐ ಸಮರ್ಥ್ ಅವರಿಂದ ದಾಖಲೆಗಳನ್ನು ಪಡೆದುಕೊಂಡು ನಿರ್ಗಮಿಸಿದರು ಎಂದು ಗೊತ್ತಾಗಿದೆ. ▶9



ಧರ್ಮಸ್ಥಳ ಗ್ರಾಮದಲ್ಲಿ ವರ್ಷಗಳ ಹಿಂದೆ ನಡೆದಿದೆ ಎನ್ನಲಾದ ಅಸಹಜ ಸಾವು ಪ್ರಕರಣದ ಸಾಕ್ಷಿ ದೂರುದಾರ ವ್ಯಕ್ತಿ, ಇಬ್ಬರು ವಕೀಲರ ಜೊತೆ ಮಂಗಳೂರಿನ ಮಲ್ಲಿಕಟ್ಟೆಯಲ್ಲಿರುವ ಪ್ರವಾಸಿ ಬಂಗಲೆಯಲ್ಲಿ ಎಸ್‌ಐಟಿ ಅಧಿಕಾರಿಗಳ ಮುಂದೆ ಹೇಳಿಕೆ ದಾಖಲಿಸಲು ಶನಿವಾರ ಹಾಜರಾದರು ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- 8 ಗಂಟೆ ವಿಚಾರಣೆ ಎದುರಿಸಿದ ದೂರುದಾರ
- ಎಸ್‌ಐಟಿಗೆ ಕಡತ ಹಸ್ತಾಂತರಿಸಿದ ಧರ್ಮಸ್ಥಳ ಪೊಲೀಸರು

ಮೊಹಾಂತಿ ಇಂದು ಜಿಲ್ಲೆಗೆ ಭೇಟಿ?

ಎಸ್‌ಐಟಿ ಮುಖ್ಯಸ್ಥರಾಗಿರುವ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ಅವರು ಭಾನುವಾರ (ಇದೇ 27ರಂದು) ಈ ಪ್ರಕರಣದ ತನಿಖೆ ಸಲುವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಲಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಾಕ್ಷಿ ದೂರುದಾರನಿಂದ ಹೇಳಿಕೆ ಪಡೆದುಕೊಂಡಿರುವ ಎಸ್‌ಐಟಿ ಅಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಲಿರುವ ಅವರು ಈ ಪ್ರಕರಣದ ತನಿಖೆಯಲ್ಲಿ ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ’ ಎಂದು ಮೂಲಗಳು ಹೇಳಿವೆ.

ಕಸಾಪ: ವಿಚಾರಣೆ ತಡೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನ (ಕಸಾಪ) 2023-24ನೇ ಸಾಲಿನ ಆದಾಯ, ಅನುದಾನ, ಖರೀದಿ ಮತ್ತು ಮಾರಾಟ ಸೇರಿದಂತೆ ಆರ್ಥಿಕ ವಹಿವಾಟಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ನೇಮಿಸಿ ಬೆಂಗಳೂರು ನಗರ ಜಿಲ್ಲಾ 2ನೇ ವಲಯದ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿ ಹೊರಡಿಸಿರುವ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

‘ಸಹಕಾರ ಸಂಘಗಳ ನಿಬಂಧಕರ ಆದೇಶಕ್ಕೆ ತಡೆ ನೀಡಬೇಕು’ ಎಂದು ಕೋರಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಸಲ್ಲಿಸಿದ್ದ ರಿಟ್ ಅರ್ಜಿಯ ಮಧ್ಯಂತರ ಮನವಿ ಬಗ್ಗೆ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ. ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಕಸಾಪದ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಸುವುದನ್ನು ರದ್ದುಪಡಿಸಿರುವ ಸಹಕಾರ ಸಂಘಗಳ ಉಪ ನಿಬಂಧಕರ ಕ್ರಮವನ್ನು ಪೀಠ ಅಮಾನ್ಯಗೊಳಿಸಿದೆ.

‘ವಿಚಾರಣಾಧಿಕಾರಿ ನೇಮಿಸಿರುವ ಬಗೆಗಿನ ನಿಯಮಗಳು ಹಾಗೂ ಪ್ರಕರಣದ ದಾಖಲೆಗಳ ಆಧಾರದ ಮೇಲೆ ವಿಸ್ತೃತವಾಗಿ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳಬೇಕಿದೆ. ಹಾಗಾಗಿ, ಆದೇಶಕ್ಕೆ ತಡೆ ನೀಡಲು ಇದು ಸೂಕ್ತವಾದ ಹಂತವಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ▶9

ಟಿಡಿಆರ್ ವಿವಾದ ವಿಚಾರಣೆ ಆ.18ಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಅರಮನೆ ಮೈದಾನದ 15.36 ಎಕರೆಗೆ ₹3,400 ಕೋಟಿಯ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಗಳನ್ನು ಮೈಸೂರಿನ ರಾಜವಂಶಸ್ಥರಿಗೆ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ನೀಡಿರುವ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿರುವ ಪುನರ್ ಪರಿಶೀಲನಾ ಅರ್ಜಿಯನ್ನು ತ್ರಿಸದಸ್ಯ ಪೀಠ ಆಗಸ್ಟ್ 18ರಂದು ವಿಚಾರಣೆ ನಡೆಸಲಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



‘ಕೆಲವು ನ್ಯಾಯಾಧೀಶರಿಗೆ ಜನಪ್ರಿಯತೆಯ ವ್ಯಸನ’

ಪ್ರಜಾವಾಣಿ ವಾರ್ತೆ

ರಾಮನಗರ: ಕೆಲವು ನ್ಯಾಯಾಧೀಶರು ಜನಪ್ರಿಯತೆಯ ಹಿಂದೆ ಬಿದ್ದಿದ್ದಾರೆ. ಕೊಲೆ ಸೇರಿದಂತೆ ಯಾವ ಪ್ರಕರಣ ಬಂದರೂ ಜಾಮೀನು ಕೊಡುತ್ತಾರೆ ಇಲ್ಲವೇ ಪ್ರಕರಣವನ್ನೇ ಮುಗಿಸುತ್ತಾರೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಹೇಳಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ ಮತ್ತು ಜಿಲ್ಲಾ ವಕೀಲರ ಸಂಘ ನಗರದ ಕೋರ್ಟ್ ಸಂಕೀರ್ಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾನೂನು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಇಂತಹ ನ್ಯಾಯಾಧೀಶರ ಮಕ್ಕಳನ್ನೇ ಯಾರಾದರೂ ಹೊಡೆದು ಹಾಕಬೇಕು. ಆಗಲೂ ಇವರು ಎರಡೇ ತಿಂಗಳಿಗೆ ಜಾಮೀನು ಕೊಡುತ್ತಾರೆಯೇ’ ಎಂದು ಅವರು ಪ್ರಶ್ನಿಸಿದರು.

ಹಣವಿದ್ದವರಿಗೆ ಮಾತ್ರ ನ್ಯಾಯ ಎಂಬ ಪರಿಸ್ಥಿತಿ ನಿರ್ಮಾಣವಾದರೆ ಸಮಾಜ ನೋಡುವವರು ಯಾರು? ಕಕ್ಷಿದಾರರು ಹೈಕೋರ್ಟ್ ಮೊರೆ ಹೋಗಲು ಕಷ್ಟಪಡುತ್ತಾರೆ. ಇನ್ನು ಸುಪ್ರೀಂ ಕೋರ್ಟ್‌ಗೆ ಹೋಗಲು ಎಷ್ಟು ಜನರಿಗೆ ಸಾಧ್ಯ ಎಂದು ಕೇಳಿದರು. ▶9

ವಕೀಲರು ಸನ್ಯಾಸಿಯಂತೆ ಜೀವಿಸಬೇಕು. ಕುದುರೆ ಥರಾ ಕೆಲಸ ಮಾಡಬೇಕು. ವಕೀಲನಿಗೆ ಒಂದು ಕೇಸ್ ತಪ್ಪಿದರೆ ಮತ್ತೊಂದು ಸಿಗುತ್ತದೆ. ಕಕ್ಷಿದಾರನಿಗೆ ನ್ಯಾಯ ಸಿಗದಿದ್ದರೆ ಆತನ ಬದುಕು ಮುಳುಗುತ್ತದೆ.

ಎಚ್.ಪಿ. ಸಂದೇಶ್, ಹೈಕೋರ್ಟ್ ನ್ಯಾಯಮೂರ್ತಿ

ನೇಮಕಾತಿ ಪರೀಕ್ಷೆಗೆ ಹಾಜರಾಗಿದ್ದ ಮಹಿಳೆಯನ್ನು ಆಸ್ಪತ್ರೆಗೆ ಸಾಗಿಸುವಾಗ ನಡೆದ ಘಟನೆ

ಆಂಬುಲೆನ್ಸ್‌ನಲ್ಲೇ ಸಾಮೂಹಿಕ ಅತ್ಯಾಚಾರ

ಗಯಾ, ಬಿಹಾರ (ಪಿಟಿಐ): ಗೃಹ ರಕ್ಷಕ ದಳದ ನೇಮಕಾತಿ ಪರೀಕ್ಷೆ ವೇಳೆ ಪ್ರಜ್ಞೆ ತಪ್ಪಿ ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಹೋಗುತ್ತಿದ್ದ ವೇಳೆ ತಮ್ಮ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಮಹಿಳೆಯೊಬ್ಬರು ಶನಿವಾರ ದೂರು ಸಲ್ಲಿಸಿದ್ದಾರೆ.

ಮಹಿಳೆ ನೀಡಿದ ದೂರು ಮತ್ತು ಅವರು ಆರೋಪಿಗಳನ್ನು ಗುರುತಿಸಿದ ಆಧಾರದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಜುಲೈ 24ರಂದು ಪರೀಕ್ಷೆಗೆ ಹಾಜರಾಗಿದ್ದ ಮಹಿಳೆಯು ಮೂರ್ಛೆ ತಪ್ಪಿ ಬಿದ್ದಿದ್ದಾರೆ. ತಕ್ಷಣವೇ ಅವರನ್ನು ಆಂಬುಲೆನ್ಸ್‌ನಲ್ಲಿ ಗಯಾದಲ್ಲಿರುವ ಅನುಗ್ರಹ ನಾರಾಯಣ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಪ್ರಜ್ಞೆ ಬಂದ ವೇಳೆ ವಾಹನದ ಒಳಗಡೆಯೇ ಅತ್ಯಾಚಾರ ಎಸಗಿದ್ದಾರೆ ಎಂದು ಮಹಿಳೆ ದೂರು ನೀಡಿದ್ದಾರೆ’ ಎಂದು ಗಯಾ (ನಗರ) ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಮಾನಂದ್ ಕುಮಾರ್ ಕೌಶಲ್ ತಿಳಿಸಿದ್ದಾರೆ.

‘ಆಂಬುಲೆನ್ಸ್‌ನಲ್ಲಿದ್ದ ಚಾಲಕ ಹಾಗೂ ಟೆಕ್ನಿಷಿಯನ್ ಅನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಈ ವೇಳೆ ಅವರ ಉತ್ತರ ತೃಪ್ತಿಕರವಾಗಿರಲಿಲ್ಲ. ಅವರ ವಿರುದ್ಧ ಬಿಎನ್‌ಎಸ್‌ನ ವಿವಿಧ ಕಲಂಗಳ ಅಡಿಯಲ್ಲಿ ದೂರು ದಾಖಲಿಸಿ, ಬಂಧಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆ ಪೂರ್ಣಗೊಂಡಿದ್ದು, ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ರಾಜ್ಯ ವಿಧಾನಸಭೆಗೆ ಈ ವರ್ಷದ ಅಕ್ಟೋಬರ್– ನವೆಂಬರ್ ತಿಂಗಳಲ್ಲಿ ಚುನಾವಣೆ ನಡೆಯಲಿದೆ. ಅತ್ಯಾಚಾರ ಪ್ರಕರಣ ವರದಿಯಾದ ಬೆನ್ನಲ್ಲೇ, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್, ವಿರೋಧ ಪಕ್ಷವಾದ ಕಾಂಗ್ರೆಸ್, ಆರ್‌ಜೆಡಿ ಮುಖಂಡರು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

‘ಅತ್ಯಾಚಾರ ಘಟನೆ ಖಂಡನಾರ್ಹ. ತಪ್ಪಿತಸ್ಥರನ್ನು ಬಂಧಿಸಬಹುದು. ಆದರೆ, ಸರ್ಕಾರವು ಇಂತಹ ಅಪರಾಧಗಳನ್ನು ತಡೆಯುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಪಾಸ್ವಾನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ▶9

ರಾಜ್ಯದಲ್ಲಿ ಪರಿಸ್ಥಿತಿ ಭಯಾನಕವಾಗಿದ್ದು, ಕಾನೂನು ಸುವ್ಯವಸ್ಥೆಯನ್ನು ನಿಯಂತ್ರಿಸಲು ವಿಫಲವಾಗಿರುವ ಸರ್ಕಾರವನ್ನು ಬೆಂಬಲಿಸುತ್ತಿರುವುದಕ್ಕೆ ವಿಷಾದವಿದೆ

ಚಿರಾಗ್ ಪಾಸ್ವಾನ್, ಕೇಂದ್ರ ಸಚಿವ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಇ-ಖಾತಾಗಾಗಿ ಪಾವತಿಸಬೇಕಾದ ಮೊತ್ತ!
ಯಾರಿಗೂ ಹೆಚ್ಚಿನ ಮೊತ್ತವನ್ನು ಪಾವತಿಸಬೇಡಿ!!

- BBMPeAasthi.karnataka.gov.in ನಲ್ಲಿ ನೀವೇ ಸ್ವತ: ಅಂತಿಮ ಇ-ಖಾತಾ ಡೌನ್‌ಲೋಡ್ ಮಾಡಿಕೊಳ್ಳಲು ರೂ. 125/-
- ಬೆಂಗಳೂರು ಒನ್ ಕೇಂದ್ರಗಳಲ್ಲಿ ಸೇವೆಯನ್ನು ಪಡೆಯಲು (ಬಿ.ಬಿ.ಎಂ.ಪಿ ಗೆ ರೂ. 125/- + ಬಿ-ಒನ್‌ಗೆ ಸೇವಾ ಶುಲ್ಕವನ್ನು ರೂ. 45/- ಮತ್ತು ಪ್ರತಿ ಪುಟದ ಸ್ಕ್ಯಾನ್‌ಗಾಗಿ ರೂ. 5/-) ಪಾವತಿಸುವುದು.
- ಜನಸೇವಕರ ಮೂಲಕ ನಿಮ್ಮ ಮನೆ ಬಾಗಿಲಿಗೆ ಇ-ಖಾತಾ ಸೇವೆಯನ್ನು ಪಡೆಯಲು (ಬಿ.ಬಿ.ಎಂ.ಪಿ ಗೆ ರೂ.125/- ಹಾಗೂ ಜನಸೇವಕ ಶುಲ್ಕ [45+115]=160/-ಮತ್ತು ಪ್ರತಿ ಪುಟದ ಸ್ಕ್ಯಾನ್‌ಗಾಗಿ ರೂ. 5/-) ಪಾವತಿಸುವುದು.

ಜನಸೇವಕರಿಂದ ಸೇವೆ ಪಡೆಯಲು ಕರೆ ಮಾಡಿ 080 - 4920 3888
ಅಥವಾ ಆನ್‌ಲೈನ್ ಮೂಲಕ ಬುಕ್ ಮಾಡಲು
@ https://janasevaka.karnataka.gov.in

ಇವುಗಳೊಂದಿಗೆ ಸಿದ್ಧರಾಗಿರಿ:
- ಮಾಲೀಕರ ಆಧಾರ್
- ಆಸ್ತಿ ತೆರಿಗೆ ಎಸ್.ಎ.ಎಸ್. ಅರ್ಜಿ ಸಂಖ್ಯೆ
- ಸ್ವತ್ತಿನ ಕ್ರಯ/ನೋಂದಾಯಿತ ಪತ್ರ, ಸಂಖ್ಯೆ (ಕಾವೇರಿ ತಂತ್ರಾಂಶದಿಂದ ವಿದ್ಯುನ್ಮಾನವಾಗಿ ಪಡೆದುಕೊಳ್ಳುತ್ತದೆ)
- ಬೆಸ್ಕಾಂ ಖಾತೆ ಸಂಖ್ಯೆ (ಖಾಲಿ ನಿವೇಶನಗಳಿಗೆ ಅಗತ್ಯವಿಲ್ಲ)
- ಸ್ವತ್ತಿನ ಛಾಯಾಚಿತ್ರ

ಇ-ಖಾತಾ ಸಹಾಯವಾಣಿಗೆ ಕರೆ ಮಾಡಿ
94806 83695
ಯಾವುದೇ ಬೃ.ಬೆಂ.ಮ.ಪಾಲಿಕೆ ಕಚೇರಿಗೆ ಭೇಟಿ ನೀಡಬೇಡಿ ಅಥವಾ ಕರೆ ಮಾಡಬೇಡಿ

ಯೂಟ್ಯೂಬ್ ನಲ್ಲಿ ತರಬೇತಿ ವಿಡಿಯೋ ವೀಕ್ಷಿಸಿರಿ

ಸ್ವಂತ ಅಂತಿಮ ಇ-ಖಾತಾ ರಚಿಸಿ (ಕನ್ನಡ) @https://tinyurl.com/36suwvn2
ಸ್ವಂತ ಅಂತಿಮ ಇ-ಖಾತಾ ರಚಿಸಿ (ಆಂಗ್ಲ) @https://tinyurl.com/2we4peah

ಸೂರ್ಯೋದಯ: 6:04 ಸೂರ್ಯಾಸ್ತ: 6:48 | ಚಂದ್ರೋದಯ: ಬೆ. 7:18 ಚಂದ್ರಾಸ್ತ: ರಾ. 8:12 | ಶನಿವಾರದ ಉಷ್ಣಾಂಶ: ಗರಿಷ್ಠ 27° ಕನಿಷ್ಠ 20°

ಭಾನುವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ | ಸೋಮವಾರ 27°-20° | ಮಂಗಳವಾರ 28°-21° | ಬುಧವಾರ 28°-21°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಸಾಧ್ಯತೆ

ಹೆಬ್ಬಾಳ: ಮತ್ತೊಂದು ಮೇಲ್ಸೇತುವೆ

ಸಂಚಾರ ದಟ್ಟಣೆ ನಿವಾರಣೆ: ಡಿಪಿಆರ್ ತಯಾರಿಸಲು ಅನುಮೋದನೆ

• ಕೆ.ಎಸ್.ಸುನಿಲ್

ಮುಖ್ಯಾಂಶಗಳು
- ನಾಗವಾರ ಕಡೆಯಿಂದ ಮೇಲ್ಸೇತುವೆ ನಿರ್ಮಾಣ
- ಯೋಜನೆಯ ಸಾಧಕ-ಬಾಧಕ ಕುರಿತು ಚರ್ಚೆ
- ತಜ್ಞರ ಸಲಹೆ ಪಡೆದು ಅನುಷ್ಠಾನಕ್ಕೆ ನಿರ್ಧಾರ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಬಳಿ ವಾಹನ ದಟ್ಟಣೆ ಕಡಿಮೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವತಿಯಿಂದ ನಡೆಯುತ್ತಿರುವ ಲೂಪ್ (ಪಥ) ನಿರ್ಮಾಣ ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ. ಈ ನಡುವೆ ಹೊಸ ಮೇಲ್ಸೇತುವೆಯ ನಿರ್ಮಾಣಕ್ಕೆ ಪ್ರಾಧಿಕಾರ ಮುಂದಾಗಿದೆ.

ನಾಗವಾರ ಕಡೆಯಿಂದ ಮೇಲ್ಸೇತುವೆ ನಿರ್ಮಿಸಲು ಉದ್ದೇಶಿಸಿದ್ದು, ಇದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ಹೋಗುವ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸಲಿದೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಪ್ರಾಧಿಕಾರದ ಆಡಳಿತ ಮಂಡಳಿ ಅನುಮೋದನೆ ನೀಡಿದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಣೆಗಾಗಿ ಪ್ರಾಧಿಕಾರವು 2019ರಲ್ಲಿ ಮೇಲ್ಸೇತುವೆ ಯೋಜನೆ ರೂಪಿಸಿತ್ತು. ₹25 ಕೋಟಿ ವೆಚ್ಚದಲ್ಲಿ 11 ಬೃಹತ್ ಕಂಬಗಳನ್ನು ನಿರ್ಮಿಸಿತ್ತು. ಆದರೆ, ಯೋಜನೆ ರ‍್ಯಾಂಪ್ ಜೋಡಣೆಯು ಭವಿಷ್ಯದ ಮೆಟ್ರೊ ಮಾರ್ಗಗಳಿಗೆ ಅಡ್ಡಿಪಡಿಸುತ್ತದೆ ಎಂಬ ಕಾರಣಕ್ಕೆ ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ಆಕ್ಷೇಪ ವ್ಯಕ್ತಪಡಿಸಿತ್ತು. ಹಾಗಾಗಿ ಆ ಯೋಜನೆಯನ್ನು ಕೈಬಿಡಲಾಗಿತ್ತು.

ಜಂಕ್ಷನ್ ಬಳಿಯ ಟ್ರೀ ಪಾರ್ಕ್‌ನಲ್ಲಿ ನಿರ್ಮಿಸಿದ್ದ ಸಿಮೆಂಟ್ ಕಂಬಗಳು ಹಾಗೆ ಉಳಿದುಕೊಂಡಿವೆ. ಈಗ ಬಿಎಂಆರ್‌ಸಿಎಲ್ ಆಕ್ಷೇಪಣೆ ಇಲ್ಲದ್ದರಿಂದ ಹೊಸ ಮೇಲ್ಸೇತುವೆ ಯೋಜನೆಗೆ ಅನುಮತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಿಶೇಷ

ಹೊಸ ಮೇಲ್ಸೇತುವೆ ಒಂದು ಕಿ.ಮೀ. ಗಿಂತ ಹೆಚ್ಚು ಉದ್ದವಿರುವ ಸಾಧ್ಯತೆಯಿದ್ದು, ನಾಗವಾರದಿಂದ ತುಮಕೂರು ರಸ್ತೆ, ಮೇಖ್ರಿ ವೃತ್ತ, ಬಿಇಎಲ್ ವೃತ್ತ ಮತ್ತು ಕೆಐಎ ಕಡೆಗೆ ಸಂಚಾರ ದಟ್ಟಣೆ ತಪ್ಪಿಸಲು ಇದರಿಂದ ಅನುಕೂಲವಾಗಲಿದೆ. ಈ ಯೋಜನೆಯ ವೆಚ್ಚ ಕಡಿಮೆ ಮಾಡಲು ಮತ್ತು ನಿರ್ಮಾಣದಿಂದ ಉಂಟಾಗುವ ಅಡಚಣೆಗಳನ್ನು ಕಡಿತಗೊಳಿಸಲು ಕಂಬಗಳನ್ನು ಮರುಬಳಕೆ ಮಾಡುವ ಕುರಿತು ಚಿಂತನೆ ನಡೆಸಿದ್ದು, ಈ ಕಂಬಗಳನ್ನು ಹೊಸ ಮೇಲ್ಸೇತುವೆ ವಿನ್ಯಾಸದಲ್ಲಿ ಸುರಕ್ಷಿತವಾಗಿ ಸಂಯೋಜಿಸಬಹುದೇ ಎಂಬುದರ ಬಗ್ಗೆಯೂ ಚರ್ಚೆ ನಡೆಸಲಾಗಿದೆ.

'ನಾಗವಾರ ಕಡೆಯಿಂದ ಬರುವ ವಾಹನಗಳ ಸಂಚಾರಕ್ಕೆ ಪ್ರತ್ಯೇಕ ರ‍್ಯಾಂಪ್ ಇಲ್ಲದಿರುವುದರಿಂದ ವಾಹನ ಸವಾರರಿಗೆ ತೀವ್ರ ಸಮಸ್ಯೆಯಾಗಿದೆ. ಹೆಬ್ಬಾಳ ಮೇಲ್ಸೇತುವೆಗೆ ನೇರ ಪ್ರವೇಶವಿಲ್ಲದ ಕಾರಣ ಪ್ರಯಾಣಿಕರು ಕೆಂಪಾಪುರ ವೃತ್ತದ ಮೂಲಕ ಎಸ್ಟೀಮ್ ಮಾಲ್ ಬಳಿಯ ಸರ್ವಿಸ್ ರಸ್ತೆಯನ್ನು ಬಳಸುತ್ತಿದ್ದಾರೆ. ಇದು ಸಂಚಾರ ದಟ್ಟಣೆಗೆ ಪ್ರಮುಖ ಕಾರಣವಾಗಿದೆ. ಹೆಬ್ಬಾಳ ಕೆರೆಯ ಪಕ್ಕದಲ್ಲಿರುವ ರಸ್ತೆಗಳ ವಿಸ್ತರಣೆ ಕಾರ್ಯವನ್ನು ಎನ್‌ಎಚ್‌ಎಐ ಕೈಗೆತ್ತಿಕೊಂಡಿದೆ.

ಮೇಲ್ಸೇತುವೆ ನಿರ್ಮಾಣದ ಸಮಯ ಮತ್ತಿತರ ವಿಷಯಗಳು ಅಂತಿಮಗೊಳ್ಳಬೇಕಿದೆ' ಎಂದು ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದರು.

'ಈ ಯೋಜನೆಯ ಸಾಧಕ-ಬಾಧಕ ಕುರಿತು ಬಿಡಿಎ, ಬಿಬಿಎಂಪಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ಮತ್ತು ತಜ್ಞರು ಸುದೀರ್ಘ ಚರ್ಚೆ ನಡೆಸಿದ್ದಾರೆ. ತಜ್ಞರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಹೊಸ ಮೇಲ್ಸೇತುವೆ ನಿರ್ಮಾಣಗೊಂಡರೆ ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ ತಗ್ಗಿಸಲು ಅನುಕೂಲವಾಗಲಿದೆ ಎಂದು ಅಂದಾಜಿಸಲಾಗಿದೆ. ಇದು ಯೋಜನೆಯ ಆರಂಭಿಕ ಹಂತವಾಗಿದೆ' ಎಂದು ಹೇಳಿದರು.

ನಗರದ ಹೆಬ್ಬಾಳ ಮೇಲ್ಸೇತುವೆ ಬಳಿ ಲೂಪ್(ಪಥ) ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ನಾಗಮ್ಮ ಫೌಂಡೇಶನ್ ನೀಡುವ ಪ್ರಸಕ್ತ ಸಾಲಿನ 'ಚಾಣಕ್ಯ ವ್ಯಕ್ತಿತ್ವ ರತ್ನ ಪ್ರಶಸ್ತಿ'ಗಾಗಿ ಕನ್ನಡದಲ್ಲಿ ಪ್ರಕಟವಾಗಿರುವ ವ್ಯಕ್ತಿತ್ವ ವಿಕಸನದ ಕೃತಿಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿಯು ₹11 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಆಯ್ಕೆಯಾದವರಿಗೆ ಸೆಪ್ಟೆಂಬರ್ 14ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಫೌಂಡೇಶನ್ ಪ್ರಕಟಣೆಯಲ್ಲಿ ತಿಳಿಸಿದೆ.

ಆಸಕ್ತರು ತಮ್ಮ 'ವ್ಯಕ್ತಿತ್ವ ವಿಕಸನ'ದ ಕೃತಿಯ ಎರಡು ಪ್ರತಿಗಳನ್ನು ಆಗಸ್ಟ್ 20ರೊಳಗಾಗಿ, ಜಯಪ್ರಕಾಶ್ ನಾಗತಿಹಳ್ಳಿ, ಅಧ್ಯಕ್ಷರು, ನಾಗಮ್ಮ ಫೌಂಡೇಶನ್, ನಂ.462, 1ನೇ ಸಿ ಮುಖ್ಯರಸ್ತೆ, ಜೆ.ಪಿ.ನಗರ, ಬೆಂಗಳೂರು-78 ಇಲ್ಲಿಗೆ ಕಳಿಸಬಹುದು. ಹೆಚ್ಚಿನ ಮಾಹಿತಿಗೆ 9620303000 ಸಂಪರ್ಕಿಸಬಹುದು.

15 ಲಕ್ಷ ಜನರಿಗೆ ದಿನಸಿ ಕಿಟ್ ವಿತರಣೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 15 ಲಕ್ಷ ಜನರಿಗೆ ದಿನಸಿ ಕಿಟ್ ವಿತರಿಸಲಾಗುವುದು ಎಂದು ರಾಬಿನ್ ಹುಡ್ ಆರ್ಮಿ ಸಂಸ್ಥೆ ತಿಳಿಸಿದೆ.

ಸಂಸ್ಥೆಯ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಸಂಚಾಲಕ ಯೂನೀಸ್ ಮಾತನಾಡಿ, '78ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ 'ಸಂಕಲ್ಪ-78' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 1ರಿಂದ 15ರವರೆಗೆ ಈ ಅಭಿಯಾನ ನಡೆಯುತ್ತಿದ್ದು, ಐವರಿರುವ ಒಂದು ಕುಟುಂಬಕ್ಕೆ 10 ಕೆ.ಜಿ.ಯ ಒಂದು ಕಿಟ್ ವಿತರಿಸಲಾಗುತ್ತದೆ. ಪ್ರತಿ ಕಿಟ್‌ನಲ್ಲಿ 6 ಕೆ.ಜಿ. ಅಕ್ಕಿ, 2 ಕೆ.ಜಿ. ಬೇಳೆ, 2 ಕೆ.ಜಿ. ಗೋದಿ ಇರಲಿದೆ ಎಂದು ತಿಳಿಸಿದರು.

'ನಿಷ್ಪಕ್ಷಪಾತ ತನಿಖೆಯಾಗಲಿ'

ಬೆಂಗಳೂರು: 'ಬೆಳ್ತಂಗಡಿ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವೊಂದರ ಸುತ್ತಮುತ್ತಲೂ ನಡೆದ ಅಸಹಜ ಸಾವಿನ ಪ್ರಕರಣಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ-ಸಿ) ಆಗ್ರಹಿಸಿದೆ.

'ಈ ಪ್ರಕರಣದ ತನಿಖೆ ನಡೆಸಲು ರಾಜ್ಯ ಸರ್ಕಾರ ಎಸ್‌ಐಟಿ ತಂಡ ರಚಿಸಿರುವುದು ಸ್ವಾಗತಾರ್ಹ. ಈ ಭಾಗದಲ್ಲಿ ಅನೇಕ ಶವಗಳನ್ನು ಹೂತಿರುವುದಾಗಿ ಸಾಕ್ಷಿದಾರರೊಬ್ಬರು ಕೋರ್ಟ್‌ನಲ್ಲಿ ಹೇಳಿಕೆ ನೀಡಿದ್ದಾರೆ. ಆರೋಪಿಗಳು ಎಷ್ಟೇ ಪ್ರಭಾವಿಗಳಾಗಿದ್ದರೂ ಪೊಲೀಸರು ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದೇ ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದು ಎಸ್‌ಯುಸಿಐ–ಸಿ ರಾಜ್ಯ ಘಟಕದ ಕಾರ್ಯದರ್ಶಿ ಕೆ. ಉಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪಾದಚಾರಿಗಳಿಗೆ ಸೌಲಭ್ಯ ಹೆಚ್ಚಿಸಲು ಪಾಲಿಕೆ ಸಿದ್ಧ: ಮಹೇಶ್ವರ್ ರಾವ್

ಬೆಂಗಳೂರು: ಪಾದಚಾರಿಗಳಿಗೆ ಸೌಲಭ್ಯವನ್ನು ವೃದ್ಧಿಸಲು ಪಾಲಿಕೆ ಸಿದ್ಧವಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ಬಿ.ಪ್ಯಾಕ್‌ನ 'ಐಆರ್‌ಆರ್ ಸ್ಟ್ರೀಟ್ (ಒಳವರ್ತುಲ ರಸ್ತೆ): ಸ್ಥಗಿತದಿಂದ ಸಕ್ರಿಯದೆಡೆಗೆ' ಉಪಕ್ರಮದ ವರದಿಯನ್ನು ಶನಿವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪಾದಚಾರಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವ ಉಪಕ್ರಮಕ್ಕೆ ನಾವು ಹಣವನ್ನು ನೀಡುತ್ತೇವೆ. ಪಾದಚಾರಿ ಮಾರ್ಗಗಳನ್ನು ಹೆಚ್ಚಿಸಿದರೆ, ಅದನ್ನು ಬಳಸುವವರ ಪ್ರಮಾಣವೂ ಹೆಚ್ಚಾಗುತ್ತದೆ. ಸುರಕ್ಷತೆ ಸೇರಿದಂತೆ ಹಲವು ಸಮಸ್ಯೆಗಳಿಗೂ ಇದು ಪರಿಹಾರ ಕಲ್ಪಿಸುತ್ತದೆ' ಎಂದರು.

ಬಿ.ಪ್ಯಾಕ್ ಸಿಇಒ ರೇವತಿ ಅಶೋಕ್ ಮಾತನಾಡಿ, 'ಐಆರ್‌ಆರ್ ಸ್ಟ್ರೀಟ್: ಸ್ಥಗಿತದಿಂದ ಸಕ್ರಿಯದೆಡೆಗೆ' ಉಪಕ್ರಮದಡಿ, ಇಂದಿರಾನಗರದ ಕೆಎಫ್‌ಸಿ ಜಂಕ್ಷನ್‌ನಿಂದ ಕೋರಮಂಗಲದ ಮಡಿವಾಳದ ಮಸೀದಿವರೆಗಿನ 7.5 ಕಿ.ಮೀ ಒಳ ವರ್ತುಲ ರಸ್ತೆಯಲ್ಲಿ, ಸಂಚಾರ ದಟ್ಟಣೆ, ರಸ್ತೆ ಸುರಕ್ಷತೆ, ಪಾದಚಾರಿಗಳ ಸಮಸ್ಯೆ, ಕ್ರಾಸಿಂಗ್ ಇಲ್ಲದ್ದು, ಕಡಿಮೆ ಬಸ್ ಸಂಚಾರಗಳಿಗೆ ಪರಿಹಾರ ಕಲ್ಪಿಸಲಾಗಿದೆ' ಎಂದರು.

ಈ ಉಪಕ್ರಮದಡಿ ಸರ್ಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಹಲವು ಸಾಧನೆಗಳನ್ನು ಮಾಡಲಾಗಿದೆ. 2023ರ ನವೆಂಬರ್‌ನಲ್ಲಿ 17 ಬಸ್‌ಗಳಿಂದ 169 ದೈನಂದಿನ ಟ್ರಿಪ್‌ಗಳಿದ್ದವು. 2025ರ ಜುಲೈ ವೇಳೆಗೆ ಇದನ್ನು 26 ಬಸ್‌ಗಳಿಂದ 225 ಟ್ರಿಪ್‌ಗಳಿಗೆ ಹೆಚ್ಚಿಸಲಾಗಿದೆ.

ಬಿಬಿಎಂಪಿ ಸಹಯೋಗದೊಂದಿಗೆ ರಸ್ತೆಯಲ್ಲಿ ಬ್ಲ್ಯಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದೆ. ಇದರ ಪರಿಣಾಮವಾಗಿ, 2024ರ ನವೆಂಬರ್‌ನಿಂದ 2025ರ ಜನವರಿವರೆಗೆ ಯಾವುದೇ ಸಾವಿನ ಪ್ರಕರಣಗಳು ದಾಖಲಾಗಿಲ್ಲ. ರಸ್ತೆಗಳ ಮಧ್ಯೆ ಮತ್ತು ಪಾದಚಾರಿ ಮಾರ್ಗಗಳಲ್ಲಿದ್ದ 4,300 ಚೀಲಗಳಷ್ಟು ಹೆಚ್ಚು ಕಟ್ಟಡಗಳ ತ್ಯಾಜ್ಯ, 130 ನಿರ್ಮಾಣ ತಡೆಗೋಡೆಗಳು ಮತ್ತು 129 ಟನ್ ಕಸವನ್ನು ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಎನ್‌ಐಆರ್‌ಡಿಸಿ ಪ್ರಾದೇಶಿಕ ಕಚೇರಿ ಉದ್ಘಾಟನೆ

ಬೆಂಗಳೂರು: ನಗರದ ಕೋರಮಂಗಲದಲ್ಲಿ ರಾಷ್ಟ್ರೀಯ ಕೈಗಾರಿಕೆಗಳ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಳಿಯ (ಎನ್‌ಐಆರ್‌ಡಿಸಿ) ಪ್ರಾದೇಶಿಕ ಕಚೇರಿಯನ್ನು (ದಕ್ಷಿಣ ಭಾರತ) ಶನಿವಾರ ಉದ್ಘಾಟಿಸಲಾಯಿತು.

ಎನ್‌ಐಆರ್‌ಡಿಸಿಯ ಪ್ರಾದೇಶಿಕ ಕಚೇರಿಯ ಅಧ್ಯಕ್ಷ ವೆಮಪಲ್ಲಿ ಅಮಾನುಲ್ಲಾ ಮಾತನಾಡಿ, 'ಉದ್ಯಮವನ್ನು ಎಲ್ಲಿ, ಹೇಗೆ ಆರಂಭಿಸಬೇಕು ಎಂಬುದರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಮಾರ್ಗದರ್ಶನ ನೀಡುವುದಕ್ಕಾಗಿ ಎನ್‌ಐಆರ್‌ಡಿಸಿ ಪ್ರಾದೇಶಿಕ ಕಚೇರಿ ಪ್ರಾರಂಭಿಸಲಾಗಿದೆ. ಇದರಿಂದ ಉದ್ಯೋಗ ಸೃಷ್ಟಿಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಹೇಳಿದರು.

'ಉದ್ಯಮಿಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ) ಮತ್ತು ಗ್ರಾಮೀಣ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಿದೆ' ಎಂದರು.

ಎನ್‌ಐಆರ್‌ಡಿಸಿ ಅಧ್ಯಕ್ಷ ಶಂಭು ಸಿಂಗ್, ಐಸಿಎಲ್ ನಿರ್ದೇಶಕಿ ರಾಜಶ್ರೀ ಉಪಸ್ಥಿತರಿದ್ದರು.

'ಜನೋಪಕಾರಿ ದೊಡ್ಡಣ್ಣಶೆಟ್ಟರ ಕಲಾಸಿಪಾಳ್ಯ ಬಸ್ ನಿಲ್ದಾಣ' ಮರುನಾಮಕರಣ ನಾಮಫಲಕವನ್ನು ರಾಮಲಿಂಗಾರೆಡ್ಡಿ ಅನಾವರಣ ಮಾಡಿದರು

'ದೊಡ್ಡಣ್ಣಶೆಟ್ಟರ ಬಸ್ ನಿಲ್ದಾಣ' ನಾಮಫಲಕ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶತಮಾನದ ಹಿಂದೆಯೇ ಲಕ್ಷ್ಮೀ ನರಸಿಂಹಸ್ವಾಮಿ ಧರ್ಮಸಂಸ್ಥೆ ಸ್ಥಾಪಿಸಿ ಅದರಡಿಯಲ್ಲಿ ಶಾಲಾ- ಕಾಲೇಜುಗಳನ್ನು ನಿರ್ಮಿಸಿ ಸರ್ವಜನಾಂಗಕ್ಕೆ ಶಿಕ್ಷಣ ನೀಡಿದ್ದ ದೊಡ್ಡಣ್ಣ ಶೆಟ್ಟರ ಹೆಸರನ್ನು ಕಲಾಸಿಪಾಳ್ಯ ಬಸ್ ನಿಲ್ದಾಣಕ್ಕೆ ಇಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

'ಜನೋಪಕಾರಿ ದೊಡ್ಡಣ್ಣಶೆಟ್ಟರ ಕಲಾಸಿಪಾಳ್ಯ ಬಸ್ ನಿಲ್ದಾಣ' ಮರುನಾಮಕರಣದ ಫಲಕವನ್ನು ಶನಿವಾರ ಅನಾವರಣಗೊಳಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರ ಹೆಸರಿನಲ್ಲಿ ವರ್ಷದಲ್ಲಿ ಎರಡು ಬಾರಿ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗುತ್ತಿದೆ. ದೊಡ್ಡಣ್ಣ ಶೆಟ್ಟರ ಹೆಸರಿನಲ್ಲೂ ಫಲಪುಷ್ಪ ಪ್ರದರ್ಶನ ಏರ್ಪಡಿಸಲು ತೋಟಗಾರಿಕೆ ಇಲಾಖೆ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ದೊಡ್ಡಣ್ಣ ಶೆಟ್ಟರ ಸಮಾಜಸೇವೆಯನ್ನು ಗುರುತಿಸಿ ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ಜನೋಪಕಾರಿ' ಎಂಬ ಬಿರುದು ನೀಡಿದ್ದರು ಎಂದು ನೆನಪು ಮಾಡಿಕೊಂಡರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವೈಶ್ಯ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಚೆಕ್ ವಿತರಿಸಲಾಯಿತು. ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್, ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

'ಸಿಕ್ಕ ಅವಕಾಶವನ್ನು ಬಳಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಯಲಹಂಕ: 'ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಕಲಿಯುವ ಅವಧಿಯಲ್ಲಿ ಲಭ್ಯವಾಗುವ ಪ್ರತಿ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡು, ಪರಿಪೂರ್ಣ ವ್ಯಕ್ತಿಗಳಾಗಬೇಕು' ಎಂದು ಡಬ್ಲ್ಯು.ಎಲ್.ಡಿ.ಡಿ ಪ್ರೈ. ಲಿಮಿಟೆಡ್ ಕಂಪನಿಯ ಕಾರ್ಯನಿರ್ವಹಣಾಧಿಕಾರಿ ಅರಿಹಂತ್ ಜೈನ್ ಸಲಹೆ ನೀಡಿದರು.

ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 2025-26ನೇ ಶೈಕ್ಷಣಿಕ ಸಾಲಿನ ತಾಂತ್ರಿಕೇತರ ಕಾರ್ಯ ಕ್ರಮದ ನೂತನ ವಿದ್ಯಾರ್ಥಿಗಳಿಗೆ ಸ್ವಾಗತ ಕೋರುವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪದವಿ ಪಡೆದ ನಂತರ ನಿಮ್ಮೊಂದಿಗೆ ನಿಜವಾಗಿ ಉಳಿಯುವುದು ಅನುಭವ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಉತ್ಸವಗಳು, ಸ್ಪರ್ಧೆಗಳು ಹಾಗೂ ಬಹು ಇಂಟರ್ನ್‌ಷಿಪ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸ್ಪರ್ಧಾತ್ಮಕ ಜಗತ್ತಿನಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಜ್ಜಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ.ಶ್ಯಾಮರಾಜು ಮಾತನಾಡಿ, 'ವಿಶ್ವವಿದ್ಯಾಲಯವು ಪ್ರತಿಭೆಯನ್ನು ಪೋಷಿಸುವ ಮತ್ತು ನಾವೀನ್ಯವನ್ನು ಉತ್ತೇಜಿಸುವ ಕಾರ್ಯವನ್ನು ಮುಂದುವರಿಸುತ್ತಿದೆ' ಎಂದರು. ನೂತನ ವಿದ್ಯಾರ್ಥಿಗಳು ಪರಿಸರ ಕಾಳಜಿಯ ಪ್ರತಿಜ್ಞೆ ಸ್ವೀಕರಿಸಿದರು. ಪ್ರತಿ ವಿದ್ಯಾರ್ಥಿಯು 'ಒಬ್ಬ ವಿದ್ಯಾರ್ಥಿ- ಒಂದು ಮರ' ಎಂಬ ತತ್ವದಡಿ ಒಂದೊಂದು ಸಸಿಯನ್ನು ನೆಟ್ಟರು.

ಮಾರ್ವಾಡಿ ವಿಶ್ವವಿದ್ಯಾಲಯದ ಟ್ರಸ್ಟಿ ಎಂ.ಡಿ.ಜೀತ್ ಮಾರ್ವಾಡಿ, ರೇವಾ ವಿಶ್ವವಿದ್ಯಾಲಯದ ಕುಲಪತಿ ಸಂಜಯ್.ಆರ್ ಚಿಟ್ನಿಸ್, ಕುಲಸಚಿವ ಕೆ.ಎಸ್.ನಾರಾಯಣಸ್ವಾಮಿ, ಬ್ಯುಸಿನೆಸ್ ಸ್ಕೂಲ್‌ನ ಡೀನ್ ಶುಭ.ಎ. ಮತ್ತಿತರರು ಉಪಸ್ಥಿತರಿದ್ದರು.

ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 2025–26ನೇ ಶೈಕ್ಷಣಿಕ ಸಾಲಿನ ತಾಂತ್ರಿಕೇತರ ಕಾರ್ಯಕ್ರಮದ ನೂತನ ತಂಡದ ವಿದ್ಯಾರ್ಥಿಗಳಿಗೆ ಸ್ವಾಗತ ಕೋರುವ ಸಮಾರಂಭದಲ್ಲಿ ಅರಿಹಂತ್ ಜೈನ್, ಪಿ.ಶ್ಯಾಮರಾಜು, ಎಂ.ಡಿ.ಜೀತ್ ಮಾರ್ವಾಡಿ, ಡಾ.ಸಂಜಯ್ ಆರ್ ಚಿಟ್ನಿಸ್, ಕೆ.ಎಸ್.ನಾರಾಯಣಸ್ವಾಮಿ, ಶುಭ.ಎ. ಪಾಲ್ಗೊಂಡಿದ್ದರು

'ಸಂಭ್ರಮ ಶಾಲಾ ಸಭಾಂಗಣ' ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರವು ಕುವೆಂಪು ಅವರ ಆಶಯದಂತೆ ಸರ್ವ ಜನಾಂಗದ ಶಾಂತಿಯ ತೋಟವಾಗಿದೆ' ಎಂದು ಆರ್ಚ್ ಬಿಷಪ್ ಪೀಟರ್ ಮಚಾಡೊ ಹೇಳಿದರು.

ಶ್ರೀರಾಮಪುರದಲ್ಲಿರುವ 'ಭಾರತೀಯ ವಿದ್ಯಾಭವನ ಬಿಬಿಎಂಪಿ ಪಬ್ಲಿಕ್ ಶಾಲೆ'ಯಲ್ಲಿ ಭಾರತೀಯ ವಿದ್ಯಾಭವನ, ವಿವಿಧ ದಾನಿಗಳ ನೆರವಿನಿಂದ ನಿರ್ಮಿಸಿರುವ 'ಸಂಭ್ರಮ ನೂತನ ಶಾಲಾ ಸಭಾಂಗಣ' ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಒಂದು ಕಾಲದಲ್ಲಿ ಕಲಿಕಾ ವಾತಾವರಣವೇ ಇರದಿದ್ದ ಈ ಶಾಲೆಯನ್ನು ಭಾರತೀಯ ವಿದ್ಯಾಭವನವು ದಾನಿಗಳ ಸಹಾಯದಿಂದ ಉತ್ತಮವಾಗಿ ರೂಪಿಸಿದೆ. ಇಲ್ಲಿ ಶೈಕ್ಷಣಿಕ ಗುಣಮಟ್ಟ ಉತ್ಕೃಷ್ಟವಾಗಿದೆ. ಪ್ರತಿವರ್ಷ ಹಲವರು ಈ ಶಾಲೆಯಲ್ಲಿ ಸೀಟು ಕೊಡಿಸಿ ಎಂದು ಒತ್ತಾಯಿಸುತ್ತಾರೆ' ಎಂದು ಹೇಳಿದರು.

ವಿದ್ಯಾಭವನದ ಅಧ್ಯಕ್ಷ ವಕೀಲ ಕೆ.ಜಿ.ರಾಘವನ್ ಮಾತನಾಡಿದರು. ಇದೇ ವೇಳೆ, ಶಾಲೆಯ ಕೊಠಡಿ ಮತ್ತು ಸುಸಜ್ಜಿತ ಸಭಾಂಗಣ ನಿರ್ಮಿಸಲು ₹2 ಕೋಟಿ ನೀಡಿದ ಉದ್ಯಮಿ ಸಿ.ಜಿ. ಜಾರ್ಜ್ ಥಾಮಸ್ ಮತ್ತು ಸಹೋದರರು ಹಾಗೂ ವಾಸ್ತುಶಿಲ್ಪಿ ವಿಶ್ವನಾಥ್ ಅವರನ್ನು ಗೌರವಿಸಲಾಯಿತು. ಬೌದ್ಧ, ಕ್ರೈಸ್ತ, ಜೈನ, ಇಸ್ಲಾಂ, ಸಿಖ್ ಮತ್ತು ಹಿಂದೂ ಧಾರ್ಮಿಕ ಮುಖಂಡರು ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮ ನಡೆಸಿಕೊಟ್ಟರು. ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ವಂದಿಸಿದರು. ಜಂಟಿ ನಿರ್ದೇಶಕಿ ನಾಗಲಕ್ಷ್ಮೀ ಕೆ.ರಾವ್, ಕೆ. ಜೈರಾಜ್, ಅಭಿನವ ರವಿಕುಮಾರ್, ಸೀತಾರಾಮಚಂದ್ರ, ಕಮಲ್‌ಪಂತ್, ಖಜಾಂಚಿ ಪೀಯೂಶ್ ಜೈನ್ ಭಾಗವಹಿಸಿದ್ದರು.

ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ಚಿತ್ರ

ನಗರದ ಸಂಪಿಗೆ ರಸ್ತೆಯಲ್ಲಿರುವ ಜೋಯಾಲುಕ್ಕಾಸ್ ಆಭರಣ ಮಳಿಗೆಯಲ್ಲಿ 'ಬ್ರಿಲಿಯನ್ಸ್ ಡೈಮಂಡ್ ಜ್ಯುವೆಲರಿ ಪ್ರದರ್ಶನ'ವನ್ನು ಉದ್ಘಾಟಿಸಲಾಯಿತು. ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್ (ಜೆಎಬಿ) ಅಧ್ಯಕ್ಷ ಚೇತನ್ ಕುಮಾರ್ ಮೆಹ್ತಾ, ಡಿ.ಕೆ. ಡೆವಲಪರ್ಸ್ ಆ್ಯಂಡ್ ಬಿಲ್ಡರ್ ಮಾಲೀಕ ಧನರಾಜ್ ಮತ್ತು ಕಲಾವತಿ, ಜೋಯಾಲುಕ್ಕಾಸ್‌ನ ರಿಟೇಲ್ ವಿಭಾಗದ ಡೆಪ್ಯುಟಿ ಜನರಲ್ ಮ್ಯಾನೇಜರ್ ರಾಜೇಶ್ ಕೃಷ್ಣನ್ ಮತ್ತು ಮಾರ್ಕೆಟಿಂಗ್ ವಿಭಾಗದ ಡೆಪ್ಯುಟಿ ಜನರಲ್ ಮ್ಯಾನೇಜರ್ ಅನಿಶ್ ವರ್ಗೀಸ್ ಉಪಸ್ಥಿತರಿದ್ದರು

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ

Sreenidhi

(RBI License No: UBD.KAN 0027P, Dated 6/1/2003)

ಆಡಳಿತ ಕಛೇರಿ: ನಂ.113, ಆರ್.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು–560004.

ದೂ: 080 26601152/22410151 Website: www.sreenidhibank.com

27ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನೋಟೀಸು

ಆತ್ಮೀಯ ಸದಸ್ಯರೇ,

ನಮ್ಮ ಬ್ಯಾಂಕಿನ '2024–25ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು' ದಿನಾಂಕ 17–08–2025 ರಂದು ಭಾನುವಾರ ಬೆಳಿಗ್ಗೆ 10:30 ಗಂಟೆಗೆ 'ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್' ಹೊಸೂರು ಮುಖ್ಯ ರಸ್ತೆ, ಲಕ್ಕಸಂದ್ರ ಬಸ್ ನಿಲ್ದಾಣದ ಎದುರು, ಬೆಂಗಳೂರು–560029, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ಆಹ್ವಾನ ಪತ್ರಿಕೆ ಮತ್ತು ವಾರ್ಷಿಕ ವರದಿಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಅಂಚೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟಿಸ್ ಎಂದು ತಿಳಿದು ತಾವೆಲ್ಲರೂ ಈ ಸಭೆಯಲ್ಲಿ ಖುದ್ದಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕಾಗಿ ವಿನಂತಿ.

ದಿನಾಂಕ: 27/07/2025 ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸ್ಥಳ: ಬೆಂಗಳೂರು ಸಹಿ/– ಜಿ. ಪ್ರವೀಣ್ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು/ಸಿ.ಇ.ಒ

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ ಸಿಎಒ/ಸಿಎನ್/ಬಿಎನ್‌ಸಿ/129/2025 ದಿನಾಂಕ 21.07.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಪುನರ್ವಸತಿ ಕೆಲಸದ	ರೂ.4,53,08,138/–

ಭಾಗವಾಗಿ ಹಾಸನ ಮತ್ತು ಮಾವಿನಕೆರೆ ನಿಲ್ದಾಣಗಳ ನಡುವಿನ ಕೆ ಎಂ 99/500–600 ನಲ್ಲಿ ಎಲ್‌ಸಿ ನಂಬರ್ 89 ಬದಲಿಗೆ ಆರ್‌ಒಬಿ ನಿರ್ಮಾಣಕ್ಕಾಗಿ 3 ಸೆಲ್‌ಗಳ 3 ಸಂಖ್ಯೆಗಳ ಆರ್‌ಸಿಸಿ ಬಾಕ್ಸ್ ವಯಾಡಕ್ಟ್, ಕ್ರ್ಯಾಶ್ ಬ್ಯಾರಿಯರ್, ವೇರಿಂಗ್ ಕೋರ್ಸ್ ಮತ್ತು ಇತರ ಸಂಬಂಧಿತ ಕೆಲಸಗಳಿಗೆ ವಾಲ್ ಲಿಫ್ಟ್‌ಗಳು ಮತ್ತು ಟಾಪ್ ಸ್ಲ್ಯಾಬ್ ನಿರ್ಮಾಣ ಮುಂತಾದ ಉಳಿಕೆ ಕೆಲಸಗಳು. (ಟೆಂಡರ್ ಉಲ್ಲೇಖ ಸಂಖ್ಯೆ: ಎಂವೈಎಸ್–ಎಎಸ್‌ಕೆ–ಎಲ್‌ಸಿ–89–ಬ್ಯಾಲೆನ್ಸ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–08–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಎಂಜಿನಿಯರ್/ನಿರ್ಮಾಣ/ಕೆಲಸಗಳು/ಬೆಂಗಳೂರು ದಂಡು.

ಪಿಯುಬಿ/328/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ : ಸಿಎಒ/ಸಿಎನ್/ಬಿಎನ್‌ಸಿ/127/2025 ದಿನಾಂಕ: 15.07.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಸಿವಿಲ್ ಮತ್ತು	ರೂ. 413,07,10,552/–

ಟ್ರ್ಯಾಕ್ ಕೆಲಸಗಳು, ಸಿಗ್ನಲ್ ಮತ್ತು ದೂರಸಂಪರ್ಕ ಕೆಲಸಗಳು, ತುಮಕೂರು–ಚಿತ್ರದುರ್ಗ–ದಾವಣಗೆರೆ ಹೊಸ ಮಾರ್ಗ ಯೋಜನೆಯಲ್ಲಿ ತಾವರೆಕೆರೆ (ಹೊರತುಪಡಿಸಿ) ಮತ್ತು ಹಿರಿಯೂರು (ಹೊರತುಪಡಿಸಿ) ನಿಲ್ದಾಣಗಳ ನಡುವಿನ ರೈಲ್ವೆ ವಿದ್ಯುದೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವೆಗಳನ್ನು ಒಳಗೊಂಡಂತೆ ಚೈನೇಜ್ 66400 ಮತ್ತು ಚೈನೇಜ್ 90000 (23.600 ಕಿಮೀ) ನಡುವಿನ ಹೊಸ ಬ್ರಾಡ್ ಗೇಜ್ ಮಾರ್ಗ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: ಟಿಕೆ–ಡಿವಿಜಿ–ಇಪಿಸಿ–04)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–10–2025 ರಂದು 15:00 ಗಂಟೆಯವರೆಗೆ

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
2	ಚೈನೇಜ್ 12/800	ರೂ. 238,83,93,257/–

ಮತ್ತು ಚೈನೇಜ್ 30/500 ನಡುವೆ ಹೊಸ ಬ್ರಾಡ್ ಗೇಜ್ ಮಾರ್ಗ ನಿರ್ಮಾಣಕ್ಕಾಗಿ ಎಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಇದರಲ್ಲಿ ಸಿವಿಲ್ ಕಾಮಗಾರಿಗಳು, ಸಿಗ್ನಲ್ ಮತ್ತು ದೂರಸಂಪರ್ಕ ಕೆಲಸಗಳು ಮತ್ತು ವಿದ್ಯುತ್ ಜನರಲ್ ಸರ್ವಿಸ್ ಕೆಲಸಗಳು ಊರು ಕೆರೆ (ಹೊರತುಪಡಿಸಿ) ಮತ್ತು ಕೊರಟಗೆರೆ (ಒಳಗೊಂಡಂತೆ) ಮತ್ತು ತುಮಕೂರು– ರಾಯದುರ್ಗ ಹೊಸ ಮಾರ್ಗ ಯೋಜನೆಯಡಿ ತುಮಕೂರು (0/000) ಮತ್ತು ಕೊರಟಗೆರೆ (30/500) ನಡುವಿನ ರೈಲ್ವೆ ವಿದ್ಯುದ್ದೀಕರಣ ಕೆಲಸಗಳು (ಟೆಂಡರ್ ಉಲ್ಲೇಖ ಸಂಖ್ಯೆ: ಟಿಕೆ–ಆರ್‌ಡಿಜಿ–ಇಪಿಸಿ–02–ಆರ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–11–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಅಭಿಯಂತರರು/ನಿರ್ಮಾಣ/ಕೆಲಸಗಳು/ಬೆಂಗಳೂರು ದಂಡು

ಪಿಯುಬಿ/329/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನಗರದಲ್ಲಿ ಇಂದು

'ಕಬ್ಬನ್ ಮಾರ್ಗದರ್ಶಿ ಪ್ರವಾಸಿ ನಡಿಗೆಗೆ' ಚಾಲನೆ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಎನ್.ಎ. ಹ್ಯಾರಿಸ್, ಪಿ.ಸಿ. ಮೋಹನ್, ಶಾಲಿನಿ ರಜನೀಶ್, ಶಮ್ಲಾ ಇಕ್ಬಾಲ್, ಡಿ.ಎಸ್. ರಮೇಶ್, ಎಂ. ಜಗದೀಶ್, ಜಿ. ಕುಸುಮಾ, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬಿಎಸ್‌ಎನ್‌ಎಲ್ ಗೇಟ್ ಪ್ರವೇಶದ ಹತ್ತಿರ, ಕಬ್ಬನ್ ಉದ್ಯಾನ, ಬೆಳಿಗ್ಗೆ 7.30

ಪ್ರಕೃತಿಯೆಡೆಗೆ ನಮ್ಮ ನಡಿಗೆ: ಆಯೋಜನೆ: ರಂಗ ತರಂಗ ಟ್ರಸ್ಟ್, ಸ್ಥಳ: ಬಯೋಪಾರ್ಕ್, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 7.30

20ನೇ ವಾರ್ಷಿಕೋತ್ಸವ, ಕೌಟುಂಬಿಕ ಮಿಲನಕೂಟ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ರಂಜಿತ್ ಕುಮಾರ್ ಮಂಡಲ್, ಅತಿಥಿಗಳು: ಡುಂಡಿರಾಜ್, ಸೂರ್ಯ ಕುಮಾರ್ ಗೌತಮ್, ಅಶ್ವಿನಿ ಎಂ. ಗೌಡ, ಟಿ.ಎನ್. ನರಸಿಂಹಮೂರ್ತಿ, ಎಚ್. ಲಿಂಗರಾಜ, ಜಿ. ಜೋಷಿ, ಆಯೋಜನೆ: ಹೊನ್ನುಡಿ ಕನ್ನಡ ಸಂಘ, ಸ್ಥಳ: ಡಾ.ವಿ.ಎಂ. ಘಾಟ್ಗೆ ಸಭಾಂಗಣ, ಎಚ್‌ಎಎಲ್ ಬಡಾವಣೆ, ಬೆಳಿಗ್ಗೆ 8.30

'ಕಿಟೆಲ್' ಜೀವನಯಾನ ಸಾಕ್ಷ್ಯಚಿತ್ರ ಪ್ರದರ್ಶನ: ನಿರ್ದೇಶನ: ಪ್ರಶಾಂತ್ ಪಂಡಿತ್, ಛಾಯಾಗ್ರಹಣ: ಚಿದಾನಂದ್ ಜಿ.ಎಲ್., ಫ್ಲೋರಿನಾ ಸ್ಟೈನರ್, ಸಂಗೀತ ನಿರ್ದೇಶನ: ಆನಂದ್ ವಿ. ಮತ್ತು ಮಹಾವೀರ್ ಎಸ್., ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11ರಿಂದ



ಕಿಟೆಲ್

'ಸಮಾಜಮುಖಿ ಕಥಾಸ್ಪರ್ಧೆ–2024' ಬಹುಮಾನ ವಿತರಣೆ, 'ಕಾಲವೆಂಬ ಕಬಂಧಬಾಹು' ಪುಸ್ತಕ ಬಿಡುಗಡೆ: ಅತಿಥಿಗಳು: ರಾಜಾರಾಮ ತೋಳ್ಪಾಡಿ, ಜಯರಾಮ್ ರಾಯಪುರ, ರಂಗನಾಥ ಕಂಟನಕುಂಟೆ, ತಾರಿಣಿ ಶುಭದಾಯಿನಿ, ಆಯೋಜನೆ: ಸಮಾಜಮುಖಿ, ಸ್ಥಳ: ಪೂರ್ಣಚಂದ್ರ ಕನ್ನಡ ಸಾಂಸ್ಕೃತಿಕ ಅಧ್ಯಯನ ಕೇಂದ್ರ, ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಆವರಣ, ಗೊಟ್ಟಿಗೆರೆ, ಬೆಳಿಗ್ಗೆ 10

ಪರಿಸರ ಸ್ವಚ್ಛತೆ, ಗುರುರಾಜ ಮಾರ್ಪಳ್ಳಿ ಅವರ 'ಗರ್ಭ' ಪುಸ್ತಕದ ಬಿಡುಗಡೆ: ವಿವೇಕಾನಂದ ಎಚ್.ಕೆ., ಡಿ.ಎಸ್. ಗೌಡ, ಮಂಜುನಾಥ್, ಪುಸ್ತಕದ ಕುರಿತು: ಹಾಸನ ರಮೇಶ್, ಅಧ್ಯಕ್ಷತೆ: ರಘುನಂದನ್ ಜೆ.ಪಿ., ಆಯೋಜನೆ: ಪ್ರಬುದ್ಧ ಸಮಾಜ ನಿರ್ಮಾಣ ವೇದಿಕೆ, ಪರಿಸರ ಸೇನೆ, ಸ್ವಚ್ಛತಾ ಕಾರ್ಯಕ್ರಮದ ಸ್ಥಳ: ಉಲ್ಲಾಳ ಕೆರೆ, ಸರ್ ಎಂ.ವಿ. ಬಡಾವಣೆ, ಬೆಳಿಗ್ಗೆ 7.30ರಿಂದ, ಪುಸ್ತಕ ಬಿಡುಗಡೆ ಸ್ಥಳ: ನಗೆಮನೆ, ರಾಷ್ಟ್ರಕವಿ ಕುವೆಂಪು ರಸ್ತೆ, ಜ್ಞಾನಭಾರತಿ ಎರಡನೇ ಹಂತ, ಬೆಳಿಗ್ಗೆ 8.30ರಿಂದ



'ಸಾ.ಕೃ. ರಾಮಚಂದ್ರರಾವ್ ಜನ್ಮಶತಾಬ್ದಿ ಸಂಸ್ಮರಣ 'ವಿದ್ಯಾಲಂಕಾರ' ಗ್ರಂಥ ಜನಾರ್ಪಣೆ: ಶ್ರೀನಿವಾಸ ವರಖೇಡಿ, ಅತಿಥಿ: ರಮಾ ರಾಮಚಂದ್ರರಾವ್, ಉಪಸ್ಥಿತಿ: ಮಲ್ಲೇಪುರಂ ಜಿ. ವೆಂಕಟೇಶ್, ಶತಾವಧಾನಿ ಆರ್. ಗಣೇಶ್, ಬಿ.ಎನ್. ಶಶಿಕಿರಣ, ಅಧ್ಯಕ್ಷತೆ: ಎಸ್.ಆರ್. ರಾಮಸ್ವಾಮಿ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ ರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಉಪನ್ಯಾಸ, ಕವಿಗೋಷ್ಠಿ, ಕರೋಕೆ ಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ಕೆ.ವಿ. ಲಕ್ಷ್ಮಣಮೂರ್ತಿ, ಅತಿಥಿಗಳು: ಮಣ್ಣೆ ಮೋಹನ್, ಗೊರೂರು ಪಂಕಜ, ಬಿ. ಶಾಂತಕುಮಾರ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ವಾಸವಿ ಕಲಾ ಸೇವಾ ಟ್ರಸ್ಟ್, ಆರನೇ ಬ್ಲಾಕ್, ರಾಜಾಜಿನಗರ, ಬೆಳಿಗ್ಗೆ 10.30

'ಕಾಡೋ ಕಥೆ ಗುನುಗೋ ಗೀತೆ': ನಾಗತಿಹಳ್ಳಿ ಚಂದ್ರಶೇಖರ್ ಅವರ 'ಒಳಚರಂಡಿ' ಕಥಾವಾಚನ: ಕ. ಸುಚೇಂದ್ರ ಪ್ರಸಾದ, ಕವಿತಾ ವಾಚನ: ಲಲಿತಾ ಸಿದ್ದಬಸವಯ್ಯ, ಗೀತಗಾಯನ: ಪ್ರವೀಣ್ ಡಿ. ರಾವ್, ಅರುಂಧತಿ ವಸಿಷ್ಠ, ಗುರುಮೂರ್ತಿ ವೈದ್ಯ, ಆಯೋಜನೆ: ತಾರಾರೇನಾ, ಸ್ಥಳ: ಸನಾತನ ಕಲಾಕ್ಷೇತ್ರ, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30ರಿಂದ

ದಲಿತಗುರು ತಲಕಾಡು ರಂಗೇಗೌಡ ಸ್ಮಾರಕ ದತ್ತಿ 'ಸಾಮಾಜಿಕ ಪರಿವರ್ತನೆ–ಕುದ್ಮುಲ್ ರಂಗರಾಯರ ದಿಟ್ಟ ಹೆಜ್ಜೆಗಳು' ಉಪನ್ಯಾಸ: ವಾದಿರಾಜ್, ಅಧ್ಯಕ್ಷತೆ: ಜೋಗನ್ ಶಂಕರ್, ವಿಶೇಷ ಗೌರವ ಸಮರ್ಪಣೆ: ಡಿ. ಅಣ್ಣು, ಪ್ರೇಮಿ ಎಂ. ರಾವ್, ಚಿತ್ರಲೇಖಾ ಕಮಲಾಕ್ಷ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಸದ್ಗುರು ಶ್ರೀತ್ಯಾಗರಾಜ ಸ್ವಾಮಿ ಪಂಚರತ್ನ ಕೀರ್ತನ ಗೋಷ್ಠಿ ಗಾಯನ: ಉದ್ಘಾಟನೆ: ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀ ಯದುಗಿರಿ ಯತಿರಾಜರ ಮಠ, 11ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 11

ಶಿವಾಜಿ ವಿದ್ಯಾರ್ಥಿಗಳ ವಸತಿನಿಲಯದ ಉದ್ಘಾಟನೆ, ಸನ್ಮಾನ ಸಮಾರಂಭ: ಅತಿಥಿಗಳು: ರಮೇಶ್ ಆರ್. ಥಾಪ್ಸೆ, ಶ್ರೀನಿವಾಸರಾವ್ ಪಿಸ್ಸೆ, ಸತೀಶ್ ಆಂಬೊರೆ, ಆಯೋಜನೆ: ದಕ್ಷಿಣ ಬೆಂಗಳೂರು ಭಾವಸಾರ ಕ್ಷತ್ರಿಯ ಸಮಾಜ, ಸ್ಥಳ: ನಂ. 101, 102, 13ನೇ ಕ್ರಾಸ್, ಸನ್‌ಸಿಟಿ, ಕೆಂಗೇರಿ, ಬೆಳಿಗ್ಗೆ 11.30

ನೆನಪಿನ ಅಂಗಳ: ಆಯೋಜನೆ: ನಾವು ನಮ್ಮವರು, ಸ್ಥಳ: ಎಸ್.ಎಚ್.ಕೆ. ಕನ್ವೆನ್ಷನ್ ಹಾಲ್, ಸಂಗೊಳ್ಳಿ ರಾಯಣ್ಣ ರಸ್ತೆ, ವಿಜಯನಗರ, ಮಧ್ಯಾಹ್ನ 3.30

ನೃತ್ಯ ಸಂಗೀತೋತ್ಸವ: ಉದ್ಘಾಟನೆ: ಸತೀಶ್ ಹಂಪಿಹೊಳಿ, ಅಧ್ಯಕ್ಷತೆ: ಗೀತಾರಾಮನುಜಂ, ಅತಿಥಿ: ಕಾವ್ಯಶ್ರೀ ನಾಗರಾಜ್, ಆಯೋಜನೆ: ಶಾರದಾ ಕಲಾ ಕುಟೀರ, ಸ್ಥಳ: ನಾಣಿ ಅಂಗಳ, ಸುಚಿತ್ರ ಫಿಲ್ಮ್ ಸೊಸೈಟಿ, ಎರಡನೇ ಹಂತ, ಬನಶಂಕರಿ, ಸಂಜೆ 4

'ಮರ ಏರಲಾಗದ ಗುಮ್ಮ' ನಾಟಕ ಪ್ರದರ್ಶನ: ನಿರ್ದೇಶನ: ಧನುಷ್ ನಾಗ್, ಆಯೋಜನೆ: ಸಂಚಾರಿ ಸ್ಟೋರಿ ಕ್ವಿಲ್ಟ್ಸ್, ಸಂಚಾರಿ ಥಿಯೇಟರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ಸಮರ್ಪಣಾ ಕಾರ್ಯಕ್ರಮ: ವಿಶೇಷ ಪ್ರವಚನ: ಪಿ.ಎಲ್. ರಾಣಿ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 4

ಪೂರಕ ಶಿಕ್ಷಣ ಕಾರ್ಯಕ್ರಮಗಳ–2025–26 ಚಾಲನೆ: ಎಚ್.ಎಸ್. ಗೋಪಿನಾಥ್, ಅತಿಥಿ: ಎಸ್.ಎನ್. ಸೇತುರಾಮ್, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 4

ಪದಗ್ರಹಣ ಸಮಾರಂಭ: ಅನುಪಮಾ ಪಂಚಾಕ್ಷರಿ, ಉದಯ್ ಭಾಸ್ಕರ್, ಅತಿಥಿ: ಎಸ್.ಟಿ. ಸೋಮಶೇಖರ್, ಆಯೋಜನೆ: ರೋಟರಿ ಕೆಂಗೇರಿ ಉಪನಗರ, ಸ್ಥಳ: ಶೇಷಾದ್ರಿಪುರಂ ಅಕಾಡೆಮಿ ಆಫ್ ಬ್ಯುಸಿನೆಸ್ ಸ್ಟಡೀಸ್, ಕೆಂಗೇರಿ ಉಪನಗರ, ಸಂಜೆ 4.15ರಿಂದ

'ಪುಟ್ಟಮಗು ಕಥೆ ಕೇಳು' ವಿಶೇಷ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ನಿರ್ಮಲಾಶಾಸ್ತ್ರಿ, ಅತಿಥಿಗಳು: ಎಸ್. ಪುಷ್ಪ, ಗೌತಮ್ ಕೌಶಿಕ್, ಆಯೋಜನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸ್ಥಳ: ಗ್ರಂಥದ ಗುಡಿ, ನಗರ ಕೇಂದ್ರ ಗ್ರಂಥಾಲಯದ ಸಭಾಂಗಣ, ಕುಮಾರಸ್ವಾಮಿ ಬಡಾವಣೆ, ಸಂಜೆ 5.30ರಿಂದ

ಸಾಹಿತ್ಯಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕಾನೂನು ಹೋರಾಟಕ್ಕೆ ಬಿಜೆಪಿ ಸಿದ್ಧತೆ

ಪಕ್ಷದ ಬೆಂಗಳೂರು ವ್ಯಾಪ್ತಿಯ ಶಾಸಕರ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ವಿಭಜನೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ಐದು ಪಾಲಿಕೆಗಳಾಗಿ ವಿಭಜಿಸಲು ಹೊರಟಿರುವ ರಾಜ್ಯ ಸರ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸಲು ಬಿಜೆಪಿ ತೀರ್ಮಾನಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ನೇತೃತ್ವದಲ್ಲಿ ಶನಿವಾರ ನಡೆದ ಬೆಂಗಳೂರು ವ್ಯಾಪ್ತಿಯ ಬಿಜೆಪಿ ಶಾಸಕರ ಸಭೆ, ರಾಜ್ಯ ಸರ್ಕಾರದ ನಿರ್ಧಾರವನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವ ನಿರ್ಣಯ ತೆಗೆದುಕೊಂಡಿದೆ.

ಸಭೆಯ ನಂತರ ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಆರ್. ಅಶೋಕ, 'ಕಾಂಗ್ರೆಸ್ ನೇತೃತ್ವದ ಸರ್ಕಾರ ತನಗೆ ಬೇಕಾದಂತೆ ಬೆಂಗಳೂರನ್ನು ಐದು ಭಾಗ ಮಾಡಲು ಹೊರಟಿದೆ. ಇದರಿಂದ ಐದು ಪಾಲಿಕೆಗಳ ನಡುವೆ ತಾರತಮ್ಯ, ಸಂಘರ್ಷ ಸೃಷ್ಟಿಯಾಗಲಿದೆ. ಸರ್ಕಾರದ ನಡೆ ವಿರುದ್ಧ ಕಾನೂನು ಹೋರಾಟದ ಜತೆಗೆ ಪ್ರತಿಭಟನೆಯನ್ನೂ ನಡೆಸಲಾಗುವುದು' ಎಂದರು.

'ಬೆಂಗಳೂರು ವಿಭಜನೆ ಮಾಡಬೇಕು ಎಂದು ಯಾರೂ ಕೇಳಿಲ್ಲ. ಈಗಾಗಲೇ ನಗರದಲ್ಲಿ ತೆರಿಗೆ, ಸೆಸ್, ಇ–ಖಾತಾ ಸಮಸ್ಯೆಗೆ ಜನರು ಹೈರಾಣಾಗಿದ್ದಾರೆ. ಇಂತಹ ಸಮಯದಲ್ಲಿ ಬಿಬಿಎಂಪಿ ಚುನಾವಣೆ ನಡೆದರೆ ಕಾಂಗ್ರೆಸ್‌ಗೆ ಸೋಲು ಖಚಿತ. ಸೋಲಿನ ಮುಖಭಂಗ ತಪ್ಪಿಸಿ, ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ರಾಜಕೀಯ ತಂತ್ರಗಾರಿಕೆ ಭಾಗವಾಗಿ ಗ್ರೇಟರ್ ಬೆಂಗಳೂರು ಸೂತ್ರ ಹೆಣೆಯಲಾಗಿದೆ' ಎಂದು ದೂರಿದರು.

'ಕಪ್ಪುಪಟ್ಟಿಯಲ್ಲಿರುವ ಗುತ್ತಿಗೆದಾರರಿಗೆ ಸುರಂಗ ರಸ್ತೆ ನಿರ್ಮಾಣದ ಹೊಣೆಗಾರಿಕೆ ನೀಡಲಾಗುತ್ತಿದೆ. ಸುರಂಗ ರಸ್ತೆಗೆ ಟೋಲ್ ಶುಲ್ಕ ನಿಗದಿ ಮಾಡುವುದರಿಂದ ಶ್ರೀಮಂತರು ಮಾತ್ರ ಬಳಸಬಹುದು. ಜನಸಾಮಾನ್ಯರಿಗೆ ಪ್ರಯೋಜನವಿಲ್ಲ. ಇದು ಹಣ ಕೊಳ್ಳೆ ಹೊಡೆಯುವ ಯೋಜನೆ. ಹೆಬ್ಬಾಳ ಮೇಲ್ಸೇತುವೆ ಬಳಿಯ ಜಂಕ್ಷನ್ ಜಾಗವನ್ನು ಖಾಸಗಿ ಭೂ ಮಾಲೀಕರಿಗೆ ನೀಡಲು ಸರ್ಕಾರ ಮುಂದಾಗಿದೆ. ಈ ಕುರಿತು ಸದನದಲ್ಲಿ ಚರ್ಚಿಸಲಾಗುವುದು' ಎಂದು ಹೇಳಿದರು.

ಬಿಬಿಎಂಪಿ ವಿಭಜನೆ ಅವೈಜ್ಞಾನಿಕ. ಬೆಂಗಳೂರಿನ ಅಭಿವೃದ್ಧಿಗೆ ಪೂರಕವಾಗಿಲ್ಲ. ಮುಂಬೈ ಮತ್ತಿತರ ಮಹಾನಗರಗಳಲ್ಲಿ ಮಾಡಿದ್ದ ಇಂತಹ ವಿಭಜನೆಯ ಪ್ರಯೋಗಗಳು ವಿಫಲವಾಗಿವೆ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಆಗಸ್ಟ್ 14ರಂದು ಪ್ರತಿಭಟನೆ

ಬಿಬಿಎಂಪಿ ವಿಭಜಿಸಿ ಐದು ಪ್ರತ್ಯೇಕ ಮಹಾನಗರ ಪಾಲಿಕೆ ಮಾಡಿರುವುದನ್ನು ಖಂಡಿಸಿ ಆಗಸ್ಟ್ 14ರಂದು ಬಿಬಿಎಂಪಿ ಕೇಂದ್ರ ಕಚೇರಿಯ ನಾಡಪ್ರಭು ಕೆಂಪೇಗೌಡ ಪ್ರತಿಮೆಯ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಬಿಎಂಪಿ ವಿಭಜನೆ ಮಾಡುವುದರಿಂದ ಸಮಸ್ಯೆಗಳು ಹೆಚ್ಚಾಗಲಿವೆ. ಅಲ್ಲದೆ ಪರಭಾಷಿಕರು ಮೇಯರ್‌ಗಳಾಗುವ ಸಾಧ್ಯತೆಗಳಿವೆ.

ಐದು ಪಾಲಿಕೆಗಳ ನಡುವೆ ಗೊಂದಲಗಳು ಉಂಟಾಗಿ ಸಮನ್ವಯ ಇರುವುದಿಲ್ಲ, ಇದರಿಂದ ನಗರದ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದು ಹೇಳಿದರು.

ವಾಟಾಳ್

300 ಎಕರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಆನೇಕಲ್ : ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ಆರು ತಿಂಗಳಲ್ಲಿ 300 ಎಕರೆ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ. ಜಗದೀಶ್ ತಿಳಿಸಿದರು.

ಪಟ್ಟಣದ ಪುರಸಭಾ ಕಚೇರಿಯಲ್ಲಿ ಶನಿವಾರ ನಡೆದ ದಲಿತ ಸಂಘಟನೆಗಳ ಹಕ್ಕೊತ್ತಾಯಗಳ ಸಭೆಯಲ್ಲಿ ಮಾತನಾಡಿದ ಅವರು, ಆನೇಕಲ್ ತಾಲ್ಲೂಕಿನಲ್ಲಿ 68 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ತಿಳಿಸಿದರು.

ಅರ್ಹ ಫಲಾನುಭವಿಗಳನ್ನು ಗುರುತಿಸಿ 94ಸಿ ಅಡಿಯಲ್ಲಿ ಹಕ್ಕುಪತ್ರ ವಿತರಿಸಲು ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನಮೂನೆ 53 ಅಡಿಯಲ್ಲಿ ಹಕ್ಕುಪತ್ರಗಳನ್ನು ಪಡೆಯಲು ನ್ಯಾಯಾಲಯದ ಮಾರ್ಗಸೂಚಿಗಳಂತೆ ಬಗರ್ ಹುಕುಂ ಸಾಗುವಳಿದಾರರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದರು.

ಸಚಿವ ಕೆ.ಜೆ. ಜಾರ್ಜ್ ವಿರುದ್ಧ ಪಿಸಿಆರ್ ದಾಖಲಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್ ಸಂಪೂರ್ಣ ಕಾನೂನು ಬಾಹಿರವಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಅಧ್ಯಕ್ಷರೂ ಆದ ಇಂಧನ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಪಿಸಿಆರ್ (ಖಾಸಗಿ ದೂರಿನ ಆಧಾರದಡಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿಕೊಳ್ಳುವುದು) ದಾಖಲಿಸಿಕೊಳ್ಳಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಕೆ.ಜೆ.ಜಾರ್ಜ್

ಆರೋಪಕ್ಕೆ ಸಂಬಂಧಿಸಿದ ಖಾಸಗಿ ದೂರಿನ ವಿಚಾರಣೆ ನಡೆಸುತ್ತಿರುವ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಈ ಕುರಿತಂತೆ ಆದೇಶಿಸಿದ್ದಾರೆ.

'ಆರೋಪಿಗಳ ವಿರುದ್ಧದ ದೂರಿನ ಕುರಿತಾದ ವಸ್ತುಸ್ಥಿತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಲೋಕಾಯುಕ್ತ ಪೊಲೀಸರಿಗೆ ನಿರ್ದೇಶಿಸಿರುವ ನ್ಯಾಯಾಧೀಶರು ವಿಚಾರಣೆಯನ್ನು ಆಗಸ್ಟ್ 11ಕ್ಕೆ ಮುಂದೂಡಿದ್ದಾರೆ.

ದೂರಿನಲ್ಲಿ ಸಚಿವ ಕೆ.ಜೆ. ಜಾರ್ಜ್, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ, ಬೆಸ್ಕಾಂ ಮಾಜಿ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಹಾಗೂ ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಎಚ್.ಜೆ.ರಮೇಶ್ ಅವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

ಬಿಜೆಪಿಯ ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಶಾಸಕರಾದ ಎಸ್.ಆರ್. ವಿಶ್ವನಾಥ್ ಹಾಗೂ ಧೀರಜ್ ಮುನಿರಾಜು ಈ ಖಾಸಗಿ ದೂರು ಸಲ್ಲಿಸಿದ್ದಾರೆ.

ಶಾಹು ಮಹಾರಾಜರ ಭಾವಚಿತ್ರಕ್ಕೆ ನಮನ ಸಲ್ಲಿಸಲಾಯಿತು. ಸಿ.ಎಂ. ಇಬ್ರಾಹಿಂ, ಕೋಡಿಹಳ್ಳಿ ಚಂದ್ರಶೇಖರ್, ಎಂ.ಗೋಪಿನಾಥ್, ಮಾರಸಂದ್ರ ಮುನಿಯಪ್ಪ, ಮೋಹನ್ ರಾಜ್, ಸ್ವಪ್ನ ಮೋಹನ್ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

'ದಲಿತರು, ಅಲ್ಪಸಂಖ್ಯಾತರು ಒಂದಾದರೆ ಶಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತರು, ಅಲ್ಪಸಂಖ್ಯಾತರು ಒಗ್ಗಟ್ಟಾಗದಿದ್ದರೆ ರಾಜಕೀಯ ಶಕ್ತಿ ಪಡೆಯಲು ಸಾಧ್ಯವಿಲ್ಲ. ರಾಜ್ಯದಲ್ಲಿ ದಲಿತರು, ಅಲ್ಪಸಂಖ್ಯಾತ ಸಮುದಾಯದವರು ಮುಖ್ಯಮಂತ್ರಿಯಾಗಿ ಆರು ತಿಂಗಳು ಆಡಳಿತ ನಡೆಸಿದರೂ ನಾಡಿನಲ್ಲಿರುವ ಬಸವ ತತ್ವ ಸಾರ್ಥಕವಾಗಲಿದೆ' ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೇಳಿದರು.

ಛತ್ರಪತಿ ಶಾಹು ಮಹಾರಾಜರ 151ನೇ ಜನ್ಮದಿನದ ಪ್ರಯುಕ್ತ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಕರ್ನಾಟಕ ದಲಿತ ಸಂಘರ್ಷ ಸಮಿತಿ–ಭೀಮವಾದ ಶನಿವಾರ ಏರ್ಪಡಿಸಿದ್ದ 'ಪ್ರಸ್ತುತ ಮೀಸಲಾತಿ ಮತ್ತು ಇಂದಿನ ಸವಾಲುಗಳು' ಕುರಿತ ಚರ್ಚೆ ಹಾಗೂ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸಿದ್ದರಾಮಯ್ಯ ಜಾತಿ ಸಮೀಕ್ಷೆಯನ್ನು ತಿರಸ್ಕರಿಸುವ ಮೂಲಕ ನಿರಾಸೆ ಮೂಡಿಸಿದ್ದಾರೆ. ಅವರು ತಮ್ಮ ಸ್ಥಾನ ಉಳಿಸಿಕೊಳ್ಳಲು ತನ್ನನ್ನು ನಂಬಿದ ಸಮುದಾಯದ ಮಾನ ಕಳೆದಿದ್ದಾರೆ. ಸಿದ್ದರಾಮಯ್ಯರಿಗೆ ಸ್ಥಾನ ಮುಖ್ಯವೇ ಹೊರತು ಮಾನವಲ್ಲ' ಎಂದು ಟೀಕಿಸಿದರು.

'ಬಿಜೆಪಿ, ಕಾಂಗ್ರೆಸ್‌ನವರಿಗೆ ಮತ ಬ್ಯಾಂಕ್ ಆಗಿ ನಾವು ಬೇಕಾಗಿದೆಯೇ ಹೊರತು ರಾಜಕೀಯ ಶಕ್ತಿಯಾಗಿ ಅಲ್ಲ. ಇದನ್ನು ಅರ್ಥ ಮಾಡಿಕೊಂಡು ಪರ್ಯಾಯ ರಾಜಕಾರಣ ಮಾಡಬೇಕು. ಸಂವಿಧಾನದ ಮೂಲಕ ಅಂಬೇಡ್ಕರ್ ನೀಡಿದ ಮತದಾನದ ಹಕ್ಕನ್ನು ಬಳಸಿಕೊಂಡು ವಿಧಾನಸೌಧ ಪ್ರವೇಶಿಸಬೇಕು' ಎಂದರು. ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಬಹುಜನ ಸಮಾಜ ಪಾರ್ಟಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಮಾತನಾಡಿದರು. ಎಂ. ಗೋಪಿನಾಥ್, ಆರ್. ಮೋಹನ್ ರಾಜ್, ಆರ್.ಎಂ.ಎನ್. ರಮೇಶ್ ಉಪಸ್ಥಿತರಿದ್ದರು.

2025–26ನೇ ಸಾಲಿನ ತರಗತಿಗಳ ಉದ್ಘಾಟನೆ
'ಕಲಿಕೆ ಜೊತೆ ವಿನಯವಂತಿಕೆ ಬೆಳೆಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ, ವಿನಯವಂತಿಕೆ, ಸ್ವಯಂ ಪ್ರಜ್ಞೆ ಬೆಳೆಸಿಕೊಳ್ಳಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ ಕಿವಿಮಾತು ಹೇಳಿದರು.

ನಗರದ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 2025–26ನೇ ಸಾಲಿನ ವಿವಿಧ ವಿಷಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳ ಉದ್ಘಾಟನೆ ಮತ್ತು ಶೈಕ್ಷಣಿಕ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತಪ್ಪುಗಳಿಂದ ಕಲಿಯುವಂತಹ ಒಳ್ಳೆಯ ಅಭ್ಯಾಸವನ್ನು ಬೆಳೆಸಿಕೊಳ್ಳಿ. ಈ ಕಾರ್ಯಕ್ರಮ ಮೌಲ್ಯಯುತ ಶಿಕ್ಷಣದ ಪಯಣಕ್ಕೆ ಮಾರ್ಗದರ್ಶನ ನೀಡುವ ದಿಕ್ಸೂಚಿಯಾಗಿದೆ' ಎಂದು ತಿಳಿಸಿದರು.

ಸಿಎಂಆರ್ ವಿಶ್ವವಿದ್ಯಾಲಯ ಅಧ್ಯಕ್ಷ ಕೆ.ಸಿ. ರಾಮಮೂರ್ತಿ, 'ವಿದ್ಯಾರ್ಥಿಗಳು ಶ್ರದ್ಧೆ ಮತ್ತು ಪರಿಶ್ರಮದೊಂದಿಗೆ ಕಲಿಯಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ ಹಾಗೂ ಸೃಜನಾತ್ಮಕ ಪ್ರತಿಭೆಯಿದ್ದರೆ ಜಾಗತಿಕ ಉದ್ಯೋಗ ಕ್ಷೇತ್ರದಲ್ಲಿ ಉನ್ನತ ಸಾಧನೆ ಸಾಧ್ಯ' ಎಂದರು. ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಬಿ.ರಾಘವೇಂದ್ರ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಪ್ರವೀಣ್ ಆರ್., ಕುಲಸಚಿವ ಧನಂಜಯ ಎಂ., ಶಿಕ್ಷಣ ವಿಭಾಗಗಳ ಡೀನ್ ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.

ಸಿಎಂಆರ್ ವಿಶ್ವವಿದ್ಯಾಲಯದ 2025–26 ನೇ ಸಾಲಿನ ಶೈಕ್ಷಣಿಕ ವರ್ಷದ ಯುಜಿ ಮತ್ತು ಪಿಜಿ ತರಗತಿಗಳ ಉದ್ಘಾಟನೆ ಮತ್ತು ಮಾರ್ಗದರ್ಶನ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಅವರನ್ನು ಸನ್ಮಾನಿಸಲಾಯಿತು

ವೈದ್ಯಕೀಯ ಮತ್ತು ಪತ್ರಿಕಾ ದಿನಾಚರಣೆ ಅಂಗವಾಗಿ 'ಇದು ನಿಮ್ಮ ವಾಹಿನಿ ಕಲಾ ವೇದಿಕೆ' ನಗರದಲ್ಲಿ ಶನಿವಾರ ಆಯೋಜಿಸಿದ್ದ 17ನೇ ಸಾಂಸ್ಕೃತಿಕ ಸಿಂಚನ ಕಾರ್ಯಕ್ರಮದಲ್ಲಿ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ, ವೇದಿಕೆ ಪ್ರಧಾನ ಕಾರ್ಯದರ್ಶಿ ಕಿಶೋರ್ ಕುಮಾರ್ ಕೆ.ಎಸ್. ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಚಿಟಿಕೆ ಸುದ್ದಿ

ಭವಿಷ್ಯ ನಿಧಿ ಕಚೇರಿ ಎದುರು ಪ್ರತಿಭಟನೆ ನಾಳೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜುಲೈ 28ರಂದು ರಿಚ್‌ಮಂಡ್ ವೃತ್ತ ಬಳಿಯ ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಂಜುಂಡೇಗೌಡ ತಿಳಿಸಿದ್ದಾರೆ.

ಕನಿಷ್ಠ ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಇಪಿಎಸ್ ವ್ಯಾಪ್ತಿಗೆ ಬಾರದ ಹಲವು ನಿವೃತ್ತ ನೌಕರರಿಗೆ ₹ 5 ಸಾವಿರ ನೀಡಬೇಕು. ಹತ್ತು ವರ್ಷಗಳಲ್ಲಿ ಲಕ್ಷಾಂತರ ಇಪಿಎಸ್ ನೌಕರರು ವಯೋಸಹಜ ಹಾಗೂ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ. ಈವರೆಗೂ ಬೇಡಿಕೆ ಈಡೇರಿಸಿಲ್ಲ ಎಂದು ಹೇಳಿದರು. ನವದೆಹಲಿಯ ಜಂತರ್ ಮಂತರ್ ಮೈದಾನದಲ್ಲಿ ಆಗಸ್ಟ್ 4 ರಿಂದ ಎರಡು ದಿನ ಇಪಿಎಸ್ ನಿವೃತ್ತರ ಆಂದೋಲನ ನಡೆಯಲಿದ್ದು, ಸಾವಿರಾರು ಮಂದಿ ಭಾಗವಹಿಸಲಿದ್ದಾರೆ. ಈಗಲಾದರೂ ಕೇಂದ್ರ ಉದ್ಯೋಗ ಹಾಗೂ ಕಾರ್ಮಿಕ ಖಾತೆ ಸಚಿವರು ಎಚ್ಚೆತ್ತುಕೊಂಡು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಉದ್ಯಮಿಗೆ ₹73 ಲಕ್ಷ ವಂಚನೆ

ತುಮಕೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಉತ್ತಮ ಲಾಭ ಗಳಿಸಬಹುದು ಎಂದು ನಂಬಿಸಿ ಸಿದ್ಧಗಂಗಾ ಬಡಾವಣೆಯ ಉದ್ಯಮಿಯೊಬ್ಬರಿಗೆ ₹73.80 ಲಕ್ಷ ವಂಚಿಸಲಾಗಿದೆ.

'ಆನಂದ ರಾಠಿ ಸಪೋರ್ಟ್' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಉದ್ಯಮಿ ಮೊಬೈಲ್ ಸಂಖ್ಯೆಯನ್ನು ಆರೋಪಿಗಳು ಸೇರಿಸಿದ್ದಾರೆ. ಗ್ರೂಪ್‌ನಲ್ಲಿ ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಆರೋಪಿಗಳು ತಿಳಿಸಿದಂತೆ 'ಟ್ರೇಡ್ ಮೊಬಿ' ಆ್ಯಪ್ ಡೌನ್‌ಲೋಡ್ ಮಾಡಿ ಕೊಂಡು ಒಟ್ಟು ₹73,80,697 ವರ್ಗಾಯಿಸಿದ್ದಾರೆ. ಹಣ ವಿತ್ ಡ್ರಾ ಮಾಡಲು ಮುಂದಾದಾಗ, 'ಮತ್ತಷ್ಟು ಹೂಡಿಕೆ ಮಾಡಿದರೆ ಮಾತ್ರ ಹಣ ವಾಪಸ್ ಬರುತ್ತದೆ' ಎಂದಿದ್ದಾರೆ. ಮೋಸ ಹೋಗಿರುವುದು ಗೊತ್ತಾಗಿ ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಲಾಗಿದೆ.

ಅಪಹರಣ: ಗೆಳತಿಯೇ ಸೂತ್ರಧಾರಿ!

₹50 ಲಕ್ಷಕ್ಕೆ ಬೇಡಿಕೆ • ನಾಲ್ವರ ಬಂಧನ, ತಲೆಮರೆಸಿಕೊಂಡವರ ಪತ್ತೆಗೆ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಿಚ್ ಕಾರ್ಟನ್ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದ ದುಬೈನ ರಾಯನ್ ಟೂರ್ಸ್ ಆ್ಯಂಡ್ ಟ್ರಾವೆಲ್ಸ್‌ನ ವ್ಯವಸ್ಥಾಪಕ ಲಾರೆನ್ಸ್ ಮೆಲ್ವಿನ್ ಅವರನ್ನು ಅಪಹರಿಸಿ ₹50 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಅಪಹರಣಕಾರರನ್ನು ಅಶೋಕನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರ್‌.ಟಿ.ನಗರದ ದಿನ್ನೂರು ಮುಖ್ಯರಸ್ತೆಯ ಮೊಹಮ್ಮದ್ ಆಸಿಫ್ ರಿಸಾಲ್ದಾರ್ (42), ಕೌಸರ್ ನಗರದ ಮೊಹಮ್ಮದ್ ಸುಹೇಲ್ ಶೇಖ್ (25), ಡಿ.ಜೆ. ಹಳ್ಳಿ ಶಾಂಪುರ ಮುಖ್ಯರಸ್ತೆಯ ನಾಲ್ಕನೇ ಕ್ರಾಸ್‌ನ ನಿವಾಸಿ ಸಲ್ಮಾನ್ ಪಾಷಾ (22), ಕೆ.ಜಿ. ಹಳ್ಳಿ ಗಾಂಧಿನಗರ ಎರಡನೇ ಮುಖ್ಯರಸ್ತೆಯ ನಿವಾಸಿ ಮೊಹಮ್ಮದ್ ನವಾಜ್ (27) ಬಂಧಿತರು.

ತಲೆಮರೆಸಿಕೊಂಡಿರುವ ಮಹಿಮಾ, ಶಾಕೀಬ್, ಸುರೇಶ್, ಅಲ್ತಾಫ್ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಲಾರೆನ್ಸ್ ಮೆಲ್ವಿನ್ ಅವರನ್ನು ಅಪಹರಿಸಿ ಅಪಾರ್ಟ್‌ಮೆಂಟ್‌ವೊಂದರ

ಮೊಹಮ್ಮದ್ ಆಸಿಫ್

ಮೊಹಮ್ಮದ್ ನವಾಜ್

ಮೊಹಮ್ಮದ್ ಸುಹೇಲ್

ಸಲ್ಮಾನ್ ಪಾಷಾ

ಫ್ಲ್ಯಾಟ್‌ನಲ್ಲಿ ಕೂಡಿಹಾಕಿ ಜೀವಬೆದರಿಕೆ ಹಾಕಿದ್ದರು. ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ಹೇಳಿದರು.

'ಲಾರೆನ್ಸ್ ಮೆಲ್ವಿನ್ ಅವರ ತಾಯಿ ಅಶೋಕನಗರ ಠಾಣೆಗೆ ತನ್ನ ಪುತ್ರ ನಾಪತ್ತೆ ಆಗಿದ್ದಾನೆ ಎಂದು ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದಾಗ ಲಾರೆನ್ಸ್ ಮೆಲ್ವಿನ್ ಅವರು ಅಪಹರಣಕ್ಕೆ ಒಳಗಾಗಿರುವುದು ಗೊತ್ತಾಗಿತ್ತು. ಅವರ ಗೆಳತಿ ಮಹಿಮಾಳೇ ಅಪಹರಣದ ಸೂತ್ರಧಾರಿ ಎಂದು ಕಂಡುಬಂದಿತ್ತು. ಆಕೆ ಸೇರಿದಂತೆ ನಾಲ್ವರು ನಾಪತ್ತೆ ಆಗಿದ್ದು, ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ವಿಜಯಪುರದ ಶಾಕೀಬ್‌ಗೆ ಮಹಿಮಾ ₹10 ಲಕ್ಷಕ್ಕೆ ಸುಪಾರಿ ನೀಡಿ, ಲಾರೆನ್ಸ್ ಮೆಲ್ವಿನ್ ಬಳಿ ಹಣ ಸುಲಿಗೆ ಮಾಡುವಂತೆ ಸೂಚಿಸಿದ್ದಳು. ಶಾಕೀಬ್ ಉಳಿದ ಆರೋಪಿಗಳಿಗೆ ಸುಪಾರಿ ನೀಡಿ ಸುಲಿಗೆ ಮಾಡುವಂತೆ ಸೂಚಿಸಿದ್ದ' ಎಂದು ಪೊಲೀಸರು ಹೇಳಿದರು.

ಲಾರೆನ್ಸ್ ಕಣ್ಣಿಗೆ ಬಟ್ಟೆ ಕಟ್ಟಿ ಕರೆದೊಯ್ದು ಹಲ್ಲೆ

'ಲಾರೆನ್ಸ್ ಅವರ ಕಣ್ಣಿಗೆ ಬಟ್ಟೆ ಕಟ್ಟಿ ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಕರೆದೊಯ್ದು ₹50 ಲಕ್ಷ ನೀಡಿದರೆ ಬಿಟ್ಟು ಕಳುಹಿಸುವುದಾಗಿ ಆರೋಪಿಗಳು ಹೇಳಿದ್ದರು. ನನ್ನ ಬಳಿ ₹20 ಲಕ್ಷ ಮಾತ್ರವಿದೆ. ಅದನ್ನು ಕೊಡುತ್ತೇನೆ ಎಂದು ಹೇಳಿದ್ದರು. ಅದಕ್ಕೆ ಆರೋಪಿಗಳು ಒಪ್ಪಿರಲಿಲ್ಲ. ನಂತರ ಫ್ಲ್ಯಾಟ್‌ನಲ್ಲೇ ಕೂಡಿ ಹಾಕಿದ್ದರು. ಬಳಿಕ ₹2.50 ಕೋಟಿ ನೀಡುವಂತೆ ಬೆದರಿಕೆ ಹಾಕಿದ್ದರು. ಅಷ್ಟು ಹಣ ನೀಡದಿದ್ದರೆ ₹5 ಕೋಟಿ ವಸೂಲಿ ಮಾಡುವಂತೆ ಸೂಚಿಸಿರುವವರ ಬಳಿಗೆ ಕರೆದೊಯ್ಯುವುದಾಗಿ ಅಪಹರಣಕಾರರು ಹೇಳಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ನೆರವಿಗೆ ಬಂದಿದ್ದ ಅಪಾರ್ಟ್‌ಮೆಂಟ್ ನಿವಾಸಿ

ಲಾರೆನ್ಸ್ ಮೇಲೆ ಆರೋಪಿಗಳು ಹಲ್ಲೆ ನಡೆಸುತ್ತಿರುವ ದೃಶ್ಯವನ್ನು ಕಿಟಕಿಯ ಮೂಲಕ ಪಕ್ಕದ ಫ್ಲ್ಯಾಟ್‌ನ ಮಹಿಳೆಯೊಬ್ಬರು ನೋಡಿದ್ದರು. ಆಗ ಲಾರೆನ್ಸ್ ಅವರು ತನ್ನ ಸಹೋದರಿಗೆ ಮಾಹಿತಿ ನೀಡುವಂತೆ ಮಹಿಳೆಯ ಬಳಿ ಕೋರಿದ್ದರು. ಈ ವಿಚಾರ ತಿಳಿದ ಆರೋಪಿಗಳು, ಯಶವಂತಪುರ ಬಳಿ ಲಾರೆನ್ಸ್ ಅವರನ್ನು ಕರೆತಂದು ಬಿಟ್ಟು ಹೋಗಿದ್ದರು. ಬಿಟ್ಟು ಹೋಗುವ ಮೊದಲು ₹1 ಸಾವಿರ ಹಣ, ಕೀ ಪ್ಯಾಡ್ ಮೊಬೈಲ್ ಹಾಗೂ ಸಿಮ್ ನೀಡಿ ಹೋಗಿದ್ದರು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಏನಿದು ಪ್ರಕರಣ?: ದುಬೈನಲ್ಲಿ ರಾಯನ್ ಟೂರ್ಸ್ ಆ್ಯಂಡ್ ಟ್ರಾವೆಲ್ಸ್‌ನಲ್ಲಿ ಲಾರೆನ್ಸ್ ಮೆಲ್ವಿನ್ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ನಗರಕ್ಕೆ ಬಂದು ಕುಟುಂಬದ ಜತೆಗೆ ಉಳಿದುಕೊಂಡಿದ್ದರು. ನಂತರ, ಕೇರಳದ ಕೊಚ್ಚಿನ್‌ನಲ್ಲಿ ಇರುವ ಸಂಬಂಧಿಕರ ಮನೆಗೆ ತೆರಳಿದ್ದರು. ಅಲ್ಲಿಂದ ಬೆಂಗಳೂರಿಗೆ ವಾಪಸ್ ಬಂದು ರಿಚ್ ಕಾರ್ಟನ್ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದರು. ಮರುದಿನ ಪೋಕರ್ ಆಡಲು ಇಂದಿರಾನಗರಕ್ಕೆ ಹೋಗಿದ್ದರು. ವಾಪಸ್ ಬಂದು ಹೋಟೆಲ್‌ನಲ್ಲಿ ಇರುವಾಗ ಗೆಳತಿ ಮಹಿಮಾ ವಾಟ್ಸ್‌ಆ್ಯಪ್‌ನಲ್ಲಿ ಕರೆ ಮಾಡಿ ಸಿಗುವಂತೆ ಕೇಳಿಕೊಂಡಿದ್ದಳು. ಕ್ಯಾಬ್ ಬುಕ್ ಮಾಡಿದ್ದು, ಅದರಲ್ಲಿ ಬರುವಂತೆ ಹೇಳಿದ್ದಳು. ಆಕೆಯ ಮಾತು ನಂಬಿದ್ದ ದೂರುದಾರ, ಆಕೆಯಿದ್ದ ಸ್ಥಳಕ್ಕೆ ಹೋಗಲು ಮುಂದಾಗಿದ್ದರು. ಹೋಟೆಲ್ ಬಳಿಗೆ ಬಂದ ಕ್ಯಾಬ್ ಹತ್ತಿ ಹೋಗುತ್ತಿದ್ದಾಗ ದಾರಿ ಮಧ್ಯೆ, ಕ್ಯಾಬ್ ನಿಲ್ಲಿಸಿ ಅದರಲ್ಲಿದ್ದವರು ಹಲ್ಲೆ ನಡೆಸಿ, ಜೇಬಿನಲ್ಲಿದ್ದ ₹1 ಲಕ್ಷ ಹಾಗೂ ಎರಡು ಐ–ಫೋನ್ ಕಸಿದುಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಬಂದೂಕು ತೋರಿಸಿ ಚಿನ್ನದಂಗಡಿಯಲ್ಲಿ ದರೋಡೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಚಿನ್ನಾಭರಣ ಅಂಗಡಿಗೆ ನುಗ್ಗಿದ ದುಷ್ಕರ್ಮಿಗಳು ಚಿನ್ನಾಭರಣ ದೋಚಿ ಪರಾರಿ ಆಗಿರುವ ಘಟನೆ ಬೆಂಗಳೂರು ಉತ್ತರ ತಾಲ್ಲೂಕಿನ ಮಾಚೋಹಳ್ಳಿ ಗೇಟ್ ಬಳಿಯ ರಾಜ್ ಜ್ಯುವೆಲರ್ಸ್‌ನಲ್ಲಿ ನಡೆದಿದೆ.

ಗುರುವಾರ ರಾತ್ರಿ ಅಂಗಡಿ ಮುಚ್ಚುವ ವೇಳೆ ಮೂವರು ಏಕಾಏಕಿ ನುಗ್ಗಿ, ಬಂದೂಕು ಹಿಡಿದು ಬೆದರಿಸಿ ಆಭರಣಗಳನ್ನು ದೋಚಿ ಪರಾರಿ ಆಗಿದ್ದಾರೆ ಎಂದು ಪೊಲೀಸರು ಹೇಳಿದರು.

ಅಂಗಡಿ ಮಾಲೀಕ ಕನ್ನಯ್ಯಲಾಲ್ ಮತ್ತು ಸಿಬ್ಬಂದಿಯನ್ನು ತಳ್ಳಿ ಸುಮಾರು 250 ಗ್ರಾಂ ಚಿನ್ನಾಭರಣ ದರೋಡೆ ಮಾಡಿದ್ದಾರೆ. ಘಟನಾ ಸಂದರ್ಭದಲ್ಲಿ ಮಾಲೀಕ, ಸಿಬ್ಬಂದಿ ಕಿರುಚಾಡಿದ್ದಾರೆ. ಕೂಗಾಟ ಕೇಳಿ ಪಕ್ಕದ ಅಂಗಡಿಯವರು ರಕ್ಷಣೆಗೆ ಬಂದಿದ್ದು ಅವರನ್ನೂ ತಳ್ಳಿ ಆರೋಪಿಗಳು ಪರಾರಿಯಾಗಿದ್ದಾರೆ.

ಕನ್ನಯ್ಯಲಾಲ್ ಅವರು ನೀಡಿದ ದೂರು ಆಧರಿಸಿ ಮಾದನಾಯಕನ ಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

'ನೀರಾವರಿ ಯೋಜನೆ: ಬಿಜೆಪಿ ಸಂಸದರು, ಸಚಿವರು ಧ್ವನಿ ಎತ್ತಲಿ'

ಬೆಂಗಳೂರು: 'ನೀರಾವರಿ ಯೋಜನೆಗಳಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಬಿಜೆಪಿಯ ಸಂಸದರು ಮತ್ತು ಕೇಂದ್ರ ಸಚಿವರು ಹೋರಾಟ ಮಾಡಬೇಕು' ಎಂದು ಕಾಂಗ್ರೆಸ್‌ನ ಮಾಜಿ ಸಂಸದರೂ ಆಗಿರುವ ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಮಹದಾಯಿ ಯೋಜನೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಹೊರತಾಗಿಯೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರವನ್ನು ಬಳಸಿಕೊಂಡು ಗೋವಾ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿರುವುದು ಎದ್ದು ಕಾಣುತ್ತಿದೆ' ಎಂದರು.

'ಕುಡಿಯುವ ನೀರಿನ ವಿಚಾರವಾಗಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯ ಸರಿಪಡಿಸುವ ಮೂಲಕ ಮಹದಾಯಿ, ಮೇಕೆದಾಟು ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಬೇಕು' ಎಂದು ಆಗ್ರಹಿಸಿದರು.

'ಅತಂತ್ರ ಸ್ಥಿತಿಯಲ್ಲಿ ಬುಡಕಟ್ಟು ಸಮುದಾಯ'

ಬೆಂಗಳೂರು: 'ಪ್ರಕೃತಿಯೊಡನೆ ನಲಿಯುವ ಬುಡಕಟ್ಟು ಸಮುದಾಯಗಳನ್ನು ನಾಗರಿಕತೆ ಹೆಸರಿನಲ್ಲಿ ಪ್ರಕೃತಿಯೊಂದಿಗಿನ ಅವರ ಸಾವಯವ ಸಂಬಂಧವನ್ನು ಒಂದೆಡೆ ಕಡಿಯುತ್ತಿದ್ದರೆ, ಇನ್ನೊಂದೆಡೆ ಅವರಿಗೆ ಉದ್ಯೋಗವನ್ನೂ ಒದಗಿಸದೆ ಅತಂತ್ರ ಸ್ಥಿತಿಯಲ್ಲಿ ಇಡಲಾಗಿದೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಹೇಳಿದರು.

ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಉಮಾ ರಾಮ್ ಮತ್ತು ಕೆ.ಎಸ್. ರಾಮ್ ಅವರು ಸಂಪಾದಿಸಿರುವ 'ಬಸ್ತರ್ 1862' ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದರು.

'ದ್ರಾವಿಡ ಭಾಷೆಗಳಾದ ಬಸ್ತರ್‌ನ ಬುಡಕಟ್ಟು ನುಡಿಗಳ ಮೇಲೆ ಹಿಂದಿ ಹೇರಿಕೆ ಮಾಡಲಾಗುತ್ತಿದೆ. ತಮಿಳುನಾಡಿನ ದ್ರಾವಿಡ ಚಳವಳಿಯು ಹಿಂದಿ ಹೇರಿಕೆಯನ್ನು ಪ್ರತಿರೋಧಿಸಿರುವುದು ಸ್ಫೂರ್ತಿದಾಯಕ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಸ್ವಾತಂತ್ರ್ಯ ನಂತರ ಅಂದಿನ ಕಾಂಗ್ರೆಸ್ ರಾಜಕಾರಣಿಗಳು ಬಸ್ತರ್‌ನ ರಾಜ ಪ್ರವೀರ್ ಚಂದ್ರ ಅವರನ್ನು ನಡೆಸಿಕೊಂಡ ರೀತಿಯ ಕುರಿತು ಪುಸ್ತಕದಲ್ಲಿ ತಿಳಿಸಲಾಗಿದೆ. ಅಂದಿನ ರಾಜಕಾರಣಿಗಳಿಗಿಂತ ಪ್ರಾಂತೀಯ ರಾಜರುಗಳೇ ಜನರ ಕುರಿತು ಹೆಚ್ಚು ಕಾಳಜಿಯುಳ್ಳವರಾಗಿದ್ದರು. ಇದನ್ನು ಪುಸ್ತಕದಲ್ಲಿ ಮನಗಾಣಬಹುದು' ಎಂದರು.

'ಬುಡಕಟ್ಟು ಸಮುದಾಯವನ್ನು ವಸ್ತುಸಂಗ್ರಹಾಲಯದಲ್ಲಿನ ತುಣುಕುಗಳ ತರಹ ಅವರಿರುವ ಸ್ಥಿತಿಯಲ್ಲೇ ಬಿಡಬೇಕಾ? ನಮ್ಮಂತೆ ಅವರನ್ನೂ ಆಧುನಿಕ ಪ್ರಪಂಚಕ್ಕೆ ಕರೆತರಬೇಕಾ ಎನ್ನುವುದು ಬಗೆಹರಿಸಲಾಗದ ಪ್ರಶ್ನೆಯಾಗಿ ಉಳಿದಿದೆ' ಎಂದು ಹೇಳಿದರು.

ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ (ಐಸಿಎಚ್‌ಆರ್) ಪ್ರಾದೇಶಿಕ ನಿರ್ದೇಶಕ ಎಸ್‌.ಕೆ.ಅರುಣಿ, 'ಈ ಪುಸ್ತಕವು ಇತಿಹಾಸ ಅಧ್ಯಯನ ಮಾಡುವವರಿಗೆ ಸಹಕಾರಿಯಾಗಿದೆ. ಆ ಕಾಲದ ಸ್ಥಿತಿಗತಿ ಅರಿಯಲು ಇದೊಂದು ಉತ್ತಮ ಆಕಾರ ಗ್ರಂಥ' ಎಂದರು.

ವಿಮಾನ ನಿಲ್ದಾಣ, ಡಿ.ಕೆ.ಶಿವಕುಮಾರ್ ಕಚೇರಿಗೆ ಬಾಂಬ್ ಬೆದರಿಕೆ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಚೇರಿ ಹಾಗೂ ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಕಿಡಿಗೇಡಿಯೊಬ್ಬ ಇ–ಮೇಲ್ ಸಂದೇಶ ಕಳುಹಿಸಿದ್ದು, ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಮಾಹಿತಿ ಗೊತ್ತಾದ ಕೂಡಲೇ ಸ್ಥಳಕ್ಕೆ ತೆರಳಿದ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಹಾಗೂ ಬಾಂಬ್ ಪತ್ತೆ ದಳದ ಸಿಬ್ಬಂದಿ ಪರಿಶೀಲಿಸಿದರು.

'ಶನಿವಾರ ಬೆಳಿಗ್ಗೆ 9 ಗಂಟೆಗೆ ಅಪರಿಚಿತ ಇ–ಮೇಲ್‌ನಿಂದ ಟರ್ಮಿನಲ್ ವ್ಯವಸ್ಥಾಪಕರ ಇ-ಮೇಲ್ ವಿಳಾಸಕ್ಕೆ ಬೆದರಿಕೆ ಸಂದೇಶ ಬಂದಿತ್ತು. ವಿಮಾನ ನಿಲ್ದಾಣದ 2 ಟರ್ಮಿನಲ್‌ನಲ್ಲಿ 4 ಕಚ್ಚಾ ಬಾಂಬ್‌ಗಳನ್ನು (ಐಇಡಿ) ಇಡಲಾಗಿದ್ದು, ಅವು ಸ್ಫೋಟಗೊಳ್ಳಲಿವೆ. ಇದಾದ 2 ಗಂಟೆ ಬಳಿಕ ಶಿವಕುಮಾರ್ ಕಚೇರಿಯಲ್ಲಿ ಬಾಂಬ್ ಸ್ಫೋಟಿಸುತ್ತೇನೆ ಎಂಬುದಾಗಿ ಇ–ಮೇಲ್‌ನಲ್ಲಿ ಬರೆಯಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಡಿಸಿಎಂ ಮನೆ, ಕಚೇರಿ ಮತ್ತು ವಿಮಾನ ನಿಲ್ದಾಣದ ಪ್ರತಿ ಸ್ಥಳವನ್ನು ಬಾಂಬ್ ನಿಷ್ಕ್ರಿಯ ದಳದಿಂದ ತಪಾಸಣೆ ನಡೆಸಲಾಗಿದೆ. ಬಳಿಕ ಇದೊಂದು ಹುಸಿ ಬಾಂಬ್ ಬೆದರಿಕೆ ಸಂದೇಶ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

'ದುಷ್ಕರ್ಮಿ 2 ನಕಲಿ ಇ-ಮೇಲ್ ಖಾತೆಗಳನ್ನು ಸೃಷ್ಟಿಸಿ ಬೆದರಿಕೆ ಸಂದೇಶ ಕಳುಹಿಸಿದ್ದಾನೆ. ಒಂದು ಖಾತೆಯನ್ನು ಚಿತ್ರ ನಟಿಯೊಬ್ಬರ ಹೆಸರಿನಲ್ಲಿ ಸೃಷ್ಟಿಸಿದ್ದು ಮತ್ತೊಂದು ಖಾತೆ ರಾಜಕಾರಣಿಯೊಬ್ಬರ ಹೆಸರಿನಲ್ಲಿ ಸೃಷ್ಟಿಸಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಈ ಸಂಬಂಧ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸುತ್ತಿಗೆ, ಕಬ್ಬಿಣದ ರಾಡ್‌ನಿಂದ ಹಲ್ಲೆ • ಇಬ್ಬರು ಮಕ್ಕಳು ಸ್ಥಳದಲ್ಲೇ ಸಾವು

ಅಣ್ಣನ ಮಕ್ಕಳ ಹತ್ಯೆ: ಮಾನಸಿಕ ಅಸ್ವಸ್ಥ ವಶ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಕಮ್ಮಸಂದ್ರದಲ್ಲಿ ಮಾನಸಿಕ ಅಸ್ವಸ್ಥನೊಬ್ಬ ತನ್ನ ಅಣ್ಣನ ಇಬ್ಬರು ಮಕ್ಕಳನ್ನು ಕಬ್ಬಿಣದ ರಾಡ್ ಮತ್ತು ಸುತ್ತಿಗೆಯಿಂದ ಹೊಡೆದು ಕೊಂದಿದ್ದು, ಮತ್ತೊಬ್ಬ ಬಾಲಕ ಗಂಭೀರವಾಗಿ ಗಾಯಗೊಂಡಿದ್ದು ಸ್ಥಿತಿ ಚಿಂತಾಜನಕವಾಗಿದೆ.

ಹಲ್ಲೆಯಲ್ಲಿ ಮೊಹಮ್ಮದ್ ಇಶಾಕ್ (9) ಮತ್ತು ಮಹಮದ್ ಜುನೇದ್ (7) ಮೃತಪಟ್ಟಿದ್ದು, ರೋಹನ್ (7) ತಲೆ ಭಾಗಕ್ಕೆ ತೀವ್ರ ಪೆಟ್ಟು ಬಿದ್ದಿದೆ. ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕೊಲೆ ಆರೋಪಿ ಖಾಸೀಂ (35) ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಗಾರೆ ಕೆಲಸ ಮಾಡುವ ಚಾಂದ್ ಪಾಷಾ ಕಮ್ಮಸಂದ್ರದ ಮನೆಯಲ್ಲಿ ಪತ್ನಿ, ಮೂವರು ಮಕ್ಕಳು, ತಾಯಿ ಮತ್ತು ತಮ್ಮನ ಜೊತೆ ವಾಸವಿದ್ದರು. ಪತ್ನಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಾರೆ. ದಂಪತಿ ಕೆಲಸಕ್ಕೆ ಮತ್ತು ಪಾಷಾ ತಾಯಿ ಮಾರುಕಟ್ಟೆಗೆ ಹೋಗಿದ್ದರು.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು

ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಮಕ್ಕಳ ಬಾಯಿಗೆ ಬಟ್ಟೆ ತುರುಕಿದ ಖಾಸೀಂ ಕಬ್ಬಿಣದ ರಾಡ್ ಮತ್ತು ಸುತ್ತಿಗೆಯಿಂದ ಮಕ್ಕಳ ಖಾಸಗಿ ಭಾಗ ಹಾಗೂ ತಲೆಗೆ ಬಲವಾಗಿ ಹೊಡೆದಿದ್ದಾನೆ ಎನ್ನಲಾಗಿದೆ. ಮಕ್ಕಳ ಕೂಗಾಟ ಕೇಳಿಸದಂತೆ ಮೂವರ ಬಾಯಿಗೆ ಬಟ್ಟೆ ತುರುಕಿದ್ದರೂ ಮಕ್ಕಳು ಕೂಗು, ಗಲಾಟೆ ಅಕ್ಕಪಕ್ಕದ ಮನೆಯವರಿಗೆ ಕೇಳಿಸಿದೆ. ಅನುಮಾನಗೊಂಡ ಅವರು ಬಾಗಿಲು ತಟ್ಟಿದಾಗ ಖಾಸೀಂ ತೆಗೆಯಲಿಲ್ಲ.

ಖಾಸೀಂ

ಆಗ ಬಾಗಿಲು ಒಡೆದು ಒಳ ನುಗ್ಗಿದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಕ್ಕಳಲ್ಲಿ ಇಬ್ಬರು ಮೃತಪಟ್ಟಿದ್ದರು. ಮತ್ತೊಬ್ಬ ಬಾಲಕ ತೀವ್ರವಾಗಿ ಗಾಯಗೊಂಡಿದ್ದ. ತಕ್ಷಣವೇ ಆತನನ್ನು ಸ್ಥಳೀಯರು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಿದರು.

ಮಾನಸಿಕ ಅಸ್ವಸ್ಥನಾಗಿದ್ದ ಖಾಸೀಂ ಕಳೆದ ತಿಂಗಳು ಮನೆಯಿಂದ ಏಕಾಏಕಿ ಕಾಣೆಯಾಗಿದ್ದ. ತಮ್ಮನನ್ನು ಅಣ್ಣ ಚಾಂದ್ ಪಾಷಾ ಹುಡುಕಿ ಕರೆ ತಂದು ಮನೆಯಲ್ಲಿಯೇ ಇಟ್ಟುಕೊಂಡಿದ್ದರು.

ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿ ಎಂ.ನಾರಾಯಣ್, ಎಸಿಪಿ ಸತೀಶ್, ಇನ್‌ಸ್ಪೆಕ್ಟರ್ ಸೋಮಶೇಖರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕಾನೂನು ದುರ್ಬಳಕೆ: ₹10 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಸ್ವಾಧೀನಕ್ಕೆ ಒಳಗಾದ ಜಮೀನಿಗೆ ಪರಿಹಾರ ಪಡೆದ ಬಳಿಕವೂ ಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಲಾದ ಅರ್ಜಿಗಳು ಏಳು ಬಾರಿ ವಜಾಗೊಂಡಿದ್ದರೂ ಆ ಮಾಹಿತಿಯನ್ನು ಮರೆಮಾಚಿ ಎಂಟನೇ ಬಾರಿಗೆ ಪುನಃ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಕುಟುಂಬವೊಂದರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಇದೊಂದು ನ್ಯಾಯಾಂಗ ಪ್ರಕ್ರಿಯೆಯ ದುರುಪಯೋಗ ಎಂಬ ಅಭಿಪ್ರಾಯದೊಂದಿಗೆ ₹10 ಲಕ್ಷ ದಂಡ ವಿಧಿಸಿ ತೀರ್ಪು ನೀಡಿದೆ.

ಬೆಂಗಳೂರಿನ ದೊಡ್ಡಬಸ್ತಿ ಮುಖ್ಯರಸ್ತೆಯ ಭುವನೇಶ್ವರಿ ನಗರ ನಿವಾಸಿಗಳಾದ ಗಂಗಮ್ಮ ಮತ್ತು ಕುಟುಂಬಸ್ಥರು ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

ತೀರ್ಪು ಪ್ರಕಟವಾದ ನಾಲ್ಕು ವಾರಗಳಲ್ಲಿ ₹10 ಲಕ್ಷ ದಂಡದ ಮೊತ್ತವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಲು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?

ವೆಂಕಟೇಶ್ ಭೋವಿ ಮತ್ತು ಹನುಮಂತ ಭೋವಿ ಎಂಬುವರು ಕೆಂಗೇರಿ ಹೋಬಳಿಯ ನಾಗದೇವನ ಹಳ್ಳಿಯ ಸರ್ವೆ ಸಂಖ್ಯೆ 26ರ ಜಮೀನನ್ನು ಅನಧಿಕೃತವಾಗಿ ಬಳಕೆ ಮಾಡುತ್ತಿದ್ದರು. ನಂತರ ಸಾಗುವಳಿ ಅಡಿಯಲ್ಲಿ ಜಮೀನನ್ನು ಅರ್ಜಿದಾರರ ಹೆಸರಿಗೆ ಮಂಜೂರು ಮಾಡಲಾಗಿತ್ತು. ಈ ಜಮೀನು ಇಬ್ಬರ ಹೆಸರಿಗೆ ಬದಲಾವಣೆಗೊಂಡಿದ್ದವು. ಉದ್ದೇಶಿತ ಜಮೀನನ್ನು ಗವಿಪುರಂ ಎಕ್ಸ್‌ಟೆನ್ಷನ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯಿಂದ ಬಡಾವಣೆ ನಿರ್ಮಾಣಕ್ಕಾಗಿ 1986ರಲ್ಲಿ ಪ್ರಾಥಮಿಕ ಮತ್ತು 1987ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು.

ಇದರನ್ವಯ ಪ್ರತಿ ಎಕರೆಗೆ ₹65 ಸಾವಿರ ಮತ್ತು ₹15 ಸಾವಿರದಂತೆ ಬಡ್ಡಿ ಸೇರಿಸಿ ಪರಿಹಾರ ನೀಡಲಾಗಿತ್ತು. ಈ ಪರಿಹಾರ ಮೊತ್ತವನ್ನು 1987ರಲ್ಲಿ ಜಮೀನಿನ ಮಾಲೀಕರ ಖಾತೆಗಳಿಗೆ ಜಮಾ ಮಾಡಲಾಗಿತ್ತು. ಏತನ್ಮಧ್ಯೆ, ವೆಂಕಟೇಶ್ ಭೋವಿ ಮತ್ತು ಹನುಮಂತ ಭೋವಿ ಮೃತಪಟ್ಟಿದ್ದರು. ಬಳಿಕ ಜಮೀನನ್ನು ಭೂ ಸ್ವಾಧೀನದಿಂದ ಕೈಬಿಡಬೇಕು ಎಂದು ಕೋರಿ ಅವರಿಬ್ಬರ ವಾರಸುದಾರರು ನಡೆಸಿದ ಕಾನೂನು ಹೋರಾಟದ ಭಾಗವಾಗಿ ಈ ಅರ್ಜಿ ಸಲ್ಲಿಸಲಾಗಿತ್ತು.

'ಅರ್ಜಿದಾರರು ತಪ್ಪಿತಸ್ಥರಾಗಿದ್ದಾರೆ. ಶುದ್ಧಹಸ್ತದಿಂದ ನ್ಯಾಯಾಲಯಕ್ಕೆ ಬಂದಿಲ್ಲ. ವಂಚನೆ, ತಪ್ಪು ಮಾಹಿತಿ ನೀಡಿ ನ್ಯಾಯಾಂಗ ಪ್ರಕ್ರಿಯೆಯ ಪಾವಿತ್ರ್ಯ ಕಳಂಕಗೊಳಿಸಿದ್ದಾರೆ. ಇದರಿಂದ ನ್ಯಾಯದ ಘನತೆಗೆ ಅವಮಾನ ಮಾಡಿದಂತಾಗಿದೆ' ಎಂದು ಕಠಿಣ ಶಬ್ದಗಳಲ್ಲಿ ಅರ್ಜಿದಾರರ ನಡೆಯನ್ನು ನ್ಯಾಯಪೀಠ ಖಂಡಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲ ಅರ್ಜಿ 1994ರಲ್ಲಿ ಸಲ್ಲಿಕೆಯಾಗಿದೆ. ಈವರೆಗೂ ಅರ್ಜಿದಾರರು ಎಂಟು ಬಾರಿ ಕಾನೂನು ಹೋರಾಟ ನಡೆಸಿದ್ದಾರೆ. ಎಲ್ಲ ಅರ್ಜಿಗಳು ವಜಾಗೊಂಡಿವೆ. ಆದರೆ, ಈ ಅಂಶವನ್ನು ಕೊನೆಯ ಅರ್ಜಿಯಲ್ಲಿ ಮರೆಮಾಚಲಾಗಿದೆ' ಎಂದು ನ್ಯಾಯಪೀಠ ಕಿಡಿಕಾರಿದೆ.

ಬಿಕ್ಲು ಶಿವ ಕೊಲೆ: ತನಿಖೆಗೆ ಸಿಐಡಿ ಪೊಲೀಸರ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವನ ಕೊಲೆ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿದ್ದು, ತನಿಖಾಧಿಕಾರಿಗಳು ತನಿಖೆಗೆ ಸಿದ್ಧತೆ ನಡೆಸಿದ್ದಾರೆ.

ತನಿಖೆಗೆ ಸಿಐಡಿ ತಂಡ ಸಹ ರಚಿಸಲಾಗಿದೆ. ಡಿವೈಎಸ್ಪಿ ಉಮೇಶ್, ಇನ್‌ಸ್ಪೆಕ್ಟರ್‌ಗಳಾದ ಸಂದೀಪ್ ಮೇಟಿ, ಆರ್. ಮಂಜುನಾಥ್, ರಾಘವೇಂದ್ರ ತನಿಖಾ ತಂಡದಲ್ಲಿ ಇದ್ದಾರೆ.

ಭಾರತಿನಗರದಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಅಲ್ಲಿನ ಪೊಲೀಸರು ತನಿಖೆ ನಡೆಸಿ ಆರೋಪಿಗಳ ಹೇಳಿಕೆ ದಾಖಲಿಸಿಕೊಂಡಿದ್ದರು. 16 ಆರೋಪಿಗಳು ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದು, ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಪ್ರಕರಣದ ತನಿಖಾಧಿಕಾರಿ ಕೆ.ಜಿ.ಹಳ್ಳಿ ಉಪ ವಿಭಾಗದ ಎಸಿಪಿ ಪ್ರಕಾಶ್ ರಾಥೋಡ್ ಅವರು ಪ್ರಕರಣದ ಐದನೇ ಆರೋಪಿ, ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರನ್ನು ಎರಡು ಬಾರಿ ವಿಚಾರಣೆ ನಡೆಸಿದ್ದಾರೆ. ಶಾಸಕರ ಹೇಳಿಕೆಯನ್ನೂ ದಾಖಲಿಸಿಕೊಂಡಿದ್ದಾರೆ. ಪ್ರಕರಣವು ಇದೀಗ ಸಿಐಡಿಗೆ ವರ್ಗಾವಣೆ ಆಗಿರುವ ಕಾರಣಕ್ಕೆ ಮತ್ತೆ ಶಾಸಕರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ಹುತಾತ್ಮ ಯೋಧರ ಗೌರವಕ್ಕಾಗಿ ವೀರಗಲ್ಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಮತ್ತು ಗೌರವ ಸಲ್ಲಿಸುವ ಉದ್ದೇಶದಿಂದ ನಿರ್ಮಿಸಲಾಗಿರುವ ಬೃಹತ್ ವೀರಗಲ್ಲನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಅನಾವರಣ ಮಾಡಿದರು.

ನಗರದ ಕೇಂದ್ರ ಭಾಗದಲ್ಲಿರುವ 'ರಾಷ್ಟ್ರೀಯ ಸೈನಿಕ ಸ್ಮಾರಕ'ದಲ್ಲಿ ಏಕಶಿಲಾ ವೀರಗಲ್ಲನ್ನು ನಿರ್ಮಿಸಲಾಗಿದೆ. 'ಕಾರ್ಗಿಲ್ ವಿಜಯ ದಿವಸ'ದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಈ ವೀರಗಲ್ಲನ್ನು ಸಿದ್ದರಾಮಯ್ಯ ಅವರು ಅನಾವರಣ ಮಾಡಿದರು.

75 ಅಡಿ ವೀರಗಲ್ಲಿನ ಎತ್ತರ

400 ಟನ್ ವೀರಗಲ್ಲಿನ ತೂಕ

ಸೈನಿಕ ಮತ್ತು ಪುನರ್ವಸತಿ ಇಲಾಖೆ, ರಾಷ್ಟ್ರೀಯ ಸೈನಿಕ ಸ್ಮಾರಕ ನಿರ್ವಹಣಾ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಸಿದ್ದರಾಮಯ್ಯ ಅವರು ನಿವೃತ್ತ ಸೈನಿಕರಿಗೆ ಅಭಿನಂದನೆ ಸಲ್ಲಿಸಿದರು. ವೀರಗಲ್ಲನ್ನು ರೂಪಿಸಿದ ಶಿಲ್ಪಿ ಅಶೋಕ್ ಗುಡಿಗಾರ್ ಅವರನ್ನು ಸನ್ಮಾನಿಸಿದರು.

ಗೃಹ ಸಚಿವ ಜಿ.ಪರಮೇಶ್ವರ, ವಸತಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎಂ.ಸಲೀಂ ಅವರು ಭಾಗಿಯಾಗಿದ್ದರು.

ನಗರದ ರಾಷ್ಟ್ರೀಯ ಸೈನಿಕ ಸ್ಮಾರಕದಲ್ಲಿ ವೀರಗಲ್ಲಿನ ಅನಾವರಣ ನಂತರ ವಿದ್ಯಾರ್ಥಿಗಳು, ನಿವೃತ್ತ ಸೈನಿಕರು ಪುಷ್ಪನಮನ ಸಲ್ಲಿಸಿದರು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಹಬ್ಬದಲ್ಲಿ ಕುಂದಾಪ್ರ ಭಾಷೆಯ ಸೊಗಡು, ಆಚರಣೆ, ಸಂಸ್ಕೃತಿ, ಊಟೋಪಚಾರ ಅನಾವರಣ

ಕುಂದಾಪ್ರ ಕನ್ನಡ ಅಧ್ಯಯನ ಪೀಠ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದುಕಿನ ಪಥದಲಿ ಭಾಷೆಯ ರಥ' ಘೋಷವಾಕ್ಯ ಇಟ್ಟುಕೊಂಡು ಶನಿವಾರ ಆರಂಭಗೊಂಡ 'ಕುಂದಾಪ್ರ' ಕನ್ನಡ ಹಬ್ಬದಲ್ಲಿ ಕುಂದಾಪ್ರ ಕನ್ನಡ ಅಧ್ಯಯನ ಪೀಠ ಲೋಕಾರ್ಪಣೆಗೊಂಡಿತು. ಪ್ರಾದೇಶಿಕ ಭಾಷೆಯ ಸೊಗಡು, ಸೊಬಗು, ಸಂಸ್ಕೃತಿ, ಸಂಪ್ರದಾಯ, ಊಟೋಪಚಾರ, ಆಚರಣೆಗಳು ಹಬ್ಬದಲ್ಲಿ ಅನಾವರಣಗೊಂಡವು.

ಅಧ್ಯಯನ ಪೀಠದ ಸದಸ್ಯ ಕೆ. ಜಯಪ್ರಕಾಶ್ ಹೆಗ್ಡೆ ಪೀಠ ಲೋಕಾರ್ಪಣೆ ಮಾಡಿ ಮಾತನಾಡಿ, 'ಕುಂದಾಪ್ರ (ಕುಂದಾಪುರ) ಕನ್ನಡ ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸುವ ಮೂಲಕ ಅಧ್ಯಯನ ಪೀಠವನ್ನು ಬಲಗೊಳಿಸಬೇಕು' ಎಂದು ತಿಳಿಸಿದರು.

ನಾಲ್ಕು ವರ್ಷಗಳ ಹಿಂದೆ ಕುಂದಾಪ್ರ ಕನ್ನಡ ಹಬ್ಬದಲ್ಲಿ ಈ ಅಧ್ಯಯನ ಪೀಠಕ್ಕೆ ಬೇಡಿಕೆ ಇಡಲಾಗಿತ್ತು. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾತ್ರವಲ್ಲದೆ ಸರ್ಕಾರದಿಂದಲೂ ಒಪ್ಪಿಗೆ ಸಿಕ್ಕಿತಲ್ಲದೇ ಮುಖ್ಯಮಂತ್ರಿ ಸಿದ್ದರಾಮಯ್ಯ ₹ 1.5 ಕೋಟಿ ಮಂಜೂರು ಮಾಡಿದರು ಎಂದು ನೆನಪಿಸಿಕೊಂಡರು.

ಮಣಿಪಾಲ ಗ್ರೂಪ್ ಆಫ್ ಹಾಸ್ಪಿಟಲ್ಸ್ ಅಧ್ಯಕ್ಷ ಡಾ.ಎಚ್. ಸುದರ್ಶನ ಬಲ್ಲಾಳ್ ಅವರಿಗೆ 'ಊರ ಗೌರವ' ವಿಶೇಷ ಪುರಸ್ಕಾರ ನೀಡಿ ಗೌರವಿಸಲಾಯಿತು

ಕುಂದಾಪ್ರ ಕನ್ನಡ ಬಗ್ಗೆ ಸಂಗೀತ ನಿರ್ದೇಶಕ ರವಿ ಬಸ್ರೂರು ಒಂದು ಆ್ಯಪ್ ರೂಪಿಸಿದ್ದು, ಪಂಜು ಗಂಗೊಳ್ಳಿ ಅವರು ಕುಂದಗನ್ನಡ ನಿಘಂಟು ಮಾಡಿದ್ದಾರೆ. ಅದೇ ರೀತಿ ಯಾವುದೇ ಮಹತ್ವದ ವಸ್ತು–ವಿಷಯ ಇದ್ದರೆ ಪೀಠಕ್ಕೆ ನೀಡಿ ಎಂದು ಮನವಿ ಮಾಡಿದರು.

ಶಾಸಕ ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, 'ಕುಂದಗನ್ನಡವನ್ನು ಇನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಈ ಪೀಠ ನೆರವಾಗಲಿದೆ. ಕುಂದಾಪ್ರ ಕನ್ನಡ ಹಬ್ಬದಿಂದ ಕುಂದಾಪುರ ಮಾತ್ರವಲ್ಲದೆ ಬೆಂಗಳೂರು, ದುಬೈ ಸೇರಿ ವಿಶ್ವದೆಲ್ಲೆಡೆ ಕುಂದಾಪ್ರ ಹೆಸರು ಅನುರಣಿಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಕುಂದಾಪುರದಲ್ಲಿ ಕುಂದಾಪುರ ಕನ್ನಡ ಭವನ ನಿರ್ಮಿಸುವ ಚಿಂತನೆ ಇದೆ' ಎಂದು ಶಾಸಕ ಗುರುರಾಜ್ ಗಂಟಿಹೊಳೆ ತಿಳಿಸಿದರು.

ಮಣಿಪಾಲ ಗ್ರೂಪ್ ಆಫ್ ಹಾಸ್ಪಿಟಲ್ಸ್ ಅಧ್ಯಕ್ಷ ಡಾ.ಎಚ್. ಸುದರ್ಶನ ಬಲ್ಲಾಳ್ ಅವರಿಗೆ 'ಊರ ಗೌರವ' ವಿಶೇಷ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ, ವಿಎಲ್ ಗ್ರೂಪ್ ಮ್ಯಾನೇಜಿಂಗ್ ಡೈರೆಕ್ಟರ್ ಅಂಜಲಿ ವಿಜಯ್, ಎಎಸ್ ಗ್ರೂಪ್ಸ್ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಶೆಟ್ಟಿ, ಮಂಗಳೂರು ವಿಶ್ವವಿದ್ಯಾಲಯ ರಿಜಿಸ್ಟ್ರಾರ್ ರಾಜು ಮೊಗವೀರ, ಲೈಫ್‌ಲೈನ್ ಟೆಂಡರ್ ಚಿಕನ್ ಮ್ಯಾನೇಜಿಂಗ್ ಡೈರೆಕ್ಟರ್ ಕಿಶೋರ್ ಹೆಗ್ಡೆ, ಕುಂದಾಪ್ರ ಕನ್ನಡ ಪ್ರತಿಷ್ಠಾನದ ಗೌರವಾಧ್ಯಕ್ಷ ಉದಯ ಹೆಗ್ಡೆ, ಅಧ್ಯಕ್ಷ ದೀಪಕ್ ಶೆಟ್ಟಿ ಬಾರ್ಕೂರು, ಉಪಾಧ್ಯಕ್ಷ ನರಸಿಂಹ ಬೀಜಾಡಿ, ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಜೊತೆ ಕಾರ್ಯದರ್ಶಿ ಅಜಿತ್ ಶೆಟ್ಟಿ ಉಳ್ತೂರು, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ ಉಪಸ್ಥಿತರಿದ್ದರು.

ಪ್ರಮುಖ ಅಂಶಗಳು

- ರವಿ ಬಸ್ರೂರು ರೂಪಿಸಿರುವ ಕುಂದಗನ್ನಡದ 9 ಸಾವಿರ ಪದಗಳನ್ನು ಒಳಗೊಂಡ 'ಡಿಜಿಟಲ್ ಶಬ್ದಕೋಶ' ಆ್ಯಪ್ ಬಿಡುಗಡೆ
- ಚಿತ್ರ ನಿರ್ದೇಶಕ ಯೋಗರಾಜ್ ಭಟ್ ಅವರಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಭಾನುವಾರ 'ಊರ ಗೌರವ' ವಿಶೇಷ ಪುರಸ್ಕಾರ ನೆರವೇರಲಿದೆ.
- ಭಾನುವಾರ ಪಿಳ್ಳಂಗೋವಿಯ ಚೆಲುವ ಕೃಷ್ಣನಾ: ಗಾನಯಾನ, ಬಾಲ ಗೋಪಾಲ: ಯಕ್ಷನೃತ್ಯ, ಮನು ಹಂದಾಡಿಯ ಹಂದಾಡಿ ಕ್ವಿಜ್, ಫ್ಯಾಷನ್ ಶೋ 'ಚಂದಾಮುಡಿ', ಕಾಳಿಂಗ ನಾವಡ, ಪಿ.ಕಾಳಿಂಗ ರಾಯರ ಪದ-ಪದ್ಯಗಳ ಅನುರಣನ, ರಘು ದೀಕ್ಷಿತ್ ಲೈವ್ ಕನ್ಸರ್ಟ್, ಅಭಿನಂದನೆ ಕಾರ್ಯಕ್ರಮಗಳು ನಡೆಯಲಿವೆ.

ಸ್ಕೇಟಿಂಗ್: ಧನುಷ್‌ಗೆ ಬೆಳ್ಳಿ

ಬೆಂಗಳೂರು: ನಗರದ ಸ್ಕೇಟಿಂಗ್ ಪಟು ಧನುಷ್ ಬಾಬು ಅವರು ದಕ್ಷಿಣ ಕೊರಿಯಾದಲ್ಲಿ ಈಚೆಗೆ ನಡೆದ 20ನೇ ಏಷ್ಯನ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದರು.

ಅವರು ಪುರುಷರ 200 ಮೀ. ಡ್ಯುಯಲ್ ಟೈಮ್ ಟ್ರಯಲ್ಸ್‌ನಲ್ಲಿ ಈ ಸಾಧನೆ ಮಾಡಿದರು. 30 ವರ್ಷದ ಧನುಷ್ ಅವರು 17.592 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ತೈಪೆಯ ಲೀ ಯಾಂಗ್ ಕುವೊ (17.584) ಅವರು ಮೊದಲ ಸ್ಥಾನ ಪಡೆದರು. ಧನುಷ್ ಎರಡನೇಯವರಾಗಿ ಗುರಿ ಮುಟ್ಟಿದರು. ಕೊರಿಯಾದ ಲೀ ಗಿವೊನ್ (17.624ಸೆ) ಕಂಚು ಜಯಿಸಿದರು.

ಧನುಷ್ ಬಾಬು (ಎಡದಿಂದ ಮೊದಲನೇಯವರು)

ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಆಯೋಜಿಸಿರುವ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ ಇದೇ 27ರಿಂದ ಆಗಸ್ಟ್ 2ರ ವರೆಗೆ ನಗರದ ಉರ್ವಸ್ಟೋರ್‌ನ ಹೊಸ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿದೆ. ಮುಕ್ತ ಹಾಗೂ 19 ವರ್ಷದೊಳಗಿನವರ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ.

ಪುರುಷರ ವಿಭಾಗದಲ್ಲಿ ಬೆಂಗಳೂರಿನ ಅಭಿನವ್ ಗರ್ಗ್ ಅಗ್ರ ಶ್ರೇಯಾಂಕ ನೀಡಿದ್ದು, ಬೆಂಗಳೂರಿನ ಅಶ್ವತಿ ವರ್ಗೀಸ್ ಅವರಿಗೆ ಮಹಿಳೆಯರ ವಿಭಾಗದಲ್ಲಿ ಮೊದಲ ಶ್ರೇಯಾಂಕ ನೀಡಲಾಗಿದೆ. ಮಹಿಳೆಯರ 19 ವರ್ಷದೊಳಗಿನವರ ವಿಭಾಗದಲ್ಲಿ ದಿವ್ಯಾ ಭೀಮಯ್ಯ ಮೊದಲ ಶ್ರೇಯಾಂಕ ಹೊಂದಿದ್ದಾರೆ.

19 ವರ್ಷದೊಳಗಿನ ಮಹಿಳೆಯರ ವಿಭಾಗದಲ್ಲಿ ಲಕ್ಷ್ಯ ರಾಜೇಶ್ ಮತ್ತು ದಿವ್ಯಾ ಗಮನ ಸೆಳೆಯಲಿದ್ದಾರೆ. ಮುಕ್ತ ಪುರುಷರ ವಿಭಾಗದಲ್ಲಿ ರುದ್ರ ಶಾಹಿ, 19 ವರ್ಷದೊಳಗಿನವರ ವಿಭಾಗದಲ್ಲಿ ಹಾರ್ದಿಕ್ ದಿವ್ಯಾಂಶ್ ಕೂಡ ಸ್ಪರ್ಧೆಯಲ್ಲಿದ್ದಾರೆ.

ಬೆಂಗಳೂರು ರೇಸ್

ಮೇಯ್ನ್ ಮ್ಯಾಜಿಕ್ ಗೆಲ್ಲುವ ನಿರೀಕ್ಷೆ

ಕರ್ನಾಟಕ ಮೈಲ್ ಚಾಂಪಿಯನ್‌ಷಿಪ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೇಯ್ನ್ ಮ್ಯಾಜಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚಿಂಕಿ ಪಿಂಕಿ 2, ಎಂಬೋಸಮ್ 7, ಚಿರಾಗ್ 9
2ನೇ ರೇಸ್: ಕ್ಯಾಸ್ಕಾಯ್ಸ್ 2, ಲೆಜೆಂಡರಿ ಇಂಪ್ಯಾಕ್ಟ್ 5, ಸಿಲಿಕಾನ್ ಸ್ಟಾರ್ 3
3ನೇ ರೇಸ್: ರಾಂಪಿಂಗ್ ಹೋಮ್ 10, ಮಾಯ್ ಟಾಯ್ 9, ಕಾಂಕ್ರ 3
4ನೇ ರೇಸ್: ಎಕ್ಸಲೆಂಟ್ ಲಾಸ್ 9, ಜೆರ್ಸಿ ಕಿಂಗ್ 4, ಮಜಾಲ್ ಟಾವ್ 6
5ನೇ ರೇಸ್: ಸರ್ಕಲ್ ಆಫ್ ಡ್ರೀಮ್ಸ್ 3, ಪೋಲ್ ಸ್ಟಾರ್ 5, ಸರ್ ವಿನ್‌ಸ್ಟನ್ 8
6ನೇ ರೇಸ್: ಮೇಯ್ನ್ ಮ್ಯಾಜಿಕ್ 4, ಪ್ರಾಣ 1
7ನೇ ರೇಸ್: ಮ್ಯೂಚುವಲ್ ಟ್ರಸ್ಟ್ 7, ಮಾಂಟೇರಿಯೊ 3, ಕ್ಯಾರೆಟ್ ಲವ್ 4

ಉತ್ತಮ ಬೆಟ್: ಎಕ್ಸಲೆಂಟ್ ಲಾಸ್

ಜಾಕ್‌ಪಾಟ್‌ಗೆ	1ನೇ ಟ್ರೆಬಲ್	2ನೇ ಟ್ರೆಬಲ್
3,4,5,6,7	2,3,4	5,6,7

ಭಾರಿ ಮಳೆ: ಉಕ್ಕಿ ಹರಿದ ನದಿಗಳು

ಕೊಡಗು: ಮನೆ ಗೋಡೆ ಕುಸಿದು ಮಹಿಳೆ ಸಾವು • ಕೆಲವು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಣೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ನಗರವೂ ಸೇರಿದಂತೆ ಕೊಡಗು ಜಿಲ್ಲೆಯಾದ್ಯಂತ ಶನಿವಾರ ಬಿರುಗಾಳಿ ಸಹಿತ ಭಾರಿ ಮಳೆಯಾಯಿತು.

ಮನೆಯ ಗೋಡೆ ಕುಸಿದು ಸೋಮವಾರಪೇಟೆ ತಾಲ್ಲೂಕಿನ ಹಾನಗಲ್ಲು ಗ್ರಾಮದ ಸುಷ್ಮಾ (35) ಮೃತಪಟ್ಟಿದ್ದಾರೆ. ಇವರ ಮೂವರು ಮಕ್ಕಳು ಹಾಗೂ ಸೋದರ ಅಕ್ಷಯ್ ಗಾಯಗೊಂಡಿದ್ದಾರೆ. ಕಲಬುರಗಿಯ ಅಫಜಲ್‌ಪುರದ ಇವರು ಕೂಲಿ ಕೆಲಸಕ್ಕೆಂದು ಬಂದು ಬಾಡಿಗೆ ಮನೆಯಲ್ಲಿದ್ದರು. ಶನಿವಾರ ಮುಂಜಾನೆ ಮಲಗಿದ್ದ ವೇಳೆ ಗೋಡೆ ಕುಸಿದಿದೆ. ಪತಿ ರವಿ ಕಲಬುರಗಿಗೆ ಹೋಗಿದ್ದರು.

ಭಾಗಮಂಡಲದಲ್ಲಿ ಕಾವೇರಿ ಹಾಗೂ ಕನ್ನಿಕೆ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಅಲ್ಲಿನ 'ತ್ರಿವೇಣಿ ಸಂಗಮ' ಈ ವರ್ಷ 4ನೇ ಬಾರಿಗೆ ಜಲಾವೃತಗೊಂಡಿದೆ. ಸಮೀಪದ ಉದ್ಯಾನಕ್ಕೂ ನೀರು ನುಗ್ಗಿದೆ.

ಜೋರು ಗಾಳಿಯಿಂದಾಗಿ ಮರಗಳು, ವಿದ್ಯುತ್ ಕಂಬಗಳು ಧರೆಗುರುಳುತ್ತಿವೆ. ಇದರಿಂದ ನಗರ ಸೇರಿದಂತೆ ಎಲ್ಲೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಸೋಮವಾರಪೇಟೆ ತಾಲ್ಲೂಕಿನ ಕುಂಬೂರು ಬಳಿ ರಾಜ್ಯ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಆಟೊರಿಕ್ಷಾ ಮೇಲೆ ಮರ ಬಿದ್ದಿದ್ದು, ಚಾಲಕ ಪ್ರವೀಣ್ ಅಪಾಯದಿಂದ ಪಾರಾಗಿದ್ದಾರೆ. ಸುಂಟಿಕೊಪ್ಪ ಸಮೀಪದ ಬಾಳೆಕಾಡು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮರ ಬಿದ್ದು ಕೆಲಕಾಲ ಸಂಚಾರಕ್ಕೆ ತೊಂದರೆಯಾಯಿತು.

ಸೋಮವಾರಪೇಟೆ ಸಮೀಪದ ಬಿ.ಆರ್.ಅಂಬೇಡ್ಕರ್ ಮೆಟ್ರಿಕ್‌ಪೂರ್ವ ಬಾಲಕರ ಹಾಸ್ಟೆಲ್‌ನಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ.

ಶಾಂತಳ್ಳಿಯಲ್ಲಿ 20 ಸೆಂ.ಮೀ., ಭಾಗಮಂಡಲದಲ್ಲಿ 17, ಶ್ರೀಮಂಗಲ 11, ಸೋಮವಾರಪೇಟೆ 8, ಶನಿವಾರಸಂತೆ 7, ಹುದಿಕೇರಿ 6, ನಾಪೋಕ್ಲು 5 ಸೆಂ.ಮೀ. ಮಳೆಯಾಗಿದೆ.

ಮಲೆನಾಡಿನಲ್ಲಿ ಮುಂದುವರೆದ ಮಳೆ

ಶಿವಮೊಗ್ಗ: ಜಿಲ್ಲೆಯ ಕೆಲವೆಡೆ ಶನಿವಾರ ಮಳೆಯ ಆರ್ಭಟ ತುಸು ಕಡಿಮೆಯಾಗಿದ್ದು, ಮಲೆನಾಡು ಭಾಗದಲ್ಲಿ ಮುಂದುವರೆದಿದೆ.

ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ ಹೊಸನಗರ ತಾಲ್ಲೂಕಿನ ಮಾಣಿಯಲ್ಲಿ 23.7 ಸೆಂ.ಮೀ, ಆಗುಂಬೆಯಲ್ಲಿ 16.4 ಸೆಂ.ಮೀ, ಮೇಗರವಳ್ಳಿಯಲ್ಲಿ 14 ಸೆಂ.ಮೀ ಮಳೆ ದಾಖಲಾಗಿದೆ.

ತೀರ್ಥಹಳ್ಳಿಯಲ್ಲಿ ತುಂಗಾನದಿಯ ರಾಮಮಂಟಪ ಭರ್ತಿಗೆ ಇನ್ನೆರಡು ಅಡಿ ಬಾಕಿ ಉಳಿದಿದೆ. ಶಿವಮೊಗ್ಗ ನಗರದ ತುಂಗಾ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದ್ದು, ನದಿ ದಡದಲ್ಲಿನ ಕೋರ್ಪಾಲಯ್ಯನ ಛತ್ರದ ಮಂಟಪದ ಸನಿಹಕ್ಕೆ ನೀರು ಹರಿಯುತ್ತಿದೆ.

ಶಿವಮೊಗ್ಗ, ಸಾಗರ, ತೀರ್ಥಹಳ್ಳಿ, ಕೋಣಂದೂರು, ಸೊರಬ, ಭದ್ರಾವತಿಯಲ್ಲಿ ಭಾರಿ ಮಳೆ ಸುರಿದಿದೆ. ಹೊಸನಗರದ ವಾರಾಹಿ ಯೋಜನಾ ಪ್ರದೇಶದ ಯಡೂರು ಹಾಗೂ ಮಾಸ್ತಿಕಟ್ಟೆಯಲ್ಲೂ ಉತ್ತಮ ಮಳೆಯಾಗಿದೆ.



ಶೃಂಗೇರಿಯಲ್ಲಿ ತುಂಗಾ ನದಿ ಉಕ್ಕಿ ಹರಿಯುತ್ತಿದೆ —ಚಿತ್ರ: ಕೆ.ಎನ್.ರಾಘವೇಂದ್ರ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.05	35,966	45,551
ಹಾರಂಗಿ	2,859	2,855.80	9,294	9,975
ಕಬಿನಿ	2,284.00	2,283.55	21,798	21,000
ಹೇಮಾವತಿ	2,922	2,921.03	18,011	17,950
ಲಿಂಗನಮಕ್ಕಿ	1,819	1,808.35	67,856	3,335
ಸೂಪಾ (ಮೀ)	564	549.08	39,506.47	2,935.01
ಮಾಣಿ	595	589.24	11,176	-
ತುಂಗಭದ್ರಾ	1,633	1,625.43	80,500	77,000
ಮಲಪ್ರಭಾ	2,079.5	2,073.45	3,275	1,194
ಘಟಪ್ರಭಾ	2175	2,170.30	12,227	4,263
ಭದ್ರಾ *	186	180.6	21,568	21,568
ಆಲಮಟ್ಟಿ (ಮೀ)	519.6	518.11	49,871	43,065
ನಾರಾಯಣಪುರ (ಮೀ)	492.25	491.59	82,680	87,860

* ನೆಲಮಟ್ಟದಿಂದ

ದೇವಿಮನೆ ಘಟ್ಟದಲ್ಲಿ ಭೂ ಕುಸಿತ

ದೇವಿಮನೆ ಘಟ್ಟದಲ್ಲಿ ಭೂಕುಸಿತ ಉಂಟಾಗಿದೆ

ಹುಬ್ಬಳ್ಳಿ: ಧಾರವಾಡ, ಗದಗ ಜಿಲ್ಲೆಯಲ್ಲಿ ಶನಿವಾರ ಜಿಟಿಜಿಟಿ ಮಳೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಹಲವೆಡೆ ಮಳೆ ಅಬ್ಬರ ಮುಂದುವರಿದಿದೆ. ಕುಮಟಾ ತಾಲ್ಲೂಕಿನ ದೇವಿಮನೆ ಘಟ್ಟದಲ್ಲಿ ಪುನಃ ಭೂ ಕುಸಿತ ಸಂಭವಿಸಿದೆ.

ಘಟ್ಟ ಪ್ರದೇಶದಲ್ಲಿನ ಕ್ಷೇತ್ರಪಾಲ ದೇವಾಲಯದ ಪಕ್ಕದಲ್ಲಿಯೇ ಭಾರಿ ಪ್ರಮಾಣದಲ್ಲಿ ಭೂ ಕುಸಿತ ಉಂಟಾಗಿದೆ. ಇದರಿಂದ ದೇವಸ್ಥಾನದ ಪಕ್ಕದಲ್ಲಿ ಪಶ್ಚಿಮ ಘಟ್ಟದ ಸೌಂದರ್ಯ ಸವಿಯಲು ಇದ್ದ ವೀಕ್ಷಣಾ ಗೋಪುರದ ಮೆಟ್ಟಿಲುಗಳು ಕೊಚ್ಚಿಕೊಂಡು ಹೋಗಿವೆ. ಇದೇ ಸ್ಥಳದ ಸಮೀಪ ತಿಂಗಳ ಹಿಂದೆ ಕುಸಿತ ಉಂಟಾಗಿತ್ತು.

ಭೂ ಕುಸಿತದಿಂದ ಕಾಮಗಾರಿ ಪ್ರಗತಿಯಲ್ಲಿರುವ ಶಿರಸಿ–ಕುಮಟಾ ರಾಷ್ಟ್ರೀಯ ಹೆದ್ದಾರಿ 766–ಇ ಅಂಚು ಸ್ವಲ್ಪ ಪ್ರಮಾಣದಲ್ಲಿ ಹಾನಿಯಾಗಿದೆ. ಲಘು ವಾಹನಗಳ ಸಂಚಾರ ನಡೆಯುತ್ತಿದೆ. ಕುಮಟಾ, ಹೊನ್ನಾವರದಲ್ಲಿ ಮಳೆ ಪ್ರಮಾಣ ತಗ್ಗಿದ್ದು, ಉಕ್ಕಿ ಹರಿಯುತ್ತಿದ್ದ ಬಡಗಣಿ, ಅಘನಾಶಿನಿ, ಗುಂಡಬಾಳ ನದಿಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿದೆ.

ಕೊಚ್ಚಿಕೊಂಡು ಹೋದ ಜಾನುವಾರು

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಭಾರಿ ಮಳೆಯಾಗಿದ್ದು, ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಕುದಮೂಡ ಗ್ರಾಮದ ಸೇತುವೆ ಮೇಲೆ ಹಳ್ಳದ ನೀರು ಹರಿದಿದ್ದರಿಂದ ಐದಾರು ಜಾನುವಾರು ಕೊಚ್ಚಿಕೊಂಡು ಹೋಗಿದ್ದವು. ಗ್ರಾಮದ ಮಲ್ಲಿಕಾರ್ಜುನ ಪೂಜಾರಿ ಅವರ ಆಕಳು ಹಾಗೂ ಕರು ಕೊಚ್ಚಿಕೊಂಡು ಹೋಗಿದ್ದು, ಇನ್ನೂ ಪತ್ತೆಯಾಗಿಲ್ಲ.

ಹಲವು ಗಂಟೆಗಳವರೆಗೆ ಕುದಮೂಡ ಗ್ರಾಮದ ಸಂಪರ್ಕ ಕಡಿತಗೊಂಡಿತ್ತು. ಅಪಾಯಕಾರಿ ಹಳ್ಳವನ್ನು ದಾಟಲು ಜನರು ಮುಂದಾಗುತ್ತಿರುವುದನ್ನು ಗಮನಿಸಿದ ತಹಶೀಲ್ದಾರ್ ಅವರು ಸ್ಥಳಕ್ಕೆ ಗ್ರಾಮ ಲೆಕ್ಕಾಧಿಕಾರಿ ಮತ್ತು ಪೊಲೀಸರನ್ನು ಕಳುಹಿಸಿ ಸೇತುವೆ ದಾಟದಂತೆ ತಡೆದರು. ಚಿತ್ತಾಪುರ ತಾಲ್ಲೂಕಿನ ದಂಡೋತಿ ಗ್ರಾಮದಲ್ಲಿ ಎರಡು ಮನೆಗಳಿಗೆ ಮಳೆಯಿಂದಾಗಿ ಹಾನಿಯಾಗಿದೆ.

ತುಂಗಭದ್ರಾ: 26 ಕ್ರಸ್ಟ್‌ಗೇಟ್ ತೆರೆದು ನೀರು ನದಿಗೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ನದಿಯ ಒಳಹರಿವಿನಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿರುವ ಕಾರಣ ಶನಿವಾರ ಅಣೆಕಟ್ಟೆಯ 26 ಕ್ರಸ್ಟ್‌ಗೇಟ್‌ಗಳನ್ನು ತೆರೆದು 77 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಯಿತು.

ತುಂಗಾ ಜಲಾಶಯದಿಂದ 70 ಸಾವಿರ ಕ್ಯೂಸೆಕ್ ಮತ್ತು ಭದ್ರಾ ಜಲಾಶಯದಿಂದ 19,427 ಕ್ಯೂಸೆಕ್ ನೀರು ಹೊರಬಿಡುತ್ತಿರುವುದರಿಂದ ಹಾಗೂ ವರದಾ ನದಿಯಿಂದಲೂ ನೀರು ಹರಿದು ಬರುತ್ತಿರುವುದರಿಂದ ತುಂಗಭದ್ರಾ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಭಾರಿ ಪ್ರಮಾಣದಲ್ಲಿ ಹೆಚ್ಚಿತ್ತು.

ತುಂಗಭದ್ರಾ ಅಣೆಕಟ್ಟೆಯಿಂದ 24 ದಿನಗಳಿಂದೀಚೆಗೆ ಕ್ರಸ್ಟ್‌ಗೇಟ್‌ಗಳ ಮೂಲಕ ನದಿಗೆ ನೀರು ಹರಿಯುತ್ತಲೇ ಇದೆ. ಜುಲೈ ಮೊದಲೆರಡು ವಾರ ಒಳಹರಿವು ಪ್ರಮಾಣ 40 ಸಾವಿರ ಕ್ಯೂಸೆಕ್‌ಗಿಂತ ಅಧಿಕ ಇತ್ತು. ಜುಲೈ 5ರಂದು 64 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗಿತ್ತು. ಬಳಿಕ ಒಳಹರಿವಿನ ಪ್ರಮಾಣದಲ್ಲಿ ಇಳಿಕೆಯಾಗುತ್ತ ಬಂದ ಕಾರಣ ಹೊರಹರಿವಿನ ಪ್ರಮಾಣವನ್ನೂ ಇಳಿಸಲಾಗಿತ್ತು.

80 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹ: ತುಂಗಭದ್ರಾ ಜಲಾಶಯದ ಸಂಗ್ರಹ ಸಾಮರ್ಥ್ಯ 105.78 ಟಿಎಂಸಿ ಅಡಿ. ಆದರೆ ಅಣೆಕಟ್ಟೆಯ ಕ್ರಸ್ಟ್‌ಗೇಟ್‌ಗಳು ಶಿಥಿಲಗೊಂಡಿರುವ ಕಾರಣ ಈ ಬಾರಿ ಪೂರ್ಣ ಪ್ರಮಾಣದಲ್ಲಿ ಜಲಾಶಯದಲ್ಲಿ ನೀರು ಸಂಗ್ರಹ ಮಾಡುವುದು ಬೇಡ ಎಂದು ತಜ್ಞರು ಸಲಹೆ ನೀಡಿದ್ದರು. ಗರಿಷ್ಠ 80 ಟಿಎಂಸಿ ಅಡಿಗೇ ಮಿತಿಗೊಳಿಸಿ ಉಳಿದ ನೀರನ್ನು ನದಿಗೆ ಹರಿಸಬೇಕು ಎಂಬ ತಜ್ಞರ ಸಲಹೆಯಂತೆ ಜುಲೈ 1ರಿಂದಲೇ ನದಿಗೆ ನೀರು ಹರಿಸಲಾಗುತ್ತಿದೆ.

ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಒಂದು ವಾರ ನಿರಂತರ ಗಾಳಿಯೊಂದಿಗೆ ಭಾರಿ ಮಳೆ ಮುಂದುವರಿಯುವ ಸಾಧ್ಯತೆ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಅವಧಿಯಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಎಚ್ಚರಿಕೆ ನೀಡಿದೆ.

ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಭಾನುವಾರದಂದು 'ಆರೆಂಜ್ ಅಲರ್ಟ್' ಘೋಷಿಸಿದರೆ, ಉಳಿದ ಎಲ್ಲ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಕರಾವಳಿಯ ಉತ್ತರ ಕನ್ನಡದಲ್ಲಿ ಧಾರಾಕಾರ ಮಳೆಯಾಗುವ ಸಂಭವವಿದೆ. ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬೆಳಗಾವಿ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯಲ್ಲಿ ಗಂಟೆಗೆ 45ರಿಂದ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ತಿಳಿಸಿದೆ.

ಶೃಂಗೇರಿ: ಸ್ನಾನ ಘಟ್ಟ ಮುಳುಗಡೆ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಮಳೆ ಮುಂದುವರಿದಿದೆ. ತುಂಗಾನದಿ ಉಕ್ಕಿ ಹರಿದು ಶೃಂಗೇರಿ ಶಾರದಾ ಪೀಠದ ಭಾರತೀತೀರ್ಥ ಸ್ವಾಮೀಜಿ ಅವರ ಸ್ನಾನ ಘಟ್ಟ, ಸಂಧ್ಯಾ ವಂದನೆ ಮಂಟಪ ಮುಳುಗಿದೆ. ನೆಮ್ಮಾರ್, ಕೆರೆಕಟ್ಟೆ, ಕುರುಬಕೇರಿ, ಭಾರತೀತೀರ್ಥ ರಸ್ತೆ, ಗಾಂಧಿ ಮೈದಾನ, ವಿದ್ಯಾರಣ್ಯಪುರ ರಸ್ತೆ, ಕಿಕ್ರೆ ಹಳ್ಳ ಸೇತುವೆ ಮೇಲೆ, ಕೆರೆಕಟ್ಟೆಯ ಗುಲುಗುಂಜಿ ಮನೆ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತಡೆಯುಂಟಾಗಿತ್ತು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಾದ್ಯಂತ ಜೋರುಗಾಳಿಯೊಂದಿಗೆ ಬಿಟ್ಟು ಬಿಟ್ಟು ಮಳೆಯಾಗುತ್ತಿದೆ. ಸುಬ್ರಹ್ಮಣ್ಯದ ಸ್ನಾನಘಟ್ಟ ಮುಳುಗಡೆಯಾಗಿದೆ. ಸಮುದ್ರ ಪ್ರಕ್ಷುಬ್ಧಗೊಂಡಿದ್ದು, ಭಾರಿ ಅಲೆಗಳು ಏಳುತ್ತಿವೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

मौलाना आज़ाद नेशनल उर्दू यूनिवर्सिटी مولانا آزاد نیشنل اردو یونیورسٹی
MAULANA AZAD NATIONAL URDU UNIVERSITY
A Central University under Ministry of Education
Government of India

ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ಕೇಂದ್ರ (ಸಿಡಿಒಇ)
(ಹಿಂದಿನ ದೂರಶಿಕ್ಷಣ ನಿರ್ದೇಶನಾಲಯ–ಡಿಡಿಇ)

ಶೈಕ್ಷಣಿಕ ವರ್ಷ 2025–26ನೇ ಸಾಲಿನ ಪ್ರವೇಶಾತಿ ಅಧಿಸೂಚನೆ

ಕೆಳಕಂಡ ಓಪನ್ & ಡಿಸ್ಟೆನ್ಸ್ ಲರ್ನಿಂಗ್ (ಒಡಿಎಲ್ ಮೋಡ್) ಕಾರ್ಯಕ್ರಮಗಳಿಗೆ, ಸನ್ 2025–2026ನೇ ಸಾಲಿನ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಶೈಕ್ಷಣಿಕ ಪಾಠಗಳು ಜುಲೈ–ಆಗಸ್ಟ್ 2025 ರಿಂದ ಆರಂಭವಾಗಲಿವೆ:

1. ಎಂ.ಎ. (ಉರ್ದು)
2. ಎಂ.ಎ. (ಹಿಂದಿ)
3. ಎಂ.ಎ. (ಇಂಗ್ಲಿಷ್)
4. ಎಂ.ಎ. (ಅರೇಬಿಕ್)
5. ಎಂ.ಎ. (ಇತಿಹಾಸ)
6. ಎಂ.ಎ. (ಇಸ್ಲಾಮಿಕ್ ಅಧ್ಯಯನಗಳು)
7. ಎಂಬಿಎ
8. ಬಿ.ಎಡ್
9. ಬ್ಯಾಚಲರ್ ಆಫ್ ಆರ್ಟ್ಸ್ (ಹಾನರ್ಸ್)
10. ಬ್ಯಾಚಲರ್ ಆಫ್ ಕಾಮರ್ಸ್ (ಹಾನರ್ಸ್)
11. ಬ್ಯಾಚಲರ್ ಆಫ್ ಸೈನ್ಸ್ (ಹಾನರ್ಸ್)
12. ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಡಿಪ್ಲೋಮ
13. ಇಂಗ್ಲಿಷ್ ಬೋಧನೆ ಡಿಪ್ಲೋಮ
14. ಅರ್ಲಿ ಚೈಲ್ಡ್‌ಹುಡ್ ಕೇರ್ ಮತ್ತು ಎಜುಕೇಶನ್ ಡಿಪ್ಲೋಮ
15. ಶಾಲಾ ನಾಯಕತ್ವ ಮತ್ತು ನಿರ್ವಹಣೆ ಡಿಪ್ಲೋಮ
16. ಎಂಪ್ಲಾಯೆಬಿಲಿಟಿ ಸ್ಕಿಲ್ಸ್ ಡಿಪ್ಲೋಮ
17. ಡಿಪ್ಲೋಮ ಇನ್ ಉರ್ದು
18. ಫಂಕ್ಷನಲ್ ಇಂಗ್ಲಿಷ್ ಸರ್ಟಿಫಿಕೇಟ್
19. ಇಂಗ್ಲಿಷ್ ಮೂಲಕ ಉರ್ದು ಪ್ರಾವೀಣ್ಯತೆ ಸರ್ಟಿಫಿಕೇಟ್

ಇ–ಕೈಪಿಡಿ ಮತ್ತು ಆನ್‌ಲೈನ್ ಅರ್ಜಿ ನಮೂನೆಯನ್ನು ಇಲ್ಲಿ ಪಡೆದುಕೊಳ್ಳಬಹುದು manuu.edu.in/dde (ಅಡ್ಮಿಷನ್ ಪೋರ್ಟಲ್: manuuadmission.samarth.edu.in). ಅರ್ಜಿ ನಮೂನೆಯನ್ನು ನೋಂದಣಿ ಶುಲ್ಕದೊಂದಿಗೆ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ದಾಖಲಾತಿಗಳ ಯಶಸ್ವಿ ಪರಿಶೀಲನೆಯ ನಂತರ, ಕೈಪಿಡಿ 2025–26ರಲ್ಲಿ ನೀಡಲಾಗಿರುವ ಕಾರ್ಯಕ್ರಮದ ಶುಲ್ಕವನ್ನು ಪಾವತಿಸಬೇಕು. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸ್ಟೂಡೆಂಟ್ ಸಪೋರ್ಟ್ ಯೂನಿಟ್ (ಎಸ್‌ಎಸ್‌ಯು) ಸಹಾಯವಾಣಿ 040–23008463 ಅಥವಾ 040–23120600 (ಎಕ್ಸ್‌ಟೆನ್ಷನ್ 2207 ಮತ್ತು 2208) ಸಂಖ್ಯೆಗಳಿಗೆ ಬೆಳಗ್ಗೆ 9:30 ರಿಂದ ಸಂಜೆ 5:30 ಗಂಟೆವರೆಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ನವದೆಹಲಿ, ಕೋಲ್ಕತಾ, ಬೆಂಗಳೂರು, ಮುಂಬೈ, ಪಾಟ್ನಾ, ದರ್ಭಾಂಗ, ಭೋಪಾಲ್, ಶ್ರೀನಗರ, ರಾಂಚಿ, ಅಮರಾವತಿ, ಹೈದರಾಬಾದ್, ಜಮ್ಮು, ನೂಹ್, ವಾರಾಣಸಿ ಮತ್ತು ಲಕ್ನೋ ನಗರಗಳಲ್ಲಿರುವ ನಮ್ಮ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರಗಳು/ಉಪ ಪ್ರಾದೇಶಿಕ ಕೇಂದ್ರಗಳನ್ನು ಕೂಡ ಸಂಪರ್ಕಿಸಬಹುದು ಮತ್ತು manuu.edu.in/dde ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

- ಪ್ರವೇಶ ಆಧಾರಿತ ಕಾರ್ಯಕ್ರಮಗಳಾದ ಬಿ.ಎಡ್ ಮತ್ತು ಎಂಬಿಎ ಕಾರ್ಯಕ್ರಮಗಳ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ **ಆಗಸ್ಟ್ 20, 2025.**
- ಇನ್ನಿತರ ಕಾರ್ಯಕ್ರಮಗಳ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **ಸೆಪ್ಟಂಬರ್ 14, 2025.**
- ಪ್ರವೇಶ ಶುಲ್ಕ ಪಾವತಿಸಲು ಕೊನೆಯ ದಿನಾಂಕ **ಸೆಪ್ಟಂಬರ್ 15, 2025 ರಂದು 23:59 ಗಂಟೆ.**

ನಿರ್ದೇಶಕರು, ಸಿಡಿಒಇ — ರಿಜಿಸ್ಟ್ರಾರ್

Associate Sponsors
Prestige | Freedom Healthy Cooking Oils | HONDA | Vi 5G | ಸದ್ಗುರು ಆಯುರ್ವೇದ GRAM FLOUR SOAP | ESTD : 1907 THE BANGALORE CITY CO-OPERATIVE BANK LIMITED | The Janatha Co-operative Bank Ltd., Malleswaram, Bangalore | NBCC A Navratna CPSE

Mobility Partner: Akshaya Motors
Banking Partner: ಕೆನರಾ ಬ್ಯಾಂಕ್ Canara Bank Together We Can
Style Partner: BSC ಬಿ.ಎಸ್.ಚನ್ನಬಸಪ್ಪ & ಸನ್ಸ್ ದಾವಣಗೆರೆ & ಬೆಳಗಾವಿ
Travel Partner: trawelmart
Wardrobe Partner: neumen FROM THE HOUSE OF P N RAO
Insurance Partner: National Insurance
Knowledge Partners: INSIGHTSIAS | GITAM BENGALURU
Audit Partner: EY

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH Stage, VISHWESHRAIAH LAYOUT, BDA SITES 50X80, 40X60, 30X40, 20X30 Buying/ Selling, Immediate Settlement. 9845675290 9845446826.

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

"BDA SITE 30X40 Banashankari 6th Stage 9th Block, South Facing, Full White, Owner - 9845088449/ 9845249799"

BSK 2ND Stage 40x60 South facing site sale, clear title prime location near BDA complex- 9341261231

BANASHANKARI 5TH Stage Mantri Alphyne Apartment Backside 30x40 N/F 40ft Road Contact Owner: 9606922132/ 8618385836

BTM Layout

SITE FOR Sale 30x40,40x60 East and North Facing and 40x60 Commercial Building For sale at BTM 2nd Stage 9945377119/9844099557

Basavanagudi

SALE PRIME PROPERTY 40X60 NEAR Doddaganapathi Temple, Basavanagudi, Dondusa Layout, Mount_Joy Road, Sunkenahalli. 8197547389/ 9945514587

Basaweshwaranagar

40*60 SITE for sale SF BBMP E-khata with 40 ft road Rs 22000/- per sq/ft sl neg Sharada Colony, Basaveshwaranagar. Contact: 9916826976

SALE INDEPENDENT 2&3 BHK HOUSE 2500 SQFT BUILT 1600 SQFT SITE EASTHI KHATHA 2CRORE: 9035883017

Hanumanthnagar

SRINIVASNAGAR, 30X50, East Facing Site 40' Road, Prime Location 19,000/- Sft. E-Katha, Clear Document -9845000299

J P Nagar

50X80 RESIDENTIAL Site 60 Feet Road & 45X80, Industrial Site For Sale at JP Nagar 9th phase: 9945377119/ 9844099557

JPNAGAR 2ND Phase 40x60, Residencial Price 26500/-Near JPnagar Club 30x40,S/W ,Corner 3.80cr Contact :9845600007

Kengeri

BDA 50X80 East Facing Commercial Property on Kengeri Railway Station Road Prime Location Genuine Buyers Contact: 9148514646

'DIRECT OWNER' 30x50 BDA N/F KENGERI UPANAGAR 30x40 BBMP E/F BANDEMATA, Clear Tittle. 8496030007/ 8310885235

Kanakapura Road

"BUYING AND`SELLING Residential/ Commercial/ Industrial Sites, Buildings, Lands, Genuine Buyers & Sellers_Call: "Sri.Ganesh Estates" 9845286505"

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

"BDA COMMERCIAL Site_for_sale 50x80 Kempegowda Layout 300 feet Road very_near to Mysore_Road. Contact: 7892224597"

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

SALE 20X30 Site South Facing Kempegowda Layout 6th E-Sector, Arkhawati Alternative 45 Lacs Negotiable: 9448477376

Magadi Road

50X60 NORTH_WEST CORNER COMMERCIAL SITE SALE BEL_LAYOUT, BDA 1st STAGE, NEAR MAGADI ROAD. 8105688602.

Nagarabhavi

"NAGARABHAVI NEAR Deepa Complex 40x60 East & Vishveshwaraiah 6th_Block 40x60 South 100% Vastu Site. 9448432633"

Rajajinagar

COMMERCIAL PROPERTIES for Sale in Rajajinagar 45x82, 60x35, 47x85, 50x80. Good locations. Contact 9845720810

Rajarajeshwari Nagar

RAJARAJESHWARIN AGAR IDEAL Homes 73x97, 100x150, BEML 30x40, 40x60, Banashankari VI Stage 30x40, 40x60 50x80 Karishma Hills. 80x120. 9448483699.

RMV

RMV 2ND 30x40 BDA Site EF 3 Cr. MSR Nagar, BBMP A Khatha 5 BHK NF 3 Cr, 50x90 Doller Colony RMV Club EF 16 Cr. 40x60 NSF Phoenix 9379933099.

Sahakarnagar

SAHAKARNAGAR 40X60 Commercial Site For Sale. Genuine Buyers/ Sellers Only Call 9900001973 Brokers Strictly Excused

Tumkur Road

30×45 FEET, W/F, at 40 Feet Road @ Rs. 15,000.00 per Sq.Ft at Ravi Kirloskar LayOut, Adj to Prestige Jindal City. Only genuine buyers. No brokers. Contact:- 9900177430.

Uttarahalli

SITE_FOR SALE Uttarahalli Poornapragna Layout, Attached Krishnappa Layout, 40x30_'A' Khatha West Facing Contact 7892619255/ 9916524999

Vishweshwariah Layout

"50X80 EAST_FACING 60_FEET ROAD NEAR PROPOSED BDA_COMPLEX 6TH_BLOCK VISHWESHWARAIH LAYOUT- 9845143579"

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 7411994069, 9742681666

AVAILABLE 30X40 BDA Site Viswesavaraiah Layout 2nd Block Good Location Only Genuine Buyer Contact: 9844603127

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

AVAILABLE BDA Site Vishweswariah Layout 3rd Block 30X40 West Facing Good Location Genuine Buyers: 7338688111

"VIDHYNIKETHAN SCHOOL near Sale 40x60 East BDA Khatha 30x40 Vishveshwaraiah Genuine Buyers Contact. 9448733456/ 7259675150"

Vidyaranyapura

SALE SITES 1200 & 1600 SQFT BBMP EASTHI EAST FACING COMPOUND WALL CLEAR TITLES 9035883017

Mysore

SELLING MUDA plot size 5800 sqft Rs. 5000/- per square feet, and plot size 4000 sqft Rs. 7000/- per square feet. Only serious buyers contact 8904007677.

Doddaballapur Road

DEVANAHALI TO Doddabalapura Main Road E-Katha Bank Loan Property 3100 Sqft Sale @5250/- Per Sqft: 9342552428

House

K R Puram

4BR, 3.5 bathrooms independent house on corner site along with adjoining vacant site in gated community for sale on Hoodi- Ayyappanagar Main Road. No_brokers. Call 9686781614/ 9448389511.

R T Nagar

SALE COMMERCIAL INDEPENDENT DUPLEX BUILDING GROUND FIRST FLOOR VACANT POSITION A KHATHA 56 LAKHS 9035883017

Vijayanagar

OLD-HOUSE FOR Sale Site W/F, Door N/F,1125sqft 40feet Road, Good Location, Chandra Layout, Near Water Tank, Genuine buyers 2.50Cr. Call: 9880311959

SALE DUPLEX House (Ground 3BHK,1st 4BHK) 61X36 Corner Site, RPC Layout, Contact: 9845526049 (No Brokers)

Vidyaranyapura

INDEPENDENT- 4 BHK Duplex BEL Layout 2 Block- 60'x40', S/F, 15500/- sq.ft Immediate Registration: 9844264852.

SALE SITE 800 SQFT BBMP EASTHI KHATHA COMPOUND WALL SMALL HOUSE ELECTRICITY EAST FACING: 9035883017

Flat

Nagarabhavi

FLATS FOR-SALE @ Nagarabhavi Chandra Layout 2_& 3BHK Ready to Move In_Good Location Call:9538472420 9845066608

PROPERTY CORNER ಕ್ಲಾಸಿಫೈಡ್ಸ್

PROPERTY REQUIRED
Medani Group Require Property in and Around Bengaluru, Tumkur, Hassan, Chitradurga, Belgaum, Karwar, Mangalore, Udupi, and Hosur Districts, Ranging upto 100 Acres.
Mail your details to wintreat@gmail.com
Contact No: 81056 93894

LAND FOR SALE
4.5 Acres of Land in Sulthan Bathery, Wayanad, Kerala, suitable for Resorts, IT Park, Residential, or Commercial Development, Strategically located along the highway. Clear legal titles and fully suitable for construction purpose.
Contact: 8590922639

Fadal Enclave
MUDA Approved Sites for Sale on KRS Road, close to Vikrant Tyres.
FULLY DEVELOPED LAYOUT
Book before 31st July to avail FREE REGISTRATION Offer
Contact : 96069 07153

Farm House/ Land/ Resorts

Out-Station

THALLI 7 ACRES Farm Land For Sale, with 250 Mango Trees. Clear Titles. Contact: 6364751676

Magadi Road

MAGADI MAIN Road Gangapanahalli Fully Commercial 10000 Sqft Price. 2000/- Per Sqft Land Sale: 9342552428

Industrial & Factory

Out-Station

INDUSTRIAL SITES FOR_SALE At HOSUR. 1) 7.5 Acres of land with 50000 sft High roof_shed on the NH. 2) 2.5 Acres of land with 15000 sft Shed next to SIPCOT-11. Serious_buyers call: 9059026979

Residential/ Commercial

J P Nagar

JPNAGAR 2NDPHASE Sale of Independent House 2400sft on 30x40 plot east facing. Offer Rs 3.75Cr if transaction closed by 29th August; no nego. Serious buyers with money call 9980028093

Agricultural Land Converted

Kanakapura Road

KANAKAPURA ROAD Gulakmale 39 Gunta Converted, & BMRD Approved Near By Cadabam's & Peripheral Ring Road 2000/- Per Sqft: 9342552428

Commercial Building

Basaveshwaranagar

BASAVESHWARANAGAR NEAR SHANKARMUTT COMMERCIAL 60x40 Building sale,Rentel income 3.35 Lakhs, Price: 7cr. Contact: 9945079777

Commercial Land

Kanakapura Road

KAGLIPURA AGRICULTURAL 6Gunta Land Sale 3200/- PSft, Opposite Napa Valley, Near Art of Living 100mtr From Kanakapur Main Road: 9342552428

Mysore

2 ACRES Commercial land available for JV. Suitable for Apartment and 4 Star Hotel plus Office Spaces. On Mysore Express Highway near Mysore Contact Owner 9741019028

Commerical

Banashankari

"SEMI-COMMERCIAL BANASHANKARI 1st_Stage 40x60, Banashankari 2nd_Stage 40x60 Banashankari 3rd_Stage 40x50 "Sri.Ganesh Estate" 9845286505"

Mysore Road

KEMPEGOWDA LAYOUT commercial site number 4973 40'x64' 80' road south facing 7th block J sector 100 metres from National public school 13,000 per square feet not negotiable 9448706071

Kempegowda Layout

KEMPEGOWDA LAYOUT 1st Block, I Sector, Site No 1626, BDA Auctioned Semi-Commercial 40x39 N/W Corner. Owner- 9164644113

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

BDA-SITES WANTED 30x40, 40X60, 50x80 Immediate Settlement BANASHANKARI VI STAGE, ANJANAPURA VISHWESHWARAIAH LAYOUT RAJESH: 9945610779

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Mysore Road

"WANTED BDA Approved or BMRDA Approved Sites Near Hemgepura, Karbele, Gollhalli, Kumbalgud, Hejjala Surroundings. 9845178335"

Vishweshwariah Layout

REQUIRED BDA SITES @ Nagarbhavi, Vishweshwaraiya layout, Kempegowda layout. For Immediate Purchase any measurement. 9513955756, 9513119696.

WANTED 30X40, 40x60, 50x80, 20x30 BDA Site Viswesavaraiah, Kempegowda, Kengeri, Layout, with Clear Titles: 9035470616

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Commercial

"COMMERCIAL-SPACE FOR-RENT Gnanabharathi Layout Opp.Amma`Ashram 60'ft_Road 4`floors each`3200`Sqft` +Car_parking with`All_Amenities. 9480180100/ 9740844500"

RESIDENCY ROAD 2- New Office (425 + 465 sft) with parking available. Reasonable Rentals. 9880762016

FOR LEASE: Begumpet Main Road. Hyderabad, Showroom Space15,000 SFT. Grade A Building, Agents Welcome, Call Ph: 9347576914.

EDUCATIONAL

Financial

FINANCIAL ASSISTANCE is given to Students who have passed UPSC Prelim's 2025. Contact:- Yogi Nareyana Education Trust:- 9986043027.

AUTOMOTIVE

Four Wheelers Selling

Range Rover

SALE LAND Rover Discovery Sport 2017 model, 2nd owner, 1.48 Lakhs km, excellent condition. 9845033035.

BUSINESS

Business to Business

Services

LAND DEALINGS.WE Help in providing services in Sales and Purchase of land,Estates, quarries Across Entire south India Contact:9739627282

Finance

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

Investment

LOOKING FOR USA EB5 VISA Investment Projects. Full Services Provided. Please Call +91 9632369915

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Business Offers

Business For Sale

CLUB LICENSES For Sale CL2, CL9, Premium Resto Pubs and Bars Sale or Rent: 9481801053

WE HAVE buyers for Schools& Colleges. In a family owned business, If the next generation is not interested sell the business. Arun 9945699789.

PERSONAL

Change of Name

CHANGE OF NAME
I, **Shreya Maru Bid,** W/o Ronak Arvind Bid, aged about 26 years, residing at No.381, 5th Main, 3rd block, 3rd Stage, Near Florence School, Basaveshwara nagar, Bengaluru 560079, I have changed my name from **"Shreya Mukesh Maru"** to **"Shreya Maru Bid"** Vide Affidavit dt. 26/07/2025 sworn to before **Nijagunaradhya T.C,** Notary at Bangalore.

CHANGE OF NAME
I, **S. NASEEMA** W/o Shanwaj.P, R/at Near Nagalakatte, Sira Road, Pavagada Town VTC: Pavagada, District Tumkur Karnataka 561202, have changed my name from **SHEEMA BANU** to **S. NASEEMA** Vide Affidavit Dated 26/07/2025 Sworn Before Notary VD Venkataswamy BA.LLb, Pavagada

I, KEERTHIKUMAR_MN S/o. Neelakantaswamy R/a.Madlehalli Kuppalu,Tumkur 572114 have changed my`Name to KEERTHI_KUMAR M_N vide`affidavit dated:23.7.2025 before`Notary TV.Bhadravijaya Bangalore.

DH Classifieds
DECCAN HERALD
More value, more impact
REAL ESTATE
www.dhclassifieds.com
ಪ್ರಜಾವಾಣಿ
BOOK NOW
BOOK YOUR REAL ESTATE ADS IN DH ALL KARNATAKA + PRAJAVANI BENGALURU CITYON SATURDAY + SUNDAY
@ 2481/-*
FOR 15 WORDS
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED HIGH school and middle school Teacher for English, Social and Science teacher Whatsapp 9901501185 email kenmoreschool@gmail.com

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75.
English Medium School to be affiliated to CBSE invites application for the following post:
SPECIAL EDUCATOR
Part time or hourly basis. Diploma in special education by rehabilitation council of India / B Ed in Special Education (RCI number is must)
ASST. EXECUTIVE (Admin & Accounts)
B.Com with Tally ERP 9+ 1 yr experience
Apply immediately to Hon. Secretary.
Email: contact.indiranagar@ppec.edu.in

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.org.in
Invites applications for the following posts at MES College of Arts Commerce and Science Malleswaram , Bengaluru

A. **Assistant Professor (Full Time):**
Subjects:English / Botany / Computer Science
B. **Assistant Professor (Part Time):**
Subjects: Zoology/ Environmental Studies
Essential Qualification:
(i) Post-graduate in relevant discipline from a recognized university with a minimum of 55% marks or equivalent grade.
(ii) Should have cleared NET/SLET examination or Ph.D. degree (with course work included as part of the doctoral program) in the relevant subject.
For Assistant Prof in Environmental Studies
Candidate with PG degree in Environmental Science / Chemistry / Zoology / Botany are preferred.
Desirable for all posts: (i) 3 years of teaching experience (ii) Knowledge of Computers. Usage of ICT in teaching.

1. The regular full-time posts carry scales of pay and allowances such as HRA, fixed Travel allowance. Besides this, contribution towards PF and Gratuity as terminal benefits, Health Insurance cover.
2. Applications with BIO-DATA and copies of certificates of their qualifications and experience etc., should reach the Chief Executive, MES at the above address on or before 04.08.2025 duly superscribing the envelope with "Application for the post of ______________".
3. Decision of the selection committee is final.
4. Resorting to any sort of influence will be deemed as a disqualification of the candidature.
5. Download the application form from the MES **website: https://mesinstitutions.in**

Advt. No. MES/19-2/ADM-1/2025 Dated 27.07.2025
CHIEF EXECUTIVE

PERUMAL VIDHYA Nikethan Little Flower High School No.47, 2nd Cross, Saibabanagar, Bangalore-21, Wanted Lady Maths Teachers (PCM) For Primary & High School Apply Immediately Contact: 8867010188/ 080-23126330

LAWRENCE HIGH-SCHOOL ICSE HSR,Require well-trained and Experienced Lady middle`school English`Teacher Kindergarten ASSISTANT TEACHER. Call:`080-40903777, 8971485310/ 9080479986. lawrence.school.icse@gmail.com

WANTED ENGLISH MEDIUM TRAINED/ UNTRAINED LADY TEACHERS to teach Hindi for High School/ Computer Faculty/ NTT/ young PUC Passed ladies to assist teachers. Graduates interested in teaching can also apply. Candidates will be encouraged to pursue D.Ed/ B.Ed. Salary with PF and ESI facilities. Contact in person 10am -3pm on all working days Secretary Deccan Educational Society, Near Sampige Theatre, Malleswaram. Mobile: 7094390262/ 9353382686

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery & Primary-Social Science, Kannada, Mathematics & Computer Teacher. STATE & ICSE. Qualification: B.A.,B.Ed/ M.A.,M.Ed/BCA, MCA. Only English Medium Candidates need to apply

BEST SCIENCE, MATHS, HINDI and PE TEACHER for High School. High Salary. School at Peenya Dasarahalli 9449835744/ 9535601743

Multiple Vacancy

REQUIRED
Applications are invited from Veerashaiva / Lingayat Graduates, with management experience for the post of
EXECUTIVE OFFICER
HOSTEL WARDEN
ACCOUNTANT
CLERK
for Rao Bahadur Dharmapravartha Gubbi Thotadappa Charities. Persons retired from **Govt./Private services/ Ex-servicemen and Police Department can also apply.** Salary will be commensurate with qualification & experience. Eligible Candidates may apply with full details on or before **04.08.2025** to
The Secretary, R B D Gubbi Thotadappa Charitable Institution
No.88, G.T. Road, Near City Railway Station, Bengaluru - 560 023.
Phone: 080-2287 9665
Mobile: 98440 45744
Sd/-, Hon. Secretary.

Manager

JAMES BOND Dry cleaners requires store Managers (Candidates with minimum 2 years experience in Dry cleaning only) Salary: 18,000 to 25,000 Location: Konankunte, Bangalore Timings: 9:30am to 9pm Contact: 9880266007/ 8050666007

Marketing & Sales

REQUIRED IMMEDIATELY from Jayanagar nearby places MARKETING EXECUTIVES experienced in Consumer Products with Vehicle & LADY OFFICE EXECUTIVES. Very Good Salary. Call: 99000-54462

General

MBBS DOCTORS, Nurses, Technicians required for Lions Blood Bank Vijayanagar Bangalore. 9845165539 / 9845438200.

Hospital & Medical Jobs

ST. MARTHA'S HOSPITAL
Bangalore – 560 001
We are hiring :
- Consultant - Radiology (MD/DNB)
- Consultant - General Surgery (MS/DNB)
- Senior Registrar/ Senior Consultant - Anaesthesia (MD/DNB)
- Senior Consultant - OBG
- Consultant - Emergency Medicine (MD/DNB)
- Consultant - Microbiology- (MD/DNB)
- Public Relation Officers
- Digital Marketing Executives
- Facility Supervisor

Interested candidates may mail to careers@stmarthas.in

Engg/ Production Technical

FOR ELECTRONICS Inductive Components Mfr. in Peenya. PRODUCTION MANAGER, PRODUCTION EXECUTIVE, QC EXECUTIVE with Similar Experience. Apply to purchase@vetrilindia.in Mob: 9535477360 Ph: 080-28360561

A LEADING Consumer Electronics Co, req. Male Technician– ITI / Diploma in Electronics or B.Sc. (Physics/ Electronics) for Bengaluru Centre with 2 or 3 yrs exp. in servicing & repair of Electronic products. Email: elayaa@c-net.in or call 09840623201

Architects

ARCHITECTS: MACCO Group require ARCHITECTS, INTERIOR DESIGNERS and CAD people for the Bangalore office at Banashankari (Metro). Mail your details to solidusco001@gmail.com. Ph: 8884777063.

Dr. Sri. Sri. Sri. Shivakumara Mahaswamy College of Engineering

(Affiliated to VTU, Belgaum & Approved by AICTE, New Delhi)
Ph: 080-2770 1250 / 2773 9251/ 52 / 53 / 54, Fax : 080 -27739250. E-mail: principaldrsmce@gmail.com

Admission Notification For B.E, M.Tech, MBA Programs & Diploma; 2025-26

CET CODE : BE-E174, MBA-B165, M.Tech-T921 & Diploma-566

Sl No	Program	College Fees Structure	CET Fees Structure
01	Computer Science & Engineering	RS. 1,15,000/ Year	As per KEA Government of Karnataka
02	Information Science & Engineering	RS. 1,10,000/ Year	
03	Electronics & Communication Engineering	RS. 75,000/ Year	
04	Electrical & Electronics Engineering	RS. 75,000/ Year	
05	Mechanical Engineering	RS. 65,000/ Year	
06	CIVIL Engineering	RS. 65,000/ Year	
07	M.TECH	RS. 65,000/ Year	
08	MBA	RS. 65,000/ Year	
09	Diploma	Rs. 20,000/ Year	

Dr.M.H. Annaiah
Director
(+91 98867 58331)

Dr.K.S.Jagadeesh Gowda
Principal
(+91 98455 83294)

Sri.D.C.Venugopal
Chairman



K T Manjunath
Founder & Managing Director
Keerthi Builders &
Keerthi Iinfinity Pvt. Ltd.

ಕೀರ್ತಿ ಇನ್‌ಫಿನಿಟಿ ಲಾವಿಶ್
KEERTHI IINFINITY LAVISH

EOI Now Open for Smart Investment
Earn 15% Assured Returns in 12 Months by Investing smart
Launching Aug. 2nd & 3rd

BDA Approval with RERA Registration

ಗುಡಿಮಾವು, ಮೈಸೂರು ರಸ್ತೆಯಾದ ವಿಕೇಐಟಿ ಎಂಜಿನಿಯರಿಂಗ್ ಕಾಲೇಜಿಗೆ ಹತ್ತಿರದಲ್ಲಿದೆ
at Gudimavu, next to VKIT Engineering College, off Mysuru Road,
Just 5 mins from Bengaluru– Mysuru Expressway

What is EOI (Expression of Interest)?
EOI is a simple, non-binding step that lets you show serious interest in a property before the official launch You reserve your spot early — with no full commitment upfront.

BENEFITS OF SUBMITTING YOUR EOI:
- Priority Access before public bookings
- 15% Assured Returns in 12 months
- Low Entry Cost – from just ₹5 Lakhs
- Early-bird Offers – better pricing and plot options
- Refundable Token (as per terms) if you don't proceed
- Smart Investing reserve first, decide later

Why Mysore Road?
- Metro, STRR & PRR boost growth
- Fast-rising land & housing demand
- Great for short & long-term returns
- Prime real estate zone
- Near tech parks & education hubs

About Keerthi Iinfinity
- 20+ Completed Projects
- 25+ Years of Experience
- 2000+ Happy Customers

MINIMUM INVESTMENT
5 LAKHS ABOVE

LIMITED EOI SLOTS AVAILABLE
Opportunities like this don't wait. Be part of a legacy built on trust, transparency, and growth.

*T&C Apply

Office Address: #938, 1st Main Road, 2nd Stage, Kengeri Satellite Town, Bengaluru - 560060.
Call: 990 287 66 66 | 9108 30 30 30

‘ಉತ್ತರ’ದ ಪ್ರತಿಭಾ ವಲಸೆ

ಒಂದನೇ ಪುಟದಿಂದ...

ಯಾದಗಿರಿ, ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದ ಜಿಲ್ಲೆಗಳು ಕೊನೆ ಸ್ಥಾನದಲ್ಲಿವೆ. ಪ್ರತಿಭಾವಂತ ವಿದ್ಯಾರ್ಥಿಗಳ ವಲಸೆಯೂ ಅಂತಹ ಜಿಲ್ಲೆಗಳ ಶೈಕ್ಷಣಿಕ ಪ್ರಗತಿ, ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮ ಬೀರಲು ಒಂದು ಕಾರಣವಾಗಿದೆ.

ಉನ್ನತ ಶ್ರೇಣಿ ವಿದ್ಯಾರ್ಥಿಗಳಿಗಷ್ಟೇ ಮನ್ನಣೆ: ಎಸ್ಎಸ್ಎಲ್‌ಸಿ ನಂತರ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಿಂದ ಕರಾವಳಿ, ಬೆಂಗಳೂರು ಸೇರಿದಂತೆ ದಕ್ಷಿಣ ಕರ್ನಾಟಕದ ಕೆಲ ಜಿಲ್ಲೆಗಳ ಪಿಯು ಕಾಲೇಜುಗಳಿಗೆ ಮಕ್ಕಳು ಸೇರುತ್ತಾರೆ. ಎಸ್ಎಸ್ಎಲ್‌ಸಿ ಯಲ್ಲಿ ಉನ್ನತ ಶ್ರೇಣಿ ಪಡೆದವರಿಗಷ್ಟೇ ಆ ಕಾಲೇಜುಗಳು ಪ್ರವೇಶ ನೀಡುತ್ತವೆ.

‘ಕಡಿಮೆ ಅಂಕ ಪಡೆದ ಮಕ್ಕಳು ಉತ್ತರ ಕರ್ನಾಟಕದ ತಮ್ಮ ಜಿಲ್ಲೆಗಳಲ್ಲೇ ಲಭ್ಯವಿರುವ ಕಾಲೇಜು, ಕೋರ್ಸ್‌ಗಳಿಗೆ ಸೇರುತ್ತಾರೆ. ಪ್ರತಿಭಾವಂತ ಮಕ್ಕಳ ಇಂತಹ ಶೈಕ್ಷಣಿಕ ವಲಸೆಯ ಪರಿಣಾಮವಾಗಿ ದಕ್ಷಿಣ ಕರ್ನಾಟಕದ ಜಿಲ್ಲೆಗಳು ಫಲಿತಾಂಶದ ಪಟ್ಟಿಯಲ್ಲಿ ಉನ್ನತ ಸ್ಥಾನ ಪಡೆದರೆ, ಉತ್ತರ ಕರ್ನಾಟಕದ ಜಿಲ್ಲೆಗಳು ಮತ್ತೂ ಹಿಂದುಳಿಯುತ್ತಿವೆ. ಶೈಕ್ಷಣಿಕ ಮೂಲಸೌಕರ್ಯ ಕೊರತೆ, ಶಿಕ್ಷಕರ ಕೊರತೆ ಮಧ್ಯೆ ಪ್ರತಿಭಾ ಪಲಾಯನವೂ ಬಹುಮುಖ್ಯ ಅಂಶ’ ಎನ್ನುತ್ತಾರೆ ಹಾವೇರಿ ಜಿಲ್ಲೆ ಬಂಕಾಪುರದ ಪರಶುರಾಮ ಸತ್ಯಪ್ಪನವರ್.

ಎಸ್ಎಸ್ಎಲ್‌ಸಿ, ಪಿಯು ಫಲಿತಾಂಶದಲ್ಲಿ ಅಗ್ರ ಸ್ಥಾನದಲ್ಲಿರುವ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಕಲ್ಯಾಣ ಕರ್ನಾಟಕ ಭಾಗದಿಂದ ಪ್ರತಿ ವರ್ಷ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು ಪಿಯು ಶಿಕ್ಷಣ ಪಡೆಯಲು ತೆರಳುತ್ತಿದ್ದಾರೆ. ಎಸ್ಎಸ್ಎಲ್‌ಸಿ ಪರೀಕ್ಷೆ ಮುಗಿದು ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ವಸತಿ ಸಹಿತ ಇರುವ ಕಾಲೇಜುಗಳಿಗೆ ಕಳುಹಿಸುತ್ತಾರೆ. ಇದಕ್ಕಾಗಿ ₹2 ಲಕ್ಷದಿಂದ ₹5 ಲಕ್ಷದವರೆಗಿನ ಶುಲ್ಕವನ್ನೂ ಪಾವತಿ ಮಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಮೂಡಬಿದಿರೆ, ಪುತ್ತೂರು, ಉಡುಪಿ ಜಿಲ್ಲೆಯ ಕಾರ್ಕಳ ಸೇರಿದಂತೆ ವಿವಿಧ ವಸತಿಯುತ ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಾರೆ.

ಕಲ್ಯಾಣ ಕರ್ನಾಟಕದಲ್ಲಿ ಪ್ರತಿ ವರ್ಷ ಕೆಕೆಆರ್‌ಡಿಬಿಯಿಂದ ನೂರಾರು ಕೋಟಿ ಖರ್ಚು ಮಾಡಿದರೂ ಇನ್ನೂ ಅಗತ್ಯ ಮೂಲಸೌಕರ್ಯಗಳನ್ನು ಶಾಲಾ, ಕಾಲೇಜುಗಳಿಗೆ ಕಲ್ಪಿಸಲು ಸಾಧ್ಯವಾಗಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಶಿಕ್ಷಕರ ಕೊರತೆಯು ಕಲ್ಯಾಣ ಕರ್ನಾಟಕ ಭಾಗದ ಮಕ್ಕಳನ್ನು ಕಾಡುತ್ತಿದೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 20 ಸಾವಿರಕ್ಕೂ ಅಧಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಕಳೆದ ವರ್ಷದ ಸಾರ್ವತ್ರಿಕ ವರ್ಗಾವಣೆಯಲ್ಲಿ ದಕ್ಷಿಣ ಕರ್ನಾಟಕ ಮೂಲದ ಬಹುತೇಕ ಶಿಕ್ಷಕರು ವರ್ಗಾವಣೆ ಪಡೆದುಕೊಂಡು ತಮ್ಮ ಜಿಲ್ಲೆಗಳಿಗೆ ವಾಪಸಾಗಿದ್ದಾರೆ. ಹೀಗಾಗಿ, ಅತಿಥಿ ಶಿಕ್ಷಕರ ಮೇಲೆಯೇ ಶಾಲೆಗಳನ್ನು ನಡೆಸುವ ಅನಿವಾರ್ಯತೆ ಇದೆ. ಮುಖ್ಯ ಶಿಕ್ಷಕರೊಬ್ಬರನ್ನು ಹೊರತುಪಡಿಸಿ ಉಳಿದ ಶಿಕ್ಷಕರೆಲ್ಲ ‘ಅತಿಥಿಗಳೇ’ ಇರುವ ಸ್ಥಿತಿ ಬಹುತೇಕ ಶಾಲೆಗಳಲ್ಲಿದೆ. ಇದು ಸಹ ಈ ಜಿಲ್ಲೆಗಳು ಶೈಕ್ಷಣಿಕವಾಗಿ ಕಳಪೆ ಸಾಧನೆಗೆ ಕಾರಣವಾಗಿದೆ.

‘ಗುಣಮಟ್ಟದ ಶಿಕ್ಷಣ ದೊರೆಯದೇ ಇರುವುದರಿಂದ ಈ ಬಾರಿ ಕಲಬುರಗಿ ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ ರಾಜ್ಯದಲ್ಲೇ ಕಡೆಯ ಸ್ಥಾನವನ್ನು ಪಡೆದಿತ್ತು. ಹೀಗಾಗಿ, ಆರ್ಥಿಕ ಅನುಕೂಲವಿರುವ ಪೋಷಕರು ತಮ್ಮ ಮಕ್ಕಳನ್ನು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಶಿಕ್ಷಣ ಸಂಸ್ಥೆಗಳಿಗೆ ಸೇರಿಸುತ್ತಿದ್ದಾರೆ’ ಎನ್ನುತ್ತಾರೆ ಕಲಬುರಗಿಯ ಅರ್ಥಶಾಸ್ತ್ರಜ್ಞೆ, ನಿವೃತ್ತ ಉಪನ್ಯಾಸಕಿ ಸಂಗೀತಾ ಕಟ್ಟಿಮನಿ.

ಬೀದರ್ ಜಿಲ್ಲೆಯ ಹೆಚ್ಚಿನ ವಿದ್ಯಾರ್ಥಿಗಳು ಹೋಗಿ ಬರಲು ಸುಲಭವಾಗುತ್ತದೆ ಎನ್ನುವ ಕಾರಣಕ್ಕೆ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಹಾಗೂ ಬೆಂಗಳೂರಿಗೆ ಹೋಗುತ್ತಾರೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ನೆರೆಯ ಹೈದರಾಬಾದ್, ಪುಣೆ, ಮುಂಬೈಗೆ ಹೋಗುತ್ತಾರೆ. ಕಲಬುರಗಿ, ಯಾದಗಿರಿ ಜಿಲ್ಲೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕರಾವಳಿ ಜಿಲ್ಲೆಗಳಿಗೆ ಹೋಗುವ ರೂಢಿ ಇದೆ. ಬಡತನದ ಹಿನ್ನೆಲೆ ಇರುವ ವಿದ್ಯಾರ್ಥಿಗಳು ತುಮಕೂರಿನ ಸಿದ್ಧಗಂಗಾ ಮಠ, ನಾಗಮಂಗಲದ ಆದಿಚುಂಚನಗಿರಿ ಮಠಕ್ಕೆ ಹೋಗುತ್ತಾರೆ. ಕೆಲವರು ಧಾರವಾಡದ ಕಾಲೇಜುಗಳಲ್ಲಿ ಪ್ರವೇಶ ಪಡೆಯುತ್ತಾರೆ.

‘ದ್ವಿತೀಯ ಪಿಯು ಪರೀಕ್ಷೆ-1ಲ್ಲಿ ತೇರ್ಗಡೆಯಾದ ಹಲವರು ಕರಾವಳಿ ಜಿಲ್ಲೆಗಳಿಗೆ ತೆರಳಿದರೂ, ಮೂರು ಪರೀಕ್ಷೆಗಳ ಫಲವಾಗಿ ಕಲಬುರಗಿ ಜಿಲ್ಲೆಯಲ್ಲಿ ಈ ಬಾರಿ ಈಗಾಗಲೇ 20 ಸಾವಿರ ವಿದ್ಯಾರ್ಥಿಗಳು ವಿವಿಧ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ. ಪರೀಕ್ಷೆ-3 ಫಲಿತಾಂಶದ ನಂತರ ಇನ್ನೂ 5 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು’ ಎನ್ನುತ್ತಾರೆ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸುರೇಶ ಅಕ್ಕಣ್ಣ.

‘ನೀಟ್-2025ರಲ್ಲಿ ರಾಜ್ಯಕ್ಕೆ ಮೊದಲಿಗರಾದ ವಿಜಯಪುರದ ನಿಖಿಲ್ ಸೊನ್ನದ ಅವರಂಥ ಪ್ರತಿಭಾನ್ವಿತ ವಿದ್ಯಾರ್ಥಿಗಳು ಮಂಗಳೂರು, ಉಡುಪಿ, ಬೆಂಗಳೂರಿಗೆ ಶಿಕ್ಷಣಕ್ಕಾಗಿ ವಲಸೆ ಹೋಗುವುದರಿಂದ ಇನ್ನುಳಿಯುವ ಸಾಮಾನ್ಯ ವಿದ್ಯಾರ್ಥಿಗಳಿಗೆ ಅಂದರೆ ಆರ್ಥಿಕವಾಗಿ ಬಡಕುಟುಂಬಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮವಹಿಸಿ ನಮ್ಮ ಶಿಕ್ಷಕರು, ಉಪನ್ಯಾಸಕರು ಪಾಠ, ತರಬೇತಿ ನೀಡುತ್ತಾರೆ. ನೀಟ್, ಜೆಇಇಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ರ‍್ಯಾಂಕ್ ಬಾರದೇ ಇದ್ದರೂ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಅವಕಾಶ ಗಿಟ್ಟಿಸುತ್ತಿದ್ದಾರೆ’ ಎನ್ನುತ್ತಾರೆ ವಿಜಯಪುರ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಕೆ.ಹೊಸಮನಿ.

‘ಬುದ್ಧಿವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮವಿಲ್ಲದೇ ರ‍್ಯಾಂಕ್ ಪಡೆಯುವಂತೆ ಮಾಡಬಹುದು. ಆದರೆ, ಸಾಮಾನ್ಯ ವಿದ್ಯಾರ್ಥಿಗಳನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಉತ್ತರ ಕರ್ನಾಟಕ ಶಾಲಾ, ಕಾಲೇಜುಗಳ ಶ್ರಮ ಕಡೆಗಣಿಸುವಂತಿಲ್ಲ’ ಎಂಬುದು ಅವರ ವಾದ.

‘ಉತ್ತರ ಕರ್ನಾಟಕ ವಿದ್ಯಾರ್ಥಿಗಳು ಮಂಗಳೂರು, ಉಡುಪಿ ಭಾಗದ ವಸತಿ ಶಾಲಾ, ಕಾಲೇಜುಗಳಿಗೆ ವಲಸೆ ಹೋಗಲು ಇನ್ನೊಂದು ಮುಖ್ಯ ಕಾರಣವೂ ಇದೆ. ಈ ಭಾಗದ ನೌಕರರು, ಸ್ಥಿತಿವಂತ ರೈತರು ತಮ್ಮ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ. ತಮ್ಮೊಂದಿಗೆ ಇಟ್ಟುಕೊಂಡರೆ ಮಾತು ಕೇಳಲ್ಲ, ಮೊಬೈಲ್, ಟಿವಿ ವೀಕ್ಷಣೆ ತಪ್ಪಿಸುವುದು ಕಷ್ಟ ಅಥವಾ ಗುರಿ ಸಾಧಿಸಲು ಆಗಲ್ಲ ಎಂಬ ಕಾರಣಕ್ಕೂ ಮಂಗಳೂರು, ಉಡುಪಿ ಭಾಗದ ವಸತಿ ಶಾಲೆಗೆ ಕಳುಹಿಸುತ್ತಾರೆ’ ಎನ್ನುತ್ತಾರೆ ಹೊಸಮನಿ.

‘ನಮ್ಮಲ್ಲಿ ಪ್ರತಿಷ್ಠಿತ ಮತ್ತು ಗುಣಾತ್ಮಕ ಶಿಕ್ಷಣ ನೀಡುವ ಸಂಸ್ಥೆಗಳಿಗೆ ಕೊರತೆ ಇಲ್ಲ. ಆದರೆ, ಕರಾವಳಿಗೆ ಹೋಲಿಸಿದರೆ ವಸತಿ ಶಿಕ್ಷಣ ಸಂಸ್ಥೆಗಳು ಕಡಿಮೆ ಇವೆ. ವಿದ್ಯಾರ್ಥಿಗಳು ಉಡುಪಿ, ಮಂಗಳೂರಿನ ಶಿಕ್ಷಣ ಸಂಸ್ಥೆಗಳತ್ತ ಸಾಗಲು ಇದೂ ಒಂದು ಕಾರಣ’ ಎನ್ನುತ್ತಾರೆ ಬೆಳಗಾವಿ ಡಿಡಿಪಿಐ ಲೀಲಾವತಿ ಹಿರೇಮಠ.

‘ನಮ್ಮಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳು ಬಹಿರಂಗವಾಗಿ ಭವ್ಯತೆಯಿಂದ ಕೂಡಿವೆ. ಕೆಲವೆಡೆ ಅತ್ಯುತ್ತಮ ಭೌತಿಕ ಸೌಕರ್ಯ ಒದಗಿಸಲಾಗಿದೆ. ಆದರೆ, ಪಾಠ ಮಾಡಲು ನುರಿತ ಶಿಕ್ಷಕರಿಲ್ಲ. ಅಧ್ಯಯನ ಕೊರತೆಯೂ ಬಹಳಷ್ಟು ಉಪನ್ಯಾಸಕರಲ್ಲಿ ಕಾಣುತ್ತಿದೆ. ಕರಾವಳಿಯಲ್ಲಿ ಉಪನ್ಯಾಸಕರು ಪರಿಶ್ರಮ ವಹಿಸಿ ಪಾಠ ಮಾಡುತ್ತಾರೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಯೋಜನಾಬದ್ಧವಾಗಿ ಕಲಿಕಾ ಚಟುವಟಿಕೆ ಕೈಗೊಳ್ಳುತ್ತಾರೆ. ಮಕ್ಕಳ ಆರೋಗ್ಯದ ಬಗ್ಗೆಯೂ ನಿಗಾ ವಹಿಸುತ್ತಾರೆ. ಇವೆಲ್ಲ ಕಾರಣಕ್ಕಾಗಿ ಆರ್ಥಿಕವಾಗಿ ಸಶಕ್ತ ಪಾಲಕರು ಕರಾವಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದಾರೆ’ ಎನ್ನುತ್ತಾರೆ ನಿವೃತ್ತ ಪ್ರಾಧ್ಯಾಪಕ ರಾಮಕೃಷ್ಣ ಮರಾಠೆ.

ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಅಲ್ಲಿನ ಕಾಲೇಜುಗಳನ್ನು ತೊರೆಯಲು ಹಲವು ಕಾರಣಗಳು ಇರಬಹುದು. ಆದರೆ, ಪಿಯು ಕಾಲೇಜುಗಳನ್ನು ಅರಸಿ ಕರಾವಳಿಯತ್ತಲೇ ಮುಖ ಮಾಡುವ ಕಾರಣಗಳೂ ಅಷ್ಟೇ ಮುಖ್ಯವಾಗಿವೆ.

ದಕ್ಷಿಣ ಕನ್ನಡ 205 ಪದವಿ ಪೂರ್ವ ಕಾಲೇಜುಗಳಿದ್ದು, ಅವುಗಳಲ್ಲಿ ಸರ್ಕಾರಿ ಕಾಲೇಜುಗಳ ಸಂಖ್ಯೆ 55 ಮಾತ್ರ. 15ಕ್ಕೂ ಅಧಿಕ ವಸತಿಸಹಿತ ಕಾಲೇಜುಗಳಿವೆ. ವಸತಿ ಸಹಿತ ಕಾಲೇಜುಗಳಲ್ಲಿ ಶೇ 90ಕ್ಕೂ ಅಧಿಕ ವಿದ್ಯಾರ್ಥಿಗಳು ಹೊರ ಜಿಲ್ಲೆಯವರು. ವಸತಿ ರಹಿತ ಖಾಸಗಿ ಕಾಲೇಜುಗಳಲ್ಲಿ ಶೇ 50ರಷ್ಟು ವಿದ್ಯಾರ್ಥಿಗಳು ಹೊರಜಿಲ್ಲೆಯವರು. ಅವರಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳ ವಿದ್ಯಾರ್ಥಿಗಳ ಪ್ರಮಾಣ ಶೇ 35ರಷ್ಟಿದೆ ಎಂದು ಖಾಸಗಿ ಪಿಯು ಕಾಲೇಜುಗಳ ಸಂಘದ ಪದಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ದ್ವಿತೀಯ ಪದವಿಪೂರ್ವ ಪರೀಕ್ಷೆ ಫಲಿತಾಂಶದಲ್ಲಿ ಮುಂಚೂಣಿಯಲ್ಲಿರುವುದಕ್ಕೆ ಇಲ್ಲಿನ ಶೈಕ್ಷಣಿಕ ಗುಣಮಟ್ಟವೂ ಕಾರಣ. ಕೇವಲ ಖಾಸಗಿ ಕಾಲೇಜುಗಳು ಮಾತ್ರವಲ್ಲ, ಅಲ್ಲಿನ ಸರ್ಕಾರ ಕಾಲೇಜುಗಳೂ ಫಲಿತಾಂಶವೂ ಉತ್ತಮವಾಗಿದೆ.

ಬಹುತೇಕ ಪಿಯು ಕಾಲೇಜುಗಳಲ್ಲಿ ಪಠ್ಯಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ, ವಿದ್ಯಾರ್ಥಿಗಳಿಂದ ಪುನರಾವರ್ತನೆ ಅಭ್ಯಾಸಗಳನ್ನು ಮಾಡಿಸುತ್ತಾರೆ. ಜಿಲ್ಲಾ ಮಟ್ಟದಲ್ಲೂ ಮಧ್ಯವಾರ್ಷಿಕ ಪರೀಕ್ಷೆ, ವಾರ್ಷಿಕ ಪೂರ್ವಭಾವಿ ಪರೀಕ್ಷೆಗಳನ್ನು ನಡೆಸುತ್ತವೆ. ಪರೀಕ್ಷಾ ಅವ್ಯವಹಾರಗಳಿಗೆ ಅವಕಾಶ ಆಗದಂತೆ ಎಚ್ಚರ ವಹಿಸುತ್ತವೆ. ಈ ಕ್ರಮಗಳಿಂದ ಫಲಿತಾಂಶ ಉತ್ತಮವಾಗುತ್ತಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಸಂಘದ ಅಧ್ಯಕ್ಷ ಜಯಾನಂದ ಎನ್. ಸುವರ್ಣ ಮಾಹಿತಿ ನೀಡಿದರು.

ಇಲ್ಲಿನ ಖಾಸಗಿ ಪಿಯು ಕಾಲೇಜುಗಳು ನೀಟ್, ಸಿಇಟಿ, ಜೆಇಇ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳಿಗೆ ವಿಷಯವಾರು ತರಬೇತಿಯನ್ನು ನೀಡುತ್ತವೆ. ಆಯಾ ಕಾಲೇಜಿನದ್ದೇ ಆದ ಪ್ರಶ್ನೆ ಪತ್ರಿಕೆ ರೂಪಿಸಿ, ಸ್ಪರ್ಧಾತ್ಮಕ ಪರೀಕ್ಷೆಯನ್ನು ಕಾಲಮಿತಿಯೊಳಗೆ ಸಮರ್ಥವಾಗಿ ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತವೆ. ಅತ್ಯಂತ ಬುದ್ಧಿವಂತ, ಬುದ್ಧಿವಂತ, ಸಾಧಾರಣ ಎಂದು ವರ್ಗೀಕರಿಸಿ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ಅನುಗುಣವಾದ ತರಬೇತಿ ಒದಗಿಸುತ್ತವೆ. ಕೆಲವು ಕಾಲೇಜುಗಳಲ್ಲಿ ಬೆಳಿಗ್ಗೆ 7ರಿಂದ ರಾತ್ರಿ 7ರವರೆಗೂ ತರಗತಿಗಳು ನಡೆಯುವುದುಂಟು. ಎಷ್ಟೇ ಅನಿವಾರ್ಯ ಕಾರಣಗಳಿದ್ದರೂ ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ರಜೆ ನೀಡಲಾಗುವುದಿಲ್ಲ. ವಿದ್ಯಾರ್ಥಿಗಳು ಅನಾರೋಗ್ಯಕ್ಕೊಳಗಾದರೂ ರಜೆ ಪಡೆಯಲು ವೈದ್ಯರ ಪ್ರಮಾಣಪತ್ರ ಹಾಜರುಪಡಿಸಬೇಕಾದಷ್ಟು ಕಠಿಣ ನಿಯಮಗಳನ್ನು ಕೆಲ ಕಾಲೇಜುಗಳು ಪಾಲಿಸುತ್ತವೆ.

‘ಈ ನಿಯಮಗಳು ಕಠೋರ ಎನಿಸಬಹುದು. ಆದರೆ ಕಲಿಕೆಯ ವಾತಾವರಣವನ್ನು ಕಾಪಾಡಲು ಇಂತಹ ಶಿಸ್ತು ಅನಿವಾರ್ಯ. ವಿದ್ಯಾರ್ಥಿಗಳೂ ಕ್ರಮೇಣ ಈ ಕಠಿಣ ನಿಯಮಗಳಿಗೆ ಒಗ್ಗಿಕೊಳ್ಳುತ್ತಾರೆ. ಸಹಪಾಠಿಗಳ ನಡುವಿನ ಪೈಪೋಟಿಯಿಂದಾಗಿ ವಿದ್ಯಾರ್ಥಿಗಳಲ್ಲಿ ತಾವೂ ಉತ್ತಮ ಸಾಧನೆ ಮಾಡಬೇಕೆಂಬ ಹಂಬಲ ಮೂಡುತ್ತದೆ. ಉತ್ತಮ ಫಲಿತಾಂಶ ಪಡೆಯಬೇಕೆಂಬ ಸೆಳೆತವೂ ಇಲ್ಲಿನ ಶೈಕ್ಷಣಿಕ ಗುಣಮಟ್ಟಕ್ಕೆ ಕಾರಣ’ ಎಂದು ಉಪನ್ಯಾಸಕರೊಬ್ಬರು ವಿಶ್ಲೇಷಿಸಿದರು.

ನೀಟ್, ಜೆಇಇ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ಸೌಲಭ್ಯ ಇಲ್ಲದ ಇಲ್ಲಿನ ಖಾಸಗಿ ಪಿಯು ಕಾಲೇಜುಗಳಲ್ಲಿ ವಾರ್ಷಿಕ ₹ 50 ಸಾವಿರದಿಂದ ₹ 1 ಲಕ್ಷದವರೆಗೆ ಶುಲ್ಕ ಇದೆ. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಒದಗಿಸುವ ಪಿಯು ಕಾಲೇಜುಗಳಲ್ಲಿ ವಾರ್ಷಿಕ ಶುಲ್ಕ ₹ 1 ಲಕ್ಷದಿಂದ ₹ 4 ಲಕ್ಷದವರೆಗೂ ಇದೆ. ವಸತಿ ಕಾಲೇಜುಗಳಲ್ಲಿ ವಾರ್ಷಿಕ ₹ 3ಲಕ್ಷದಿಂದ ₹ 5ಲಕ್ಷದವರೆಗೂ ಶುಲ್ಕವಿದೆ.

ಕೆಲ ಕಾಲೇಜುಗಳು ಬೇರೆ ಜಿಲ್ಲೆಗಳಿಗೆ ತಂಡಗಳನ್ನು ಕಳುಹಿಸಿ ಅಲ್ಲಿನ ಪ್ರೌಢಶಾಲೆಗಳಲ್ಲಿ ತಮ್ಮ ಶಿಕ್ಷಣ ಸಂಸ್ಥೆಯ ಬಗ್ಗೆ ಪ್ರಚಾರ ಮಾಡುತ್ತವೆ. ರ‍್ಯಾಂಕ್ ಪಡೆದ ಹಾಗೂ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳ ಮೂಲಕವೂ ಕಾಲೇಜಿನ ಶೈಕ್ಷಣಿಕ ವಾತಾವರಣದ ಬಗ್ಗೆ ಸದಭಿಪ್ರಾಯ ಮೂಡುವಂತೆ ಮಾಡುತ್ತವೆ. ಕೆಲವು ಶಿಕ್ಷಣ ಸಂಸ್ಥೆಗಳು ದುಬಾರಿ ಶುಲ್ಕವನ್ನು ಹೇಳಿ, ನಂತರ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದರೆ ಶುಲ್ಕದಲ್ಲಿ ರಿಯಾಯಿತಿ ನೀಡುವುದಾಗಿ ಪ್ರಚಾರ ಮಾಡಿಯೂ ವಿದ್ಯಾರ್ಥಿಗಳನ್ನು ಸೆಳೆಯುತ್ತವೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕ ಕೋಚಿಂಗ್, ಶೈಕ್ಷಣಿಕ ವರ್ಷದಲ್ಲಿ ಮುಗಿಸಬೇಕಾದ ಪಠ್ಯಕ್ರಮವನ್ನು ಮೂರು- ನಾಲ್ಕು ತಿಂಗಳುಗಳಲ್ಲಿ ಮುಗಿಸಿ, ಪುನರಾವರ್ತನೆ ಮಾಡುವುದು ಮುಂತಾದ ತಂತ್ರಗಳೂ ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಸೆಳೆಯುತ್ತವೆ. ಪ್ರತಿ ಜಿಲ್ಲೆಯಲ್ಲೂ ಸ್ಪರ್ಧಾತ್ಮಕ ಶೈಕ್ಷಣಿಕ ಜಗತ್ತಿಗೆ ಪ್ರವೇಶ ನೀಡುವಂತಹ ಶಿಕ್ಷಣ ವಾತಾವರಣ ನಿರ್ಮಾಣವಾದರೆ ಈ ರೀತಿಯ ವಲಸೆ ತಪ್ಪಿ ಜಿಲ್ಲಾ ಸಮತೋಲನ ಉಂಟಾಗಬಹುದು.

ಪೂರಕ ವರದಿ:
ಮನೋಜಕುಮಾರ್ ಗುದ್ದಿ, ಪ್ರವೀಣ್ ಕುಮಾರ್ ಪಿ.ವಿ, ಬಸವರಾಜ ಸಂಪಳ್ಳಿ



ಎಐ ಚಿತ್ರ: ಕಣಕಾಲಮಠ

ಫಲಿತಾಂಶದ ಕಸರತ್ತು; ವೆಬ್‌ಕಾಸ್ಟಿಂಗ್ ಕುತ್ತು

ಹೆಚ್ಚು ಫಲಿತಾಂಶ ಪಡೆದು ಜಿಲ್ಲಾವಾರು ಪಟ್ಟಿಯಲ್ಲಿ ಮೇಲಿನ ಸ್ಥಾನಗಳನ್ನು ಪಡೆಯಲು ಪ್ರತಿ ಜಿಲ್ಲೆಗಳೂ ವಾಮಮಾರ್ಗ ಅನುಸರಿಸುತ್ತಿದ್ದ ಪ್ರಕರಣಗಳನ್ನು ವರ್ಷದ ಹಿಂದೆ ಜಾರಿಗೆ ತಂದ ‘ವೆಬ್‌ಕಾಸ್ಟಿಂಗ್’ ಅನಾವರಣಗೊಳಿಸಿತ್ತು. ಕಳೆದೆರಡು ದಶಕಗಳಿಂದ ‘ಹೆಚ್ಚಿನ ಫಲಿತಾಂಶ’ ಎಂಬ ಪ್ರತಿಷ್ಠೆಯ ಬೆನ್ನು ಹತ್ತಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯ ಶಿಕ್ಷಕರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಅಂಕಗಳ ಭ್ರಮಾ ಲೋಕದಲ್ಲಿ ತೇಲಿಸಿದ್ದರು ಎಂಬ ಸತ್ಯವನ್ನು ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿದ ‘ವೆಬ್‌ಕಾಸ್ಟಿಂಗ್’ ವ್ಯವಸ್ಥೆ ಬಿಚ್ಚಿಟ್ಟಿತು.

ವೆಬ್‌ಕಾಸ್ಟಿಂಗ್ ಜಾರಿಗೂ ಹಿಂದಿನ ವರ್ಷ ನಕಲು ನಡೆದಿದ್ದ ಬಹುತೇಕ ಜಿಲ್ಲೆಗಳು ಫಲಿತಾಂಶದ ಜಿಲ್ಲಾವಾರು ಪಟ್ಟಿಯಲ್ಲಿ ಭಾರಿ ಜಿಗಿತ ಕಂಡಿದ್ದವು. ವಿಜಯಪುರ, ಯಾದಗಿರಿ, ಬೆಳಗಾವಿ, ಚಿತ್ರದುರ್ಗ, ಬೀದರ್, ಬಾಗಲಕೋಟೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅತಿಹೆಚ್ಚು ನಕಲು ನಡೆದಿತ್ತು ಎನ್ನುವ ಅನುಮಾನ ಸಾರ್ವತ್ರಿಕವಾಗಿತ್ತು. ಪರೀಕ್ಷೆಗಳಲ್ಲಿ ಬಿಗಿ ಕ್ರಮ ಕೈಗೊಳ್ಳುತ್ತಿದ್ದ ಉಡುಪಿ, ದಕ್ಷಿಣ ಕನ್ನಡದಂತಹ ಜಿಲ್ಲೆಗಳು ಕುಸಿತ ಕಂಡಿದ್ದವು. ಹಾಗಾಗಿ, 2024ರಲ್ಲಿ ನಡೆಯುವ ಪರೀಕ್ಷೆಯಲ್ಲಿ ನಕಲು, ವ್ಯವಹಾರಕ್ಕೆ ಸಂಪೂರ್ಣ ಕಡಿವಾಣ ಹಾಕಲು ಕ್ರಮಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪರೀಕ್ಷಾ ಮಂಡಳಿಗೆ ಸೂಚಿಸಿತ್ತು.

2023ರ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ಸಹಕರಿಸಿದ ಆರೋಪದ ಮೇಲೆ 100ಕ್ಕೂ ಹೆಚ್ಚು ಶಿಕ್ಷಕರನ್ನು ಅಮಾನತು ಮಾಡಲಾಗಿತ್ತು.

> **ಗುಣಮಟ್ಟದ ಶಿಕ್ಷಣ ದೊರೆಯದೇ ಇರುವುದರಿಂದ ಈ ಬಾರಿ ಕಲಬುರಗಿ ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ ರಾಜ್ಯದಲ್ಲೇ ಕಡೆಯ ಸ್ಥಾನವನ್ನು ಪಡೆದಿತ್ತು. ಹೀಗಾಗಿ, ಸ್ವಲ್ಪ ಆರ್ಥಿಕ ಅನುಕೂಲವಿರುವ ಪೋಷಕರು ತಮ್ಮ ಮಕ್ಕಳನ್ನು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಶಿಕ್ಷಣ ಸಂಸ್ಥೆಗಳಿಗೆ ಸೇರಿಸುತ್ತಿದ್ದಾರೆ**
>
> **ಸಂಗೀತಾ ಕಟ್ಟಿಮನಿ,** ಅರ್ಥಶಾಸ್ತ್ರಜ್ಞೆ-ನಿವೃತ್ತ ಉಪನ್ಯಾಸಕಿ, ಕಲಬುರಗಿ

> **ಉತ್ತರ ಕರ್ನಾಟಕ ಭಾಗದ ಶಾಲಾ, ಕಾಲೇಜುಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಇಲ್ಲ. ಜೆಇಇ, ನೀಟ್ ಮತ್ತಿತರರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ನುರಿತ ಶಿಕ್ಷಕರು, ಉಪನ್ಯಾಸಕರ ಕೊರತೆ ಇರುವುದು ಗೊತ್ತಾಗಿ ನಾನು ಪಿಯುಸಿ ಮತ್ತು ನೀಟ್ ತರಬೇತಿಗೆ ಮಂಗಳೂರಿಗೆ ಹೋಗಬೇಕಾಯಿತು**
>
> **ನಿಖಿಲ್ ಸೊನ್ನ,** ವಿಜಯಪುರ (ಈ ಬಾರಿಯ ನೀಟ್‌ನಲ್ಲಿ 720 ಅಂಕಗಳಿಗೆ 670 ಅಂಕ ಪಡೆದು ಕರ್ನಾಟಕಕ್ಕೆ ಪ್ರಥಮ ರ‍್ಯಾಂಕ್ ಬಂದಿರುವ ವಿದ್ಯಾರ್ಥಿ)

ನೀಟ್‌ಗಾಗಿ ಕರಾವಳಿಯತ್ತ ಪಯಣ..

ಉತ್ತರ ಕರ್ನಾಟಕ ಭಾಗದಲ್ಲಿ ಪ್ರತಿಭೆ, ಬುದ್ಧಿವಂತಿಕೆಗೆ ಕೊರತೆ ಇಲ್ಲ. ಆದರೆ, ಪ್ರತಿಭೆಗೆ ದಾರಿ ತೋರುವ ಶಾಲೆ, ಕಾಲೇಜು, ನುರಿತ ಶಿಕ್ಷಕ, ಉಪನ್ಯಾಸಕ, ಮಾರ್ಗದರ್ಶಕರ ಕೊರತೆ ಇದೆ. ಪರಿಣಾಮ ಉನ್ನತ ವ್ಯಾಸಂಗದ ಉದ್ದೇಶದಿಂದ, ವೈದ್ಯ, ಎಂಜಿನಿಯರ್ ಆಗಬೇಕು ಎಂಬ ಕನಸು ಹೊತ್ತ ಸಾವಿರಾರು ಪ್ರತಿಭಾವಂತ ವಿದ್ಯಾರ್ಥಿಗಳು ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳನ್ನು ಅರಸಿ ವಲಸೆ ಹೋಗುವುದು ಸಾಮಾನ್ಯವಾಗಿದೆ.

‘ಉತ್ತರ ಕರ್ನಾಟಕ ಭಾಗದ ಪ್ರಭಾವಿ ರಾಜಕಾರಣಿಗಳು, ಮಠಾಧೀಶರ ಹಿಡಿತದಲ್ಲಿ ಇರುವ ಹತ್ತಾರು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಆಧುನಿಕ ಸ್ಪರ್ಧಾತ್ಮಕ ಜಗತ್ತಿಗೆ ಪೈಪೋಟಿ ನೀಡುವಷ್ಟು ಬೆಳೆದಿಲ್ಲ. ಈ ಸಂಸ್ಥೆಗಳಲ್ಲಿ ನುರಿತ, ತಜ್ಞ ಶಿಕ್ಷಕರು, ಉಪನ್ಯಾಸಕರು, ತರಬೇತುದಾರರು ಇಲ್ಲ. ತಮ್ಮ ಜಾತಿಗೆ ಸೇರಿದ ಹಾಗೂ ಹತ್ತಿರದ ಸಂಬಂಧಿಕರನ್ನು ಸಂಸ್ಥೆಗಳಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಈ ಸಂಸ್ಥೆಗಳಲ್ಲಿ ಇರುವ ಉದ್ಯೋಗಿಗಳು ಶೈಕ್ಷಣಿಕ ಚಟುವಟಿಕೆಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳ ಚುನಾವಣೆ, ಮಠಾಧೀಶರ ಧಾರ್ಮಿಕ ಚಟುವಟಿಕೆಗೆ ಪೂರಕವಾಗಿ ಕೆಲಸ ಮಾಡಬೇಕಾದ ಸ್ಥಿತಿ ಇದೆ. ಜೊತೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಭೌತಿಕವಾಗಿ ಶ್ರೀಮಂತವಾಗಿ ಕಾಣಿಸಿದರೂ ಶೈಕ್ಷಣಿಕವಾಗಿ ಜೊಳ್ಳಾಗಿವೆ’ ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ಶಿವಮೂರ್ತಿ.

‘ಮಂಗಳೂರು, ಉಡುಪಿ ಭಾಗದಲ್ಲಿರುವಷ್ಟೇ ಉತ್ತಮ ಶೈಕ್ಷಣಿಕ ಸೌಲಭ್ಯ ಇರುವ ವಸತಿ ಶಾಲೆಗಳು ಇತ್ತೀಚಿನ ವರ್ಷಗಳಲ್ಲಿ ಉತ್ತರ ಕರ್ನಾಟಕ ಭಾಗದ ಅನೇಕ ಜಿಲ್ಲೆಗಳಲ್ಲಿ ಆರಂಭವಾಗಿವೆ. ರಾಜಸ್ಥಾನ, ಆಂಧ್ರಪ್ರದೇಶ, ತೆಲಂಗಾಣ, ಬೆಂಗಳೂರು, ಮಂಗಳೂರು ಭಾಗದ ನುರಿತ ಉಪನ್ಯಾಸಕರನ್ನು ಕರೆತಂದು ಉನ್ನತ ಶಿಕ್ಷಣ ಕೊಡಿಸುವ ಪ್ರಯತ್ನಗಳು ಇತ್ತೀಚಿನ ವರ್ಷಗಳಲ್ಲಿ ಆರಂಭವಾಗಿದೆ. ಆದರೆ, ಅವುಗಳು ಇನ್ನೂ ಪೂರ್ಣ ಪ್ರಮಾಣದ ಫಲಿತಾಂಶ ಪಡೆದಿಲ್ಲ.

ಉತ್ತರ ಕರ್ನಾಟಕ ಭಾಗದ ಸ್ಥಿತಿವಂತರಲ್ಲಿ ಮೊದಲಿನಿಂದಲೂ ಎಲ್ಲದಕ್ಕೂ ದಕ್ಷಿಣ ಕರ್ನಾಟಕದತ್ತ ವಲಸೆ ಹೋಗುವುದು ಸಾಮಾನ್ಯವಾಗಿದೆ. ಕೇವಲ ಓದಿಗಾಗಿ ಮಾತ್ರವಲ್ಲ, ಆರೋಗ್ಯ, ಉದ್ಯೋಗಕ್ಕಾಗಿಯೂ ವಲಸೆ ಹೋಗುವುದು ರೂಢಿಯಾಗಿದೆ

ಅಂಕಗಳೇ ಶುಲ್ಕದ ಮಾನದಂಡ

ಬೆಂಗಳೂರು, ಮಲೆನಾಡು, ಕರಾವಳಿ ಜಿಲ್ಲೆಯ ಕಾಲೇಜುಗಳೂ ಸೇರಿದಂತೆ ದ್ವಿತೀಯ ಪಿಯು ಜತೆಗೆ ನೀಟ್, ಸಿಇಟಿ, ಜೆಇಇ ಮತ್ತಿತರ ಕೋರ್ಸ್‌ಗಳಿಗೆ ಕೋಚಿಂಗ್ ನೀಡುವ ಪದವಿಪೂರ್ವ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ನಿಗದಿ ಮಾಡುವ ಶುಲ್ಕಕ್ಕೂ ಅಂಕಗಳೇ ಆಧಾರ.

ಬಹುತೇಕ ಕಾಲೇಜುಗಳು ಪ್ರತಿಭಾವಂತರನ್ನು ತಮ್ಮ ಕಾಲೇಜುಗಳಿಗೆ ಸೆಳೆಯಲು ಶೇ 95ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ ₹1 ಲಕ್ಷದ ಒಳಗೆ ಶುಲ್ಕ ನಿಗದಿ ಮಾಡಿವೆ. ಶೇ 90–95ರ ಮಧ್ಯೆ ಒಂದು ಸ್ತರ, 85–90ರ ಮಧ್ಯದ ಅಂಕಗಳಿಗೆ ಮತ್ತೊಂದು ಸ್ತರ, 90ಕ್ಕಿಂತ ಕಡಿಮೆ ಇದ್ದರೆ ವಸತಿ ಸೇರಿ ₹5 ಲಕ್ಷದವರೆಗೂ ಶುಲ್ಕ ನಿಗದಿ ಮಾಡಿವೆ.

‘ವಿದ್ಯಾರ್ಥಿ ವೇತನ ಆಮಿಷ ಸೇರಿದಂತೆ ವಿವಿಧ ಸೌಲಭ್ಯಗಳನ್ನು ನೀಡಿ ಎಸ್ಎಸ್ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದವರನ್ನು ಆಕರ್ಷಿಸುತ್ತವೆ. ಕೆಲ ಕಾಲೇಜುಗಳು ಮೊದಲ ಪಿಯು ಪ್ರವೇಶಕ್ಕೆ ಇಂತಹ ರಿಯಾಯಿತಿ, ಸೌಲಭ್ಯ ನೀಡಿ, ದ್ವಿತೀಯ ಪಿಯು ಪ್ರವೇಶಕ್ಕೆ ಸಂಪೂರ್ಣ ಶುಲ್ಕ ಪಡೆಯುತ್ತವೆ. ದ್ವಿತೀಯ ಪಿಯುನಲ್ಲಿ ಈ ವಿದ್ಯಾರ್ಥಿಗಳು ಪಡೆಯುವ ಅಂಕಗಳೇ ಮುಂದಿನ ಪ್ರವೇಶದ ಪ್ರಚಾರ ಸಾಮಗ್ರಿಗಳಾಗುತ್ತವೆ’ ಎಂದು ದೂರುತ್ತಾರೆ ತೀರ್ಥಹಳ್ಳಿಯ ಅರುಣ್ ಹೊಸಕೊಪ್ಪ.

ಬದಲಾಗಬೇಕಿದೆ ರ‍್ಯಾಂಕಿಂಗ್ ನಿಯಮ

ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲಾವಾರು ರ‍್ಯಾಂಕಿಂಗ್ ನೀಡಿಕೆಯಲ್ಲಿ ಕೋವಿಡ್ ಪೂರ್ವದಲ್ಲಿ ಬದಲಾವಣೆ ಮಾಡಲಾಗಿತ್ತು. ಅದಕ್ಕಾಗಿ ಮೂರು ಮಾನದಂಡಗಳನ್ನು ಅನುಸರಿಸಲಾಗಿತ್ತು.

ಆ ಮೂರು ಮಾನದಂಡಗಳೆಂದರೆ; ಉತ್ತೀರ್ಣ ಪ್ರಮಾಣ, ವಿದ್ಯಾರ್ಥಿಗಳು ಪಡೆದ ಸರಾಸರಿ ಅಂಕ ಗಳಿಕೆ ಮತ್ತು ಗುಣಾತ್ಮಕ ಫಲಿತಾಂಶ. ಪ್ರತಿಯೊಂದು ಜಿಲ್ಲೆಯಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಉತ್ತೀರ್ಣ ಪ್ರಮಾಣ, ಉತ್ತೀರ್ಣರಾದವರು ತೆಗೆದುಕೊಂಡ ಸರಾಸರಿ ಅಂಕಗಳು ಮತ್ತು ಇವರಲ್ಲಿ ಶೇ 60 ಕ್ಕೂ ಹೆಚ್ಚು ಅಂಕಗಳ ಸರಾಸರಿಯನ್ನು ಲೆಕ್ಕ ಹಾಕಿದಾಗ ಬರುವ ಶೇಕಡಾವಾರು ಪ್ರಮಾಣದ ಆಧಾರದಲ್ಲಿ ಜಿಲ್ಲೆಗಳ ರ‍್ಯಾಂಕಿಂಗ್ ನಿರ್ಧರಿಸಲಾಗುತ್ತಿತ್ತು.

‘ಈಗ ಆಯಾ ಜಿಲ್ಲೆಯ ಒಟ್ಟು ವಿದ್ಯಾರ್ಥಿಗಳ ಉತ್ತೀರ್ಣದ ಆಧಾರದ ಮೇಲೆ ರ‍್ಯಾಂಕಿಂಗ್ ನೀಡಲಾಗುತ್ತಿದೆ. ಉತ್ತೀರ್ಣ ಪ್ರಮಾಣ, ವಿದ್ಯಾರ್ಥಿಗಳು ಪಡೆದ ಸರಾಸರಿ ಅಂಕಗಳಿಕೆ ಮತ್ತು ಗುಣಾತ್ಮಕ ಫಲಿತಾಂಶ ಪರಿಗಣಿಸುತ್ತಿಲ್ಲ. ಇದರಿಂದ ಕೆಲ ಜಿಲ್ಲೆಗಳಿಗಷ್ಟೇ ಅನುಕೂಲವಾಗಿದೆ’ ಎನ್ನುತ್ತಾರೆ ಶಿಕ್ಷಕ ಬಸವರಾಜ.

ಉತ್ತರಕ್ಕೆ ನೇಮಕ; ದಕ್ಷಿಣಕ್ಕೆ ವರ್ಗ

ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಶಿಕ್ಷಕರ ಕೊರತೆ ಹಿಂದಿನಿಂದಲೂ ಇದೆ. ಸರ್ಕಾರ ಖಾಲಿ ಹುದ್ದೆಗಳಿಗೆ ಅನುಗುಣವಾಗಿ ಜಿಲ್ಲಾವಾರು ಶಿಕ್ಷಕರ ನೇಮಕಾತಿ ನಡೆಸುತ್ತದೆ. ಪ್ರತಿ ಬಾರಿ ಶಿಕ್ಷಕರ ಭರ್ತಿಗೆ ಅಧಿಸೂಚನೆ ಹೊರಡಿಸಿದಾಗಲೂ ಅಧಿಕ ಸಂಖ್ಯೆಯಲ್ಲಿ ಇರುವ ಉತ್ತರ ಕರ್ನಾಟಕದ ಜಿಲ್ಲೆಗಳ ಖಾಲಿ ಹುದ್ದೆಗಳಿಗೆ ದಕ್ಷಿಣದವರೇ ಅರ್ಜಿ ಸಲ್ಲಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿದ್ದಾರೆ. ಶಿಕ್ಷಕರ ವರ್ಗಾವಣೆ ನಿಯಮಗಳಿಗೆ ತಿದ್ದುಪಡಿ ತಂದ ನಂತರ ಬಹುತೇಕ ಶಿಕ್ಷಕರು ವರ್ಗಾವಣೆ ಪಡೆದು ತಮ್ಮ ಜಿಲ್ಲೆಗಳಿಗೆ ಮರಳಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಕರ ಕೊರತೆ ತೀವ್ರವಾಗಿದೆ. 20 ಸಾವಿರಕ್ಕೂ ಅಧಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅತಿಥಿ ಶಿಕ್ಷಕರ ಮೇಲೆ ನಿತ್ಯದ ತರಗತಿಗಳು ನಡೆಯುತ್ತಿವೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 27-7-2000

• ಹುಬ್ಬಳ್ಳಿ ಪೀಠ ಸ್ಥಾಪನೆಗೆ ಕೇಂದ್ರ ಸರ್ಕಾರ ಬದ್ಧ

ನವದೆಹಲಿ, ಜುಲೈ 25– ಹೈಕೋರ್ಟ್ ಪೀಠ ಸ್ಥಾಪನೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದ ಹೊರತಾಗಿಯೂ ಹುಬ್ಬಳ್ಳಿ-ಧಾರವಾಡದಲ್ಲಿ ಪೀಠ ಸ್ಥಾಪಿಸಲು ಕೇಂದ್ರ ಸರ್ಕಾರ ತೀವ್ರ ಆಸಕ್ತಿ ಹೊಂದಿದೆ.

ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಸಮಯದಲ್ಲಿಯೇ ಕೇಂದ್ರದ ಕಾನೂನು ಸಚಿವರೂ ರಾಜೀನಾಮೆ ನೀಡಿ ಆ ಖಾತೆಗೆ ಹೊಸ ಸಚಿವರ ನೇಮಕವಾಗಿರುವ ಕಾರಣ, ‘ಅಂತಿಮ ಹಂತ’ದಲ್ಲಿರುವ ನಿರ್ಧಾರದ ಪ್ರತಿಕ್ರಿಯೆಗೆ ಸ್ವಲ್ಪ ಹಿನ್ನಡೆ ಉಂಟಾಗಿದೆ. ಆದರೆ ಕೇಂದ್ರ ಸರ್ಕಾರ ಮಾತ್ರ ಪೀಠ ಸ್ಥಾಪನೆಯ ನಿರ್ಧಾರಕ್ಕೆ ಬದ್ಧವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ

ಗುರುವಾರ, 27-7-1950

• ಹೈದರಾಬಾದ್ ಕಾಂಗ್ರೆಸ್ ಕಚೇರಿಗೆ ಕಿದ್ವಾಯ್ ಭೇಟಿ

ಹೈದರಾಬಾದ್, ಜುಲೈ 26– ಭಾರತ ಸರ್ಕಾರದ ಸಂಪರ್ಕ ಶಾಖಾ ಸಚಿವ ಶ್ರೀ ರಫಿ ಅಹಮದ್ ಕಿದ್ವಾಯಿ ಅವರು ಇಂದು ಬೆಳಿಗ್ಗೆ ಹೈದರಾಬಾದ್ ಸಂಸ್ಥಾನ ಕಾಂಗ್ರೆಸ್ಸಿನ ಕೇಂದ್ರ ಕಚೇರಿಗೆ ಭೇಟಿ ನೀಡಿದರು.

ಸ್ಥಳೀಯ ಕಾಂಗ್ರೆಸ್ ನಾಯಕರೊಂದಿಗೆ 40 ನಿಮಿಷ ಮಾತನಾಡಿದ ಅವರು, ಕಾಂಗ್ರೆಸ್ ಸಮಿತಿಗಳನ್ನು ಕ್ಷೇತ್ರಗಳ ಆಧಾರದ ಮೇಲೆ ಪುನರ್ ವಿಂಗಡಿಸುವುದು ಮತ್ತು ಭಾರತದ ಅಂಚೆ ವ್ಯವಸ್ಥೆಯೊಂದಿಗೆ ಸಂಘಟಿಸಿದುದರ ಫಲವಾಗಿ ಸಂಸ್ಥಾನದ ಅಂಚೆ ವ್ಯವಸ್ಥೆಯ ಮುಂದಿರುವ ಸಮಸ್ಯೆಗಳ ಕುರಿತು ಚರ್ಚಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಜುಲೈ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ತೃತೀಯ ಗಂ. 22-43 ನಕ್ಷತ್ರ: ಮಘಾ ಗಂ. 16-23 ಯೋಗ: ವರಿಯಾನ್ ಗಂ. 27-13 ಕರಣ: ತೈತಿಲ ಗಂ. 10-37, ಕರ್ಕಾಟಕ ಮಾಸದ 11 ನೇ ದಿನ. ಮಳೆ ನಕ್ಷತ್ರ : ಪುಷ್ಯ 3 ನೇ ಪಾದ. ರಾಹುಕಾಲ : ಸಾಯಂಕಾಲ 04-30 06-00 ಸೂರ್ಯೋದಯ : 06-18 ಸೂರ್ಯಾಸ್ತ : 06-56, ಮುಸ್ಲಿಂ ದಿನಾಂಕ : 01 ಸಫರ್, ದಿನ ವಿಶೇಷ : ಮಧುಸ್ರಾವ ತೃತೀಯ (ತೇಜ್), ಆದಿ ಪುರಮ್ (ದ.ಭಾರತ) ಅದೃಷ್ಟ ಸಂಖ್ಯೆ : 2, 3

ಮೇಷ: ಉದ್ಯೋಗಕ್ಕಾಗಿ ನಡೆಸಿದ ಪ್ರಯತ್ನ ಈ ದಿನ ಫಲ ನೀಡಲಿದೆ. ಕೃಷಿಕರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ ಇದೆ. ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಸಂಧಾನ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಿ.

ವೃಷಭ: ಕಿರಿಯರಿಗಾಗಿ ಹೆಚ್ಚಿನ ಖರ್ಚು- ವೆಚ್ಚಗಳು ಮಾಡುವಿರಿ. ಈ ದಿನ ಒಂದು ವಿಚಾರವನ್ನು ಆಳವಾದ ಅಧ್ಯಯನ ನಡೆಸಿ, ನಂತರದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ರೋಗಬಾಧೆಯಿಂದ ಮುಕ್ತಿ ಸಿಗಲಿದೆ.

ಮಿಥುನ: ನಿಮ್ಮ ಕರ್ತವ್ಯದಲ್ಲಿ ಜವಾಬ್ದಾರಿಯ ಕೊರತೆ ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ. ವ್ಯಾಪಾರದ ವಿಚಾರದಲ್ಲಿ ಗಂಭೀರ ಚರ್ಚೆ ನಡೆಯುವುದು. ವಸ್ತ್ರ ವಿನ್ಯಾಸಗಾರರಿಗೆ ವಿಶೇಷವಾದ ಪರಿಣಿತಿಯು ಅಗತ್ಯವೆನಿಸಲಿದೆ.

ಕರ್ಕಾಟಕ: ಪೆಟ್ರೋಲಿಯಂ ಉತ್ಪನ್ನಗಳಿಂದ ಹೆಚ್ಚಿನ ಆದಾಯವಿದೆ. ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಹೆಚ್ಚು ಗಮನ ನೀಡಿ. ಮಾನಸಿಕವಾಗಿ ಕುಗ್ಗದೇ ಧೈರ್ಯವಾಗಿರಿ.

ಸಿಂಹ: ಸಮಸ್ಯೆಗಳು ಬಗೆಹರಿಯುವುದು. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯವಿದೆ. ಹೆಚ್ಚಿನ ಪರಿಶ್ರಮದಿಂದ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು.

ಕನ್ಯಾ: ಮದುವೆ ಮುಂತಾದ ವಿಷಯಗಳತ್ತ ಗಮನಹರಿಸುವಂತೆ ಒತ್ತಡ ಬರಲಿದೆ. ಅಲಂಕಾರಿಕ ವಸ್ತುಗಳಿಗಾಗಿ ಹೆಚ್ಚು ಹಣ ವಿನಿಯೋಗಿಸುವಿರಿ. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಉತ್ತೇಜನ ದೊರೆಯುವುದು.

ತುಲಾ: ಪ್ರಾಚಾರ್ಯರಿಗೆ ಮತ್ತು ಸಲಹೆಗಾರರಿಗೆ ಹೆಚ್ಚಿನ ಅವಕಾಶಗಳು ಬರುವವು. ಸಹೋದರರ ವ್ಯಾಪಾರ ವಹಿವಾಟುಗಳ ವಿಚಾರಗಳಿಗೆ ಅಡ್ಡಿ ಮಾಡುವ ಬದಲು ಉತ್ತಮ ಸಲಹೆಗಳನ್ನು ನೀಡಿ.

ವೃಶ್ಚಿಕ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ವೈವಾಹಿಕ ಜೀವನದಲ್ಲಿ ನೆಮ್ಮದಿ ಕಂಡು ಬರಲಿದೆ. ನವ ದಂಪತಿಗಳಿಗೆ ಸಂತಾನ ಫಲ.

ಧನು: ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ಬಹುಮಟ್ಟಿಗೆ ನಿರೀಕ್ಷಿತ ಫಲ ಲಭಿಸಲಿದೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸುವಿರಿ. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಉಂಟಾಗಬಹುದು.

ಮಕರ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುವಿರಿ. ಭೂ ವ್ಯವಹಾರಗಳಿಂದ ಲಾಭ. ಇಂದು ಪಾಲುದಾರಿಕೆಯಂತಹ ವ್ಯವಹಾರದಲ್ಲಿ ತೀರ್ಮಾನ, ಒಪ್ಪಂದ ಕಾರ್ಯಗಳು ಸರಿಯಲ್ಲ.

ಕುಂಭ: ವೈಯಕ್ತಿಕ ವಿಚಾರಗಳಲ್ಲಿ ಸಣ್ಣಪುಟ್ಟ ಬದಲಾವಣೆಯಿಂದ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುವಿರಿ. ಗುರುಗಳ ಅನುಗ್ರಹದಿಂದ, ಹಿರಿಯರ ಉತ್ತೇಜನದಿಂದಾಗಿ ಕೆಲಸ ಕಾರ್ಯಗಳಲ್ಲಿ ಜಯ ಲಭಿಸುವುದು.

ಮೀನ: ನಿರುದ್ಯೋಗಿಗಳು ಹಂಗಾಮಿ ನೌಕರಿಯ ಬಗ್ಗೆ ಆಲೋಚಿಸುವುದು ಉತ್ತಮ. ಧನ ಆದಾಯಕ್ಕೆ ಯಾವುದೇ ಅಡ್ಡಿಗಳು ಇರುವುದಿಲ್ಲ ಹಾಗೆಯೇ ವ್ಯಯವೂ ಸಹ ಅನಿವಾರ್ಯವಾಗುವುದು. ಮಹಾಲಕ್ಷ್ಮಿಯನ್ನು ಆರಾಧಿಸಿ.

ಪದಬಂಧ 6116

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಸೋಲು ಹೀಗೆ ಬಂದಿದೆಯಲ್ಲಾ? (4)
3. ಜ್ಞಾನವನ್ನು ಬೋಧಿಸುವುದು (4)
5. ಸಮಾಧಾನ ಈ ರೀತಿ ಬಂದಿದೆ (3)
6. ಅತಿಯಾದ ಬಯಕೆ (3)
8. ಮರದ ಹತ್ತಿರ ನಿಂತಿರುವ ಹೆಡ್ಡ (3)
9. ವಿನಿಯೋಗದಲ್ಲಿ ಕಾಡಿದ ವಿರಹ (3)
10. ಮಲಗುವಾಗ ಕಾಣಿಸಿದ ಸೇವಕ (3)
12. ಕುಣಿಯುತ್ತಾ ಹಾಕಿದ ಜೀರುಗಂಟು (3)
14. ಕರದಲ್ಲಿರುವ ಮೃತದೇಹ (4)
15. ನಗಿಸಲು ಕಂಕುಳಲ್ಲಿ ಗುಳು ಗುಳು ಬೆರಳಾಡಿಸುವುದು (4)

ಮೇಲಿಂದ ಕೆಳಕ್ಕೆ

1. ಉತ್ತಮ ಕುಲದಲ್ಲಿ ಹುಟ್ಟಿದವನು (4)
2. ವರ್ತಕನ ರೂಢಿ (3)
3. ನಾದಿನಿ ಹಾಕಿರುವ ಅಡಿಪಾಯ (3)
4. ದರದೊಳಗಿರುವ ಅಗತ್ಯ ಕಾಣುತ್ತಿದೆಯೇ? (4)
7. ಕೈ ಮೊದಲಿದ್ದಾಗ ಉತ್ಸವ ಕಾಣುತ್ತದೆ (3)
8. ಹೀಗೆ ತಪ್ಪಿಸಿಕೊಳ್ಳು (3)
9. ಗಣಪತಿಯ ಇನ್ನೊಂದು ಹೆಸರು (4)
11. ಮರೆಯುವ ಸ್ವಭಾವದವನು (4)
12. ವಠಾರದವರು ಹಿಡಿದಿರುವ ಕೊಡಲಿ (3)
13. ಕೇಡು ಮಾಡುವವನು (3)



ಎಡದಿಂದ ಬಲಕ್ಕೆ:
1.ಶ್ರಾವ್ಯ 3.ಪ್ರಸವ 6.ಸಭಿಕ 8.ತಿದ್ದುಪಡಿ 10.ವಿವೇಕ 11.ಚಡಾವು 12.ಶಿಲಾಯುಗ 15.ಮಕರ 17.ತಸ್ಕರ 18.ನಿಜ

ಮೇಲಿಂದ ಕೆಳಕ್ಕೆ:
2.ವ್ಯತ್ಯಾಸ 3.ಪ್ರತೀಕ 4.ವರ್ಧಂತಿ 5.ಶಾಪ 7.ಭಿಕ್ಷುಕ 9.ಡಿಕಾವು 10.ವಿದೇಶಿ 11.ಚರಕ 13.ಲಾಯ 14.ಗಣಿತ 15.ಮತ್ಸರ 16.ರಜನಿ

ಸುಡೊಕು 6500

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

6499 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಲೈಂಗಿಕ ದೌರ್ಜನ್ಯದ ಕುರುಹು ಇಲ್ಲ’

ಬೀದರ್: ‘ನರ್ಸರಿಯಲ್ಲಿ ಓದುತ್ತಿರುವ ನಾಲ್ಕು ವರ್ಷದ ಬಾಲಕಿಗೆ ಆಕಸ್ಮಿಕವಾಗಿ ಯಾವುದೋ ವಸ್ತು ಚುಚ್ಚಿದ್ದರಿಂದ ಮೇಲ್ಭಾಗದಲ್ಲಿ ಗಾಯವಾಗಿದೆ. ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಯಾವುದೇ ಕುರುಹುಗಳು ಕಂಡು ಬಂದಿಲ್ಲ ಎಂಬುದು ವೈದ್ಯಕೀಯ ಪರೀಕ್ಷೆಯಿಂದ ತಿಳಿದು ಬಂದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

‘ಬ್ರಿಮ್ಸ್ ಆಸ್ಪತ್ರೆಯಲ್ಲಿ ಮಗುವಿನ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ಲೈಂಗಿಕ ದೌರ್ಜನ್ಯ ನಡೆದ ಯಾವುದೇ ಕುರುಹುಗಳಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಬಾಲಕಿ ಪೋಷಕರಿಗೆ ಮಕ್ಕಳ ರಕ್ಷಣಾ ಘಟಕದಲ್ಲಿ ಆಪ್ತ ಸಮಾಲೋಚನೆ ನಡೆಸಲಾಗಿದೆ. ವೈದ್ಯಕೀಯ ಪರೀಕ್ಷೆ ಹಾಗೂ ತನಿಖೆ ಕುರಿತು ಬಾಲಕಿ ಪೋಷಕರಿಗೆ ಎಲ್ಲ ರೀತಿಯ ಮಾಹಿತಿ ನೀಡಲಾಗಿದೆ. ಸಾರ್ವಜನಿಕರು ವದಂತಿಗೆ ಕಿವಿಗೊಡಬಾರದು’ ಎಂದು ಶನಿವಾರ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಶಾಲಾ ನರ್ಸರಿ ಅವಧಿಯಲ್ಲಿ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಬಾಲಕಿ ತಾಯಿ ನೀಡಿದ ದೂರಿನನ್ವಯ ಜು. 24ರಂದು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಚಿಟಿಕೆ ಸುದ್ದಿ

ಶಿಕ್ಷಕನಿಗೆ ಚಪ್ಪಲಿಯಲ್ಲಿ ಹೊಡೆದ ಶಿಕ್ಷಕಿ

ಇಳಕಲ್ (ಬಾಗಲಕೋಟೆ): ಇಲ್ಲಿಯ ಅಲಂಪೂರಪೇಟೆಯ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ ಅಮೀನಾ ಕೊಳೂರ ಎನ್ನುವವರು ತಮಗೆ ವಿದ್ಯಾರ್ಥಿಗಳೆದುರು ಚಪ್ಪಲಿಯಿಂದ ಹೊಡೆದು ಅವಮಾನಿಸಿದ್ದಾರೆ ಎಂದು ಅದೇ ಶಾಲೆಯ ಶಿಕ್ಷಕ ಅಂದಾನಯ್ಯ ವಸ್ತ್ರದ ಪೊಲೀಸರಿಗೆ ದೂರು ನೀಡಿದ್ದಾರೆ.

‘ಸ್ವಾತಂತ್ರ್ಯೋತ್ಸವ ಆಚರಣೆ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮಾಡಿಸಲು ಅಗತ್ಯ ಸಿದ್ಧತೆ, ತಾಲೀಮು ಮಾಡಿಸುತ್ತಿದ್ದೆ. ಈ ಬಗ್ಗೆ ಮಕ್ಕಳೆದುರು ಶಿಕ್ಷಕಿ ಅಮೀನಾ ಆಕ್ಷೇಪಾರ್ಹ ಮಾತು ಆಡಿದ್ದರು. ಹೀಗೇಕೆ ಆಡಿದಿರಿ ಎಂದು ಕೇಳಿದ ನನ್ನನ್ನು ಏಕಾಏಕಿ ಚಪ್ಪಲಿಯಿಂದ ಹೊಡೆದು ಶಿಕ್ಷಕಿ ಅಮೀನಾ ಅವಮಾನಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಶಿಕ್ಷಕ ಅಂದಾನಯ್ಯ ನಗರ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸರು ಶಾಲೆಗೆ ಭೇಟಿ ನೀಡಿ, ತನಿಖೆ ಕೈಗೊಂಡಿದ್ದಾರೆ. ಸರ್ಕಾರಿ ನೌಕರರ ಸಂಘ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳೂ ಸಹ ಶಾಲೆಗೆ ಭೇಟಿ ನೀಡಿ, ಘಟನೆಯ ಬಗ್ಗೆ ಮಾಹಿತಿ ಪಡೆದರು.

ಯಕೃತ್ತಿನಲ್ಲಿ ಸಮಸ್ಯೆ: ಮುಂಬೈಗೆ ಯುವತಿ ಏರ್ ಲಿಫ್ಟ್

ಶಿವಮೊಗ್ಗ: ‘ಡೆಂಗಿಗೆ ಚಿಕಿತ್ಸೆ ಪಡೆಯುತ್ತಿದ್ದ ಯುವತಿಗೆ ಯಕೃತ್ತಿನಲ್ಲಿ (ಲಿವರ್) ಗಂಭೀರ ಸಮಸ್ಯೆ ಇರುವುದು ತಪಾಸಣೆ ವೇಳೆ ಪತ್ತೆಯಾದ ಕಾರಣ ಇಲ್ಲಿನ ನಂಜಪ್ಪ ಆಸ್ಪತ್ರೆ ವೈದ್ಯರ ತಂಡವು ತುರ್ತು ಚಿಕಿತ್ಸೆಗಾಗಿ ಶನಿವಾರ ಮುಂಬೈನ ಆಸ್ಪತ್ರೆಗೆ ವಿಶೇಷ ವಿಮಾನದ ಮೂಲಕ ಸಾಗಿಸಿತು.

ಕುವೆಂಪು ರಸ್ತೆಯ ನಂಜಪ್ಪ ಆಸ್ಪತ್ರೆಯಿಂದ ಸೋಗಾನೆ ವಿಮಾನ ನಿಲ್ದಾಣಕ್ಕೆ ‘ಝಿರೋ ಟ್ರಾಫಿಕ್’ ಸೌಲಭ್ಯ ಕಲ್ಪಿಸಿದ ಪೊಲೀಸರು ಆಂಬುಲೆನ್ಸ್‌ಗೆ ದಾರಿ ಮಾಡಿಕೊಟ್ಟರು.

‘ಗಾಂಧಿ ಬಜಾರ್ ನಿವಾಸಿ ಮನೋಜ್ ಅವರ ಪುತ್ರಿ ಮಾನ್ಯಾ ಜೈನ್ (21) ಮುಂಬೈಗೆ ಚಿಕಿತ್ಸೆಗೆ ತೆರಳಿದ ಯುವತಿ. ಡೆಂಗಿಯಿಂದಾಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇವರು ಪೂರ್ಣ ಪ್ರಮಾಣದಲ್ಲಿ ಗುಣಮುಖರಾಗದ್ದರಿಂದ ನಂಜಪ್ಪ ಆಸ್ಪತ್ರೆಗೆ ದಾಖಲಾಗಿದ್ದರು. ತಪಾಸಣೆ ನಡೆಸಿದಾಗ ಲಿವರ್‌ನಲ್ಲಿ ಸಮಸ್ಯೆ ಇರುವುದು ಕಂಡುಬಂದಿದೆ.

‘ಏಳು ದಿನಗಳ ಹಿಂದೆ ಜ್ವರ ಕಾಣಿಸಿಕೊಂಡಿದ್ದರಿಂದ ಚಿಕಿತ್ಸೆ ಪಡೆದಿದ್ದು, ಡೆಂಗಿ ದೃಢಪಟ್ಟಿತ್ತು. ಶುಕ್ರವಾರ ನಂಜಪ್ಪ ಆಸ್ಪತ್ರೆಗೆ ದಾಖಲಾಗಿದ್ದು, ರಕ್ತ ಪರೀಕ್ಷೆಯಲ್ಲಿ ಯಕೃತ್ತು (ಲಿವರ್) ಸಮಸ್ಯೆ ಇರುವುದು ಕಂಡುಬಂದಿತ್ತು’ ಎಂದು ನಂಜಪ್ಪ ಆಸ್ಪತ್ರೆಯ ತಜ್ಞ ವೈದ್ಯ ಡಾ.ರಾಕೇಶ್ ತಿಳಿಸಿದ್ದಾರೆ.

ಯದುವೀರ್ ಅನುಭವ ಪಡೆದುಕೊಳ್ಳಲಿ

ಅರಸೀಕೆರೆ (ಹಾಸನ): ‘ನಾವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಿಚಾರದಲ್ಲಿ ಜಾತಿ ಜನಗಣತಿ ಮಾಡುತ್ತಿದ್ದೇವೆ. ಪಾಪ ಅವರಿನ್ನೂ (ಯದುವೀರ್ ಒಡೆಯರ್) ಹೊಸದಾಗಿ ಸಂಸದರಾಗಿದ್ದಾರೆ. ಅನುಭವ ಪಡೆದುಕೊಳ್ಳಲಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

‘ರಾಜ್ಯ ಸರ್ಕಾರಕ್ಕೆ ಜಾತಿಗಣತಿ ಮಾಡುವ ಯೋಗ್ಯತೆ ಇಲ್ಲ’ ಎಂಬ ಯದುವೀರ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಹಿಂದೆಯೂ ಗಣತಿ ಮಾಡಲಾಗಿದೆ. ಕೆಲವು ಸಂಘ–ಸಂಸ್ಥೆಗಳು, ಸಮಾಜಗಳು ಹೇಳಿದ್ದರಿಂದ ಮತ್ತೆ ಅವಕಾಶ ಮಾಡಿಕೊಟ್ಟಿದ್ದೇವೆ. ನಮ್ಮನ್ನು ನೋಡಿಯೇ ಕೇಂದ್ರ ಸರ್ಕಾರ ಜಾತಿ ಜನಗಣತಿಗೆ ಮುಂದಾಗಿದೆ’ ಎಂದರು.

‘ಪಕ್ಷದ ಪ್ರಣಾಳಿಕೆಯಲ್ಲೂ ಹೇಳಿದ್ದೆವು ಎಂದು ಹೇಳಿದರು.

ನಿಯಮದಲ್ಲಿಲ್ಲ ಹಿಂದೆ ಸರಿಯುವ ಅವಕಾಶ

ಧರ್ಮಸ್ಥಳ ಅಪರಾಧ ಕೃತ್ಯಗಳ ತನಿಖೆ: ಎಸ್‌ಐಟಿಯಿಂದ ಕೈಬಿಡುವಂತೆ ಐಪಿಎಸ್ ಅಧಿಕಾರಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಪ್ರಕರಣದ ತನಿಖೆಗಾಗಿ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಇಬ್ಬರು ಅಧಿಕಾರಿಗಳು ಹಿಂದೆ ಸರಿದಿದ್ದಾರೆ. ಆದರೆ, ತನಿಖೆಯ ಹೊಣೆಯಿಂದ ಹೀಗೆ ತಪ್ಪಿಸಿಕೊಳ್ಳಲು ಅವಕಾಶವೇ ಇಲ್ಲ ಎಂದು ಸೇವಾ ನಿಯಮಗಳು ಸ್ಪಷ್ಟವಾಗಿ ಹೇಳುತ್ತವೆ.

ಸರ್ಕಾರ ಅಥವಾ ಮೇಲಧಿಕಾರಿಗಳು ತಂಡವನ್ನು ರಚಿಸಿ ಆದೇಶ ಹೊರಡಿಸಿದ ಮೇಲೆ, ತನಿಖೆಯಿಂದ ಹೊರಗುಳಿಯುವ ಅವಕಾಶ ನೀಡುವ ಪ್ರತ್ಯೇಕ ನಿಯಮಗಳು ಅಖಿಲ ಭಾರತ ಸೇವಾ ನಿಯಮಗಳು ಮತ್ತು ರಾಜ್ಯ ಪೊಲೀಸ್ ಕೈಪಿಡಿಯಲ್ಲಿ ಇಲ್ಲ. ಆದರೆ, ಕರ್ತವ್ಯದ ವೇಳೆ ಪ್ರಭಾವಕ್ಕೆ ಒಳಗಾಗಬಾರದು ಎಂದು ಸೂಚಿಸುವ ನಿಯಮಗಳನ್ನು ಬಳಸಿಕೊಂಡೇ ಅಧಿಕಾರಿಗಳು ತನಿಖೆಯಿಂದ ಹಿಂದೆ ಸರಿಯುವ ಪರಿಪಾಟ ಇದೆ.

ಎಸ್‌ಐಟಿ

ಎಸ್‌ಐಟಿಯಿಂದ ಹಿಂದೆ ಸರಿಯಲು ಐಪಿಎಸ್ ಅಧಿಕಾರಿ ಸೌಮ್ಯಲತಾ ಹಾಗೂ ಮತ್ತೊಬ್ಬ ಐಪಿಎಸ್‌ಯೇತರ ಅಧಿಕಾರಿ ನಿರ್ಧರಿಸಿದ್ದಾರೆ. ಇಬ್ಬರು ಅಧಿಕಾರಿಗಳೂ ಮನವಿ ಪತ್ರದಲ್ಲಿ, ವೈಯಕ್ತಿಕ ಕಾರಣಗಳನ್ನು ಉಲ್ಲೇಖಿಸಿದ್ದಾರೆ ಎಂದು ಗೊತ್ತಾಗಿದೆ. ಈ ನಡೆ ಚರ್ಚೆಯ ವಸ್ತುವಾಗಿದೆ.

‘ಕರ್ತವ್ಯದ ವೇಳೆ ಅಧಿಕಾರಿಗಳು ಪ್ರಭಾವಕ್ಕೆ ಒಳಗಾಗಬಾರದು ಮತ್ತು ಪ್ರಭಾವಕ್ಕೆ ಒಳಗಾಗುವಂತಹ ಸ್ಥಿತಿಯನ್ನು ತಂದುಕೊಳ್ಳಬಾರದು ಎಂದು 1968ರ ಅಖಿಲ ಭಾರತ ಸೇವಾ ನಿಯಮದ ವಿವಿಧ ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ. ತನಿಖೆಯಿಂದ ಹಿಂದೆ ಸರಿಯಲು ಮನವಿ ಸಲ್ಲಿಸುವ ಅಧಿಕಾರಿಗಳು, ‘ಹಿತಾಸಕ್ತಿ ಸಂಘರ್ಷಕ್ಕೆ ಸಿಲುಕಬಹುದು ಅಥವಾ ಪ್ರಭಾವಕ್ಕೆ ಒಳಗಾಗಬಹುದು’ ಎಂದು ಉಲ್ಲೇಖಿಸುತ್ತಾರೆ. ಇದು ಪೊಲೀಸ್ ಇಲಾಖೆಯಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ’ ಎಂಬುದು ಕರ್ತವ್ಯನಿರತ ಐಪಿಎಸ್ ಅಧಿಕಾರಿಯೊಬ್ಬರ ವಿವರಣೆ.

ರಾಜ್ಯದ ‘ಹೈ-ಪ್ರೊಫೈಲ್’ ಪ್ರಕರಣವೊಂದರ ತನಿಖೆ ನಡೆಸುತ್ತಿರುವ ಈ ಅಧಿಕಾರಿಯು ತಮ್ಮ ಹೆಸರು ಬಹಿರಂಗಪಡಿಸಲು ಬಯಸಲಿಲ್ಲ.

‘ಕರ್ತವ್ಯ ನಿರ್ವಹಣೆ ವೇಳೆ ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗಬಾರದು ಎಂಬುದನ್ನು ಐಪಿಎಸ್ ಅಧಿಕಾರಿಗಳಿಗೆ ತರಬೇತಿಯ ವೇಳೆಯಲ್ಲಿಯೇ ಅಭ್ಯಾಸ ಮಾಡಿಸಲಾಗಿರುತ್ತದೆ. ವೈಯಕ್ತಿಕ ಕಾರಣ, ಸಾಮಾಜಿಕ ಒತ್ತಡಗಳನ್ನು ಹೇಗೆ ನಿರ್ವಹಿಸಬೇಕು ಮತ್ತು ತನಿಖೆ ವೇಳೆ ನಿಷ್ಠೆ, ಪ್ರಾಮಾಣಿಕತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳಬೇಕು ಎಂಬುದನ್ನು ಕಲಿಸಲಾಗಿರುತ್ತದೆ. ನಿರ್ದಿಷ್ಟವಾಗಿ, ಪೊಲೀಸ್ ಇಲಾಖೆ ಇಂತಹ ಬದ್ಧತೆಯನ್ನು ಬಯಸುತ್ತದೆ’ ಎಂದರು.

‘ವೈಯಕ್ತಿಕ, ಕೌಟುಂಬಿಕ ಹಾಗೂ ಧಾರ್ಮಿಕ ಸಂಬಂಧ ಎಂಬ ಕಾರಣ ಮುಂದೊಡ್ಡಿ ತನಿಖೆಯಿಂದ ಹಿಂದೆ ಸರಿದ ಹಲವು ಉದಾಹರಣೆಗಳು ಇವೆ. ಪೊಲೀಸ್ ಅಧಿಕಾರಿಗಳು ತಾವು ಕರ್ತವ್ಯ ನಿರ್ವಹಿಸುತ್ತಿರುವ ಠಾಣಾ ವ್ಯಾಪ್ತಿಯಲ್ಲಿ ತಮ್ಮ ಸಂಬಂಧಿಗಳ ವಿರುದ್ಧ ದೂರು ಬಂತೆಂದು ತನಿಖೆಯಿಂದ ಹಿಂದೆ ಸರಿಯುತ್ತಾ ಹೋದರೆ, ಕೆಲಸ ಮಾಡುವುದಾದರೂ ಹೇಗೆ? ಅಂತಹವರು ಪೊಲೀಸರಾಗಿ ಮುಂದುವರೆಯಲು ಅರ್ಹರೆ ಎಂಬ ಪ್ರಶ್ನೆಯನ್ನು ಎತ್ತಬೇಕಾಗುತ್ತದೆ’ ಎಂದು ಅವರು ಪ್ರತಿಪಾದಿಸಿದರು.

ನೈತಿಕತೆ, ಪ್ರಾಮಾಣಿಕತೆ ಪ್ರತಿಪಾದನೆ

ಅಖಿಲ ಭಾರತ ಸೇವಾ ನಿಯಮಗಳು–1968, ಐಪಿಎಸ್ ಅಧಿಕಾರಿಗಳಿಗೂ ಅನ್ವಯವಾಗುತ್ತದೆ. ಒಬ್ಬ ಅಧಿಕಾರಿ ಕರ್ತವ್ಯದ ವೇಳೆ ಹೇಗೆ ಇರಬೇಕು ಎಂಬುದನ್ನು ಈ ನಿಯಮಗಳಲ್ಲಿ ವಿವರಿಸಲಾಗಿದೆ.

ಕರ್ತವ್ಯದ ಸಂದರ್ಭದಲ್ಲಿ ಅಧಿಕಾರಿಯ ನಡೆಯು ನೈತಿಕವಾಗಿ ಉನ್ನತ ಮಟ್ಟದಲ್ಲಿ ಇರಬೇಕು ಮತ್ತು ಪ್ರಾಮಾಣಿಕವಾಗಿ ಇರಬೇಕು. ತಟಸ್ಥ ರಾಜಕೀಯ ನಿಲುವು ಹೊಂದಿರಬೇಕು. ಹೊಣೆಗಾರಿಕೆ ಮತ್ತು ಪಾರದರ್ಶಕತೆ ಕಾಪಾಡಿಕೊಳ್ಳಬೇಕು. ಪಕ್ಷಾತೀತವಾಗಿ ಕರ್ತವ್ಯ ನಿರ್ವಹಿಸಬೇಕು ಎಂಬುದನ್ನು ಈ ನಿಯಮದ 3.1(ಎ) ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಅಧಿಕಾರಿಯು ತನ್ನ ಕರ್ತವ್ಯಕ್ಕೆ ಸಂಬಂಧಿಸಿದಂತೆ ಆತನ ವೈಯಕ್ತಿಕ/ಖಾಸಗಿ ಹಿತಾಸಕ್ತಿಗಳು ಇದ್ದರೆ, ಅವುಗಳನ್ನು ಬಹಿರಂಗಪಡಿಸಬೇಕು. ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವಂತಿದ್ದರೆ, ಅವುಗಳನ್ನು ನಿವಾರಿಸಿಕೊಳ್ಳಬೇಕು ಎಂದು ಈ ನಿಯಮದ 3.2(5) ಸೆಕ್ಷನ್ ಹೇಳುತ್ತದೆ.

‘ಕಾರಣ ಒಪ್ಪಿಕೊಳ್ಳಬೇಕಾಗುತ್ತದೆ’

ಪತ್ರ ಬರೆದಿರುವ ಅಧಿಕಾರಿಗಳು ತನಿಖೆಯಲ್ಲಿ ಪರಿಣತಿ ಹೊಂದಿರಬಹುದು. ಈ ಕಾರಣಕ್ಕೆ ಅವರನ್ನು ನೇಮಿಸಿರುವ ಸಾಧ್ಯತೆ ಇದೆ. ಆದರೆ, ಯಾರನ್ನೇ ಆಗಲಿ ಒತ್ತಾಯ ಪೂರ್ವಕವಾಗಿ ತಂಡದಲ್ಲಿ ಮುಂದುವರಿಸಲು ಸಾಧ್ಯವಿಲ್ಲ. ಒತ್ತಾಯ ಮಾಡಿ ತಂಡಕ್ಕೆ ಸೇರಿಸಿಕೊಂಡಾಗ ತನಿಖೆಯ ಮೇಲೆ ಪರಿಣಾಮ ಬೀರಬಹುದು. ಇಬ್ಬರು ಅಧಿಕಾರಿಗಳು ವೈಯಕ್ತಿಕ ಕಾರಣ ನೀಡಿ ಹಿಂದೆ ಸರಿದಿರಬಹುದು. ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ರಾಜ್ಯದಲ್ಲಿ 100ಕ್ಕೂ ಹೆಚ್ಚು ಎಸ್‌ಪಿ ದರ್ಜೆಯ ಅಧಿಕಾರಿಗಳಿದ್ದಾರೆ. ಅವರಲ್ಲಿ ಯಾರನ್ನಾದರೂ ನೇಮಿಸಿಕೊಳ್ಳಬಹುದು.

ಎಸ್‌.ಟಿ.ರಮೇಶ್, ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ

‘ಮಾಹಿತಿ ನೀಡಬೇಕು’

ವೈಯಕ್ತಿಕ ಕಾರಣ ಅಥವಾ ತೊಂದರೆ ಇದ್ದರೆ ಯಾವುದೇ ತನಿಖಾ ತಂಡದಿಂದ ಹೊರಗೆ ಉಳಿಯಲು ಅಧಿಕಾರಿಗಳಿಗೆ ಅವಕಾಶವಿದೆ. ತಂಡದ ಮುಖ್ಯಸ್ಥರು ಅಥವಾ ಸರ್ಕಾರಕ್ಕೆ ಪತ್ರ ಬರೆದು ಮಾಹಿತಿ ನೀಡಬೇಕು. ಅದನ್ನು ಒಪ್ಪುವುದು ಅಥವಾ ಒಪ್ಪದೇ ಇರುವುದು ಸರ್ಕಾರಕ್ಕೆ ಬಿಟ್ಟ ವಿಚಾರ.

ಶಂಕರ ಬಿದರಿ, ನಿವೃತ್ತ ಪೊಲೀಸ್ ಮಹಾನಿರ್ದೇಶಕ

‘ಶಿಸ್ತು ಕ್ರಮಕ್ಕೆ ಅವಕಾಶವಿದೆ’

ಕೆಲವೊಂದು ಪ್ರಕರಣಗಳಲ್ಲಿ ಅನವಶ್ಯವಾಗಿ ಗುರಿ ಆಗಬೇಕಾಗುತ್ತದೆ ಎಂದು ಭಾವಿಸಿ ಎಸ್‌ಐಟಿಯಿಂದ ಅಧಿಕಾರಿಗಳು ಹಿಂದೆ ಸರಿಯುತ್ತಾರೆ. ಸರ್ಕಾರದ ಆದೇಶವನ್ನು ಉಲ್ಲಂಘಿಸಿ ತನಿಖಾ ತಂಡದಿಂದ ಹೊರಗುಳಿದರೆ ಅಂತಹ ಅಧಿಕಾರಿಯ ವಿರುದ್ಧ ಎಸ್‌ಐಟಿ ಮುಖ್ಯಸ್ಥರು ಡಿಜಿ–ಐಜಿಪಿ ಅವರಿಗೆ ಪತ್ರ ಬರೆಯಬೇಕು. ಆ ಪತ್ರ ಆಧರಿಸಿ ಗೃಹ ಇಲಾಖೆ ಕಾರ್ಯದರ್ಶಿ ಕ್ರಮ ಕೈಗೊಳ್ಳಬಹುದು. ಐಪಿಎಸ್‌ಯೇತರ ಅಧಿಕಾರಿ ಆಗಿದ್ದರೆ ಡಿಜಿ–ಐಜಿಪಿ ಅವರೇ ಶಿಸ್ತು ಕ್ರಮ ಕೈಗೊಳ್ಳಬಹುದು.

ಬಸವರಾಜ ಮಾಲಗತ್ತಿ, ನಿವೃತ್ತ ಪೊಲೀಸ್ ಅಧಿಕಾರಿ

ಬಹುಮಟ್ಟಿನ ಸಕಾರಣ ಅಗತ್ಯ

ಸರ್ಕಾರಿ ಅಧಿಕಾರಿಗಳು ತಮಗೆ ವಹಿಸಿದ ಕರ್ತವ್ಯ ನಿರ್ವಹಣೆಯಿಂದ ಹಿಂದೆ ಸರಿಯಬೇಕಾದರೆ ಅದಕ್ಕೆ ಸೂಕ್ತ ಮತ್ತು ಸಮರ್ಥನೀಯ ಕಾರಣಗಳಿರಬೇಕು. ಕರ್ತವ್ಯ ಮಾಡಲೇ ಬೇಕೆಂಬುದು ಕಾನೂನಿಗೆ ಸಮ್ಮತವಾದ ವಿಚಾರ. ಆದರೆ, ಅವರು ನಿರ್ವಹಿಸಬೇಕಾದ ಕರ್ತವ್ಯ ಅಥವಾ ನಿಗದಿತ ಜವಾಬ್ದಾರಿ ಅವರಿಗೆ ಮುಜುಗರ ಉಂಟು ಮಾಡುವಂತಿದ್ದರೆ, ಅಂತಹ ಸಂದರ್ಭಗಳಲ್ಲಿ ಪೊಲೀಸ್ ಅಧಿಕಾರಿಯ ಕರ್ತವ್ಯ ನಿರ್ವಹಣಾ ಜವಾಬ್ದಾರಿಯನ್ನು ಮುಂದುವರಿಸದಿರಬಹುದು. ತಮಗೆ ಈ ಜವಾಬ್ದಾರಿ ಬೇಡ ಎನ್ನುವ ಅಧಿಕಾರಿಯ ಕಾರಣಗಳನ್ನು ಇಂತಹ ಸಂದರ್ಭಗಳಲ್ಲಿ ಒಪ್ಪಬೇಕಾಗುತ್ತದೆ. ಅವರ ಕಾರಣಗಳನ್ನು ಉಪೇಕ್ಷಿಸಿ ತನಿಖೆಯಲ್ಲಿ ತೊಡಗಿಸಿದರೆ ತನಿಖೆ ಭಂಗಗೊಂಡು ಶಿಥಿಲಗೊಳ್ಳುವ ಎಲ್ಲಾ ಸಾಧ್ಯತೆಗಳಿರುತ್ತವೆ.

ಸಿ.ಎಚ್‌.ಹನುಮಂತರಾಯ, ಹೈಕೋರ್ಟ್ ಹಿರಿಯ ವಕೀಲರು

‘ಹಿತಾಸಕ್ತಿ ಬಳಲಬಾರದು’

ಅಧಿಕಾರಿಗಳು ತಮಗೆ ನಿರ್ವಹಿಸಿದ ಜವಾಬ್ದಾರಿಯಿಂದ ಹಿಂದೆ ಸರಿಯುತ್ತೇವೆ ಎಂದು ಸಾಮಾನ್ಯವಾಗಿ ಕೇಳುವಂತಿಲ್ಲ. ಒಂದು ವೇಳೆ ಅಧಿಕಾರಿ ಸ್ಥಳೀಯರೇ ಆಗಿದ್ದರೆ, ಆ ನಿರ್ದಿಷ್ಟ ಜವಾಬ್ದಾರಿ ಮುಜುಗರ ಉಂಟು ಮಾಡುವಂತಿದ್ದರೆ ಅಥವಾ ಕಷ್ಟದಾಯಕವಾಗಿ ಇದೆ ಎಂದಾದರೆ ಕೇಳಬಹುದು. ಸರಿಯಾದ ಕಾರಣ ಇಲ್ಲದೆ ತನಿಖೆ ಜವಾಬ್ದಾರಿ ತನಗೆ ಬೇಡ ಎಂದರೆ ಒಪ್ಪಲು ಆಗದು. ಆದಾಗ್ಯೂ, ಬೇಡ ಎಂದವರನ್ನು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಂತೆ ಆದೇಶಿಸಿದರೆ ಸಾರ್ವಜನಿಕ ಹಿತಾಸಕ್ತಿ ಬಳಲುತ್ತದೆ.

ಪಿ.ಎಸ್‌.ರಾಜಗೋಪಾಲ್, ಪದಾಂಕಿತ ಹಿರಿಯ ವಕೀಲರು

ದೇಶ ವಿರೋಧಿ ಪೋಸ್ಟ್: ಬಾಲಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಕೆಜಿಎಫ್: ಸಾಮಾಜಿಕ ಜಾಲತಾಣಗಳಲ್ಲಿ ದೇಶ ವಿರೋಧಿ ಚಟುವಟಿಕೆಗೆ ಸಂಬಂಧಿಸಿದ ಪೋಸ್ಟ್ ಹಾಕಿದ ಆರೋಪದ ಮೇಲೆ 15 ವರ್ಷದ ಬಾಲಕನನ್ನು ಬೇತಮಂಗಲ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಉಗ್ರಗಾಮಿ ಚಟುವಟಿಕೆಗಳಲ್ಲಿ ಆಸಕ್ತಿ ತೋರುವಂತಹ ಸಂದೇಶ, ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದ ಬಾಲಕನ ಪೋಸ್ಟ್‌ಗಳ ಮೇಲೆ ಗುಪ್ತಚರ ಇಲಾಖೆ ಕಣ್ಣಿಟ್ಟಿತ್ತು.

ಬಾಲಕನನ್ನು ಪತ್ತೆ ಹಚ್ಚಿದ ಗುಪ್ತಚರ ಇಲಾಖೆಯ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು, ಸ್ಥಳೀಯ ಪೊಲೀಸರ ಜೊತೆಗೂಡಿ ತನಿಖೆ ಕೈಗೊಂಡಿದ್ದಾರೆ. ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕ ಮೂಲತಃ ಆಂಧ್ರಪ್ರದೇಶದವನಾಗಿದ್ದು ಬೆಂಗಳೂರಿನ ಮಾಂಸದ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಈಚೆಗೆ ತಾಲ್ಲೂಕಿನ ಬೇತಮಂಗಲ ಸಮೀಪದ ಮಾಂಸದ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಎಂದು ತಿಳಿದುಬಂದಿದೆ.

ಗುಪ್ತಚರ ಇಲಾಖೆಯ ಮಾಹಿತಿ ಅನ್ವಯ ಬಾಲಕನ ವಿಚಾರಣೆ ನಡೆದಿದೆ. ಆತನ ಮೊಬೈಲ್ ವಶಪಡಿಸಿಕೊಂಡು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಿ ಮಾಹಿತಿ ಪಡೆಯಲಾಗುವುದು

ಶಿವಾಂಶು ರಜಪೂತ್
ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ

ಒಡೆಯರ್‌ಗೆ ಹೋಲಿಕೆ: ಬಿಜೆಪಿ ಆಕ್ರೋಶ

ಬೆಂಗಳೂರು/ ಮೈಸೂರು: ‘ಮೈಸೂರಿನ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ಹೆಚ್ಚಿನ ಕೆಲಸವನ್ನು ನಮ್ಮ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಡಿದ್ದಾರೆ’ ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ನೀಡಿದ್ದ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ನಾಯಕರು, ಕ್ಷಮೆ ಕೋರುವಂತೆ ಆಗ್ರಹಿಸಿದ್ದಾರೆ.

‘ಹುಚ್ಚು ಹೇಳಿಕೆ ಸಲ್ಲದು’

ನಾಲ್ವಡಿ ಕೃಷ್ಣರಾಜ ಒಡೆಯರ್ ಜತೆಗೆ ಸಿದ್ದರಾಮಯ್ಯ ಜತೆ ಹೋಲಿಕೆ ಸಲ್ಲದು. ಹುಚ್ಚು ಹೇಳಿಕೆ ನೀಡುವ ಮೂಲಕ ತಮ್ಮ ತಂದೆ ಸಿದ್ದರಾಮಯ್ಯ ಅವರನ್ನು ಅಟ್ಟಕ್ಕೇರಿಸುವ ಕೆಲಸವನ್ನು ಯತೀಂದ್ರ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಒಡೆಯರ್ ಅವರ ಇತಿಹಾಸವನ್ನು ಓದಿರುವ ಜನರು ಸಿದ್ದರಾಮಯ್ಯ ಅವರ ವ್ಯಕ್ತಿತ್ವವನ್ನೂ ನೋಡಿದ್ದಾರೆ. ಇಂತಹ ಹೇಳಿಕೆಗಳಿಂದ ಅವರಿಗೂ ಪ್ರಯೋಜನ ಇಲ್ಲ, ರಾಜ್ಯಕ್ಕೂ ಪ್ರಯೋಜನ ಇಲ್ಲ ಎಂದರು.

‘ಶ್ವೇತಪತ್ರ ಹೊರಡಿಸಿ’

ಮೈಸೂರು: ‘ರಾಜ್ಯ ಸರ್ಕಾರದಿಂದ ಆಗಿರುವ ಅಭಿವೃದ್ಧಿಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ವೇತಪತ್ರ ಹೊರಡಿಸಲಿ, ನಂತರ ನಮ್ಮನ್ನು ಚರ್ಚೆಗೆ ಆಹ್ವಾನಿಸಲಿ’ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸವಾಲು ಹಾಕಿದರು.

‘ಮೈಸೂರಿಗೆ ನಾಲ್ವಡಿಗಿಂತಲೂ ಸಿದ್ದರಾಮಯ್ಯ ಕೊಡುಗೆ ಜಾಸ್ತಿ’ ಎಂಬ ಯತೀಂದ್ರ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಯಾರು ಯಾರಿಗೂ ಹೋಲಿಸಿ ಮಾತನಾಡುವುದು ಸರಿಯಲ್ಲ’ ಎಂದು ಹೇಳಿದರು.

ಚಾಮುಂಡಿಗಿಂತ ದೊಡ್ಡವರು ಎನ್ನುತ್ತಾರೆ: ಪ್ರತಾಪ ಸಿಂಹ

ಮೈಸೂರು: ‘ನಾನು ದೇವರಾಜ ಅರಸುಗಿಂತ ದೊಡ್ಡವ ಎಂದು ಸಿದ್ದರಾಮಯ್ಯ ಹೇಳುತ್ತಿದ್ದರು. ಈಗ ನಾಲ್ವಡಿ ಕೃಷ್ಣರಾಜ ಒಡೆಯರ್‌ಗಿಂತಲೂ ದೊಡ್ಡವರಾಗಿದ್ದಾರೆ. ಮುಖ್ಯಮಂತ್ರಿಯಾಗಿ 10 ವರ್ಷ ಪೂರೈಸಿಬಿಟ್ಟರೆ, ನಾಡದೇವತೆ ಚಾಮುಂಡಿಗಿಂತಲೂ ದೊಡ್ಡವನು ಎಂದುಬಿಡುತ್ತಾರೆ’ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಟೀಕಿಸಿದರು.

ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಿಮ್ಮಪ್ಪನ ಕೊಡುಗೆ ಏನು ಹೇಳಿ?’ ಎಂದರು.

‘ಇವರಿಗೆ ಕೆ.ಆರ್. ಆಸ್ಪತ್ರೆಗೆ ಸುಣ್ಣ ಬಳಿಸಲೂ ಆಗಿಲ್ಲ. ಮುಡಾ ನಿವೇಶನ ಹೊಡೆದದ್ದೇ ಕೊಡುಗೆಯೇ? ಉಡಾಫೆ ಮಾತನಾಡಿಕೊಂಡು ಓಡಾಡಿದ್ದೇ ಸಿ.ಎಂ ಸಾಧನೆ. ಯಾರ್‍ಯಾರು ಏನೇನು ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ಚರ್ಚಿಸೋಣ. ಮುಖ್ಯಮಂತ್ರಿಯೇ ವೇದಿಕೆ ಸಿದ್ಧಮಾಡಲಿ’ ಎಂದರು.

ಕೂಡಲೇ ಕ್ಷಮೆ ಯಾಚಿಸಲಿ: ಅಶೋಕ

‘ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಳೇ ಮೈಸೂರು ಭಾಗದಲ್ಲಿ ಮಾಡಿದ ಒಳ್ಳೆಯ ಕೆಲಸಗಳಿಂದಾಗಿ ಜನರು ಇಂದಿಗೂ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಅವರನ್ನು ರಾಜಕಾರಣಿಗಳಿಗೆ ಹೋಲಿಸುವುದು ಸರಿಯಲ್ಲ. ಯತೀಂದ್ರ ಅವರು ಕೂಡಲೇ ಕ್ಷಮೆ ಕೇಳಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಚಿನ್ನಾಭರಣ ಅಡವಿಟ್ಟು ನಿರ್ಮಿಸಿದ ಕೆಆರ್‌ಎಸ್ ಜಲಾಶಯ ಆ ಭಾಗದ ಜನರಿಗೆ ಜೀವಜಲ. ಕೈಗಾರಿಕೆ, ವಿಶ್ವವಿದ್ಯಾಲಯಗಳ ಸ್ಥಾಪನೆ ಸೇರಿದಂತೆ ಹಲವು ಜನಪರ ಕಾರ್ಯಗಳನ್ನು ಮಾಡಿದ ಒಡೆಯರ್ ಅವರನ್ನು ಮೈಸೂರು ಪ್ರಾಧಿಕಾರದಿಂದ 14 ಸೈಟು ಪಡೆದವರಿಗೆ ಹೋಲಿಕೆ ಮಾಡಬಾರದು. ಯತೀಂದ್ರ ಸಿದ್ದರಾಮಯ್ಯ ಅವರು ಮಹಾರಾಜರ ಕುಟುಂಬಕ್ಕೆ ಅಪಮಾನ ಮಾಡಿದ್ದಾರೆ’ ಎಂದು ದೂರಿದರು.

ಯತೀಂದ್ರ ಇನ್ನೂ ಬೆಳೆಯುವ ಹುಡುಗ. ಈಗಲೇ ಈ ಥರದ ದುರಹಂಕಾರದ ಮಾತು ಸರಿಯಲ್ಲ. ನಾಲ್ವಡಿ ಅವರದ್ದಿರಲಿ, ಸಿದ್ದರಾಮಯ್ಯ ಆಡಳಿತವು ದೇವರಾಜ ಅರಸು, ಎಸ್‌.ಎಂ. ಕೃಷ್ಣ ಆಡಳಿತಕ್ಕೂ ಸಮವಿಲ್ಲ

ಎ.ಎಚ್‌. ವಿಶ್ವನಾಥ್, ವಿಧಾನಪರಿಷತ್ ಸದಸ್ಯ

‘ಆರ್‌ಡಿಪಿಆರ್ ಅಧಿಕಾರಿ, ನೌಕರರಿಗೆ ಬಡ್ತಿ ಮೀಸಲಾತಿ’

ಮೈಸೂರಿನ ಸೆನೆಟ್ ಭವನದಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕಲ್ಯಾಣ ಸಂಘದ ಉದ್ಘಾಟನೆ ಹಾಗೂ ಸಮಾವೇಶದಲ್ಲಿ ನೂರಾರು ಮಂದಿ ಸದಸ್ಯರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕಲ್ಯಾಣ ಸಂಘ ಅಸ್ತಿತ್ವಕ್ಕೆ ಬಂದಿದೆ.

ಸಂಘದ ಉದ್ಘಾಟನೆ ಹಾಗೂ ನೌಕರರ ಸಮಾವೇಶ ಇಲ್ಲಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಶನಿವಾರ ಅದ್ದೂರಿಯಾಗಿ ನಡೆಯಿತು. ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ನೌಕರರು ಪಾಲ್ಗೊಂಡಿದ್ದರು.

ಸಂಘದ ಉದ್ಘಾಟನೆ ನೆರವೇರಿಸಿದ ಸಮಾಜಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಮಾತನಾಡಿ, ‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರಿಗೆ ಬಡ್ತಿ ಮೀಸಲಾತಿ ಕೊಡಿಸಲಾಗುವುದು. ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಚರ್ಚಿಸಿ ಬೇಡಿಕೆ ಈಡೇರಿಕೆಗೆ ಕ್ರಮ ವಹಿಸಲಾಗುವುದು’ ಎಂದು ಭರವಸೆ ನೀಡಿದರು.

‘ಗ್ರಾಮ ಸಭೆಗಳಲ್ಲಿ ನಮ್ಮ ಜಾತಿ–ಪಕ್ಷದವನು ಎನ್ನುವ ರೀತಿಯಲ್ಲಿ ಚರ್ಚೆ, ಜಂಗೀಕುಸ್ತಿ ನಡೆಯುತ್ತದೆಯೇ ಹೊರತು ರಚನಾತ್ಮಕ ಚರ್ಚೆ ಆಗುತ್ತಿಲ್ಲ’ ಎಂದು ವಿಷಾದ ವ್ಯಕ್ತಪಡಿಸಿದರು. ‘ಗ್ರಾಮ ಪಂಚಾಯಿತಿಗಳಲ್ಲಿನ ಆಡಳಿತ ಪಾರದರ್ಶಕವಾಗಿ ನಡೆಯಬೇಕು. ತುಳಿತಕ್ಕೆ ಒಳಗಾದವರನ್ನು ಮೇಲೆತ್ತುವ ಕೆಲಸ ಆಗಬೇಕು’ ಎಂದು ಹೇಳಿದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಎ.ಆರ್. ಕೃಷ್ಣಮೂರ್ತಿ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಯುಕೇಶ್ ಕುಮಾರ್, ಸಂಘದ ರಾಜ್ಯಾಧ್ಯಕ್ಷ ಎಂ.ಸುರೇಶ್‌ಕುಮಾರ್ ಹಾಗೂ ಜಿಲ್ಲಾ ಅಧ್ಯಕ್ಷ ಪ್ರಕಾಶ ಸಿ. ಪಾಲ್ಗೊಂಡಿದ್ದರು.

ಯೂರಿಯಾ ಕೊರತೆ: ನಡ್ಡಾಗೆ ಸಿ.ಎಂ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ರಸಗೊಬ್ಬರ ಕೊರತೆ ಉಂಟಾಗಿದ್ದು, ಕೇಂದ್ರ ಸರ್ಕಾರ ಹಂಚಿಕೆ ಮಾಡಿದ ಪ್ರಕಾರ ಯೂರಿಯಾ ಗೊಬ್ಬರ ಪೂರೈಸಲು ಕೆಲವು ರಸಗೊಬ್ಬರ ಕಂಪನಿಗಳು ಮುಂದೆ ಬಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ಈ ಕುರಿತು ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದಿರುವ ಮುಖ್ಯಮಂತ್ರಿ, ‘ಕೇಂದ್ರ ಸರ್ಕಾರ 2025ರ ಮುಂಗಾರು ಬೆಳೆಗೆ ರಾಜ್ಯಕ್ಕೆ 11.17 ಲಕ್ಷ ಟನ್ ಯೂರಿಯಾ ಹಂಚಿಕೆ ಮಾಡಿದೆ. ಈವರೆಗೆ ಕೇವಲ 5,16,959 ಟನ್ ರಸಗೊಬ್ಬರ ಪೂರೈಕೆ ಆಗಿದೆ. ಯೂರಿಯಾ ಕೊರತೆಯು ರೈತರಲ್ಲಿ ಆತಂಕವನ್ನು ಸೃಷ್ಟಿಸುತ್ತಿದೆ’ ಎಂದಿದ್ದಾರೆ.

‘ಏಪ್ರಿಲ್‌ನಿಂದ ಜುಲೈವರೆಗೆ ರಾಜ್ಯಕ್ಕೆ 6,80,655 ಟನ್ ಯೂರಿಯಾದ ಅವಶ್ಯ ಇದೆ. ಕೊರತೆ ಆಗಿರುವ 1,65,541 ಟನ್ ಯೂರಿಯಾ ಪೂರೈಕೆಯನ್ನು ತ್ವರಿತಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಯೂರಿಯಾ ಪೂರೈಕೆಯ ತುರ್ತು ಅವಶ್ಯವಿದೆ. ಏಕೆಂದರೆ ಕರ್ನಾಟಕಕ್ಕೆ ಈ ವರ್ಷದ ಆರಂಭದಲ್ಲಿಯೇ ಮುಂಗಾರು ಪ್ರವೇಶ ಮಾಡಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ವಿವಿಧ ಬೆಳೆಗಳ ವ್ಯಾಪ್ತಿ ಹೆಚ್ಚಾಗಿದೆ. ತುಂಗಭದ್ರಾ, ಕಾವೇರಿ ಮತ್ತು ಕೃಷ್ಣಾ ನದಿಗಳ ಆಯಕಟ್ಟಿನ ಪ್ರದೇಶಗಳಲ್ಲಿ ನೀರನ್ನು ಮೊದಲೇ ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಗಮನ ಸೆಳೆದಿದ್ದಾರೆ.

‘ಹೆಚ್ಚಿನ ಗೊಬ್ಬರ ಬಳಸುವ ಬೆಳೆಯಾದ ಮೆಕ್ಕೆಜೋಳದ ವಿಸ್ತೀರ್ಣವು ಸುಮಾರು 2 ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚಾಗಿದೆ. ದ್ವಿದಳ ಧಾನ್ಯಗಳ ವಿಸ್ತೀರ್ಣವು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಕಡಿಮೆ ಆಗಿದೆ’ ಎಂದೂ ಅವರು ತಿಳಿಸಿದ್ದಾರೆ.

ಬಿತ್ತನೆಬೀಜ, ರಸಗೊಬ್ಬರಕ್ಕೂ ಮಧ್ಯವರ್ತಿಗಳು: ವಿಜಯೇಂದ್ರ

ಬೆಂಗಳೂರು: ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಬಿತ್ತನೆ ಬೀಜ, ರಸಗೊಬ್ಬರಕ್ಕೂ ಮಧ್ಯವರ್ತಿಗಳು ಹುಟ್ಟಿಕೊಳ್ಳುತ್ತಾರೆ. ಕೃತಕ ಅಭಾವ ಸೃಷ್ಟಿಸುತ್ತಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ಸರ್ಕಾರ ರಸಗೊಬ್ಬರ ಸಂಗ್ರಹಕ್ಕೆ ಪೂರ್ವಸಿದ್ಧತೆ ಮಾಡಿಕೊಂಡಿಲ್ಲ. ಯಾವ ಜಿಲ್ಲೆಗೆ ಎಷ್ಟು ಗೊಬ್ಬರದ ಅಗತ್ಯವಿದೆ ಎಂಬ ಮಾಹಿತಿಯೇ ಇಲ್ಲ. ಲೆಕ್ಕಾಚಾರ ಇಲ್ಲದೇ ರೈತರಿಗೆ ಆತಂಕದ ಸ್ಥಿತಿ ಉಂಟಾಗಿದೆ. ಇಂತಹ ಸ್ಥಿತಿಯ ಲಾಭ ಪಡೆದ ಮಧ್ಯವರ್ತಿಗಳು ಕೃತಕ ಅಭಾವ ಸೃಷ್ಟಿಸಿ, ಅಧಿಕ ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂದರು.

‘ರಸಗೊಬ್ಬರ ದಾಸ್ತಾನಿದೆ. ಕೊರತೆ ಇಲ್ಲ’ ಎಂದು ಕೃಷಿ ಸಚಿವರು ಹೇಳಿದ್ದಾರೆ. ಹಾಗಾದರೆ ರೈತರು ಏಕೆ ಹೋರಾಟ ನಡೆಸುತ್ತಿದ್ದಾರೆ? ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ. ಮುಂಗಾರು 25 ದಿನಗಳು ಮೊದಲೇ ಆರಂಭವಾದರೂ, ಸರ್ಕಾರ ನಿರ್ಲಕ್ಷ್ಯ ಮಾಡಿದೆ. ಈಗ ಕೇಂದ್ರ ಸಹಕಾರ ನೀಡುತ್ತಿಲ್ಲ ಎನ್ನುತ್ತಿದ್ದಾರೆ. ರಾಜ್ಯದ ನಿರೀಕ್ಷೆ ಇದ್ದದ್ದು 6,31,000 ಟನ್, ಜುಲೈ ಅಂತ್ಯಕ್ಕೆ ಕೇಂದ್ರದಿಂದ ಬಂದಿರುವುದು 8,73,000 ಟನ್. ರಾಜ್ಯ ಸರ್ಕಾರ ಸಲ್ಲಿಸಿದ ಬೇಡಿಕೆಗಿಂತ ಹೆಚ್ಚು ರಸಗೊಬ್ಬರ ರಾಜ್ಯಕ್ಕೆ ಬಂದಿದೆ ಎಂದು ಹೇಳಿದರು.

ಸಿಗದ ಯೂರಿಯಾ: ಮಣ್ಣು ತಿಂದ ರೈತ

ಕೊಪ್ಪಳ: ದಿನಪೂರ್ತಿ ಕಾದರೂ ಯೂರಿಯಾ ರಸಗೊಬ್ಬರ ಸಿಗದಿದ್ದಕ್ಕೆ ತಾಲ್ಲೂಕಿನ ಕುಣಿಕೇರಿ ತಾಂಡಾದ ರೈತ ಚಂದ್ರಪ್ಪ ಬಡಿಗಿ ಶನಿವಾರ ಮಣ್ಣು ತಿಂದು ಆಕ್ರೋಶ ಹೊರಹಾಕಿದ್ದಾರೆ. ‘ಯೂರಿಯಾ ರಸಗೊಬ್ಬರ ಸಿಗದಿದ್ದರೆ ಮಣ್ಣು ತಿನ್ನಬೇಕೇನು, ಬಡವರು ಏನು ಮಾಡಬೇಕು? ಚೆನ್ನಾಗಿ ಮಳೆಯಾಗಿದೆ. ಗೊಬ್ಬರವಿಲ್ಲವೆಂದರೆ ಹೇಗೆ?’ ಎಂದು ಪ್ರಶ್ನಿಸಿದ ಚಂದ್ರಪ್ಪ ಅವರು ಮಣ್ಣು ತಿಂದರು.

‘ಮಹಾಜನ ವರದಿ ಒಪ್ಪಿ, ಇಲ್ಲ ಸುಮ್ಮನಿರಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ಕುರಿತು ಸುಪ್ರೀಂ ಕೋರ್ಟಿನಲ್ಲಿ ನಡೆಯುತ್ತಿರುವ ಪ್ರಕರಣದ ಬಗ್ಗೆ ಕನ್ನಡಿಗರು ಆತಂಕಪಡುವ ಅಗತ್ಯವಿಲ್ಲ. ಒಪ್ಪಿದರೆ ಮಹಾಜನ ವರದಿ ಒಪ್ಪಬೇಕು; ಇಲ್ಲದಿದ್ದರೆ ಯಥಾಸ್ಥಿತಿ ಮುಂದುವರಿಯಬೇಕು ಎಂಬುದು ರಾಜ್ಯದ ದೃಢ ನಿರ್ಧಾರವಾಗಿದೆ’ ಎಂದು ಗಡಿ ಉಸ್ತುವಾರಿ ಸಚಿವರೂ ಆಗಿರುವ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

ನಗರದಲ್ಲಿ ಶನಿವಾರ ಗಡಿ ಭಾಗದ ಕನ್ನಡರ ಸಂಘಟನೆಗಳ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ‘ದೇಶದ ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಿ ಮಹಾಜನ ಆಯೋಗ ರಚನೆಗೆ ನಮ್ಮ ಸರ್ಕಾರ ಒಪ್ಪಿಕೊಂಡಿದೆ. ಮಹಾಜನ ವರದಿಯೇ ಅಂತಿಮ. ಅದನ್ನು ಮಹಾರಾಷ್ಟ್ರ ಒಪ್ಪದಿದ್ದರೆ ವ್ಯತ್ಯಾಸವೇನೂ ಆಗುವುದಿಲ್ಲ’ ಎಂದರು.

ಹೆಣ್ಣು ಹುಲಿ ‘ಸಿಂಧು’ ಸಾವು

ಹೊಸಪೇಟೆ (ವಿಜಯನಗರ): ಕಮಲಾಪುರದಲ್ಲಿನ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ಮೃಗಾಲಯದಲ್ಲಿನ ‘ಸಿಂಧು’ ಹೆಸರಿನ ಹೆಣ್ಣು ಹುಲಿ ವಯೋಸಹಜ ಕಾಯಿಲೆಯಿಂದ ಶನಿವಾರ ಸತ್ತಿದೆ. ಈ ಹುಲಿಗೆ ಅಂದಾಜು 17 ರಿಂದ 18 ವರ್ಷ ವಯಸ್ಸಾಗಿದ್ದು, ಚಿಕಿತ್ಸೆಗೆ ಸ್ಪಂದಿಸದೆ ವಯೋಸಹಜವಾಗಿ ಮೃತಪಟ್ಟಿದೆ ಎಂದು ಉಪಸಂರಕ್ಷಣಾಧಿಕಾರಿ ಹಾಗೂ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಶ್ ನಾಯ್ಕ ತಿಳಿಸಿದ್ದಾರೆ.

ಹೆಣ್ಣುಮಕ್ಕಳಿಗೆ ಶಾಪವಾದ ಉನ್ನತ ಶಿಕ್ಷಣ: ‘ಸಂಸ್ಕಾರ ಭಾರತೀಯ’ ಸುಚೇಂದ್ರ ಪ್ರಸಾದ್

‘ಭಯ ಹುಟ್ಟಿಸುತ್ತಿರುವ ನಾರಿಯರ ನಡೆ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಭಾರತೀಯ ನಾರಿ–ವ್ಯಕ್ತಿ ಮತ್ತು ಶಕ್ತಿ’ ಸಮ್ಮೇಳನದಲ್ಲಿ ಹೇಳಿಕೆ
- ಏಕಾಂಗಿ ಜೀವನ ಸಾಗಿಸುವವರ ಸಂಖ್ಯೆ ಹೆಚ್ಚುತ್ತಿದೆ

ಬೆಂಗಳೂರು: ‘ಕೌಟುಂಬಿಕ ಚೌಕಟ್ಟು ಮೀರಿರುವ ಆಧುನಿಕ ಹೆಣ್ಣು ಮಕ್ಕಳಿಗೆ ಕುಂಕುಮ ನೀಡಲೂ ಯೋಚಿಸಬೇಕಾದ ಪರಿಸ್ಥಿತಿ ಇದೆ. ಸಂಸ್ಕಾರಕ್ಕೆ ಹೆಸರಾಗಿದ್ದ ಭಾರತೀಯ ನಾರಿಯರು, ಈಗ ಸಮಾನತೆಯ ಹೆಸರಿನಲ್ಲಿ ಸಾಗುತ್ತಿರುವ ಪರಿ ಭಯ ಹುಟ್ಟಿಸುತ್ತಿದೆ’ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಶರ್ಮಾ ಹೇಳಿದರು.

ಅಹಲ್ಯಾ ಶರ್ಮಾ

ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಭಾರತೀಯ ನಾರಿ–ವ್ಯಕ್ತಿ ಮತ್ತು ಶಕ್ತಿ’ ಪ್ರಾಂತ ಮಾತೃಶಕ್ತಿ ಸಮ್ಮೇಳನದಲ್ಲಿ ಮಾತನಾಡಿದರು.

‘ಹೆಣ್ಣು ಮಕ್ಕಳಿಗೆ ಕೌಟುಂಬಿಕ ಚೌಕಟ್ಟು ಅಗತ್ಯ. ಇಲ್ಲವಾದಲ್ಲಿ ಸ್ವಾತಂತ್ರ್ಯ ಸ್ವೇಚ್ಛೆಯಾಗುವ ಸಾಧ್ಯತೆ ಇರುತ್ತದೆ. ಅದನ್ನು ಇತ್ತೀಚೆಗೆ ಕಾಣುತ್ತಿದ್ದೇವೆ. ಮನೆಯಿಂದಲೇ ಕೆಲಸ ಮಾಡುವ (ವರ್ಕ್ ಫ್ರಮ್ ಹೋಮ್) ಸಂಸ್ಕೃತಿ ಬಂದ ಬಳಿಕ ಕೌಟುಂಬಿಕ ಸಂಬಂಧಗಳು ಕಳಚಿ ಹೋಗುತ್ತಿವೆ. ಕಚೇರಿಯ ಸಭೆಗಳಿದ್ದಲ್ಲಿ ಹಬ್ಬಗಳನ್ನು ಆಚರಿಸಲೂ ಸಮಯ ಇಲ್ಲವಾಗುತ್ತಿದೆ. ಸುಖದ ಪರಿಕಲ್ಪನೆಯೂ ಬದಲಾಗಿದ್ದು, ಎಲ್ಲವನ್ನೂ ದುಡ್ಡಿನಿಂದಲೇ ಅಳೆಯಲಾಗುತ್ತಿದೆ. ಮನೆಗಳನ್ನು ತಾರಾ ಹೋಟೆಲ್‌ಗಳ ಮಾದರಿ ನಿರ್ಮಿಸಿ, ಬೃಹತ್ ಕೊಠಡಿಗಳಲ್ಲಿ ಏಕಾಂಗಿ ಜೀವನ ಸಾಗಿಸುವವರ ಸಂಖ್ಯೆ ಹೆಚ್ಚುತ್ತಿದೆ’ ಎಂದು ಅಭಿಪ್ರಾಯಪಟ್ಟರು.

‘ರೀಲ್ಸ್‌ಗಳಲ್ಲಿ ಪತಿಯನ್ನು ಬೈಯುವುದು ಕಾಣುತ್ತಿದ್ದೇವೆ. ಸಮಾನತೆ ಬೇಕಾದರೂ, ಈ ರೀತಿಯ ನಡೆಯಿಂದಾಗಿ ಸಮಾಜ ಎತ್ತ ಸಾಗುತ್ತಿದೆಯೆಂಬ ಪ್ರಶ್ನೆ ಕಾಡುತ್ತಿದೆ’ ಎಂದರು.

ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತಾಧ್ಯಕ್ಷ ಸುಚೇಂದ್ರ ಪ್ರಸಾದ್, ‘ಹೆಣ್ಣು ಮಕ್ಕಳಿಗೆ ವರವಾಗಬೇಕಾಗಿದ್ದ ಉನ್ನತ ಶಿಕ್ಷಣ ಶಾಪವಾದಂತೆ ಭಾಸವಾಗುತ್ತಿದೆ. ನಾವು ಪರಸ್ಪರ ಅವಲಂಬಿತರೆಂದು ಸಮಾಜ ವಿಜ್ಞಾನ ಹೇಳುತ್ತದೆ. ಆದರೆ, ನಾವು ಯಾರನ್ನೂ ಅವಲಂಬಿಸುವುದಿಲ್ಲ ಎಂದರೆ ಹೇಗೆ? ಸಮೀಕ್ಷೆಯೊಂದರ ಪ್ರಕಾರ ಮುಂದಿನ ದಿನಗಳಲ್ಲಿ ಅವಿವಾಹಿತ ಯುವತಿಯರ ಸಂಖ್ಯೆ ಹೆಚ್ಚಳವಾಗಲಿದೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ದೊಡ್ಡ ದೊಡ್ಡ ಪ್ಯಾಕೇಜ್ ಪಡೆಯುವ ಅವರು, ವಿವಾಹ ಮತ್ತು ಮಕ್ಕಳು ಪಡೆಯುವುದರಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿರುವ ಬಗ್ಗೆಯೂ ಸಮೀಕ್ಷಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಾವು ಈಗ ಸ್ಥಿತ್ಯಂತರ ಕಾಲಘಟ್ಟದಲ್ಲಿದ್ದು, ಮೌಲ್ಯಾಧರಿತ ಕುಟುಂಬಕ್ಕೆ ಮಾತೃಶಕ್ತಿ ಅಗತ್ಯ’ ಎಂದು ಹೇಳಿದರು.

ಸಂಸ್ಕಾರ ಭಾರತೀಯ ಬೆಂಗಳೂರು ದಕ್ಷಿಣದ ಅಧ್ಯಕ್ಷೆ ಕರುಣಾ ವಿಜಯೇಂದ್ರ, ‘ಕಾಲೇಜು ಯುವತಿಯರಿಗೆ ಹಾಗೂ ವೈವಾಹಿಕ ಜೀವನಕ್ಕೆ ಕಾಲಿಡುತ್ತಿರುವವರಿಗೆ ಸೂಕ್ತ ಮಾರ್ಗದರ್ಶನ ಅಗತ್ಯ’ ಎಂದು ಅಭಿಪ್ರಾಯಪಟ್ಟರು.

ನಾಗರಾಜ ರಾವ್‌ಗೆ ಸೇಡಿಯಾಪು ಪ್ರಶಸ್ತಿ

ಉಡುಪಿ: ಲೇಖಕ ಎಚ್.ವಿ. ನಾಗರಾಜ ರಾವ್ ಅವರು 2025ನೇ ಸಾಲಿನ ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಆ.16 ರಂದು ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಆಡಳಿತಾಧಿಕಾರಿ ಡಾ. ಬಿ. ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ನೌಕರನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿದ ಆರೋಪದ ಮೇಲೆ ಅಮಾನತು ಆಗಿರುವ ಕೆಎಸ್‌ಆರ್‌ಟಿಸಿ ಲೆಕ್ಕಪತ್ರ ವಿಭಾಗದ ಕಿರಿಯ ಸಹಾಯಕ ಕಂ ಡಾಟಾ ಎಂಟ್ರಿ ಆಪರೇಟರ್ ರಿಚರ್ಡ್ ಜೆ. ವಿರುದ್ಧ ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಎಸ್‌ಆರ್‌ಟಿಸಿ ಸಿಬ್ಬಂದಿ ವರ್ಗಾವಣೆಗಾಗಿ ಮತ್ತು ವಜಾಗೊಂಡ ನೌಕರನ ಪುನರ್ ನೇಮಕಕ್ಕಾಗಿ ರಿಚರ್ಡ್ ನಕಲಿ ದಾಖಲೆ ಸೃಷ್ಟಿಸಿರುವುದು ಪತ್ತೆಯಾಗಿದ್ದರಿಂದ ಜುಲೈ 24ರಂದು ಕೆಎಸ್‌ಆರ್‌ಟಿಸಿ ಶಿಸ್ತುಪಾಲನಾಧಿಕಾರಿ ಅಮಾನತು ಮಾಡಿದ್ದರು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗಮದ ಭದ್ರತೆ ಮತ್ತು ಜಾಗೃತ ಅಧಿಕಾರಿ ಕೆ.ಎನ್. ಲಕ್ಷ್ಮಣ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇದನ್ನು ಆಧರಿಸಿ, ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಶಿವಮೊಗ್ಗ ಘಟಕದಲ್ಲಿ ಸಹಾಯಕ ಕುಶಲಕರ್ಮಿಯಾಗಿರುವ ಎನ್.ಎ. ನಾಗರಾಜಪ್ಪ ಅವರನ್ನು ದಾವಣಗೆರೆಗೆ ವರ್ಗಾಯಿಸಲು, ವಜಾಗೊಂಡಿರುವ ಚಾಲಕ ನಾಗರಾಜ ಎನ್.ಎ. ಅವರ ಪುನರ್ ನೇಮಕ ಮತ್ತು ಕುಂದಾಪುರ ಘಟಕದಲ್ಲಿ ಚಾಲಕರಾಗಿರುವ ಚಂದ್ರಹಾಸ ಎಸ್. ಆಚಾರಿ ಅವರನ್ನು ಶಿವಮೊಗ್ಗಕ್ಕೆ ವರ್ಗಾಯಿಸಲು ನಕಲಿ ವರ್ಗಾವಣೆ ಮತ್ತು ಪುನರ್ ನೇಮಕಾತಿ ಆದೇಶಗಳನ್ನು ರಿಚರ್ಡ್ ಸೃಷ್ಟಿಸಿದ್ದರು. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರಾದ ಮುಖ್ಯ ಯಾಂತ್ರಿಕ ಎಂಜಿನಿಯರ್, ಮುಖ್ಯ ಸಂಚಾರ ವ್ಯವಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕರ ಸಹಿಗಳನ್ನು ಸ್ಕ್ಯಾನ್ ಮಾಡಿ ನಕಲಿ ಆದೇಶಗಳಿಗೆ ಲಗತ್ತಿಸಿ ಮುದ್ರಿಸಿ ಮೂವರಿಗೆ ಕಳುಹಿಸಿ ಕೊಟ್ಟಿದ್ದರು. ಅಧಿಕಾರಿಗಳ ಸಹಿ ದುರುಪಯೋಗ ಪಡಿಸಿಕೊಂಡು ವಂಚಿಸಿರುವ ರಿಚರ್ಡ್ ಮೇಲೆ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಿದ್ದಾರೆ.

ಬಾಪೂಜಿ ಕೇಂದ್ರ: ಇನ್ನೂ 208 ಸೇವೆ ಶೀಘ್ರ

ಬೆಂಗಳೂರು: 'ಗ್ರಾಮ ಪಂಚಾಯಿತಿಗಳ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ಸದ್ಯ ನೀಡುತ್ತಿರುವ 81 ಸೇವೆಗಳ ಜೊತೆಗೆ ಇನ್ನೂ 208 ಸೇವೆಗಳನ್ನು ಆರಂಭಿಸಲಾಗುವುದು' ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸೇವಾ ಸಿಂಧು ಪೋರ್ಟಲ್ ಮೂಲಕ ಒದಗಿಸಲಾಗುತ್ತಿರುವ ಸೇವೆಗಳನ್ನು ಬಾಪೂಜಿ ಸೇವಾಕೇಂದ್ರಗಳಲ್ಲೂ ಆರಂಭಿಸಲಾಗುವುದು ಎಂದು ಕಳೆದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಅದರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಗ್ರಾಮೀಣರಿಗೆ ಅನುಕೂಲ ಆಗುವಂತೆ ಮೊದಲ ಹಂತದಲ್ಲಿ 208 ಸೇವೆಗಳನ್ನು ಬಳಸುವ ಸೌಲಭ್ಯ ನೀಡಲಾಗುವುದು ಎಂದಿದ್ದಾರೆ.

ಸೇವಾ ಸಿಂಧು ಪೋರ್ಟಲ್ ಮೂಲಕ ಒದಗಿಸಲಾಗುತ್ತಿರುವ 46 ಇಲಾಖೆಗಳ 800ಕ್ಕಿಂತಲೂ ಹೆಚ್ಚು ಸೇವೆಗಳಲ್ಲಿ ಗ್ರಾಮೀಣರಿಗೆ ಉಪಯೋಗ ಆಗುವಂಥ ಸೇವೆಗಳನ್ನು ಬಾಪೂಜಿ ಸೇವಾ ಕೇಂದ್ರಗಳ ಮೂಲಕವೂ ಒದಗಿಸುವುದರಿಂದ ಒಂದೇ ಸೂರಿನಡಿ ಎಲ್ಲ ಇಲಾಖೆಗಳ ಸೇವೆ ನೀಡಿದಂತಾಗುತ್ತದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ-ಆಡಳಿತ) ಅಧೀನದಲ್ಲಿ ಬರುವ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳ ಮೂಲಕ ಸೇವಾ ಸಿಂಧು ಪೋರ್ಟಲ್‌ನಲ್ಲಿ 800ಕ್ಕಿಂತಲೂ ಹೆಚ್ಚು ಸೇವೆಗಳನ್ನು ಈಗ ಒದಗಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರಿನಲ್ಲಿ... ಮೈ-ಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಣೆ ಸಂಖ್ಯೆ/ಮೈ.ಅ.ಪ್ರಾ/ಇ.ಹ.ಪ್ರ/01/2025-26 ದಿನಾಂಕ:25.07.2025,ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.

1) ಇ-ಹರಾಜನ್ನು ಆರಂಭಿಸುವ ದಿನಾಂಕ: 31.07.2025 ರ ಭಾರತೀಯ ಕಾಲಮಾನ ಸಂಜೆ 6.00 ಗಂಟೆಯ ನಂತರ

2) ಕ್ರ.ಸಂ.1 ರಿಂದ 50 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 16.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 18.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).

3) ಕ್ರ.ಸಂ.51 ರಿಂದ 100 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 19.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 20.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).

4) ಕ್ರ.ಸಂ.101 ರಿಂದ 150 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 21.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 22.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).

5) ಕ್ರ.ಸಂ.151 ರಿಂದ 200 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.08.2025 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 25.08.2025 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 26.08.2025 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)."

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ		ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
					ಉ-ದ	ಪೂ-ಪ			
	ಮೂಲೆ ಹಾಗೂ ಮಧ್ಯಂತರ ನಿವೇಶನಗಳು								
1	ನಂಜನಗೂಡು ಬಸವನಗುಡಿ ಬ್ಲಾಕ್	ಹೆಚ್.ಐ.ಜಿ.-19	ಮಧ್ಯಂತರ	ದಕ್ಷಿಣ 9.00	18.00	10.00	180.00	36503.00	65.71
2	ನಂಜನಗೂಡು ಬಸವನಗುಡಿ ಬ್ಲಾಕ್	ಹೆಚ್.ಐ.ಜಿ.-20/21	ಮಧ್ಯಂತರ	ಉತ್ತರ 12.00	18.00	16.50	297.00	36503.00	108.41
3	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.-41	ಮಧ್ಯಂತರ	ದಕ್ಷಿಣ 12.00	(14.60+16.00)/2	9.00	137.70	36503.00	50.26
4	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.-42	ಮಧ್ಯಂತರ	ದಕ್ಷಿಣ 12.00	(12.60+14.60)/2	9.00	122.40	36503.00	44.68
5	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.-44	ಮಧ್ಯಂತರ	ದಕ್ಷಿಣ 12.00	(12.50+13.50)/2	9.00	117.00	36503.00	42.71
6	ನಂಜನಗೂಡು ಬಸವನಗುಡಿ ಬ್ಲಾಕ್	ಎಂ.ಐ.ಜಿ.-54	ಮಧ್ಯಂತರ	ಉತ್ತರ 12.00	22.00	8.00	176.00	36503.00	64.25
7	ನಾಚಹನಹಳ್ಳಿ-ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್	99	ಮೂಲೆ	ಪಶ್ಚಿಮ 9.00	13.00	18.00	234.00	79256.00	185.46
8	ಜೆ.ಪಿ.ನಗರ 1ನೇ ಹಂತ 'ಎಫ್' ಬ್ಲಾಕ್	72	ಮೂಲೆ	ಪೂ-ಉ 9.00	24.00	(18.00+19.00)/2	444.00	79256.00	351.90
9	ಶ್ರೀರಾಂಪುರ 3ನೇ ಹಂತ	2516	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
10	ಶ್ರೀರಾಂಪುರ 3ನೇ ಹಂತ	2519	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
11	ಶ್ರೀರಾಂಪುರ 3ನೇ ಹಂತ	2522	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
12	ಶ್ರೀರಾಂಪುರ 3ನೇ ಹಂತ	2525	ಮಧ್ಯಂತರ	ಪೂರ್ವ 9.00	9.00	15.00	135.00	45776.00	61.80
13	ಶ್ರೀರಾಂಪುರ 3ನೇ ಹಂತ	2530	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
14	ಶ್ರೀರಾಂಪುರ 3ನೇ ಹಂತ	2536	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
15	ಶ್ರೀರಾಂಪುರ 3ನೇ ಹಂತ	2538	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
16	ಶ್ರೀರಾಂಪುರ 3ನೇ ಹಂತ	2539	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
17	ಶ್ರೀರಾಂಪುರ 3ನೇ ಹಂತ	2541	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
18	ಶ್ರೀರಾಂಪುರ 3ನೇ ಹಂತ	2543	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
19	ಶ್ರೀರಾಂಪುರ 3ನೇ ಹಂತ	2546	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
20	ಶ್ರೀರಾಂಪುರ 3ನೇ ಹಂತ	2548	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
21	ಶ್ರೀರಾಂಪುರ 3ನೇ ಹಂತ	2550	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
22	ಶ್ರೀರಾಂಪುರ 3ನೇ ಹಂತ	2551	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
23	ಶ್ರೀರಾಂಪುರ 3ನೇ ಹಂತ	2553	ಮಧ್ಯಂತರ	ಪೂರ್ವ 9.00	9.00	12.00	108.00	45776.00	49.44
24	ಶ್ರೀರಾಂಪುರ 3ನೇ ಹಂತ	2560	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
25	ಶ್ರೀರಾಂಪುರ 3ನೇ ಹಂತ	2563	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
26	ಶ್ರೀರಾಂಪುರ 3ನೇ ಹಂತ	2564	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
27	ಶ್ರೀರಾಂಪುರ 3ನೇ ಹಂತ	2566	ಮಧ್ಯಂತರ	ಪಶ್ಚಿಮ 9.00	9.00	12.00	108.00	45776.00	49.44
28	ದಟ್ಟಗಳ್ಳಿ 3ನೇ ಹಂತ	ಇ.ಡಬ್ಲ್ಯೂ.ಎಸ್-144/ಎ	ಮೂಲೆ	ಪೂ-ಉ 18.00	10.00	6.00	60.00	64986.00	38.99
29	ವಿಜಯನಗರ 4ನೇ ಹಂತ 2ನೇ ಫೇಸ್	109/4	ಮೂಲೆ	ಪೂ-ಉ 9.00	12.00	(4.10+7.45)/2	69.30	86009.00	59.60
30	ವಿಜಯನಗರ 4ನೇ ಹಂತ 2ನೇ ಘಟ್ಟ	8066	ಮೂಲೆ	ಪ-ದ 9-12	(6.50+13.50)/2	9.00	90.00	86009.00	77.41
31	ವಿಜಯನಗರ 4ನೇ ಹಂತ 2ನೇ ಘಟ್ಟ	9631	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
32	ವಿಜಯನಗರ 4ನೇ ಹಂತ 2ನೇ ಘಟ್ಟ	9632	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
33	ವಿಜಯನಗರ 4ನೇ ಹಂತ 2ನೇ ಘಟ್ಟ	9633	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
34	ವಿಜಯನಗರ 4ನೇ ಹಂತ 2ನೇ ಘಟ್ಟ	9634	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
35	ವಿಜಯನಗರ 4ನೇ ಹಂತ 2ನೇ ಘಟ್ಟ	9635	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
36	ವಿಜಯನಗರ 4ನೇ ಹಂತ 2ನೇ ಘಟ್ಟ	9636	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
37	ವಿಜಯನಗರ 4ನೇ ಹಂತ 2ನೇ ಘಟ್ಟ	9637	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
38	ವಿಜಯನಗರ 4ನೇ ಹಂತ 2ನೇ ಘಟ್ಟ	9638	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
39	ವಿಜಯನಗರ 4ನೇ ಹಂತ 2ನೇ ಘಟ್ಟ	9639	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
40	ವಿಜಯನಗರ 4ನೇ ಹಂತ 2ನೇ ಘಟ್ಟ	9640	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
41	ವಿಜಯನಗರ 4ನೇ ಹಂತ 2ನೇ ಘಟ್ಟ	9641	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
42	ವಿಜಯನಗರ 4ನೇ ಹಂತ 2ನೇ ಘಟ್ಟ	9642	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
43	ವಿಜಯನಗರ 4ನೇ ಹಂತ 2ನೇ ಘಟ್ಟ	9643	ಮಧ್ಯಂತರ	ದಕ್ಷಿಣ 9.00	12.00	9.00	108.00	59275.00	64.02
44	ವಿಜಯನಗರ 4ನೇ ಹಂತ 2ನೇ ಘಟ್ಟ	9646	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
45	ವಿಜಯನಗರ 4ನೇ ಹಂತ 2ನೇ ಘಟ್ಟ	9647	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
46	ವಿಜಯನಗರ 4ನೇ ಹಂತ 2ನೇ ಘಟ್ಟ	9648	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
47	ವಿಜಯನಗರ 4ನೇ ಹಂತ 2ನೇ ಘಟ್ಟ	9651	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
48	ವಿಜಯನಗರ 4ನೇ ಹಂತ 2ನೇ ಘಟ್ಟ	9652	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
49	ವಿಜಯನಗರ 4ನೇ ಹಂತ 2ನೇ ಘಟ್ಟ	9653	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
50	ವಿಜಯನಗರ 4ನೇ ಹಂತ 2ನೇ ಘಟ್ಟ	9656	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
51	ವಿಜಯನಗರ 4ನೇ ಹಂತ 2ನೇ ಘಟ್ಟ	9657	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
52	ವಿಜಯನಗರ 4ನೇ ಹಂತ 2ನೇ ಘಟ್ಟ	9659	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
53	ವಿಜಯನಗರ 4ನೇ ಹಂತ 2ನೇ ಘಟ್ಟ	9660	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
54	ವಿಜಯನಗರ 4ನೇ ಹಂತ 2ನೇ ಘಟ್ಟ	9661	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
55	ವಿಜಯನಗರ 4ನೇ ಹಂತ 2ನೇ ಘಟ್ಟ	9662	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
56	ವಿಜಯನಗರ 4ನೇ ಹಂತ 2ನೇ ಘಟ್ಟ	9598	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
57	ವಿಜಯನಗರ 4ನೇ ಹಂತ 2ನೇ ಘಟ್ಟ	9599	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
58	ವಿಜಯನಗರ 4ನೇ ಹಂತ 2ನೇ ಘಟ್ಟ	9600	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
59	ವಿಜಯನಗರ 4ನೇ ಹಂತ 2ನೇ ಘಟ್ಟ	9601	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
60	ವಿಜಯನಗರ 4ನೇ ಹಂತ 2ನೇ ಘಟ್ಟ	9602	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
61	ವಿಜಯನಗರ 4ನೇ ಹಂತ 2ನೇ ಘಟ್ಟ	9603	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
62	ವಿಜಯನಗರ 4ನೇ ಹಂತ 2ನೇ ಘಟ್ಟ	9604	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
63	ವಿಜಯನಗರ 4ನೇ ಹಂತ 2ನೇ ಘಟ್ಟ	9609	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
64	ವಿಜಯನಗರ 4ನೇ ಹಂತ 2ನೇ ಫೇಸ್	10298	ಮೂಲೆ	ಪ-ಉ 24-18	24.00	(17.40+14.60)/2	384.00	86009.00	330.27
65	ವಿಜಯನಗರ 4ನೇ ಹಂತ 2ನೇ ಫೇಸ್	12056	ಮೂಲೆ	ಪ-ಉ 24-9	23.20	(16.60+13.20)/2	345.68	86009.00	297.32
66	ವಿಜಯನಗರ 4ನೇ ಹಂತ 2ನೇ ಫೇಸ್	12256	ಮಧ್ಯಂತರ	ಪಶ್ಚಿಮ 9.00	18.00	27.00	486.00	59275.00	288.08
67	ವಿಜಯನಗರ 4ನೇ ಹಂತ 2ನೇ ಫೇಸ್	12258	ಮಧ್ಯಂತರ	ಪಶ್ಚಿಮ 9.00	18.00	27.00	486.00	59275.00	288.08
68	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	38	ಮೂಲೆ	ಪ-ದ 9.00	12.00	(10.75+10.45)/2	127.20	99318.00	126.33
69	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	125	ಮಧ್ಯಂತರ	ದಕ್ಷಿಣ 12.00	17.50	12.00	210.00	97371.00	204.48
70	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	126	ಮಧ್ಯಂತರ	ದಕ್ಷಿಣ 12.00	17.50	12.00	210.00	97371.00	204.48
71	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	127	ಮಧ್ಯಂತರ	ದಕ್ಷಿಣ 12.00	17.50	12.00	210.00	97371.00	204.48
72	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	130	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
73	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	131	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
74	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	132	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
75	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	133	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
76	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	134	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
77	ವಿಜಯನಗರ 3ನೇ ಹಂತ 'ಜಿ' ಬ್ಲಾಕ್	135	ಮಧ್ಯಂತರ	ಉತ್ತರ 9.00	11.50	9.00	103.50	97371.00	100.78
78	ವಿಜಯನಗರ 2ನೇ ಹಂತ	2503	ಮೂಲೆ	ಪೂ-ಉ 12-6	8.80	(17.60+20.00)/2	165.44	99318.00	164.31
79	ವಿಜಯನಗರ 2ನೇ ಹಂತ	2522	ಮೂಲೆ	ಪೂ-ದ 12-6	9.00	(6.80+10.30)/2	76.95	99318.00	76.43
80	ವಿಜಯನಗರ 2ನೇ ಹಂತ	2542	ಮೂಲೆ	ಪೂ-ದ 12-6	8.70	(8.50+11.80)/2	88.31	99318.00	87.71
81	ವಿಜಯನಗರ 2ನೇ ಹಂತ	2675	ಮೂಲೆ	ಪೂ-ದ 12.00	12.00	(8.40+14.20)/2	135.60	99318.00	134.68
82	ವಿಜಯನಗರ 2ನೇ ಹಂತ	2716/ಐ	ಮೂಲೆ	ಪೂ-ದ 12.00	18.00	(9.50+15.50)/2	225.00	99318.00	223.47
83	ವಿಜಯನಗರ 2ನೇ ಹಂತ	3877	ಮೂಲೆ	ಉ-ಪ 18-9	(2.00+6.00)/2	18.00	72.00	99318.00	71.51
84	ಹೆಬ್ಬಾಳು 1ನೇ ಹಂತ	1190/ಐ	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
85	ಹೆಬ್ಬಾಳು 1ನೇ ಹಂತ	1190/ಹೆಚ್	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
86	ಹೆಬ್ಬಾಳು 3ನೇ ಹಂತ	1269	ಮಧ್ಯಂತರ	ಪಶ್ಚಿಮ 9.00	9.00	12.00	108.00	81292.00	87.80
87	ಹೆಬ್ಬಾಳು 3ನೇ ಹಂತ	1275	ಮಧ್ಯಂತರ	ಪಶ್ಚಿಮ 9.00	8.85	12.00	106.20	81292.00	86.33
88	ಹೆಬ್ಬಾಳು 3ನೇ ಹಂತ	1277	ಮಧ್ಯಂತರ	ಪಶ್ಚಿಮ 9.00	9.00	11.30	101.70	81292.00	82.67
89	ಹೆಬ್ಬಾಳು 3ನೇ ಹಂತ	1279	ಮಧ್ಯಂತರ	ಪಶ್ಚಿಮ 9.00	9.00	11.00	99.00	81292.00	80.48
90	ಹೆಬ್ಬಾಳು 3ನೇ ಹಂತ	1292	ಮೂಲೆ	ಪೂರ್ವ 9.00	17.30	12.00	207.60	82918.00	172.14
91	ಹೆಬ್ಬಾಳು 3ನೇ ಹಂತ	1293	ಮೂಲೆ	ದ-ಪ 9-9	11.00	11.60	127.60	82918.00	105.80
92	ಹೆಬ್ಬಾಳು 3ನೇ ಹಂತ	2880	ಮೂಲೆ	ಪೂ-ದ 9-9	6.00	7.50	45.00	82918.00	37.31
93	ಹೆಬ್ಬಾಳು 3ನೇ ಹಂತ	2903	ಮಧ್ಯಂತರ	ಪಶ್ಚಿಮ 9.00	9.00	12.00	108.00	81292.00	87.80
94	ಹೆಬ್ಬಾಳು 3ನೇ ಹಂತ	2904	ಮಧ್ಯಂತರ	ಪಶ್ಚಿಮ 9.00	9.00	12.00	108.00	81292.00	87.80
95	ಹೆಬ್ಬಾಳು 3ನೇ ಹಂತ	2914	ಮೂಲೆ	ಉ-ಪೂ 9-9	8.00	12.00	96.00	82918.00	79.60
96	ಹೆಬ್ಬಾಳು 3ನೇ ಹಂತ	2915	ಮಧ್ಯಂತರ	ಪೂರ್ವ 9.00	9.00	12.00	108.00	81292.00	87.80
97	ಹೆಬ್ಬಾಳು 1ನೇ ಹಂತ	ಹೆಚ್1/2	ಮಧ್ಯಂತರ	ಉತ್ತರ 9.00	13.50	6.00	81.00	73539.00	59.57
98	ಹೆಬ್ಬಾಳು 1ನೇ ಹಂತ	ಹೆಚ್1/5	ಮಧ್ಯಂತರ	ಉತ್ತರ 9.00	13.50	6.00	81.00	73539.00	59.57
99	ಹೆಬ್ಬಾಳು 1ನೇ ಹಂತ	ಹೆಚ್1/6	ಮೂಲೆ	ಉ-ಪೂ 9.00	13.50	5.80	78.30	74725.00	58.51
100	ಹೆಬ್ಬಾಳು 1ನೇ ಹಂತ	ಹೆಚ್1/7	ಮೂಲೆ	ಉ-ಪ 9.00	12.80	6.30	80.64	74725.00	60.26
101	ಹೆಬ್ಬಾಳು 1ನೇ ಹಂತ	ಹೆಚ್1/12	ಮೂಲೆ	ಉ-ಪೂ 9-18	(5.00+9.00)/2	4.20	29.40	74725.00	21.97
102	ಹೆಬ್ಬಾಳು 1ನೇ ಹಂತ	ಹೆಚ್1/18	ಮೂಲೆ	ದ-ಪ 9.00	9.00	6.00	54.00	74725.00	40.35
103	ಹೆಬ್ಬಾಳು 1ನೇ ಹಂತ	ಹೆಚ್1/19	ಮೂಲೆ	ದ-ಪೂ 9.00	8.90	6.00	53.40	74725.00	39.90
104	ಹೆಬ್ಬಾಳು 1ನೇ ಹಂತ	ಹೆಚ್1/20	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
105	ಹೆಬ್ಬಾಳು 1ನೇ ಹಂತ	ಹೆಚ್1/21	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
106	ಹೆಬ್ಬಾಳು 1ನೇ ಹಂತ	ಹೆಚ್1/22	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
107	ಹೆಬ್ಬಾಳು 1ನೇ ಹಂತ	ಹೆಚ್1/23	ಮಧ್ಯಂತರ	ದಕ್ಷಿಣ 9.00	8.90	6.00	53.40	73539.00	39.27
108	ಹೆಬ್ಬಾಳು 1ನೇ ಹಂತ	ಹೆಚ್1/24	ಮೂಲೆ	ದ-ಪ 9.00	8.90	5.80	51.62	74725.00	38.57
109	ಹೆಬ್ಬಾಳು 1ನೇ ಹಂತ	ಹೆಚ್1/25	ಮೂಲೆ	ಉ-ಪ 9.00	8.80	6.00	52.80	74725.00	39.45
110	ಹೆಬ್ಬಾಳು 1ನೇ ಹಂತ	ಹೆಚ್1/26	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
111	ಹೆಬ್ಬಾಳು 1ನೇ ಹಂತ	ಹೆಚ್1/28	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
112	ಹೆಬ್ಬಾಳು 1ನೇ ಹಂತ	ಹೆಚ್1/29	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
113	ಹೆಬ್ಬಾಳು 1ನೇ ಹಂತ	ಹೆಚ್1/30	ಮೂಲೆ	ಉ-ಪೂ 9.00	8.80	6.00	52.80	74725.00	39.45
114	ಹೆಬ್ಬಾಳು 1ನೇ ಹಂತ	ಹೆಚ್1/33	ಮಧ್ಯಂತರ	ಉತ್ತರ 9.00	8.80	6.00	52.80	73539.00	38.83
115	ಹೆಬ್ಬಾಳು 1ನೇ ಹಂತ	ಹೆಚ್1/36	ಮೂಲೆ	ಉ-ಪೂ 9-18	8.70	5.50	47.85	74725.00	35.76
116	ಹೆಬ್ಬಾಳು 1ನೇ ಹಂತ	ಹೆಚ್1/42	ಮೂಲೆ	ಪ-ದ 9.00	9.00	6.00	54.00	74725.00	40.35
117	ಹೆಬ್ಬಾಳು 1ನೇ ಹಂತ	ಹೆಚ್1/43	ಮೂಲೆ	ಪೂ-ದ 9.00	9.00	5.40	48.60	74725.00	36.32
118	ಹೆಬ್ಬಾಳು 1ನೇ ಹಂತ	ಹೆಚ್1/45	ಮಧ್ಯಂತರ	ದಕ್ಷಿಣ 9.00	9.00	6.00	54.00	73539.00	39.71
119	ಹೆಬ್ಬಾಳು 1ನೇ ಹಂತ	ಹೆಚ್1/46	ಮಧ್ಯಂತರ	ದಕ್ಷಿಣ 9.00	9.00	6.00	54.00	73539.00	39.71
120	ಹೆಬ್ಬಾಳು 1ನೇ ಹಂತ	ಹೆಚ್1/47	ಮಧ್ಯಂತರ	ದಕ್ಷಿಣ 9.00	9.00	6.00	54.00	73539.00	39.71
121	ಹೆಬ್ಬಾಳು 1ನೇ ಹಂತ	ಹೆಚ್1/48	ಮೂಲೆ	ದ-ಪ 9.00	9.00	6.00	54.00	74725.00	40.35
122	ಹೆಬ್ಬಾಳು 1ನೇ ಹಂತ	ಹೆಚ್1/49	ಮೂಲೆ	ಉ-ಪ 9.00	9.00	6.00	54.00	74725.00	40.35
123	ಹೆಬ್ಬಾಳು 1ನೇ ಹಂತ	ಹೆಚ್1/51	ಮಧ್ಯಂತರ	ಉತ್ತರ 9.00	9.00	6.00	54.00	73539.00	39.71
124	ಹೆಬ್ಬಾಳು 1ನೇ ಹಂತ	ಹೆಚ್1/54	ಮೂಲೆ	ಉ-ಪೂ 9.00	9.00	5.80	52.20	74725.00	39.01
125	ಹೆಬ್ಬಾಳು 1ನೇ ಹಂತ	ಹೆಚ್1/67	ಮೂಲೆ	ಪೂ-ದ 18.00	8.70	6.00	52.20	74725.00	39.01
126	ಹೆಬ್ಬಾಳು 1ನೇ ಹಂತ	ಹೆಚ್1/72	ಮೂಲೆ	ದ-ಪ 18.00	8.70	5.50	47.85	74725.00	35.76
127	ಹೆಬ್ಬಾಳು 2ನೇ ಹಂತ	1123	ಮೂಲೆ	ಪ-ಉ 9.00	(3.60+5.90)/2	9.00	42.75	64489.00	27.57
128	ದೇವನೂರು 3ನೇ ಹಂತ	3526/ಎ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
129	ದೇವನೂರು 3ನೇ ಹಂತ	3526/ಬಿ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
130	ದೇವನೂರು 3ನೇ ಹಂತ	3526/ಸಿ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
131	ದೇವನೂರು 3ನೇ ಹಂತ	3526/ಡಿ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
132	ದೇವನೂರು 3ನೇ ಹಂತ	3526/ಇ	ಮಧ್ಯಂತರ	ಪೂರ್ವ 9.00	6.00	9.00	54.00	70400.00	38.02
133	ದೇವನೂರು 3ನೇ ಹಂತ	3774	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
134	ದೇವನೂರು 3ನೇ ಹಂತ	3775	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
135	ದೇವನೂರು 3ನೇ ಹಂತ	3776	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
136	ದೇವನೂರು 3ನೇ ಹಂತ	3777	ಮಧ್ಯಂತರ	ಉತ್ತರ 9.00	9.00	6.00	54.00	70400.00	38.02
137	ದೇವನೂರು 2ನೇ ಹಂತ 2ನೇ ಫೇಸ್	2131	ಮೂಲೆ	ಉತ್ತರ 18.00	18.00	12.00	216.00	70400.00	152.06
138	ದೇವನೂರು 2ನೇ ಹಂತ 2ನೇ ಫೇಸ್	2157	ಮೂಲೆ	ಉತ್ತರ 18.00	18.00	12.00	216.00	70400.00	152.06
139	ದೇವನೂರು 2ನೇ ಹಂತ 2ನೇ ಫೇಸ್	2819	ಮೂಲೆ	ಪೂರ್ವ 18-9	15.00	24.00	360.00	70400.00	253.44
140	ದೇವನೂರು 2ನೇ ಹಂತ 2ನೇ ಫೇಸ್	2897	ಮೂಲೆ	ಉತ್ತರ 18.00	18.00	12.00	216.00	70400.00	152.06
141	ದೇವನೂರು 2ನೇ ಹಂತ 2ನೇ ಫೇಸ್	2918	ಮೂಲೆ	ಉತ್ತರ 24.00	24.00	15.00	360.00	70400.00	253.44
142	ದೇವನೂರು 2ನೇ ಹಂತ 2ನೇ ಫೇಸ್	2941	ಮಧ್ಯಂತರ	ಪಶ್ಚಿಮ 9.00	12.00	18.00	216.00	45420.00	98.11
143	ಕೆಸರೆ 3ನೇ ಹಂತ	789	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
144	ಕೆಸರೆ 3ನೇ ಹಂತ	790	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
145	ಕೆಸರೆ 3ನೇ ಹಂತ	791	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
146	ಕೆಸರೆ 3ನೇ ಹಂತ	792	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
147	ಕೆಸರೆ 3ನೇ ಹಂತ	793	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
148	ಕೆಸರೆ 3ನೇ ಹಂತ	795	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
149	ಕೆಸರೆ 3ನೇ ಹಂತ	796	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
150	ಕೆಸರೆ 3ನೇ ಹಂತ	800	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
151	ಕೆಸರೆ 3ನೇ ಹಂತ	804	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
152	ಕೆಸರೆ 3ನೇ ಹಂತ	805	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
153	ಕೆಸರೆ 3ನೇ ಹಂತ	806	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
154	ಕೆಸರೆ 3ನೇ ಹಂತ	807	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
155	ಕೆಸರೆ 3ನೇ ಹಂತ	808	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
156	ಕೆಸರೆ 3ನೇ ಹಂತ	809	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
157	ಕೆಸರೆ 3ನೇ ಹಂತ	811	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
158	ಕೆಸರೆ 3ನೇ ಹಂತ	816	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
159	ಕೆಸರೆ 3ನೇ ಹಂತ	817	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
160	ಕೆಸರೆ 3ನೇ ಹಂತ	818	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91

ಮುಂದುವರೆದಿದೆ...2

‘ಎತ್ತಿನಹೊಳೆ’ 2 ವರ್ಷದಲ್ಲಿ ಪೂರ್ಣ

ಅರಸೀಕೆರೆ ಸಮಾವೇಶದಲ್ಲಿ ಸಿದ್ದರಾಮಯ್ಯ ಘೋಷಣೆ

ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ ಜಿಲ್ಲೆ): ‘ಎತ್ತಿನಹೊಳೆ ಯೋಜನೆಯನ್ನು 2 ವರ್ಷಗಳಲ್ಲಿ ಪೂರ್ಣಗೊಳಿಸಿ, ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಶನಿವಾರ ನಡೆದ ಅಭಿನಂದನಾ ಸಮಾರಂಭದಲ್ಲಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

‘ಯೋಜನೆಯಡಿ 14 ಟಿಎಂಸಿ ಅಡಿ ನೀರು ಕುಡಿಯುವ ಉದ್ದೇಶಕ್ಕೆ, 10 ಟಿಎಂಸಿ ಅಡಿ ಕೆರೆ ತುಂಬಿಸುವುದಕ್ಕೆ ಬೇಕು. ಯೋಜನೆ ಪೂರ್ಣಗೊಳಿಸಿ, ಕುಡಿಯುವ ನೀರು ಒದಗಿಸುವ ಜೊತೆಗೆ 527 ಕೆರೆಗಳನ್ನು ತುಂಬಿಸುವ ಕೆಲಸವನ್ನು ಮಾಡಿಯೇ ಮಾಡುತ್ತೇವೆ’ ಎಂದು ಹೇಳಿದರು.

‘ಎತ್ತಿನಹೊಳೆ ಯೋಜನೆ ಸಾಧ್ಯವೇ ಇಲ್ಲ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳುತ್ತಿದ್ದರು. ಇದುವರೆಗೆ ₹ 17ಸಾವಿರ ಕೋಟಿ ಖರ್ಚು ಮಾಡಿದ್ದು, ಮೊದಲ ಹಂತದ ಕೆಲಸ ಮುಗಿದಿದೆ. 2ನೇ ಹಂತದ ಕೆಲಸ ಆರಂಭವಾಗಿದೆ. ಇನ್ನೂ ₹ 6 ಸಾವಿರ ಕೋಟಿ ಬೇಕಿದೆ’ ಎಂದರು.

ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿಯಾನಿಯೊಬ್ಬರು ಕುರಿ ಮರಿ ನೀಡಿದರು. ಶಾಸಕ ಕೆ.ಎಂ. ಶಿವಲಿಂಗೇಗೌಡ, ಸಚಿವ ಕೆ.ಎನ್‌. ರಾಜಣ್ಣ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

‘ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತ ಆಗಿಲ್ಲ, ಆಗುವುದೂ ಇಲ್ಲ. ಇಡೀ ದೇಶದಲ್ಲಿಯೇ ತಲಾ ಆದಾಯ ಹೆಚ್ಚಾಗಿದ್ದರೆ ಅದು ಕರ್ನಾಟಕದಲ್ಲಿ ಮಾತ್ರ. ಗ್ಯಾರಂಟಿಗಳ ಕಾರಣದಿಂದಾಗಿ ಜನರಲ್ಲಿ ಕೊಳ್ಳುವ ಶಕ್ತಿ ಬಂದಿದೆ. ಸರ್ಕಾರದ ಆದಾಯ ಹೆಚ್ಚಾಗಿದೆ. ಇದರಿಂದ ತಲಾ ಆದಾಯವೂ ವೃದ್ಧಿಯಾಗಿದೆ. ಅಭಿವೃದ್ಧಿಗೆ ಹಣ ಇಲ್ಲದೇ ಹೋಗಿದ್ದರೆ, ತಲಾ ಆದಾಯದಲ್ಲಿ ನಂಬರ್ ಒನ್ ಆಗಲು ಆಗುತ್ತಿರಲಿಲ್ಲ. ಬಿಜೆಪಿಯವರು ಸುಳ್ಳು ಹೇಳುತ್ತಾ, ರಾಜಕೀಯ ಪ್ರೇರಿತ ಆರೋಪ ಮಾಡುತ್ತಿದ್ದಾರೆ’ ಎಂದು ತಿರುಗೇಟು ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಬಿಜೆಪಿಯವರು ಭಾವನೆ ಮೇಲೆ ರಾಜಕೀಯ ಮಾಡುತ್ತಿದ್ದಾರೆ. ನಮಗೆ ದೇವರಿಲ್ಲವೇ? ದೇವರ ಮೇಲೆ ನಂಬಿಕೆ ಇಲ್ಲವೇ? ದೇವರು, ಧರ್ಮ ಕೇವಲ ಬಿಜೆಪಿಯವರ ಆಸ್ತಿಯಲ್ಲ. ಎಲ್ಲ ಧರ್ಮವನ್ನೂ ಕಾಪಾಡುವ ಉದ್ದೇಶದಿಂದಲೇ ಪಂಚ ಗ್ಯಾರಂಟಿ ಕೊಟ್ಟಿದ್ದೇವೆ’ ಎಂದರು.

ಸಹಕಾರ ನೀತಿ; ತೆರಿಗೆಯಲ್ಲೂ ವಿನಾಯಿತಿ

ಎಲ್ಲ ಸಹಕಾರ ಸಂಘಗಳ ಡಿಜಿಟಲೀಕರಣ, ದಲಿತ, ಆದಿವಾಸಿಗಳ ಒಳಗೊಳ್ಳುವಿಕೆ

• ಚಂದ್ರಹಾಸ ಹಿರೇಮಳಲಿ

ನವದೆಹಲಿ: ಸಹಕಾರ ಕ್ಷೇತ್ರದ ಕೈಗಾರಿಕಾ ಉತ್ಪನ್ನಗಳಿಗೆ ತೆರಿಗೆ ಇಳಿಕೆ ಸೇರಿದಂತೆ ಹಲವು ಆರ್ಥಿಕ ರಿಯಾಯಿತಿಗಳನ್ನು ರಾಷ್ಟ್ರೀಯ ಸಹಕಾರ ನೀತಿ–2025 ಘೋಷಿಸಿದ್ದು, ಸಹಕಾರ ಕ್ಷೇತ್ರದ ವ್ಯಾಪ್ತಿಯನ್ನು ಹೊಸ ಕ್ಷೇತ್ರಗಳಿಗೆ ವಿಸ್ತರಿಸಲು ಭೂಮಿಕೆ ಸಿದ್ಧಪಡಿಸಿದೆ.

ಸಹಕಾರ ಸಚಿವ ಅಮಿತ್ ಶಾ ಅವರು ಬಿಡುಗಡೆ ಮಾಡಿದ ನೂತನ ರಾಷ್ಟ್ರೀಯ ಸಹಕಾರ ನೀತಿಯು, ‘ಪರಸ್ಪರ ಸಹಕಾರದಿಂದ ಆರ್ಥಿಕ ಸಮೃದ್ಧಿ ಖಚಿತ’ ಎಂಬ ತತ್ವವನ್ನು ಒಳಗೊಂಡಿದ್ದು, ಗ್ರಾಮೀಣ ಜನರು, ರೈತರು, ಮಹಿಳೆಯರು, ದಲಿತ, ಆದಿವಾಸಿಗಳ ಬದುಕನ್ನು ಸಹಕಾರ ತತ್ವಗಳ ಮೂಲಕ ಹಸನುಗೊಳಿಸುವ ಧ್ಯೇಯವನ್ನು ಒಳಗೊಂಡಿದೆ.

ಮೊಲಾಸಿಸ್ (ಕಾಕಂಬಿ) ಸೇರಿದಂತೆ ಕೈಗಾರಿಕಾ ಉತ್ಪನ್ನಗಳಿಗೆ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಸಹಕಾರ ಸಂಘಗಳ ಮೂಲಕ ಸ್ಥಾಪಿತವಾದ ಕೈಗಾರಿಕೆಗಳ ಅದೇ ಉತ್ಪನ್ನಗಳಿಗೆ ಶೇ 5ರಷ್ಟು ಮಾತ್ರ ತೆರಿಗೆ ಹಾಕಲಾಗುತ್ತದೆ. ₹1 ಕೋಟಿಯಿಂದ ₹10 ಕೋಟಿಯವರೆಗೆ ಆದಾಯ ಗಳಿಸುವ ಸಹಕಾರ ಸಂಘಗಳಿಗೆ ವಿಧಿಸುತ್ತಿದ್ದ ಶೇ 12ರಷ್ಟು ಸರ್‌ಚಾರ್ಜ್ ಶೇ 7ಕ್ಕೆ ಇಳಿಸಲಾಗಿದೆ. ಕನಿಷ್ಠ ಪರ್ಯಾಯ ತೆರಿಗೆಯಲ್ಲೂ ಶೇ 3.5ರಷ್ಟು ಕಡಿತ ಮಾಡಲಾಗುತ್ತದೆ. ₹3 ಕೋಟಿವರೆಗಿನ ಆದಾಯಕ್ಕೆ ಶೂನ್ಯ ತೆರಿಗೆ ನಿಗದಿ ಮಾಡಲಾಗಿದೆ.

ಸಹಕಾರ ಸಂಘಗಳ ಆಡಳಿತವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವುದು. ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಕೆ ಮಾಡಿಕೊಂಡು ವ್ಯವಹಾರ, ನಿರ್ವಹಣೆಯನ್ನು ಸುಗಮಗೊಳಿಸುವುದು. ವೃತ್ತಿಪರ ನಿರ್ವಹಣೆ, ಪಾರದರ್ಶಕತೆ ತರುವುದು, ದೀರ್ಘಕಾಲೀನ ಸುಸ್ಥಿರತೆ, ಬೆಳವಣಿಗೆಯನ್ನು ಉತ್ತೇಜಿಸುವ ಆಶಯವನ್ನು ಹೊಸ ನೀತಿಯು ಒಳಗೊಂಡಿದೆ.

ಕೇಂದ್ರದ ಮಾಜಿ ಸಚಿವ ಸುರೇಶ್ ಪ್ರಭು ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ 48 ಸದಸ್ಯರನ್ನು ಒಳಗೊಂಡ ರಾಷ್ಟ್ರ ಮಟ್ಟದ ಸಮಿತಿ ರಾಷ್ಟ್ರೀಯ ಸಹಕಾರ ನೀತಿ–2025 ಅನ್ನು ಸಿದ್ಧಪಡಿಸಿದ್ದು, 2047ರವರೆಗೆ ಇದೇ ನೀತಿ ಮುಂದುವರಿಯಲಿದೆ. ಎಲ್ಲ ರಾಜ್ಯಗಳೂ ಹೊಸ ನೀತಿಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡಲಾಗಿದೆ.

ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆಗಳು, ವಿಮೆ, ಹಸಿರು ಇಂಧನದಂತಹ ಕ್ಷೇತ್ರಗಳಿಗೂ ವಿಸ್ತರಿಸಲಾಗುವುದು. ಸಿಗುವ ಲಾಭವನ್ನು ಪ್ರಾಥಮಿಕ ಸಂಘಗಳಿಗೆ ಹಂಚಲಾಗುವುದು

ಅಮಿತ್ ಶಾ
ಕೇಂದ್ರ ಸಹಕಾರ ಸಚಿವ

ಮುಖ್ಯಾಂಶಗಳು

- ರಫ್ತು ನಿರ್ವಹಣೆಗೆ 3 ಅಂತರರಾಜ್ಯ ಸಹಕಾರ ಸಂಘಗಳ ಸ್ಥಾಪನೆ
- ಸಂಘಗಳ ರಾಷ್ಟ್ರವ್ಯಾಪಿ ವಹಿವಾಟಿಗೆ ‘ಬ್ಯಾಂಕ್ ಮಿತ್ರ’ ಸಹಕಾರ ಬ್ಯಾಂಕ್
- ಸುಸ್ತಿದಾರ ಸಹಕಾರಿಗಳಿಗೆ ಒಟಿಎಸ್ ಸೌಲಭ್ಯ

2 ಲಕ್ಷ ಕೃಷಿ ಪತ್ತಿನ ಸಹಕಾರ ಸಂಘಗಳು

ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರ ವ್ಯವಸ್ಥೆಯನ್ನು ಬಲಗೊಳಿಸಲು ರಾಷ್ಟ್ರೀಯ ಸಹಕಾರ ನೀತಿಯಲ್ಲಿ ಆದ್ಯತೆ ನೀಡಲಾಗಿದ್ದು, 2026ರ ಮುಕ್ತಾಯದ ವೇಳೆಗೆ ಎರಡು ಲಕ್ಷ ಹೊಸ ಬಹೂಪಯೋಗಿ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಒಂದು ಗ್ರಾಮ ಪಂಚಾಯಿತಿಗೆ ಕನಿಷ್ಠ ಒಂದು ಸಂಘ ಇರಬೇಕು ಎಂಬ ಷರತ್ತು ವಿಧಿಸಲಾಗಿದೆ. ಈ ಸಹಕಾರ ಸಂಘಗಳ ಮೂಲಕ ಸುಲಭ ಸಾಲ ವ್ಯವಸ್ಥೆ ಜತೆಗೆ, ಜನರು ನಿತ್ಯದ ಹಣಕಾಸಿನ ವಹಿವಾಟನ್ನೂ ಸಂಘದ ಮೂಲಕವೇ ನಡೆಸುವಂತೆ ಪ್ರೇರೇಪಿಸಲಾಗುತ್ತದೆ.

ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವುದು, ಗುಡಿ ಕೈಗಾರಿಕೆಗಳು, ಹಾಲು ಉತ್ಪಾದಕ ಮಂಡಳಿಗಳು, ಮೀನುಗಾರಿಕೆ ಸಹಕಾರ ಸಂಘಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವುದು. ಸ್ಥಳೀಯ ಉತ್ಪನ್ನಗಳ ಉತ್ಪಾದನೆ, ಮಾರಾಟ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು. ವಹಿವಾಟುಗಳಿಗೆ ಅಗತ್ಯವಾದ ಹಣಕಾಸಿನ ನೆರವನ್ನು ಪತ್ತಿನ ಸಂಘಗಳ ಮೂಲಕ ನೀಡುವುದು. ಐದು ವರ್ಷಗಳಲ್ಲಿ ದೇಶದ 50 ಕೋಟಿ ಜನರನ್ನು ಸಹಕಾರ ಕ್ಷೇತ್ರದ ವ್ಯಾಪ್ತಿಗೆ ತಂದು, ರಾಷ್ಟ್ರದ ಆದಾಯಕ್ಕೆ ಈಗಿರುವ ಕೊಡುಗೆಯನ್ನು ಮೂರುಪಟ್ಟು ವಿಸ್ತರಿಸುವ ಗುರಿಯನ್ನು ಹೊಸ ನೀತಿಯು ಒಳಗೊಂಡಿದೆ.

2025ರ ನೀತಿಯ ಆರು ಧ್ಯೇಯಗಳು

- ಅಡಿಪಾಯವನ್ನು ಬಲಪಡಿಸುವುದು
- ಚೈತನ್ಯವನ್ನು ಉತ್ತೇಜಿಸುವುದು
- ಭವಿಷ್ಯಕ್ಕಾಗಿ ಸಂಘಗಳನ್ನು ಸಿದ್ಧಪಡಿಸುವುದು
- ಎಲ್ಲರ ಒಳಗೊಳ್ಳುವಿಕೆ ಖಾತ್ರಿಪಡಿಸುವುದು
- ಹೊಸ ವಲಯಗಳಿಗೆ ವಿಸ್ತರಣೆ
- ಸಹಕಾರ ಕ್ಷೇತ್ರಕ್ಕೆ ಯುವ ಪೀಳಿಗೆ ಆಕರ್ಷಣೆ

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ		ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
					ಉ–ದ	ಪೂ–ಪ			
161	ಕೆಸರೆ 3ನೇ ಹಂತ	819	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
162	ಕೆಸರೆ 3ನೇ ಹಂತ	821	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
163	ಕೆಸರೆ 3ನೇ ಹಂತ	822	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
164	ಕೆಸರೆ 3ನೇ ಹಂತ	823	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
165	ಕೆಸರೆ 3ನೇ ಹಂತ	824	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
166	ಕೆಸರೆ 3ನೇ ಹಂತ	826	ಮಧ್ಯಂತರ	ದಕ್ಷಿಣ 9.00	9.00	6.00	54.00	333173.00	17.91
167	ಕೆಸರೆ 3ನೇ ಹಂತ	1243	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
168	ಕೆಸರೆ 3ನೇ ಹಂತ	1257	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
169	ಕೆಸರೆ 3ನೇ ಹಂತ	1288	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
170	ಕೆಸರೆ 3ನೇ ಹಂತ	1289	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
171	ಕೆಸರೆ 3ನೇ ಹಂತ	1333	ಮಧ್ಯಂತರ	ಉತ್ತರ 9.00	9.00	6.00	54.00	33173.00	17.91
172	ಕೆಸರೆ 3ನೇ ಹಂತ	1344	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
173	ಕೆಸರೆ 3ನೇ ಹಂತ	1354	ಮಧ್ಯಂತರ	ದಕ್ಷಿಣ 9.00	9.00	6.00	54.00	33173.00	17.91
174	ಕೆಸರೆ 3ನೇ ಹಂತ	1360	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
175	ಕೆಸರೆ 3ನೇ ಹಂತ	1361	ಮಧ್ಯಂತರ	ಪಶ್ಚಿಮ 9.00	6.00	9.00	54.00	33173.00	17.91
176	ಕೆಸರೆ 3ನೇ ಹಂತ	1365	ಮಧ್ಯಂತರ	ದಕ್ಷಿಣ 9.00	6.00	9.00	54.00	33173.00	17.91
177	ದಟ್ಟಗಳ್ಳಿ 'ಕೆ' ಬ್ಲಾಕ್ (ರಾಮಕೃಷ್ಣನಗರ)	6/ಎ	ಮೂಲೆ	ಉ–ಪೂ 9.00	(0.00+13.50)/2	15.40	103.95	64853.00	67.41
178	ದಟ್ಟಗಳ್ಳಿ 'ಐ' ಬ್ಲಾಕ್ (ರಾಮಕೃಷ್ಣನಗರ)	21/ಬಿ	ಮೂಲೆ	ದ–ಪ 9.00	18.00	(14.50+15.30)/2	268.20	64853.00	173.94
179	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	36/ಬಿ	ಮೂಲೆ	ದ–ಪ 18.00	(7.00+18.50)/2	19.30	246.07	64853.00	159.58
180	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	106/ಸಿ	ಮೂಲೆ	ದ–ಪ 18.00	(13.00+18.50)/2	18.00	283.50	64853.00	183.86
181	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	175/ಡಿ	ಮೂಲೆ	ದ–ಪೂ 18.00	(7.50+12.40)/2	18.00	179.10	64853.00	116.15
182	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	176/ಡಿ	ಮೂಲೆ	ದ–ಪ 18.00	(11.80+18.00)/2	18.00	268.20	64853.00	173.94
183	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	28	ಮೂಲೆ	ಪೂ–ದ 9–11.50	12.00	(8.50+19.50)/2	168.00	64986.00	109.18
184	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	56/ಎ	ಮೂಲೆ	ಪ–ದ 9–9	9.00	(6.00+11.30)/2	77.85	64986.00	50.59
185	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	79/ಎ	ಮೂಲೆ	ಪೂ–ದ 9–9	9.00	(4.40+12.50)/2	76.05	64986.00	49.42
186	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	80/ಎ	ಮೂಲೆ	ಪೂ–ಉ 9–9	9.90	(4.20+12.50)/2	82.66	64986.00	53.72
187	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	121/ಎ	ಮೂಲೆ	ಪೂ–ದ 9–9	9.00	(8.00+16.50)/2	110.25	64986.00	71.65
188	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	213	ಮೂಲೆ	ಪೂ–ದ 9–11.5	(5.30+20.00)/2	18.00	227.70	64986.00	147.97
189	ದಟ್ಟಗಳ್ಳಿ 3ನೇ ಹಂತ 2ನೇ ಫಟ್ಟ	214	ಮೂಲೆ	ಪೂ–ದ 9–11.50	(11.50+20.00)/2	9.50	149.62	64986.00	97.23
190	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	129	ಮೂಲೆ	ಪೂ–ಉ 9.00	9.00	6.00	54.00	49616.00	26.79
191	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	137	ಮಧ್ಯಂತರ	ಉತ್ತರ 9.00	9.00	6.00	54.00	48643.00	26.27
192	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	142	ಮಧ್ಯಂತರ	ಉತ್ತರ 9.00	9.00	6.00	54.00	48643.00	26.27
193	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	143	ಮಧ್ಯಂತರ	ಉತ್ತರ 9.00	9.00	6.00	54.00	48643.00	26.27
194	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	666	ಮಧ್ಯಂತರ	ದಕ್ಷಿಣ 12.00	12.00	9.00	108.00	48643.00	52.53
195	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	668	ಮಧ್ಯಂತರ	ದಕ್ಷಿಣ 12.00	12.00	9.00	108.00	48643.00	52.53
196	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	671	ಮಧ್ಯಂತರ	ದಕ್ಷಿಣ 12.00	12.00	9.00	108.00	48643.00	52.53
197	ಸಾತಗಳ್ಳಿ 1ನೇ ಹಂತ	1151	ಮಧ್ಯಂತರ	ಉತ್ತರ 9.00	18.00	12.00	216.00	39844.00	86.06
198	ಸಾತಗಳ್ಳಿ 1ನೇ ಹಂತ	1152	ಮಧ್ಯಂತರ	ಉತ್ತರ 9.00	18.00	12.00	216.00	39844.00	86.06
199	ಸಾತಗಳ್ಳಿ 1ನೇ ಹಂತ	1153	ಮಧ್ಯಂತರ	ಉತ್ತರ 9.00	18.00	12.00	216.00	39844.00	86.06
200	ಸಾತಗಳ್ಳಿ 1ನೇ ಹಂತ	1618	ಮಧ್ಯಂತರ	ಪಶ್ಚಿಮ 9.00	15.00	24.00	360.00	39844.00	143.44
			ಒಟ್ಟು						14205.35

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು https://kppp.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಅಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ಯಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ICICI ಬ್ಯಾಂಕ್‌ಗೆ DEBIT CARD/CREDIT CARD/NET BANKING ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ Commissioner MDA Mysore, Bank of Baroda, Account No.89260100004660 (IFSC Code No. BARB0VJMUDA, 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ. 19) ನಿವೇಶನಗಳ ಸ್ಥಳದ (Location), ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ ಅ) ವಲಯ ಕಛೇರಿ–1 – 1. ನಂಜನಗೂಡು ಬಸವನಗುಡಿ ಬ್ಲಾಕ್, ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ, ಶ್ರೀರಾಂಪುರ 2ನೇ ಹಂತ ಮತ್ತು 3ನೇ ಹಂತ ಬಡಾವಣೆ – ಶ್ರೀ. ಕಾಂತರಾಜ ಚಾರಿ.ಎಸ್, ಕಿ.ಅ., ಮೊಬೈಲ್ ನಂ.8660240351. ಆ) ವಲಯ ಕಛೇರಿ–3 – ವಿಜಯನಗರ 3ನೇ ಹಂತ ಮತ್ತು ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಇ) ವಲಯ ಕಛೇರಿ–4– ಹೆಬ್ಬಾಳು 1, 2 ಮತ್ತು 3ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452.

ಊ) ವಲಯ ಕಛೇರಿ–7 – ದಟ್ಟಗಳ್ಳಿ 2ನೇ ಹಂತ ಎಲ್ಲಾ ಬ್ಲಾಕ್ (ರಾಮಕೃಷ್ಣನಗರ) – ಶ್ರೀಮತಿ. ಪವಿತ್ರ.ಆರ್, ಸ.ಅ., ಮೊಬೈಲ್ ನಂ.8197542740. ಋ) ವಲಯ ಕಛೇರಿ–8 – ಸಾತಗಳ್ಳಿ 1ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.mudamysore.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/MYSORE/01/SHIRDI SAI/2025-26

ಆಂಬುಲೆನ್ಸ್‌ನಲ್ಲೇ ಸಾಮೂಹಿಕ ಅತ್ಯಾಚಾರ

ಒಂದನೇ ಪುಟದಿಂದ...

ಘಟನೆ ಕುರಿತಂತೆ ವಿಡಿಯೊ ಹಂಚಿಕೊಂಡಿರುವ ರಾಜ್ಯ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್, ‘ಹೆಣ್ಣು ಮಕ್ಕಳ ರಕ್ಷಣೆಗಾಗಿ ನಿತೀಶ್ ಕುಮಾರ್ ಸರ್ಕಾರವನ್ನು ತೊಲಗಿಸಬೇಕು’ ಎಂದು ಕರೆ ನೀಡಿದ್ದಾರೆ.

‘ಬಿಹಾರವು ರಾಕ್ಷಸರ ಆಡಳಿತಕ್ಕೆ ಒಳಪಟ್ಟಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಅವರ ಇಬ್ಬರು ಉಪ ಮುಖ್ಯಮಂತ್ರಿಗಳು ಇಂತಹ ಘಟನೆಗಳು ನಡೆದಾಗ ಕ್ರಿಮಿನಲ್ ಮೌನ ವಹಿಸುತ್ತಾರೆ’ ಎಂದು ಕಿಡಿಕಾರಿದ್ದಾರೆ.

‘ರಾಜ್ಯದಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿರುವುದನ್ನು ಗಯಾ ಘಟನೆ ತೋರಿಸುತ್ತಿದೆ. ನೊಂದ ಹೆಣ್ಣು ಮಗುವಿಗೆ ನ್ಯಾಯ ಕೊಡಿಸಲು ಪಕ್ಷ ಬದ್ಧವಾಗಿದೆ’ ಎಂದು ಬಿಹಾರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಜೇಶ್ ಕುಮಾರ್ ತಿಳಿಸಿದ್ದಾರೆ.

ದೂರುದಾರನ ಹೇಳಿಕೆ ದಾಖಲು

ಒಂದನೇ ಪುಟದಿಂದ...

‘ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದಿನಿಂದ ಹಲವಾರು ಅಪರಾಧ ಕೃತ್ಯಗಳು ನಡೆದಿವೆ. ನನಗೆ ಜೀವಬೆದರಿಕೆ ಒಡ್ಡಿ, ಈ ಅಪರಾಧ ಕೃತ್ಯಗಳ ಮೃತದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡಿಸಿದ್ದಾರೆ. ಈ ಬಗ್ಗೆ ಪಾಪಪ್ರಜ್ಞೆ ಕಾಡುತ್ತಿದೆ. ನನಗೆ ಹಾಗೂ ನನ್ನ ಕುಟುಂಬಕ್ಕೆ ಕಾನೂನಾತ್ಮಕವಾಗಿ ರಕ್ಷಣೆ ದೊರೆತ ಕೂಡಲೇ ಈ ಅಪರಾಧ ಕೃತ್ಯಗಳನ್ನು ನಡೆಸಿದವರ ಸಂಪೂರ್ಣ ಮಾಹಿತಿಯನ್ನು ನೀಡುತ್ತೇನೆ. ಮೃತದೇಹಗಳನ್ನು ವಿಲೇವಾರಿ ಮಾಡಿದ ಸ್ಥಳಗಳನ್ನು ಪೊಲೀಸರಿಗೆ ತೋರಿಸಲು ಸಿದ್ದನಿದ್ದೇನೆ’ ಎಂದು ಸಾಕ್ಷಿ ದೂರುದಾರ ವ್ಯಕ್ತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಹಾಗೂ ಧರ್ಮಸ್ಥಳ ಪೊಲೀಸ್ ಠಾಣೆಗೆ ಜುಲೈ 3ರಂದು ದೂರು ನೀಡಿದ್ದರು. ಸರ್ಕಾರವು ಈ ಪ್ರಕರಣದ ತನಿಖೆಗೆ ಜುಲೈ 20ರಂದು ಎಸ್‌ಐಟಿಯನ್ನು ರಚಿಸಿದೆ.

ವಿಶೇಷ ತನಿಖಾ ತಂಡದ ಜಿತೇಂದ್ರ ಕುಮಾರ್ ದಯಾಮ ನೇತೃತ್ವದ ಅಧಿಕಾರಿಗಳ ತಂಡವು ಧರ್ಮಸ್ಥಳ ಠಾಣೆಗೆ ಶುಕ್ರವಾರ ರಾತ್ರಿ ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಕಲೆ ಹಾಕಿತು

ಎಸ್‌ಐಟಿಯಿಂದ ಕೈಬಿಡಲು ಮನವಿ

ಎಸ್‌ಐಟಿಯಿಂದ ತಮ್ಮನ್ನು ಕೈಬಿಡುವಂತೆ ಈ ತಂಡಕ್ಕೆ ಸರ್ಕಾರದಿಂದ ನೇಮಕವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಎಸ್‌ಪಿ ದರ್ಜೆಯ ಅಧಿಕಾರಿಯೊಬ್ಬರು ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಧರ್ಮಸ್ಥಳ ಶಿಕ್ಷಣ ಸಂಸ್ಥೆಗೆ ಸೇರಿದ ಕಾಲೇಜಿನಲ್ಲಿ ತಾವು ಓದಿದ್ದು, ಹೀಗಾಗಿ ತಮ್ಮನ್ನು ಕೈಬಿಡುವಂತೆ ಅವರು ಕೋರಿದ್ದಾರೆ. ಆದರೆ, ಅವರು ಯಾವುದೇ ಲಿಖಿತ ಮನವಿ ಮಾಡಿಲ್ಲ’ ಎಂದು ಮೂಲಗಳು ಹೇಳಿವೆ.

‘ಕೆಲ ನ್ಯಾಯಾಧೀಶರಿಗೆ ಜನಪ್ರಿಯತೆ ವ್ಯಸನ’

ಒಂದನೇ ಪುಟದಿಂದ...

‘ನ್ಯಾಯ ಬಯಸಿ ಬರುವ ಕಕ್ಷಿದಾರರೇ ನಮಗೆ ದೇವರು. ಅವರು ಕೋರ್ಟ್‌ಗೆ ಬಾರದಿದ್ದರೆ ನಾವೆಲ್ಲರೂ ಅಪ್ರಸ್ತುತ. ಆ ದೇವರಿಗೆ ನ್ಯಾಯದ ಸ್ಪಂದನೆ ಸಿಗದಿದ್ದರೆ ನ್ಯಾಯಾಂಗ ಇದ್ದೂ ವ್ಯರ್ಥ. ಜನಸಾಮಾನ್ಯರು ನ್ಯಾಯಾಂಗದ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸಕ್ಕೆ ಚ್ಯುತಿ ಬಾರಬಾರದಂತೆ ನಾವು ನಡೆದುಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

‘ದೇಶದಲ್ಲಿ ಇಂದು ಸ್ಥಿತ್ಯಂತರವಾಗುತ್ತಿದೆ. ದೇಶದ ಅಭ್ಯುದಯಕ್ಕೆ ಮತ್ತು ಸಾಮಾಜಿಕ ಪರಿವರ್ತನೆಗೆ ಕೊಡುಗೆ ನೀಡುವರು ಕಡಿಮೆಯಾಗುತ್ತಿದ್ದಾರೆ. ತಾವೂ ಸಾಮಾಜಿಕ ಎಂಜಿನಿಯರ್‌ಗಳು ಎಂಬುದನ್ನು ವಕೀಲರು ಮರೆತಿದ್ದಾರೆ. ವೃತ್ತಿಗೆ ಹಣದ ಸೋಂಕು ತಗುಲಿದ್ದು, ಎಲ್ಲರೂ ಅದರ ಹಿಂದೆಯೇ ಬಿದ್ದಿದ್ದಾರೆ’ ಎಂದು ನ್ಯಾ. ಸಂದೇಶ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ವಿ. ರೇಣುಕಾ, ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಮಿಟ್ಟಲ್‌ಕೊಡ್ ಎಸ್.ಎಸ್, ನಿರ್ದೇಶಕ ವಿಶಾಲ್ ರಘು ಎಚ್.ಎಸ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಬಿ.ಎಂ. ಶ್ರೀವತ್ಸ, ಕಾರ್ಯದರ್ಶಿ ತಿಮ್ಮೇಗೌಡ ಟಿ. ಮತ್ತು ಸಂಘದ ಪದಾಧಿಕಾರಿಗಳು ಇದ್ದರು.

‘ಸರಸ್ವತಿ ಇರುವೆಡೆ ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿರುತ್ತಾಳೆ’

‘ನಾನೆಂದೂ ಹಣದ ಹಿಂದೆ ಬಿದ್ದವನಲ್ಲ. ನಾನೇನಾದರೂ ಕಾಸು ಕೊಟ್ಟು ಕೆಲಸ ತೆಗೆದುಕೊಂಡಿದ್ದೇನೆ ಎಂದು ಯಾರಾದರೂ ಹೇಳಿ ನಿರೂಪಿಸಿದರೆ ನೇಣು ಹಾಕಿಕೊಳ್ಳುವೆ’ ಎಂದು ನ್ಯಾ. ಎಚ್‌.ಪಿ. ಸಂದೇಶ್ ಸವಾಲು ಹಾಕಿದರು.

‘ರೈತನ ಮಗನಾದ ನೀನು ಲಕ್ಷ್ಮಿ ಹಿಂದೆ ಬೀಳದೆ, ಸರಸ್ವತಿ ಹಿಂದೆ ಹೋಗು. ಸರಸ್ವತಿ ಇರುವೆಡೆ ಲಕ್ಷ್ಮಿ ಕಾಲು ಮುರಿದುಕೊಂಡು ಬಿದ್ದಿರುತ್ತಾಳೆ ಎಂದು 1992ರಲ್ಲಿ ನಾನು ವಕೀಲಿಕೆ ಶುರು ಮಾಡಿದಾಗ ನನ್ನ ಸೀನಿಯರ್ ಕೆ. ಅನಂತರಾಮಯ್ಯ ನನಗೆ ಕಿವಿಮಾತು ಹೇಳಿದ್ದರು’ ಎಂದರು.

‘ನಾವು ಸತ್ತಾಗ ಏನೂ ಒಯ್ಯುವುದಿಲ್ಲ. ವಕೀಲರು ಸಮಾಜದ ದನಿಯಾದಾಗಲಷ್ಟೇ ಕರಿ ಕೋಟಿಗೆ ಬೆಲೆ ಬರುತ್ತದೆ. ಆದರೆ, ಇಂದು ಹಿರಿಯ ವಕೀಲರು ಲಕ್ಷಗಟ್ಟಲೆ ಶುಲ್ಕ ವಿಧಿಸುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕಸಾಪ: ವಿಚಾರಣೆ ತಡೆಗೆ ನಕಾರ

ಒಂದನೇ ಪುಟದಿಂದ...

‘ವಿಚಾರಣಾಧಿಕಾರಿ ನೇಮಕಾತಿ ಆದೇಶವು ಅರ್ಜಿಯ ಕುರಿತಂತೆ ಹೈಕೋರ್ಟ್ ಹೊರಡಿಸಲಿರುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ’ ಎಂದು ಸ್ಪಷ್ಟಪಡಿಸಿದೆ.

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ 2025ರ ಜೂನ್ 29ರಂದು ಆಯೋಜಿಸಲು ಉದ್ದೇಶಿಸಲಾಗಿದ್ದ 2023-24ನೇ ಸಾಲಿನ ಕಸಾಪ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ರದ್ದುಪಡಿಸಿ ಜೂನ್ 27ರಂದು ಸಹಕಾರ ಸಂಘಗಳ ಉಪನಿಬಂಧಕರು ಆದೇಶಿಸಿದ್ದರು.

2023-24ರಿಂದ ಇಲ್ಲಿಯವರೆಗೆ ಪರಿಷತ್ತು ಅನುಮೋದಿಸಿರುವ ತಿದ್ದುಪಡಿಗಳು, ಆಡಳಿತ ಮಂಡಳಿ ಪದಾಧಿಕಾರಿಗಳಿಗೆ ಪರಿಷತ್ತಿನ ಅಧ್ಯಕ್ಷರು ನಿಯಮಬಾಹಿರವಾಗಿ ನೀಡಿದ್ದಾರೆ ಎನ್ನಲಾದ ನೋಟಿಸ್‌ಗಳು, 2023-24ನೇ ಸಾಲಿನಲ್ಲಿ ಪರಿಷತ್‌ಗೆ ಸಂಗ್ರಹವಾಗಿರುವ ಆದಾಯವನ್ನು ದುರುಪಯೋಗ ಮಾಡಿಕೊಂಡ ಆರೋಪ, ಈ ಅವಧಿಯಲ್ಲಿನ ಖರೀದಿ ಮತ್ತು ಮಾರಾಟದಲ್ಲಿ ಆಗಿರುವ ಅವ್ಯವಹಾರ ಮತ್ತಿತರ ವಿಷಯಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ನೇಮಕ ಮಾಡಿ 2025ರ ಜೂನ್ 30ರಂದು ಆದೇಶ ಹೊರಡಿಸಲಾಗಿತ್ತು.

‘ಕೂಡಲಸಂಗಮದ್ದೇ ಪಂಚಮಸಾಲಿ ಮೂಲ ಪೀಠ’

ಕುಷ್ಟಗಿ(ಕೊಪ್ಪಳ ಜಿಲ್ಲೆ): ‘ಕೂಡಲಸಂಗಮದ್ದೇ ಪಂಚಮಸಾಲಿ ಮೂಲ ಪೀಠವಾಗಿದೆ. ಭಕ್ತರ ಅಪೇಕ್ಷೆಯೂ ಅದೇ ಆಗಿದೆ. ಆದರೆ, ಪೀಠ ತ್ಯಜಿಸುವ ಅಥವಾ ಪ್ರತ್ಯೇಕ ಪೀಠದ ಕುರಿತು ನಾನು ಮಾತನಾಡುವುದಿಲ್ಲ’ ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಶನಿವಾರ ಪಟ್ಟಣದಲ್ಲಿ ನಡೆದ ಪಂಚಮಸಾಲಿ ಸಮುದಾಯದ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ತಮ್ಮ ಹಾಗೂ ವೀರಶೈವ ಲಿಂಗಾಯತ ಸಮಾಜದ ರಾಷ್ಟ್ರೀಯ ಅಧ್ಯಕ್ಷ, ಶಾಸಕ ವಿಜಯಾನಂದ ಕಾಶಪ್ಪನವರ ನಡುವಿನ ಹೇಳಿಕೆ, ಟೀಕೆಗಳ ಕುರಿತು ಪ್ರತಿಕ್ರಿಸಲು ನಿರಾಕರಿಸಿದ ಶ್ರೀಗಳು, ‘ಅವರೂ ಭಕ್ತರೆಂದು ತಿಳಿದು ಏನೇ ಮಾತನಾಡಿದರೂ ಟೀಕೆಗಳನ್ನು ಗೌರವಯುತವಾಗಿ ಸ್ವೀಕರಿಸುತ್ತೇನೆ’ ಎಂದು ಹೇಳಿದರು.

ಸ್ವಾಮೀಜಿ ಆಸ್ಪತ್ರೆ ಸೇರಿದ್ದೂ ನಾಟಕ ಎಂಬ ಟೀಕೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಸ್ವಲ್ಪ ಎದೆ ನೋವು ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಯಲ್ಲಿದ್ದೆ. ಸಮಾಜಕ್ಕೆ 2ಎ ಮೀಸಲಾತಿ ಕೊಡಿಸುವ ಗುರಿ ಮಾತ್ರ ನಮ್ಮ ಮುಂದಿದೆ’ ಎಂದರು.

‘ಬಸವತತ್ವ ವಿರೋಧಿ ಶಕ್ತಿಗಳಿಂದ ಕುತಂತ್ರ’

ವೀರಶೈವ ಪೀಠಾಚಾರ್ಯರ ಹೇಳಿಕೆಗೆ ಲಿಂಗಾಯತ ಮಠಾಧಿಪತಿಗಳ ಖಂಡನೆ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ದಾವಣಗೆರೆಯಲ್ಲಿ ಈಚೆಗೆ ನಡೆದ ವೀರಶೈವ ಪೀಠಾಚಾರ್ಯರ ಹಾಗೂ ಶಿವಾಚಾರ್ಯರ ಶೃಂಗ ಸಮ್ಮೇಳನದಲ್ಲಿ ಪಂಚಪೀಠದ ಆಚಾರ್ಯರು, ಕೆಲ ರಾಜಕೀಯ ಮುಖಂಡರು ‘ವೀರಶೈವ–ಲಿಂಗಾಯತ ಎರಡೂ ಒಂದೇ. ಸನಾತನ ಹಿಂದೂ ವೀರಶೈವ ಲಿಂಗಾಯತ ಧರ್ಮ’ ಎಂದು ನೀಡಿರುವ ಹೇಳಿಕೆ ಖಂಡನಾರ್ಹವಾದುದು’ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷರೂ ಆದ ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ.

ಬಸವಲಿಂಗ ಪಟ್ಟದ್ದೇವರು

‘ರಾಜ್ಯ ಸರ್ಕಾರ ವಿಶ್ವಗುರು ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ನಂತರ ಬಸವತತ್ವ ವಿರೋಧಿ ಶಕ್ತಿಗಳು ಒಗ್ಗಟ್ಟಾಗಿ ಆಂತರಿಕ, ಬಹಿರಂಗವಾಗಿ ಅನೇಕ ಕುತಂತ್ರಗಳು ಹೆಣೆಯುವ ಶತ ಪ್ರಯತ್ನಗಳನ್ನು ಮಾಡುತ್ತಿವೆ’ ಎಂದು ಶನಿವಾರ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ಆರೋಪಿಸಿದ್ದಾರೆ.

‘ಬಸವಣ್ಣನವರ ಹೆಸರು ಹೇಳುತ್ತಲೇ ತಮ್ಮ ಗುಪ್ತ ಅಜೆಂಡಾಗಳನ್ನು ಜಾರಿಗೊಳಿಸುವ ಪ್ರಯತ್ನಗಳು ತೀವ್ರವಾಗಿ ನಡೆಯುತ್ತಿವೆ. ಅದರ ಭಾಗವೇ ವೀರಶೈವ ಪಂಚಾಚಾರ್ಯರ, ಶಿವಾಚಾರ್ಯರ ಶೃಂಗ ಸಮ್ಮೇಳನ’ ಎಂದು ಹೇಳಿದ್ದಾರೆ.

‘ವೀರಶೈವ ಲಿಂಗಾಯತ ಎರಡೂ ಒಂದೇ ಆದರೆ ಪ್ರತ್ಯೇಕ ಧರ್ಮಕ್ಕೆ ಪಂಚಪೀಠಗಳು ವಿರೋಧಿ ಸುತ್ತಿರುವುದು ಏಕೆ? ಬಸವಣ್ಣನವರ ಕುರಿತು ಮಾತನಾಡುವ ಪಂಚಪೀಠಗಳು ಬಸವಣ್ಣನವರನ್ನು ಗುರು ಎಂದು ಎಂದೂ ಒಪ್ಪಿಕೊಂಡಿಲ್ಲ. ಅವರಿಗೆ ಬಸವತತ್ವದಲ್ಲಿ ನಂಬಿಕೆ ಇಲ್ಲ. ಲಿಂಗಾಯತರಿಗೆ ಅಲ್ಪಸಂಖ್ಯಾತ ಸ್ಥಾನಮಾನದ ಮಾನ್ಯತೆ ಏಕೆ ತಪ್ಪಿಸಿದರು? ಕೇದಾರದ ಸ್ವಾಮೀಜಿ ಪ್ರಧಾನ ಮಂತ್ರಿಗೆ ಕರೆ ಮಾಡಿ, ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ಕೊಡಬಾರದು ಎಂದು ಹೇಳಿರುವುದು ಏಕೆ? ಶೃಂಗ ಸಮ್ಮೇಳನದ ಆಮಂತ್ರಣ ಪತ್ರಿಕೆ, ವೇದಿಕೆಯಲ್ಲಿ ವಿಶ್ವಗುರು ಬಸವಣ್ಣನವರ ಫೋಟೊ ಏಕೆ ಹಾಕಲಿಲ್ಲ? ಜೊತೆಗೆ ಲಿಂಗಾಯತ ಶಬ್ದ ಏಕೆ ಕೈಬಿಡಲಾಗಿದೆ ಎಂಬುದರ ಬಗ್ಗೆ ಪಂಚಪೀಠಗಳು ಉತ್ತರಿಸಬಹುದೇ’ ಎಂದು ಪ್ರಶ್ನಿಸಿದ್ದಾರೆ.

ವಿಜಯಾನಂದ ಕಾಶಪ್ಪನವರ ಹೇಳಿಕೆಗೆ ಖಂಡನೆ

ಶಿವಾಚಾರ್ಯರ ಶೃಂಗ ಸಮ್ಮೇಳನದಲ್ಲಿ ಶಾಸಕ ವಿಜಯಾನಂದ ಕಾಶಪ್ಪನವರ ಅವರು ‘ಪಂಚಪೀಠಗಳಿಗೆ ಕೂಡಲಸಂಗಮಕ್ಕೆ ಆಹ್ವಾನ ನೀಡಿ, ಪಂಚಪೀಠಾಧಿಶರರು ಕೂಡಲಸಂಗಮಕ್ಕೆ ಬಂದು ಆ ಭೂಮಿ ಪಾವನ ಮಾಡಬೇಕು. ಅಲ್ಲಿ ಅಡ್ಡಪಲ್ಲಕಿ ಉತ್ಸವ ಮಾಡಲಿದ್ದೇವೆ’ ಎಂದು ನೀಡಿರುವ ಹೇಳಿಕೆ ಖಂಡನೀಯ ಎಂದು ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ.

‘ಬಸವಣ್ಣನವರ ನೆಲದಲ್ಲಿ ಬಸವತತ್ವದ ಚಿಂತನೆಗಳು ಜಾರಿಯಾಗಬೇಕೆ ವಿನಃ ಬಸವತತ್ವ ವಿರೋಧಿ ಅಡ್ಡಪಲ್ಲಕಿಗಳಂತಹ ಅಮಾನವೀಯ ಕಾರ್ಯಗಳು ನಡೆಯಬಾರದು. ಒಂದು ವೇಳೆ ವಿಜಯಾನಂದ ಕಾಶಪ್ಪನವರು ಈ ರೀತಿ ಮಾಡಿದರೆ ನಾಡಿನ ಸಮಸ್ತ ಬಸವಭಕ್ತರು, ಪ್ರಗತಿಪರ ಚಿಂತಕರು, ಸಂವಿಧಾನ ಪ್ರೇಮಿಗಳು ಇದನ್ನು ಒಗ್ಗಟ್ಟಿನಿಂದ ಪ್ರತಿಭಟಿಸುತ್ತೇವೆ’ ಎಂದು ಎಚ್ಚರಿಸಿದ್ದಾರೆ.

‘ಬಸವಸಂಸ್ಕೃತಿಯ ಜಾಗೃತಿಯ ಭಯದಿಂದ ಪಂಚಪೀಠಗಳು ಒಗ್ಗಟ್ಟಾಗಿವೆ. ಬಸವ ಪರಂಪರೆಯ ಮಠಾಧೀಶರ ಒಗ್ಗಟ್ಟಿನಿಂದ ಭಯಭೀತಗೊಂಡ ಪಂಚಪೀಠಗಳು ಶೃಂಗ ಸಮ್ಮೇಳನ ಮಾಡಿವೆ ವಿನಃ ಇದರ ಹಿಂದೆ ಸಮಾಜದ ಹಿತ, ಸಮಾಜದ ಒಗ್ಗಟ್ಟಿನ ಯಾವ ಉದ್ದೇಶವೂ ಸ್ಪಷ್ಟವಾಗಿ ಕಂಡಿಲ್ಲ. ಜನಮನದಲ್ಲಿ ಬಸವಪ್ರಜ್ಞೆ ಬೆಳೆದರೆ ನಮ್ಮ ಪೀಠ ಮತ್ತು ಮಠಗಳು ಮೂಲೆ ಗುಂಪು ಆಗುತ್ತವೆ ಎಂಬ ಭಯ ಪಂಚಪೀಠಗಳಿಗೆ ಕಾಡುತ್ತಿದೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಆಮದು ಹೆಚ್ಚಳ: ದೇಶಿ ಉತ್ಪನ್ನಕ್ಕೆ ರಕ್ಷಣೆ’

ಎಫ್‌ಟಿಎ ಅಡಿ ಇರುವ ಸುರಕ್ಷತಾ ಕ್ರಮಗಳ ಬಗ್ಗೆ ಕೇಂದ್ರದ ವಿವರಣೆ

ಬ್ರಿಟನ್ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದವು ಅಭಿವೃದ್ಧಿ ಹೊಂದಿದ ಜಗತ್ತಿಗೆ ಪ್ರವೇಶಿಸಲು ಭಾರತಕ್ಕೆ ಬಾಗಿಲು ತೆರೆದುಕೊಡುತ್ತದೆ

ಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ನವದೆಹಲಿ (ಪಿಟಿಐ): ಬ್ರಿಟನ್ನಿನಿಂದ ಆಗುವ ಆಮದು ಇದ್ದಕ್ಕಿದ್ದಂತೆ ಹೆಚ್ಚಳ ಕಂಡು, ದೇಶದ ಕೈಗಾರಿಕೆಗಳಿಗೆ ಅದರಿಂದ ಧಕ್ಕೆ ಆದಲ್ಲಿ, ತಾತ್ಕಾಲಿಕವಾಗಿ ಆಮದು ಸುಂಕ ಹೆಚ್ಚು ಮಾಡಲು ಭಾರತಕ್ಕೆ ಅವಕಾಶ ಇದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ತಿಳಿಸಿದೆ.

ತಾತ್ಕಾಲಿಕವಾಗಿ ಸುಂಕವನ್ನು ಹೆಚ್ಚಿಸುವುದಷ್ಟೇ ಅಲ್ಲದೆ, ಕೆಲವು ವಿನಾಯಿತಿಗಳನ್ನು ಅಮಾನತಿನಲ್ಲಿ ಇರಿಸಲಿಕ್ಕೂ ಅವಕಾಶ ಇದೆ ಎಂದು ಸಚಿವಾಲಯ ಹೇಳಿದೆ. ಭಾರತ ಮತ್ತು ಬ್ರಿಟನ್ ನಡುವೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಗುರುವಾರ ಸಹಿ ಹಾಕಲಾಗಿದೆ.

‘ಮುಕ್ತ ವ್ಯಾಪಾರ ಒಪ್ಪಂದದಲ್ಲಿ ದ್ವಿಪಕ್ಷೀಯ ಸುರಕ್ಷತಾ ಕ್ರಮಗಳು ಇವೆ. ಈ ಕ್ರಮಗಳ ಅಡಿಯಲ್ಲಿ, ಬ್ರಿಟನ್ನಿನಿಂದ ಆಗುವ ಆಮದು ಗಣನೀಯವಾಗಿ ದಿಢೀರ್ ಹೆಚ್ಚಳವಾಗಿ ಭಾರತದ ಕೈಗಾರಿಕೆಗಳಿಗೆ ಗಂಭೀರ ಅಪಾಯ ಎದುರಾದರೆ ನಿರ್ದಿಷ್ಟ ಸರಕುಗಳ ಮೇಲೆ ತಾತ್ಕಾಲಿಕವಾಗಿ ತೆರಿಗೆ ಹೆಚ್ಚು ಮಾಡುವುದಕ್ಕೆ ಅಥವಾ ತೆರಿಗೆ ವಿನಾಯಿತಿಯನ್ನು ಅಮಾನತಿನಲ್ಲಿ ಇರಿಸುವುದಕ್ಕೆ ಭಾರತಕ್ಕೆ ಅವಕಾಶ ಇದೆ’ ಎಂದು ಸಚಿವಾಲಯ ಹೇಳಿದೆ.

ಒಪ್ಪಂದದ ಅಡಿಯಲ್ಲಿ ಆರಂಭಿಕವಾಗಿ, ಈ ಸುರಕ್ಷತಾ ಕ್ರಮಗಳು ಗರಿಷ್ಠ ಎರಡು ವರ್ಷಗಳ ಅವಧಿಯನ್ನು ಹೊಂದಿವೆ. ಸುರಕ್ಷತಾ ಕ್ರಮಗಳ ಅಗತ್ಯವು ಇನ್ನೂ ಇದೆ ಎಂಬುದು ತನಿಖೆಯಿಂದ ಗೊತ್ತಾದರೆ ಕ್ರಮಗಳನ್ನು ಹೆಚ್ಚುವರಿಯಾಗಿ ಎರಡು ವರ್ಷಗಳವರೆಗೆ ವಿಸ್ತರಿಸಿಕೊಳ್ಳಲು ಕೂಡ ಅವಕಾಶ ಇದೆ.

ಅಲ್ಲದೆ, ಸುರಕ್ಷತಾ ಕ್ರಮಗಳನ್ನು ಎರಡು ವರ್ಷಗಳ ಅವಧಿಗೆ ಮಾತ್ರವೇ ಅನುಷ್ಠಾನಕ್ಕೆ ತಂದರೆ ಭಾರತಕ್ಕಾಗಲಿ ಬ್ರಿಟನ್‌ಗಾಗಲಿ ಪ್ರತೀಕಾರ ಕ್ರಮ ಕೈಗೊಳ್ಳಲು ಅವಕಾಶ ಇರುವುದಿಲ್ಲ. ನಾಲ್ಕು ವರ್ಷಗಳಿಗೆ ಕ್ರಮಗಳನ್ನು ವಿಸ್ತರಿಸಿದಲ್ಲಿ, ಪ್ರತೀಕಾರ ಕ್ರಮ ಕೈಗೊಳ್ಳಲು ಅವಕಾಶ ಇರಲಿದೆ.

ಸೂಕ್ಷ್ಮ ವಲಯ ರಕ್ಷಿಸಲಾಗಿದೆ: ಬ್ರಿಟನ್ ಜೊತೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದದಲ್ಲಿ ಭಾರತವು ತನ್ನ ಹೈನುಗಾರಿಕೆ, ಅಕ್ಕಿ ಮತ್ತು ಸಕ್ಕರೆ ವಲಯಗಳು ಸೇರಿದಂತೆ ಎಲ್ಲ ಸೂಕ್ಷ್ಮ ವಲಯಗಳನ್ನು ರಕ್ಷಿಸಿಕೊಂಡಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

‘ದೇಶದ ಎಲ್ಲ ಸೂಕ್ಷ್ಮ ವಲಯಗಳನ್ನು ನಾವು ಕಾಪಾಡಿಕೊಂಡಿದ್ದೇವೆ, ಅವುಗಳನ್ನು ಬ್ರಿಟನ್ನಿನ ಉತ್ಪನ್ನಗಳಿಗೆ ಮುಕ್ತವಾಗಿಸಿಲ್ಲ. ಯಾವುದೇ ಹೊಂದಾಣಿಕೆಗಳು ಇಲ್ಲದ ಹಾಗೂ ವ್ಯಾಪಕವಾದ ಪ್ರಯೋಜನಗಳನ್ನು ಹೊಂದಿರುವ ಇದು ಅಸಾಮಾನ್ಯ ಒಪ್ಪಂದ’ ಎಂದು ಅವರು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಇರಾನ್: ಆರು ಜನರ ಹತ್ಯೆ

ದುಬೈ (ಎಪಿ): ಆಗ್ನೇಯ ಇರಾನ್‌ನ ನ್ಯಾಯಾಲಯ ಕಟ್ಟಡದ ಮೇಲೆ ಶನಿವಾರ ದಾಳಿಕೋರರು ಗುಂಡು ಮತ್ತು ಗ್ರೆನೇಡ್ ದಾಳಿ ನಡೆಸಿದ್ದು, ಆರು ಮಂದಿ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ 20 ಮಂದಿ ಗಾಯಗೊಂಡಿದ್ದಾರೆ ಎಂದು ಅಲ್ಲಿನ ಸರ್ಕಾರಿ ವಾಹಿನಿ ವರದಿ ಮಾಡಿದೆ.

ಜಹೇದಾನ್‌ನಲ್ಲಿ ದಾಳಿ ನಡೆದಿದೆ. ದಾಳಿಗೆ ಇರಾನ್‌ನ ಪೂರ್ವ ಸಿಸ್ತಾನ್ ಮತ್ತು ಪಾಕಿಸ್ತಾನದ ನೈರುತ್ಯ ಬಲೂಚಿಸ್ತಾನ ಪ್ರಾಂತ್ಯಗಳಿಗೆ ಸ್ವಾತಂತ್ರ್ಯವನ್ನು ಬಯಸುವ ಉಗ್ರರ ಗುಂಪು ಜೈಶ್ ಅಲ್-ಅದ್ಲ್ ಕಾರಣ ಎಂದು ತಸ್ನಿಮ್ ಸುದ್ದಿ ಸಂಸ್ಥೆಯು ತನ್ನ ವರದಿಯಲ್ಲಿ ಆರೋಪಿಸಿದೆ.

ಸಿಸ್ತಾನ್ ಮತ್ತು ಬಲೂಚಿಸ್ತಾನ ಪ್ರಾಂತ್ಯದಲ್ಲಿ ನಡೆದ ಸಶಸ್ತ್ರ ದಾಳಿಯಲ್ಲಿ ಭದ್ರತಾ ಪಡೆ ಮೂವರು ಬಂದೂಕುಧಾರಿಗಳನ್ನು ಹತ್ಯೆ ಮಾಡಿದೆ. ಮೃತರು ಯಾರೆಂದು ತಿಳಿದುಬಂದಿಲ್ಲ.

ಮುಂಬೈ ಧಾರಣೆ (ಶೇಂಗಾ)	
26-07-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1198 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1280)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,800 (97,900)
ಬೆಳ್ಳಿ ಕೆ.ಜಿಗೆ	1,12,950 (1,14,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕಾರು ಬಿಡುಗಡೆ

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ‘ಎಕ್ಸ್‌ಯುವಿ 3ಎಕ್ಸ್‌ಒ ರೆವ್‌ಎಕ್ಸ್’ ಸರಣಿಯ ಕಾರನ್ನು ಬೆಂಗಳೂರಿನಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು. ಕಂಪನಿಯ ಹಿರಿಯ ಅಧಿಕಾರಿಗಳಾದ ನೇಹಾ ಆನಂದ್ ಮತ್ತು ಬಾನೇಶ್ವರ್ ಬ್ಯಾನರ್ಜಿ ಚಿತ್ರದಲ್ಲಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹525
	12 ಕ್ಕೆ	₹75
ಮೈಸೂರು:	100 ಕ್ಕೆ	₹525

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹255-550
ದ್ವಿತಳಿ (ಬಿ.ವಿ)	₹255-716

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹209
ಆರ್‌ಎಸ್‌ಎಸ್-5	₹203
ಗುಡ್ ಲಾಟ್	₹186.50

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1235 (1240)
ಸೂರ್ಯಕಾಂತಿ (ರಿಫೈನ್ಡ್)	₹1365 (1370)
ಪಾಮೋಲಿನ್	₹1200 (1205)

8 ಕೋಟಿ ದಾಟಿದ ಎಪಿವೈ ಚಂದಾದಾರರು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆ ‘ಅಟಲ್ ಪಿಂಚಣಿ ಯೋಜನೆ’ಯಲ್ಲಿ (ಎಪಿವೈ) ನೋಂದಣಿ ಮಾಡಿಸಿಕೊಂಡವರ ಸಂಖ್ಯೆ ಎಂಟು ಕೋಟಿ ದಾಟಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಇದುವರೆಗೆ ಹೊಸದಾಗಿ 39 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ ಎಂದು ತಿಳಿಸಿದೆ.

ದೇಶದ ಎಲ್ಲರಿಗೂ ಸಾಮಾಜಿಕ ಭದ್ರತೆಯನ್ನು ಕಲ್ಪಿಸುವ ಉದ್ದೇಶದಿಂದ 2015ರ ಮೇ 9ರಂದು ಕೇಂದ್ರ ಸರ್ಕಾರ ಈ ಯೋಜನೆ ಆರಂಭಿಸಿತು. ಬಡವರು, ಅಸಂಘಟಿತ ವಲಯದಲ್ಲಿನ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

Together We Can
ಕೆನರಾ ಬ್ಯಾಂಕ್ Canara Bank
A Government of India Undertaking

ಈ ಯೋಜನೆಯ ಅಡಿ ನೋಂದಾಯಿಸಿಕೊಂಡವರು ಕಟ್ಟುವ ಮೊತ್ತಕ್ಕೆ ಅನುಗುಣವಾಗಿ ಮಾಸಿಕ ₹1 ಸಾವಿರದಿಂದ ₹5 ಸಾವಿರವರೆಗೆ ಪಿಂಚಣಿ ಸಿಗುತ್ತದೆ. ಆದಾಯ ತೆರಿಗೆ ಪಾವತಿಸುವವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ. ಪಿಂಚಣಿ ಮೊತ್ತವು 60 ವರ್ಷ ವಯಸ್ಸಾದ ನಂತರ ಸಿಗುತ್ತದೆ.

ಸುದ್ದಿ 2 ನಿಮಿಷ

ಖಾಸಗಿ ಬ್ಯಾಂಕ್‌ಗಳ ವಿರುದ್ಧ ಎಫ್‌ಎಡಿಎ ದೂರು

ನವದೆಹಲಿ (ಪಿಟಿಐ): ರೆಪೊ ದರ ಕಡಿಮೆ ಆಗಿದ್ದರೂ ಕೆಲವು ಖಾಸಗಿ ಬ್ಯಾಂಕ್‌ಗಳು ಅದರ ಪ್ರಯೋಜನವನ್ನು ವಾಹನ ಸಾಲ ಪಡೆದವರಿಗೆ ವರ್ಗಾಯಿಸುತ್ತಿಲ್ಲ ಎಂದು ಆರೋಪಿಸಿರುವ ಆಟೊಮೊಬೈಲ್ ಡೀಲರ್‌ಗಳ ಸಂಘಟನೆಗಳ ಒಕ್ಕೂಟವು (ಎಫ್‌ಎಡಿಎ) ಈ ವಿಚಾರದಲ್ಲಿ ಆರ್‌ಬಿಐ ಮಧ್ಯಪ್ರವೇಶ ಮಾಡಬೇಕು ಎಂದು ಆಗ್ರಹಿಸಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರಿಗೆ ಪತ್ರ ಬರೆದಿರುವ ಒಕ್ಕೂಟವು, ವಾಹನಸಾಲಗಳ ಬಡ್ಡಿ ದರವನ್ನು ರೆಪೊ ದರಕ್ಕೆ ಅನುಗುಣವಾಗಿ ತಗ್ಗಿಸುವಲ್ಲಿ ಖಾಸಗಿ ಬ್ಯಾಂಕ್‌ಗಳಿಂದ ಆಗಿರುವ ವಿಳಂಬವನ್ನು ಪರಿಶೀಲಿಸಬೇಕು ಎಂದು ಕೋರಿದೆ. ಅಲ್ಲದೆ, ಈ ಬ್ಯಾಂಕ್‌ಗಳಿಗೆ ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳಲು ನಿರ್ದೇಶನ ನೀಡಬೇಕು ಎಂದು ಕೋರಿದೆ.

‘ನಿಮ್ಮ ನಾಯಕತ್ವದಲ್ಲಿ ಆರ್‌ಬಿಐ ಅತ್ಯಂತ ತ್ವರಿತವಾಗಿ ರೆಪೊ ದರವನ್ನು ತಗ್ಗಿಸಿದೆ. ಇದು ಅರ್ಥ ವ್ಯವಸ್ಥೆಗೆ ಒಳ್ಳೆಯ ಸಂದೇಶ ರವಾನಿಸಿದೆ. ಹೀಗಿದ್ದರೂ ಈ ಪ್ರಯೋಜನವು ವಾಹನ ಸಾಲ ವಲಯದಲ್ಲಿ ಸ್ಪಷ್ಟವಾಗಿ ಕಾಣುತ್ತಿಲ್ಲ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ರೆಪೊ ದರ ಇಳಿಕೆಯನ್ನು ವಾಹನ ಸಾಲ ಪಡೆದವರಿಗೆ ತಕ್ಷಣವೇ ವರ್ಗಾಯಿಸಿವೆ. ಆದರೆ ಖಾಸಗಿ ಸ್ವಾಮ್ಯದ ಹಲವು ಬ್ಯಾಂಕ್‌ಗಳು ಬಡ್ಡಿ ಇಳಿಕೆಯನ್ನು ವಿಳಂಬಗೊಳಿಸಿವೆ’ ಎಂದು ಒಕ್ಕೂಟದ ಉಪಾಧ್ಯಕ್ಷ ಸಾಯಿ ಗಿರಿಧರ್ ಅವರು ಆರ್‌ಬಿಐಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಜೋಯಾಲುಕ್ಕಾಸ್‌ನಿಂದ ವಿಶೇಷ ಕೊಡುಗೆ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಜೋಯಾಲುಕ್ಕಾಸ್, ಜುಲೈ 25ರಿಂದ ಆಗಸ್ಟ್ 17ರವರೆಗೆ ‘ಜ್ಯುವೆಲ್ಸ್ ಆಫ್ ಜಾಯ್’ ವಿಶೇಷ ಉತ್ಸವ ಆರಂಭಿಸಿದೆ.

ಈ ಉತ್ಸವದ ಭಾಗವಾಗಿ, ಗ್ರಾಹಕರಿಗೆ ವಜ್ರ ಮತ್ತು ಕತ್ತರಿಸದ ವಜ್ರದ ಮೌಲ್ಯದ ಮೇಲೆ ಶೇಕಡ 25ರಷ್ಟು ರಿಯಾಯಿತಿ ದೊರೆಯಲಿದೆ. ₹1 ಲಕ್ಷ ಮತ್ತು ಅದಕ್ಕಿಂತಲೂ ಅಧಿಕ ಮೌಲ್ಯದ ಚಿನ್ನ ಮತ್ತು ಅಮೂಲ್ಯ ಹರಳುಗಳನ್ನು ಖರೀದಿಸುವ ಗ್ರಾಹಕರಿಗೆ 5 ಗ್ರಾಂ ಬೆಳ್ಳಿಯ ಗಟ್ಟಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಜೋಯಾಲುಕ್ಕಾಸ್ ತಿಳಿಸಿದೆ.

‘ಹಬ್ಬಗಳು ಸುಂದರ ನೆನಪುಗಳ ಸಂತಸವನ್ನು ತರುತ್ತವೆ. ಹೀಗಾಗಿ, ಹಬ್ಬದ ಸಂತಸವನ್ನು ಇನ್ನಷ್ಟು ಹೆಚ್ಚಿಸಲು ಆಗಸ್ಟ್ 17ರವರೆಗೆ ಗ್ರಾಹಕರಿಗೆ ಈ ಕೊಡುಗೆ ನೀಡುತ್ತಿದ್ದೇವೆ. ಮಳಿಗೆಯಲ್ಲಿ ವಿವಿಧ ಶ್ರೇಣಿಯ ಆಭರಣಗಳು ಲಭ್ಯವಿವೆ. ಗ್ರಾಹಕರು ಹತ್ತಿರದ ಜೋಯಾಲುಕ್ಕಾಸ್ ಮಳಿಗೆಗೆ ಭೇಟಿ ನೀಡಿ ಕೊಡುಗೆಯನ್ನು ಪಡೆದುಕೊಳ್ಳಬೇಕು’ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಹೇಳಿದ್ದಾರೆ.

ಕೊಳೆಯುತ್ತಿದೆ ಕಾಫಿ ಫಸಲು ಆತಂಕದಲ್ಲಿ ಬೆಳೆಗಾರರು

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಎರಡು ದಿನಗಳಿಂದ ಗಾಳಿ-ಮಳೆ ಬಿರುಸುಗೊಂಡಿದ್ದು ಕಾಫಿ ಗಿಡಗಳಲ್ಲಿ ಕೊಳೆರೋಗ ಹೆಚ್ಚಾಗುತ್ತಿದ್ದು ಫಸಲು ಮಣ್ಣು ಪಾಲಾಗುತ್ತಿದೆ. ನಾಲ್ಕುನಾಡು ವ್ಯಾಪ್ತಿಯಲ್ಲಿ ಕೊಳೆರೋಗ ವ್ಯಾಪಕವಾಗಿದೆ.

ಕಾಫಿ ಗಿಡದ ಎಲೆಗಳು ಕೊಳೆತು ಬೀಳುತ್ತಿವೆ. ಗೊಂಚಲುಗಳು ಕಪ್ಪು ಬಣ್ಣಕ್ಕೆ ತಿರುಗುತ್ತಿವೆ. ಕಾಫಿ ಮಿಡಿಗಳು ದಪ್ಪವಾಗುವ ಈ ಹಂತದಲ್ಲಿ ಉದುರುವಿಕೆ ಹೆಚ್ಚಾಗಿದೆ. ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದ ಬೆಳೆಗಾರರು ಆತಂಕಕ್ಕೆ ಒಳಗಾಗುವಂತಾಗಿದೆ.

‘ಕಾಫಿಗೆ ಈಚಿನ ದಿನಗಳಲ್ಲಿ ಉತ್ತಮ ಧಾರಣೆ ಇದೆ. ಹೆಚ್ಚು ಇಳುವರಿ ಪಡೆಯುವ ಉದ್ದೇಶದಿಂದ ಬೇಸಿಗೆ ಅವಧಿಯಲ್ಲಿ ತೋಟಗಳಿಗೆ ತುಂತುರು ನೀರಾವರಿ ಮೂಲಕ ಕೆರೆಗಳಿಂದ ನೀರು ಹಾಯಿಸಿದ್ದೆವು. ನಿರಂತರ ಮಳೆಯಿಂದಾಗಿ ಫಸಲಿಗೆ ಹಾನಿಯಾಗುತ್ತಿದೆ. ಕೊಳೆರೋಗವೂ ವ್ಯಾಪಿಸಿದೆ. ತೋಟದಲ್ಲಿ ಮುರಿದುಬಿದ್ದ ಮರದ ರೆಂಬೆಗಳನ್ನು ಕತ್ತರಿಸಲು ಸಾಧ್ಯವಾಗುತ್ತಿಲ್ಲ’ ಎಂದು ಕೃಷಿಕ ರವೀಂದ್ರ ತಿಳಿಸಿದರು.

ನಾಪೋಕ್ಲು ಹೊರವಲಯದ ಕಾಫಿ ತೋಟವೊಂದರಲ್ಲಿ ಕಾಫಿಯ ಕಾಯಿಗಳು ಉದುರಿವೆ

‘ಇದು ಕಾಫಿ ತೋಟಗಳಲ್ಲಿ ಕಳೆ ನಿರ್ಮೂಲನೆಯ ಸಮಯ. ಕಾಫಿ ಗಿಡಗಳಲ್ಲಿ ಇರುವ ಚಿಗುರು ತೆಗೆಯಬೇಕು. ಆದರೆ, ಈ ಕೆಲಸಕ್ಕೆ ಮಳೆ ಅಡ್ಡಿಯಾಗಿದೆ’ ಎಂದು ಬಲಮುರಿ ಗ್ರಾಮದ ಕುಶಾಲಪ್ಪ ಹೇಳಿದರು.

‘ಕಳೆದ ವರ್ಷ ಕಾಳು ಮೆಣಸಿನ ಇಳುವರಿ ಕುಂಠಿತಗೊಂಡಿತ್ತು. ಈ ಬಾರಿ ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದೇವು. ಇದೇ ರೀತಿ ಮಳೆ ಮುಂದುವರಿದರೆ ಕಾಫಿಯೊಂದಿಗೆ ಕಾಳು ಮೆಣಸಿನ ಫಸಲೂ ಕೈತಪ್ಪುವ ಸಾಧ್ಯತೆ ಇದೆ’ ಎಂಬುದು ನಾಲ್ಕುನಾಡಿನ ಬೆಳೆಗಾರರ ಅಳಲು ತೋಡಿಕೊಂಡರು.

‘ಭಾರತ–ಮಾಲ್ದೀವ್ಸ್ ಸಂಬಂಧ ವೃದ್ಧಿಗೆ ಒತ್ತು’

ಮಾಲೆ (ಪಿಟಿಐ): ‘ಮಾಲ್ದೀವ್ಸ್‌ನೊಂದಿಗೆ ಇನ್ನಷ್ಟು ಬಲವಾದ ಬಾಂಧವ್ಯ ವೃದ್ಧಿಸಿಕೊಳ್ಳಲು ಭಾರತ ಎದುರು ನೋಡುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಪ್ರಧಾನಿ ಮೋದಿ ಅವರು ಎರಡು ದಿನಗಳ ಮಾಲ್ದೀವ್ಸ್ ಪ್ರವಾಸ ಕೈಗೊಂಡಿದ್ದರು. ಈ ವೇಳೆ ಅವರು ಇಲ್ಲಿನ ಉಪಾಧ್ಯಕ್ಷ ಉಝ್ ಹುಸೇನ್ ಮೊಹಮ್ಮದ್ ಲತೀಫ್ ಸೇರಿದಂತೆ ಹಲವು ಪ್ರಮುಖ ನಾಯಕರನ್ನು ಭೇಟಿ ಮಾಡಿದರು.

ಎರಡೂ ದೇಶಗಳ ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳುವ ಸಂಬಂಧ ಲತೀಫ್ ಅವರೊಂದಿಗೆ ಮಹತ್ವದ ಮಾತುಕತೆಯನ್ನೂ ಮೋದಿ ನಡೆಸಿದರು.

ಮಾಲ್ದೀವ್ಸ್ ಸಂಸತ್ತಿನ ಸ್ಪೀಕರ್ ಅಬ್ದುಲ್ ರೆಹಮಾನ್ ಅಬ್ದುಲ್ಲಾ ಅವರನ್ನು ಭೇಟಿ ಮಾಡಿದ ಮೋದಿ ಅವರು, ಎರಡೂ ದೇಶಗಳ ಮಧ್ಯೆ ‘ಸಂಸತ್ತಿನ ಸ್ನೇಹ ಗುಂಪು’ವೊಂದನ್ನು ರೂಪಿಸಿದ್ದನ್ನು ಸ್ವಾಗತಿಸಿದರು. ಪ್ರಧಾನಿ ಮೋದಿ ಅವರಿಗಾಗಿ ಶುಕ್ರವಾರ ರಾತ್ರಿ ಭೋಜನಕೂಟವನ್ನು ಆಯೋಜಿಸಲಾಗಿತ್ತು.

ಪ್ರಧಾನಿ ಮೋದಿ ಅವರು ಮಾಲ್ದೀವ್ಸ್‌ನ ಪ್ರಮುಖ ನಾಯಕರೊಂದಿಗೆ ಶನಿವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

‘ಬಿಡಿಸಲಾಗದ ಬಾಂಧವ್ಯ’

ಭಾರತ–ಮಾಲ್ದೀವ್ಸ್ ಸಂಬಂಧವು ದ್ವಿಪಕ್ಷೀಯ ಮಾತುಕತೆಗಳನ್ನೂ ಮೀರಿದ ಆಳವಾದ ಬಾಂಧವ್ಯವಾಗಿದೆ. ಇದಕ್ಕೆ ಶತಮಾನಗಳ ಇತಿಹಾಸವಿದೆ. ಇದಕ್ಕೆ ಹಿಂದೂ ಮಹಾಸಾಗರವು ಸಾಕ್ಷಿ ಎಂಬಂತಿದೆ. ಎರಡೂ ದೇಶಗಳ ಬೆಳವಣಿಗೆ, ವ್ಯಾಪಾರ ಸಂಬಂಧ, ನೆರೆಯ ದೇಶಗಳಾಗಿ ಇರುವುದು, ಬಿಡಿಸಲಾಗದ ಬಾಂಧವ್ಯ.. ಹೀಗೆ ಎಲ್ಲದಕ್ಕೂ ಈ ಸಮುದ್ರ ಸಾಕ್ಷಿಯಾಗಿದೆ

ಮೊಹಮ್ಮದ್ ಮುಯಿಜು, ಮಾಲ್ದೀವ್ಸ್ ಅಧ್ಯಕ್ಷ

ಗಾಜಾ: ಇಸ್ರೇಲ್ ಗುಂಡಿನ ದಾಳಿಗೆ 25 ಬಲಿ

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಶುಕ್ರವಾರ ತಡರಾತ್ರಿಯಿಡೀ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ಹಾಗೂ ಗುಂಡಿನ ದಾಳಿಯಿಂದ ಕನಿಷ್ಠ 25 ಮಂದಿ ಮೃತಪಟ್ಟಿದ್ದಾರೆ ಎಂದು ಇಲ್ಲಿನ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಗಾಜಾದಲ್ಲಿ ತೀವ್ರ ಕ್ಷಾಮ ಎದುರಾಗಿದ್ದು, ಎರಡು ರಾಷ್ಟ್ರಗಳ ನಡುವಿನ ಕದನ ವಿರಾಮ ಮಾತುಕತೆಯೂ ಸ್ಥಗಿತಗೊಂಡಿದೆ.

ಇಸ್ರೇಲ್‌ಗೆ ಹೊಂದಿಕೊಂಡಿರುವ ಝಿಕಿಮ್ ಭಾಗದಲ್ಲಿ ಆಹಾರ ಸಾಮಗ್ರಿಗಳನ್ನು ಹೊತ್ತು ತಂದಿದ್ದ ನೆರವಿನ ಟ್ರಕ್‌ಗಾಗಿ ಕಾಯುತ್ತಿದ್ದ ವೇಳೆ ಗುಂಡಿನ ದಾಳಿ ನಡೆದಿದ್ದರಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಮೃತಪಟ್ಟಿದ್ದಾರೆ ಎಂದು ಶಿಫಾ ಆಸ್ಪತ್ರೆಯ ಸಿಬ್ಬಂದಿ ತಿಳಿಸಿದ್ದಾರೆ. ಎಲ್ಲರ ದೇಹಗಳನ್ನು ಇಲ್ಲಿನ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಇತ್ತೀಚೆಗೆ ನಡೆಸಿದ ಗುಂಡಿನ ದಾಳಿ ಕುರಿತು ಇಸ್ರೇಲ್ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಗಾಜಾ ನಗರದ ಅಪಾರ್ಟ್‌ಮೆಂಟ್ ಮೇಲೆ ನಡೆದ ಗುಂಡಿನ ದಾಳಿಯಲ್ಲಿ ನಾಲ್ಕು ಮಂದಿ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಎಂ. ಸುಶೀಲಾ
W/o. ದಿವಂಗತ ಜಿ. ಮುನಿಯಪ್ಪ, IAS (Retd.)
27-07-1990
ಎಂ.ಕವಿತ, ಎಂ. ರೇಖ, ಹೇಮಲತಾ ಎಲ್. ಹಾಗೂ ಕುಟುಂಬ ವರ್ಗದವರು

ಅನುದಾನ ರದ್ದುಗೊಳಿಸಿದ್ದ ಟ್ರಂಪ್ ನಿರ್ಧಾರಕ್ಕೆ ತಡೆ

ವಾಷಿಂಗ್ಟನ್ (ಎಪಿ): ಇಲ್ಲಿನ ‘ಆಥರ್ಸ್ ಗಿಲ್ಡ್’ (ಲೇಖಕರ ಒಕ್ಕೂಟ)ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮೂಹಿಕವಾಗಿ ಅನುದಾನ ರದ್ದುಗೊಳಿಸಿದ್ದ ಕ್ರಮಕ್ಕೆ ನ್ಯೂಯಾರ್ಕ್‌ನ ಜಿಲ್ಲಾ ನ್ಯಾಯಾಲಯವು ಮಧ್ಯಂತರ ತಡೆ ನೀಡಿದೆ.

ಸದಸ್ಯರಿಗೆ ನೀಡಿದ್ದ ಅನುದಾನ ರದ್ದುಗೊಳಿಸಿದ ನಿರ್ಧಾರಕ್ಕೆ ನ್ಯೂಯಾರ್ಕ್‌ನ ಜಿಲ್ಲಾ ನ್ಯಾಯಾಧೀಶ ಕೊಲ್ಲೆನ್ ಮ್ಯಾಕ್‌ಮೊಹನ್ ತಡೆ ನೀಡಿದರು. ಪ್ರಕರಣದ ಮುಂದಿನ ವಿಚಾರಣೆ ನಡೆಯುವವರೆಗೂ ಯಾವುದೇ ಅನುದಾನವನ್ನು ತಡೆಯಬಾರದು ಎಂದು ತಿಳಿಸಿದ್ದಾರೆ.

ಅಮೆರಿಕ: ವಿ.ವಿಯಲ್ಲಿ ಗುಂಡಿನ ದಾಳಿ, ಒಬ್ಬ ಸಾವು

ಅಲ್ಬುಕರ್ಕ್ (ಅಮೆರಿಕ) (ಎಪಿ): ಶುಕ್ರವಾರ ಮುಂಜಾನೆ ನ್ಯೂ ಮೆಕ್ಸಿಕೊ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು ಮತ್ತೊಬ್ಬರು ಗಾಯಗೊಂಡಿದ್ದಾರೆ. ದಾಳಿ ಕಾರಣದಿಂದ ನೂರಾರು ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿ, ಕ್ಯಾಂಪಸ್‌ನಾದ್ಯಂತ ಶೋಧ ನಡೆಸಿ ಶಂಕಿತನನ್ನು ವಶಕ್ಕೆ ಪಡೆಯಲಾಗಿದೆ.

ತನಿಖೆ ಇನ್ನೂ ನಡೆಯುತ್ತಿದ್ದು, ಅಲ್ಬುಕರ್ಕಿಯ ಮುಖ್ಯ ಕ್ಯಾಂಪಸ್ ಮುಚ್ಚಿರುತ್ತದೆ ಎಂದು ಶುಕ್ರವಾರ ಮಧ್ಯಾಹ್ನದ ನಂತರ ವಿಶ್ವವಿದ್ಯಾಲಯದ ಅಧಿಕಾರಿಗಳು ಹೇಳಿದ್ದಾರೆ. ಅಪರಾಧ ನಡೆದ ಸ್ಥಳವನ್ನು ಹೊರತುಪಡಿಸಿ, ಊಟದ ಹಾಲ್ ಮತ್ತು ಹಾಸ್ಟೆಲ್‌ಗೆ ತೆರಳಲು ಅನುಮತಿಯಿದೆ ಎಂದು ಅವರು ಹೇಳಿದ್ದಾರೆ.

ಶಂಕಿತನನ್ನು ವಶಕ್ಕೆ ಪಡೆದಿರುವ ಬಗ್ಗೆ ಮೇಯರ್ ಟಿಮ್ ಕೆಲ್ಲರ್ ಶುಕ್ರವಾರ ಸಂಜೆ ಘೋಷಿಸಿದ್ದಾರೆ. ಅದಾಗ್ಯೂ, ಆರೋಪಿಯ ಬಗ್ಗೆಯಾಗಲಿ, ಅವರನ್ನು ಎಲ್ಲಿ ಮತ್ತು ಯಾವಾಗ ವಶಕ್ಕೆ ಪಡೆಯಲಾಯಿತು ಎಂಬ ಬಗ್ಗೆಯಾಗಲಿ ಅವರು ಯಾವುದೇ ಮಾಹಿತಿಯನ್ನು ನೀಡಿಲ್ಲ.

ಗುಂಡೇಟಿಗೊಳಗಾದವರು ವಿದ್ಯಾರ್ಥಿಗಳಲ್ಲ ಎಂದು ವಿಶ್ವವಿದ್ಯಾಲಯದ ಪೊಲೀಸ್ ಇಲಾಖೆಯ ಲೆಫ್ಟಿನೆಂಟ್ ಹೇಳಿದ್ದಾರೆ. ಅವರು ವಿದ್ಯಾರ್ಥಿಗಳನ್ನು ಭೇಟಿಯಾಗಲು ಹಾಸ್ಟೆಲ್‌ನೊಳಗೆ ಹೋಗಿದ್ದರು ಎಂದು ಅವರು ತಿಳಿಸಿದ್ದಾರೆ. ಗುಂಡು ಹಾರಿಸಲ್ಪಟ್ಟವರ ಬಗ್ಗೆ ಅಧಿಕಾರಿಗಳು ಇನ್ನೂ ಯಾವುದೇ ಇತರ ವಿವರಗಳನ್ನು ಬಿಡುಗಡೆ ಮಾಡಿಲ್ಲ.

‘ಕದನ ವಿರಾಮ’ಕ್ಕೆ ‘ಆಸಿಯಾನ್’ ಮಧ್ಯಸ್ಥಿಕೆಗೆ ವಿಶ್ವಸಂಸ್ಥೆ ಕರೆ

ಥಾಯ್ಲೆಂಡ್–ಕಾಂಬೋಡಿಯಾ ಸಂಘರ್ಷ: 33 ಸಾವು

ಸುರಿನ್ (ಥಾಯ್ಲೆಂಡ್) (ಎಪಿ/ಪಿಟಿಐ): ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವಿನ ಸಂಘರ್ಷ ಶನಿವಾರ ಮೂರನೆಯ ದಿನಕ್ಕೆ ಕಾಲಿರಿಸಿದ್ದು, ಎರಡು ದೇಶಗಳ ನಡುವಿನ ಕ್ಷಿಪಣಿ ದಾಳಿಯಲ್ಲಿ 33 ಜನರು ಮೃತಪಟ್ಟಿದ್ದಾರೆ. 1.68 ಲಕ್ಷ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ.

ಎರಡೂ ದೇಶಗಳು ತಕ್ಷಣವೇ ಕದನ ವಿರಾಮ ಘೋಷಿಸುವಂತೆ, ಇದಕ್ಕಾಗಿ ಮಧ್ಯಪ್ರವೇಶ ಮಾಡುವಂತೆ ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘಕ್ಕೆ (ಆಸಿಯಾನ್) ವಿಶ್ವಸಂಸ್ಥೆ ಕರೆ ನೀಡಿದೆ.

ಕಾಂಬೋಡಿಯಾದೊಂದಿಗೆ ಹಂಚಿಕೊಂಡಿದ್ದ ಈಶಾನ್ಯ ಗಡಿಯನ್ನು ಥಾಯ್ಲೆಂಡ್ ಶನಿವಾರ ಮುಚ್ಚಿದೆ. ಥಾಯ್ಲೆಂಡ್ ನಡೆಸಿದ ದಾಳಿಯಲ್ಲಿ 13 ಮಂದಿ ಮೃತಪಟ್ಟಿರುವುದಾಗಿ ಕಾಂಬೋಡಿಯಾ ಹೇಳಿದೆ. ಕಾಂಬೋಡಿಯಾ ನಡೆಸಿದ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ ಎಂದು ಥಾಯ್ಲೆಂಡ್ ಹೇಳಿದೆ. ಎರಡೂ ದೇಶಗಳು ದಾಳಿ ಮುಂದುವರಿಸಿರುವುದಾಗಿ ಹೇಳಿಕೊಂಡಿದ್ದು, ತಮ್ಮ ರಾಯಭಾರ ಅಧಿಕಾರಿಗಳನ್ನು ವಾಪಸ್ ಕರೆಯಿಸಿಕೊಂಡಿವೆ.

ಗಡಿಭಾಗದಿಂದ 10,865 ಕುಟುಂಬಗಳ 37,635 ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕಾಂಬೋಡಿಯಾದ ಮಾಹಿತಿ ಸಚಿವ ನೇತ್ ಪೆಕ್ತ್ರಾ ಹೇಳಿದ್ದಾರೆ. ಗಡಿ ಭಾಗದ ಗ್ರಾಮಗಳಲ್ಲಿ 1.31 ಲಕ್ಷದಷ್ಟು ಜನರು ಸಿಲುಕಿಕೊಂಡಿದ್ದಾರೆ ಎಂದು ಥಾಯ್ಲೆಂಡ್ ಹೇಳಿದೆ. ಸುರಕ್ಷತಾ ದೃಷ್ಟಿಯಿಂದ ಥಾಯ್ಲೆಂಡ್ ಸರ್ಕಾರ ಶನಿವಾರ ಗಡಿ ಭಾಗದ 852 ಶಾಲೆಗಳನ್ನು ಮತ್ತು ಏಳು ಆಸ್ಪತ್ರೆಗಳನ್ನು ಮುಚ್ಚಿದೆ.

ಥಾಯ್ಲೆಂಡ್–ಕಾಂಬೋಡಿಯಾ ಸಂಘರ್ಷ ಮುಂದುವರಿದಿರುವುದರಿಂದ, ಥಾಯ್ಲೆಂಡ್‌ನ ಗಡಿ ಭಾಗದಲ್ಲಿ ಬೌದ್ಧ ಮಂದಿರವೊಂದರಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ –ಎಎಫ್‌ಪಿ ಚಿತ್ರ

ದಶಕಗಳಿಂದ ಸಂಘರ್ಷ: ಥಾಯ್ಲೆಂಡ್–ಕಾಂಬೋಡಿಯಾ ನಡುವಿನ 800 ಕಿ.ಮೀ ಗಡಿ ಪ್ರದೇಶದಲ್ಲಿ ದಶಕಗಳಿಂದ ಸಂಘರ್ಷ ಬೂದಿ ಮುಚ್ಚಿದ ಕೆಂಡದಂತಿದೆ. ಮೂರು ತಿಂಗಳ ಹಿಂದೆ ಕಾಂಬೋಡಿಯಾದ ಸೈನಿಕನೊಬ್ಬನ ಹತ್ಯೆಯ ನಂತರ ಇದು ಉಲ್ಬಣಗೊಂಡಿದೆ. ಸೈನಿಕನ ಹತ್ಯೆಯು ಎರಡು ದೇಶಗಳ ರಾಜತಾಂತ್ರಿಕ ಸಂಬಂಧದಲ್ಲಿ ಬಿರುಕು ಮೂಡಿಸಿದ್ದು, ಥಾಯ್ಲೆಂಡ್‌ನ ರಾಜಕೀಯದಲ್ಲೂ ತಲ್ಲಣ ಮೂಡಿಸಿದೆ.

ರಾಯಭಾರ ಕಚೇರಿ ಸಲಹೆ: ಈ ದೇಶಗಳಲ್ಲಿರುವ ಭಾರತೀಯರು ಗಡಿ ಭಾಗದಲ್ಲಿ ಸಂಚಾರ ಕೈಗೊಳ್ಳದಂತೆ ಭಾರತೀಯ ರಾಯಭಾರ ಇಲಾಖೆ ಸಲಹೆ ನೀಡಿದೆ. ‘ಈ ದೇಶಗಳಲ್ಲಿರುವ ಭಾರತೀಯರು ತುರ್ತು ನೆರವಿಗಾಗಿ +855 92881676 ಅಥವಾ ಇಮೇಲ್ cons.phnompenh@mea.gov.in ಸಂಪರ್ಕಿಸಬಹುದು ಎಂದು ಭಾರತೀಯ ರಾಯಭಾರ ಕಚೇರಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಐತಿಹಾಸಿಕ ತಾಣದ ಹಕ್ಕುಸ್ಥಾಪನೆಗಾಗಿ ಸಂಘರ್ಷ

ಐತಿಹಾಸಿಕ ತಾಣದ ಮೇಲಿನ ಹಕ್ಕುಸ್ಥಾಪನೆಗಾಗಿ ಥಾಯ್ಲೆಂಡ್–ಕಾಂಬೋಡಿಯಾ ನಡುವೆ ದಶಕಗಳಿಂದ ಸಂಘರ್ಷ ಮುಂದುವರಿದಿದೆ. ಥಾಯ್ಲೆಂಡ್‌ನಲ್ಲಿರುವ 11ನೇ ಶತಮಾನದ ಪುರಾತನ ಹಿಂದೂ ದೇವಾಲಯ ಪ್ರೀಹ್ ವಿಹಾರ್‌ನ ಮಾಲೀಕತ್ವ ಕಾಂಬೋಡಿಯಾಕ್ಕೆ ಸೇರಿದೆ ಎಂದು 1962ರಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ) ಹೇಳಿತ್ತು. ಆದರೆ, ಇದನ್ನು ಒಪ್ಪದ ಥಾಯ್ಲೆಂಡ್ ದೇವಸ್ಥಾನದ ಸುತ್ತಲಿನ ಜಮೀನಿನ ಹಕ್ಕಿಗಾಗಿ ಹೋರಾಟ ಮುಂದುವರಿಸಿತ್ತು.

2008ರಲ್ಲಿ ಕಾಂಬೋಡಿಯಾ, ‘ಪ್ರೀಹ್ ವಿಹಾರ್’ ದೇವಸ್ಥಾನವನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣದ ಪಟ್ಟಿಗೆ ಸೇರಿಸಲು ಪ್ರಯತ್ನಿಸಿದಾಗ ಈ ಸಂಘರ್ಷ ಉಲ್ಬಣಗೊಂಡಿತ್ತು. ದೇವಸ್ಥಾನ ಮತ್ತು ಅದರ ಸುತ್ತಲಿನ ಜಾಗ ಕಾಂಬೋಡಿಯಾಕ್ಕೆ ಸೇರಿದ್ದು ಎಂದು ‘ಐಸಿಜೆ’ ಪುನರುಚ್ಚರಿಸಿತ್ತು. ಈ ವಿಚಾರವಾಗಿ 2011ರ ಫೆಬ್ರುವರಿಯಲ್ಲಿ ನಡೆದ ಸಂಘರ್ಷದಲ್ಲಿ 20 ಮಂದಿ ಮೃತಪಟ್ಟಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Business For Sale

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಚಾರ್-ಧಾಮ ಪ್ರವಾಸ 11.9.2025. ನೇಪಾಳ,ಕಾಶಿ ಮುಕ್ತಿನಾಥ 04.10.2025. ಆಂಧ್ರ ಪ್ರವಾಸ 27.10.2025. ಅಷ್ಟಜ್ಯೋತಿರ್ಲಿಂಗ ಪ್ರವಾಸ 13.11.2025. ಸಂಪರ್ಕಿಸಿ. ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 9482239855

ರೆಂಟಲ್ ಪ್ರಾಪರ್ಟೀಸ್
Accommodation Wanted
Industrial And Factory
REQUIRED WAREHOUSE FOR RENT IN BELGAUM 40,000 SQFT CALL 98804 14447

ದಾವಣಗೆರೆ ನಗರದಲ್ಲಿ ಅತ್ಯಂತ ವಿಶಾಲವಾಗಿರುವ ಹಾಗೂ ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ
BOSCH CAR SERVICE SHOWROOM
(Multibrand Car Service)
ಮಾರಾಟಕ್ಕಿದೆ
ವಿಸ್ತೀರ್ಣ: 11,000 ಅಡಿ । ಕಟ್ಟಡ ಬಾಡಿಗೆ (ಪ್ರತ್ಯೇಕ)
ಉತ್ತಮ ವಹಿವಾಟು ಮತ್ತು ಲಾಭ ಹೊಂದಿರುವ ಉದ್ಯಮ
1) All insurance company tied up.
2) Oil change to Accidental repairs all type of equipments available.
8073847422, 9380015165

ಉದ್ಯೋಗಾವಕಾಶ
Marketing & Sales
ತಕ್ಷಣ ಬೇಕಾಗಿದ್ದಾರೆ: ತಮಿಳುನಾಡು/ ಕರ್ನಾಟಕದ ಹೈಬ್ರಿಡ್ ತರಕಾರಿ ಬೀಜಗಳನ್ನು ಮಾರಾಟ ಮಾಡಲು Sales Officer (ಮಾರಾಟ ಅಧಿಕಾರಿ). ತರಕಾರಿ ಬೀಜ ಕಂಪನಿಯಲ್ಲಿ ಕನಿಷ್ಠ 5 ವರ್ಷದ ಕಾರ್ಯನಿರ್ವಹಣಾ ಅನುಭವ ಆದ್ಯತೆಯೊಂದಿಗೆ. ಸಂಪರ್ಕಿಸಿ: 7708524588, jobs@noble-agro.com

ಪ್ರವಾಸ
Travel
ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 14.11.2025 ರಿಂದ 10 ದಿನಗಳು ಕಾಶಿ,ಅಯೋಧ್ಯೆ ಗಯಾ,ಬುದ್ಧಗಯಾ ಜಾರ್ಖಂಡ್ ಶ್ರೀವೈದ್ಯನಾಥೇಶ್ವರ ಪ್ರಯಾಗ್ ರಾಜ್ ನೈಮಿಶಾರಣ್ಯ 9448390735 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA
@500/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9886213331
*Conditions apply

ಚುನಾವಣಾ ಆಯೋಗ 'ಪಕ್ಷಪಾತಿ'

ವಾಗ್ದಾಳಿ ಮುಂದುವರಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

ರಾಹುಲ್ ಗಾಂಧಿ

ಅನಂದ್ (ಗುಜರಾತ್) (ಪ್ರಜಾವಾಣಿ ವಾರ್ತೆ/ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ವಿರುದ್ಧವಾಗ್ದಾಳಿ ಮುಂದುವರಿಸಿದ್ದು, 'ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸತತ ಸೋಲಿಗೆ ಚುನಾವಣಾ ಆಯೋಗವೇ ಕಾರಣ' ಎಂದು ಆರೋಪಿಸಿದ್ದಾರೆ.

ಪಕ್ಷ ಸಂಘಟನೆಯನ್ನು ಬಲಪಡಿಸಲು ಆಯೋಜಿಸಿರುವ 'ಸಂಘಟನ್ ಸುಜನ್ ಅಭಿಯಾನ್' ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಚುನಾವಣಾ ಆಯೋಗವನ್ನು 'ಪಕ್ಷಪಾತಿ' ಎಂದು ಟೀಕಿಸಿದ್ದಾಗಿ ಮೂಲಗಳು ಹೇಳಿವೆ. 2027ರ ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷವನ್ನು ಬಲಪಡಿಸುವುದು ಈ ಕಾರ್ಯಕ್ರಮದ ಉದ್ದೇಶ.

ಆಯೋಗವನ್ನು ಪಕ್ಷಪಾತಿ ಎಂದು ದೂರಲು ಅವರು ಕ್ರಿಕೆಟ್‌ನ 'ಅಂಪೈರ್' ಪದವನ್ನು ಬಳಸಿದರು ಎಂದು ಸಭೆಯಲ್ಲಿ ಪಾಲ್ಗೊಂಡ ಸುರೇಂದ್ರನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನೌಶಾದ್ ಸೋಳಂಕಿ ಮಾಧ್ಯಮದವರಿಗೆ ತಿಳಿಸಿದ್ದಾರೆ.

'ಕ್ರಿಕೆಟ್‌ನಲ್ಲಿ ನೀವು ಪದೇ ಪದೇ ಬೇಗನೇ ಔಟಾದರೆ ನಿಮ್ಮ ಮೇಲೆಯೇ ಅನುಮಾನ ಮೂಡಬಹುದು. ಆದರೆ ನೀವು ಔಟ್ ಆಗುತ್ತಿರುವುದು ನಿಮ್ಮ ತಪ್ಪಿನಿಂದಲ್ಲ. ಅಂಪೈರ್ ಪಕ್ಷಪಾತಿಯಾಗಿರುವ ಕಾರಣದಿಂದಲೇ ನೀವು ಔಟಾಗುತ್ತಿರುವುದು ನಿಮ್ಮ ಅರಿವಿಗೆ ಬಂದಿದೆ' ಎಂದು ರಾಹುಲ್ ಹೇಳಿರುವುದಾಗಿ ಸೋಳಂಕಿ ವಿವರಿಸಿದ್ದಾರೆ.

'ಚುನಾವಣಾ ಆಯೋಗವು ಮತದಾರರ ಪಟ್ಟಿಯಲ್ಲಿ ನಡೆಸಿದ ಅಕ್ರಮಗಳಿಂದಲೇ 2017ರ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿದೆ' ಎಂದು ರಾಹುಲ್ ಆರೋಪಿಸಿದ್ದಾಗಿ ತಿಳಿದುಬಂದಿದೆ.

ಗುಜರಾತ್‌ನಲ್ಲಿ ಬಿಜೆಪಿ ಸೋಲಿಸುವುದು ಮುಖ್ಯ: ಬಿಜೆಪಿಯನ್ನು ಅದರ ಪ್ರಮುಖ ನೆಲೆ ಎನಿಸಿರುವ ಗುಜರಾತ್‌ನಲ್ಲಿ ಸೋಲಿಸುವುದು ಬಹಳ ಮುಖ್ಯ ಎಂಬುದನ್ನು ರಾಹುಲ್ ಸಭೆಯಲ್ಲಿ ಒತ್ತಿ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಉತ್ತರ ಪ್ರದೇಶ, ಬಿಹಾರ ಮತ್ತು ಇತರ ಕೆಲವು ರಾಜ್ಯಗಳಲ್ಲಿ ಬಿಜೆಪಿಯನ್ನು ಸೋಲಿಸಲು ನಾವು ಪ್ರಯತ್ನಿಸಬೇಕು. ನಮಗೆ ಗುಜರಾತ್‌ನಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವಾದರೆ, ಆ ಪಕ್ಷವನ್ನು ಎಲ್ಲ ಕಡೆಗಳಲ್ಲೂ ಸೋಲಿಸಬಹುದು' ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಗುಜರಾತ್‌ನಲ್ಲಿ ಸತತ ಸೋಲಿಗೆ ಚುನಾವಣಾ ಆಯೋಗವೇ ಕಾರಣ
- ಪಕ್ಷವನ್ನು ಬಲಪಡಿಸಲು ಸಿದ್ಧರಾಗಿ
- ಸಂಘಟನ್ ಸುಜನ್ ಅಭಿಯಾನದಲ್ಲಿ ರಾಹುಲ್ ಗಾಂಧಿ

ಇ.ಸಿ ನಿಲುವು: ಎಡಿಆರ್ ಪ್ರಶ್ನೆ

ನವದೆಹಲಿ: ಬಿಹಾರದಲ್ಲಿ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ, ಆಧಾರ್ ಕಾರ್ಡ್, ಮತದಾರರ ಗುರುತಿನ ಪತ್ರ (ಎಪಿಕ್) ಮತ್ತು ಪಡಿತರ ಚೀಟಿಗಳನ್ನು ಕ್ರಮಬದ್ಧ ದಾಖಲೆಗಳನ್ನಾಗಿ ಪರಿಗಣಿಸಲು ಚುನಾವಣಾ ಆಯೋಗ ನಿರಾಕರಿಸಿರುವುದನ್ನು ಸ್ವಯಂ ಸೇವಾ ಸಂಸ್ಥೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಆಧಾರ್ ಕಾರ್ಡ್, ಎಪಿಕ್ ಮತ್ತು ಪಡಿತರ ಚೀಟಿಗಳನ್ನು ಕ್ರಮಬದ್ಧ ದಾಖಲೆಗಳನ್ನಾಗಿ ಪರಿಗಣಿಸುವಂತೆ ಚುನಾವಣಾ ಆಯೋಗಕ್ಕೆ (ಇ.ಸಿ) ಸುಪ್ರೀಂ ಕೋರ್ಟ್ ಜುಲೈ 10ರಂದು ಸೂಚಿಸಿತ್ತು. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವುದಕ್ಕೆ ಪರಿಗಣಿಸಲಾಗುವ 11 ದಾಖಲೆಗಳ ಪಟ್ಟಿಯಲ್ಲಿ ಈ ಮೂರು ದಾಖಲೆಗಳು ಒಳಗೊಂಡಿರಲಿಲ್ಲ. ಹೀಗಾಗಿ, ಆಧಾರ್, ಎಪಿಕ್ ಹಾಗೂ ಪಡಿತರ ಚೀಟಿಗಳನ್ನು ಪರಿಗಣಿಸದೇ ಇರುವುದಕ್ಕೆ ಸೂಕ್ತ ಕಾರಣಗಳನ್ನು ನೀಡುವಂತೆ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿತ್ತು.

ಆಧಾರ್, ಎಪಿಕ್ ಹಾಗೂ ಪಡಿತರ ಚೀಟಿಗಳನ್ನು ಸುಲಭವಾಗಿ ನಕಲು ಮಾಡಲು ಸಾಧ್ಯ ಎಂದು ತನ್ನ ನಿರ್ಧಾರವನ್ನು ಇ.ಸಿ ಸಮರ್ಥಿಸಿಕೊಂಡಿತ್ತು. ಆಯೋಗದ ಈ ನಿಲುವನ್ನು ಎಡಿಆರ್ ಪ್ರಶ್ನಿಸಿದೆ.

'ಇ.ಸಿ ಅನುಮೋದಿಸಿರುವ ಪಟ್ಟಿಯಲ್ಲಿರುವ ಎಲ್ಲ 11 ದಾಖಲೆಗಳನ್ನು ಕೂಡಾ ಸುಳ್ಳು ಮಾಹಿತಿ ನೀಡಿ ಪಡೆದುಕೊಳ್ಳಲು ಸಾಧ್ಯ ಎಂಬುದನ್ನು ಗಮನಿಸಬೇಕು. ಇ.ಸಿಯ ವಾದ ಆಧಾರರಹಿತ ಮತ್ತು ಅಸಮಂಜಸ' ಎಂದು ಎಡಿಆರ್ ತನ್ನ ಪ್ರತಿವಾದದಲ್ಲಿ ತಿಳಿಸಿದೆ.

'ಅಸ್ಸಾಂ: 40 ಲಕ್ಷ ಮಂದಿಯ ಹೆಸರು ಕೈಬಿಡಲು ಸಿದ್ಧತೆ'

ಗುವಾಹಟಿ: 'ಬಿಹಾರದಲ್ಲಿ ಕೈಗೊಂಡಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಚುನಾವಣಾ ಆಯೋಗವು ಮುಂದಿನ ವರ್ಷದ ವಿಧಾನಸಭಾ ಚುನಾವಣೆಗೂ ಮುನ್ನ ಅಸ್ಸಾಂನಲ್ಲೂ ನಡೆಸಲಿದೆ. ಅಲ್ಲಿನ ಮತದಾರರ ಪಟ್ಟಿಯಿಂದ 30 ಲಕ್ಷದಿಂದ 40 ಲಕ್ಷ ಮಂದಿಯನ್ನು ಕೈಬಿಡಲಿದೆ' ಎಂದು ರಾಜ್ಯಸಭೆಯ ಟಿಎಂಸಿ ಸದಸ್ಯರಾದ ಸುಷ್ಮಿತಾ ದೇವ್ ಶನಿವಾರ ಆರೋಪಿಸಿದ್ದಾರೆ.

'ಎಸ್‌ಐಆರ್ ಮೂಲಕ ಬಿಹಾರದಲ್ಲಿ ನಡೆಸುತ್ತಿರುವುದನ್ನು ಆಯೋಗವು ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ದೇಶದ ಎಲ್ಲಾ ರಾಜ್ಯಗಳಲ್ಲಿ ಪುನರಾವರ್ತಿಸಲಿದೆ' ಎಂದು ದೂರಿದ್ದಾರೆ.

ಚಿಟಿಕೆ ಸುದ್ದಿ

'ನಿಸಾರ್' ಜಾಗತಿಕ ಸಮುದಾಯಕ್ಕೆ ಪ್ರಯೋಜನಕಾರಿ

ತಿರುಚಿರಪಳ್ಳಿ (ಪಿಟಿಐ): ಇಸ್ರೊ ಮತ್ತು ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ನಿಸಾರ್ ಉಪಗ್ರಹವು ಜಾಗತಿಕ ಸಮುದಾಯಕ್ಕೆ ಪ್ರಯೋಜನಕಾರಿಯಾಗಲಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ಶನಿವಾರ ಹೇಳಿದ್ದಾರೆ.

'ನಿಸಾರ್ ಉಪಗ್ರಹ ಯೋಜನೆಯು ಇಸ್ರೊ ಮತ್ತು ನಾಸಾದ ನಡುವಿನ ದಶಕಗಳ ತಾಂತ್ರಿಕ ಸಹಕಾರದ ಪ್ರತಿಫಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಎರಡು ರೇಡಾರ್ ಉಪಗ್ರಹವು ಏಕಕಾಲಕ್ಕೆ ಉಡಾವಣೆಗೊಳ್ಳುತ್ತಿರುವುದು ಇದೇ ಮೊದಲು. ಭೂಮಿಯ ಸಮೀಕ್ಷೆಗಾಗಿ ಇಸ್ರೊ–ನಾಸಾ ಒಟ್ಟಾಗಿ ಕೈಗೊಳ್ಳುತ್ತಿರುವ ಮೊದಲ ಯೋಜನೆ ಇದಾಗಿದೆ' ಎಂದು ಇಸ್ರೊ ತಿಳಿಸಿದೆ.

'ಆಂಧ್ರದಲ್ಲಿ ಆರ್ಥಿಕ ಸ್ಥಿತಿ ಹದಗೆಟ್ಟಿದೆ'

ಜಗನ್ ಮೋಹನ್ ರೆಡ್ಡಿ

ಅಮರಾವತಿ (ಪಿಟಿಐ): ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಆಂಧ್ರಪ್ರದೇಶದ ಹಣಕಾಸಿ ಸ್ಥಿತಿ ಹದಗೆಟ್ಟಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ವೈ.ಎಸ್.ಜಗನ್ ಮೋಹನ್ ರೆಡ್ಡಿ ಆರೋಪಿಸಿದ್ದಾರೆ.

ಮಹಾ ಲೆಕ್ಕ ಪರಿಶೋಧಕರ (ಸಿಎಜಿ) ಇತ್ತೀಚಿನ ವರದಿ ಉಲ್ಲೇಖಿಸಿ ಈ ಹೇಳಿಕೆ ನೀಡಿದ್ದಾರೆ. ಸಿಎಜಿ ವರದಿಯಲ್ಲಿ ತಿಳಿಸಿರುವ ಸೂಚಕಗಳು ಮತ್ತು ಅಂಕಿಅಂಶಗಳು ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿಗತಿ ಅಸ್ಥಿರತೆ ದೃಷ್ಟಿಕೋನವನ್ನು ಸ್ಪಷ್ಟವಾಗಿ ಸೂಚಿಸುತ್ತವೆ ಎಂದು ರೆಡ್ಡಿ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಸರ್ಕಾರಿ ಹುದ್ದೆಗಳಲ್ಲಿ ಅಗ್ನಿವೀರರಿಗೆ ಶೇ10 ಸಮತಲ ಮೀಸಲಾತಿ'

ಪುಷ್ಕರ್ ಸಿಂಗ್ ಧಾಮಿ

ಡೆಹ್ರಾಡೂನ್ (ಪಿಟಿಐ): ಸರ್ಕಾರಿ ಹುದ್ದೆಗಳಲ್ಲಿ ಅಗ್ನಿವೀರರಿಗೆ ಶೇ 10ರಷ್ಟು ಸಮತಲ ಮೀಸಲಾತಿ ನೀಡಲು ಸಿದ್ಧತೆ ನಡೆಸುತ್ತಿರುವುದಾಗಿ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶನಿವಾರ ಹೇಳಿದ್ದಾರೆ.

ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ನಿವೃತ್ತ ಯೋಧರು ಹಾಗೂ ಹುತಾತ್ಮ ಯೋಧರ ಕುಟುಂಬವನ್ನು ಗೌರವಿಸಲು ಆಯೋಜಿಸಿದ್ದ ಸಭೆಯಲ್ಲಿ ಧಾಮಿ ಪಾಲ್ಗೊಂಡಿದ್ದರು. ಈ ವೇಳೆ ಮೀಸಲಾತಿ ಕುರಿತು ಪ್ರಕಟಿಸಿದ್ದಾರೆ.

ತಮಿಳುನಾಡು: ₹4900 ಕೋಟಿ ವೆಚ್ಚದ ಯೋಜನೆಗಳಿಗೆ ಚಾಲನೆ

ತೂತ್ತುಕುಡಿ (ಪಿಟಿಐ): ತಮಿಳುನಾಡಿನಲ್ಲಿ ₹4900 ಕೋಟಿ ವೆಚ್ಚದ ವಿವಿಧ ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ನೆರವೇರಿಸಿದರು.

₹450 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಂಡಿರುವ ತೂತ್ತುಕುಡಿಯ ವಿಮಾನ ನಿಲ್ದಾಣದ ಹೊಸ ಕಟ್ಟಡ, ಹೆದ್ದಾರಿ, ರೈಲ್ವೆ, ಬಂದರು ಮತ್ತು ವಿದ್ಯುತ್ ಯೋಜನೆಗಳು ಇದರಲ್ಲಿ ಸೇರಿವೆ.

ಸೆಥಿಯಾಥೋಪೆ –ಚೋಳಾಪುರ ನಡುವಿನ ಚತುಷ್ಪಥ ಹೆದ್ದಾರಿ ಸೇರಿದಂತೆ ಹಲವು ಸಂಪರ್ಕ ಯೋಜನೆಗಳು ಲೋಕಾರ್ಪಣೆಗೊಂಡಿವೆ.

ಬಿಜೆಪಿ ಸಂಸದ ರವಿಕಿಶನ್ ಅವರಿಗೆ ಕಿರಣ್ ರಿಜಿಜು ಅವರು 'ಸಂಸದ ರತ್ನ–2025' ಪ್ರಶಸ್ತಿಯನ್ನು ನೀಡಿ ಗೌರವಿಸಿದರು –ಪಿಟಿಐ ಚಿತ್ರ

17 ಸಂಸದರಿಗೆ 'ಸಂಸದ ರತ್ನ' ಪ್ರಶಸ್ತಿ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಉತ್ತಮ ಸಾಧನೆ ಮಾಡಿದ 17 ಸಂಸದರಿಗೆ ಮತ್ತು ಎರಡು ಸಂಸದೀಯ ಸಮಿತಿಗಳಿಗೆ 'ಸಂಸದ ರತ್ನ–2025' ಪ್ರಶಸ್ತಿಯನ್ನು ಶನಿವಾರ ಪ್ರದಾನ ಮಾಡಲಾಯಿತು.

ಭರ್ತೃಹರಿ ಮಹತಾಬ್ (ಬಿಜೆಪಿ, ಒಡಿಶಾ), ಎನ್.ಕೆ. ಪ್ರೇಮಚಂದ್ರನ್ (ಕ್ರಾಂತಿಕಾರಿ ಸಮಾಜವಾದಿ ಪಕ್ಷ, ಕೇರಳ), ಸುಪ್ರಿಯಾ ಸುಳೆ (ಎನ್‌ಸಿಪಿ–ಶರದ್ ಪವಾರ್ ಬಣ, ಮಹಾರಾಷ್ಟ್ರ) ಮತ್ತು ಶ್ರೀರಂಗ ಅಪ್ಪ ಬಾರ್ನೆ (ಶಿವಸೇನಾ, ಮಹಾರಾಷ್ಟ್ರ) ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಬಿಜೆಪಿ ಸಂಸದರಾದ ಸ್ಮಿತಾ ವಾಘ್, ಮೇಧಾ ಕುಲಕರ್ಣಿ, ಪ್ರವೀಣ್ ಪಟೇಲ್, ರವಿಕಿಶನ್, ನಿಶಿಕಾಂತ್ ದುಬೆ, ಬಿದ್ಯುತ್ ಬರನ್ ಮಹಾತೊ, ಪಿ.ಪಿ. ಚೌಧರಿ, ಮದನ್ ರಾಥೋಡ್, ದಿಲೀಪ್ ಸೈಕಿಯಾ, ಶಿವಸೇನಾ–ಉದ್ಧವ್ ಬಣದ ಅರವಿಂದ ಸಾವಂತ್, ಶಿಂದೆ ಬಣದ ನರೇಶ್ ಗಣಪತ್ ಮಹಸ್ಕೆ, ಕಾಂಗ್ರೆಸ್‌ನ ವರ್ಷಾ ಗಾಯಕ್ವಾಡ್ ಹಾಗೂ ಡಿಎಂಕೆಯ ಸಿ.ಎನ್. ಅಣ್ಣಾದೊರೈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ವರದಿಗಳ ಗುಣಮಟ್ಟ ಮತ್ತು ಶಾಸಕಾಂಗದ ಮೇಲ್ವಿಚಾರಣೆಗೆ ನೀಡಿದ ಕೊಡುಗೆಗೆ ಹಣಕಾಸು ಮತ್ತು ಕೃಷಿ ಇಲಾಖೆಯ ಎರಡು ಸ್ಥಾಯಿ ಸಮಿತಿಗಳಿಗೆ ಪ್ರಶಸ್ತಿ ದೊರೆತಿದೆ. ಮಹತಾಬ್ ಹಣಕಾಸು ಸಮಿತಿಗೆ ಹಾಗೂ ಚರಣ್‌ಜಿತ್ ಸಿಂಗ್ ಚನ್ನಿ ಕೃಷಿ ಸ್ಥಾಯಿ ಸಮಿತಿಗೆ ಅಧ್ಯಕ್ಷರಾಗಿದ್ದಾರೆ.

ಸತತ ಮೂರು ಅವಧಿಯಲ್ಲಿ ಸಂಸದೀಯ ಪ್ರಜಾಪ್ರಭುತ್ವಕ್ಕೆ ನೀಡಿದ್ದ ಸುಸ್ಥಿರ ಕೊಡುಗೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಲಾಗಿದೆ. ಇದರಲ್ಲಿ ನಾಲ್ಕು ತೀರ್ಪುಗಾರರ ವಿಶೇಷ ಪ್ರಶಸ್ತಿಗಳೂ ಒಳಗೊಂಡಿವೆ.

'ಸಿಂಧೂರ: ಪಾಕ್‌ಗೆ ನೀಡಿದ ಸ್ಪಷ್ಟ ಸಂದೇಶ'

ಭಯೋತ್ಪಾದನೆ ಬೆಂಬಲಿಸುವವರನ್ನು ಸುಮ್ಮನೆ ಬಿಡೆವು: ಉಪೇಂದ್ರ ದ್ವಿವೇದಿ

ದ್ರಾಸ್ (ಕಾರ್ಗಿಲ್) (ಪಿಟಿಐ): ಭಯೋತ್ಪಾದನೆಯನ್ನು ಬೆಂಬಲಿಸುವವರನ್ನು ಸುಮ್ಮನೆ ಬಿಡುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು 'ಆಪರೇಷನ್ ಸಿಂಧೂರ' ಮೂಲಕ ಪಾಕಿಸ್ತಾನಕ್ಕೆ ನೀಡಲಾಗಿದೆ ಎಂದು ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಶನಿವಾರ ಹೇಳಿದ್ದಾರೆ.

'ಇಲ್ಲಿನ ಕಾರ್ಗಿಲ್ ಯುದ್ಧ ಸ್ಮಾರಕದ ಬಳಿ 'ಕಾರ್ಗಿಲ್ ವಿಜಯ ದಿವಸ್' ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆಪರೇಷನ್ ಸಿಂಧೂರವು ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿತ್ತು ಹಾಗೂ ಪಾಕಿಸ್ತಾನಕ್ಕೆ ನೀಡಿದ ಸ್ಪಷ್ಟ ಸಂದೇಶವಾಗಿತ್ತು' ಎಂದಿದ್ದಾರೆ.

'ಪಹಲ್ಗಾಮ್ ದಾಳಿ ಇಡೀ ದೇಶಕ್ಕೆ ಆಘಾತ ಉಂಟುಮಾಡಿದೆ. ಆದರೆ ಈ ಬಾರಿ ಭಾರತವು ಕೇವಲ ಶೋಕ ವ್ಯಕ್ತಪಡಿಸುತ್ತಾ ಕೂರಲಿಲ್ಲ, ತಕ್ಕ ಪ್ರತಿಕ್ರಿಯೆ ನೀಡಿತಲ್ಲದೆ, ತಾನು ನೀಡುವ ತಿರುಗೇಟು ನಿರ್ಣಾಯಕವಾಗಿರುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ' ಎಂದು ಅವರು ತಿಳಿಸಿದ್ದಾರೆ.

ದೇಶದ ಜನರು ತೋರಿದ ನಂಬಿಕೆ ಮತ್ತು ಸರ್ಕಾರವು ನೀಡಿದ ಮುಕ್ತ ಅಧಿಕಾರದಿಂದ ತಕ್ಕ ಪ್ರತ್ಯುತ್ತರ ನೀಡಲು ಸೇನೆಗೆ ಸಾಧ್ಯವಾಯಿತು. ಭಾರತದ ಏಕತೆ, ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಅಥವಾ ಜನರಿಗೆ ಹಾನಿ ಮಾಡುವ ಯಾವುದೇ ಶಕ್ತಿಗೆ ತಕ್ಕ ಉತ್ತರವನ್ನು ನೀಡಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಆಪರೇಷನ್ ಸಿಂಧೂರ ಸಮಯದಲ್ಲಿ, ಸೇನೆಯು ಪಾಕಿಸ್ತಾನದಲ್ಲಿನ ಒಂಬತ್ತು ಭಯೋತ್ಪಾದಕ ತಾಣಗಳನ್ನು ನಿರ್ಮೂಲನೆ ಮಾಡಿದೆ. ಭಯೋತ್ಪಾದಕ ಮೂಲಸೌಕರ್ಯವನ್ನು ಗುರಿಯಾಗಿಸುವ ಮೂಲಕ ನಿರ್ಣಾಯಕ ಗೆಲುವು ಸಾಧಿಸಿತು. ಪಾಕ್ ತೋರಿದ ಪ್ರತಿರೋಧವನ್ನು ಸಮರ್ಥವಾಗಿ ಎದುರಿಸಿತು ಎಂದಿದ್ದಾರೆ.

ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಕಾರ್ಗಿಲ್ ಯುದ್ಧ ಸ್ಮಾರಕದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜನರಲ್ ಉಪೇಂದ್ರ ದ್ವಿವೇದಿ ಅವರಿಗೆ ಶಾಲಾ ವಿದ್ಯಾರ್ಥಿನಿಯರು ರಾಖಿ ಕಟ್ಟಿದರು –ಪಿಟಿಐ ಚಿತ್ರ

ಸೇನೆಗೆ 'ರುದ್ರ' ತುಕಡಿ ಬಲ

'ಸೇನೆಗೆ ಬಲ ತುಂಬಲು 'ರುದ್ರ' ಹೆಸರಿನ ತುಕಡಿಯನ್ನು ನಿಯೋಜಿಸಲು ಶುಕ್ರವಾರ ಅನುಮೋದನೆ ನೀಡಿದ್ದೇನೆ' ಎಂದು ಜನರಲ್ ಉಪೇಂದ್ರ ದ್ವಿವೇದಿ ತಿಳಿಸಿದರು.

ಈ ಮೂಲಕ ಕಾಲಾಳು ಪಡೆ, ಶಸ್ತ್ರಸಜ್ಜಿತ ಘಟಕ, ಫಿರಂಗಿ ದಳ, ವಿಶೇಷ ಪಡೆ ಮತ್ತು ಮಾನವರಹಿತ ವೈಮಾನಿಕ ವಾಹನವನ್ನು ಒಂದೇ ಸ್ಥಳದಲ್ಲಿ ಹೊಂದುವ ಅವಕಾಶ ಲಭಿಸಿದೆ. ಯುದ್ಧದ ಸಮಯದಲ್ಲಿ ಮುಂಚೂಣಿಯ ಹೋರಾಟಗಾರರಿಗೆ ಈ ತುಕಡಿ ನೆರವಾಗಲಿದೆ ಎಂದರು.

ಗಡಿಯಲ್ಲಿ ವಿರೋಧಿಗಳ ದಾಳಿಯನ್ನು ಎದುರಿಸಲು ಸದಾ ಸನ್ನದ್ಧವಾಗಿರುವ ವಿಶೇಷ 'ಭೈರವ್ ಲೈಟ್ ಕಮಾಂಡೊ' ಘಟಕವನ್ನು ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರತಿಯೊಂದು ಪದಾತಿ ದಳವು ಈಗ ಡ್ರೋನ್ ತುಕಡಿಯನ್ನು ಹೊಂದಿದೆ. ಫಿರಂಗಿ ದಳದಲ್ಲಿ ಶಕ್ತಿಬಾನ್ ರೆಜಿಮೆಂಟ್‌ಅನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಡ್ರೋನ್ ಮತ್ತು ಡ್ರೋನ್ ಧ್ವಂಸಕ ವ್ಯವಸ್ಥೆ ಅಳವಡಿಸಲಾಗಿದೆ ಎಂದು ವಿವರಿಸಿದರು.

ಆಪರೇಷನ್ ಸಿಂಧೂರ: ವಿಶೇಷ ಪಠ್ಯಕ್ರಮ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಆಪರೇಷನ್ ಸಿಂಧೂರ ಕಾರ್ಯಾಚರಣೆ ಕುರಿತಂತೆ ವಿಶೇಷ ಪಠ್ಯಕ್ರಮ (ಸ್ಪೆಷಲ್ ಕ್ಲಾಸ್‌ರೂಮ್ ಮಾಡ್ಯೂಲ್) ರೂಪಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಪಠ್ಯಕ್ರಮವು 3ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಭಾರತದ ರಕ್ಷಣಾ ಕಾರ್ಯತಂತ್ರ ಹಾಗೂ ರಾಜತಾಂತ್ರಿಕ ಪ್ರತಿಕ್ರಿಯೆಗಳ ಬಗ್ಗೆ ಅರ್ಥೈಸಿಕೊಳ್ಳಲು ನೆರವಾಗಲಿದೆ ಎಂದೂ ತಿಳಿದುಬಂದಿದೆ.

ಪಠ್ಯಕ್ರಮವು ಎರಡು ವಿಭಾಗಗಳನ್ನು ಹೊಂದಿರಲಿದ್ದು, ಮೊದಲನೆಯದು 3ರಿಂದ 8ನೇ ತರಗತಿ ವಿದ್ಯಾರ್ಥಿಗಳು ಅರ್ಥೈಸಿಕೊಳ್ಳುವಂಥದ್ದಾಗಿರಲಿದೆ. ಮತ್ತೊಂದು 9 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗಾಗಿ ರಚಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಅಲ್ಲದೇ, ಈ ಪಠ್ಯಕ್ರಮದಲ್ಲಿ 8 ರಿಂದ 10 ಪುಟಗಳು ಇತ್ತೀಚೆಗೆ ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿ ಹಾಗೂ ಅದಕ್ಕೆ ಭಾರತದ ರಕ್ಷಣಾ ಪಡೆಗಳ ತಿರುಗೇಟಿನ ಮಾಹಿತಿಗಳನ್ನು ಒಳಗೊಂಡಿರಲಿದೆ ಎಂದೂ ಮೂಲಗಳು ತಿಳಿಸಿವೆ.

'ಟ್ರಂಪ್‌ನೊಂದಿಗಿನ ಮೋದಿ ಸ್ನೇಹ ಟೊಳ್ಳು'

ನವದೆಹಲಿ (ಪಿಟಿಐ): 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು 'ಭಾರಿ ಹೆಗ್ಗಳಿಕೆಯಿಂದ ಹೇಳಿಕೊಳ್ಳುವ ಸ್ನೇಹ'ವು 'ಟೊಳ್ಳು' ಎಂಬುದು ಸಾಬೀತಾಗುತ್ತಿದೆ' ಎಂದು ಕಾಂಗ್ರೆಸ್ ಶನಿವಾರ ಆರೋಪಿಸಿದೆ. ಈ ಬಗ್ಗೆ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ಭಾರತದ ವಿದೇಶಾಂಗ ನೀತಿಯು ವಿಫಲಗೊಂಡಿದೆ. ಇದಕ್ಕೆ ನಾಲ್ಕು ಉದಾಹರಣೆಗಳನ್ನೂ ನೀಡಬಹುದು. ಪ್ರಧಾನಿ ಮೋದಿ ಅವರ ಬಾಲಬಡುಕರು ಹೇಳುವ ಎಲ್ಲ ಅತಿಶಯೋಕ್ತಿಯ ಮಾತುಗಳಲ್ಲಿನ ಬಣ್ಣವನ್ನು ಈ ನಾಲ್ಕು ಸತ್ಯಗಳು ಬಹಿರಂಗ ಮಾಡುತ್ತವೆ' ಎಂದಿದ್ದಾರೆ.

1. 'ನಾನು ಮಧ್ಯಪ್ರವೇಶಿಸಿ ಆಪರೇಷನ್ ಸಿಂಧೂರವನ್ನು ನಿಲ್ಲಿಸಿದೆ. ಕಾರ್ಯಾಚರಣೆ ನಿಲ್ಲಿಸದೇ ಇದ್ದಲ್ಲಿ ನಾವು ನಿಮ್ಮೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದು ಬೆದರಿಸಿದ್ದೆ' ಎಂದು ಟ್ರಂಪ್ ಅವರು 2025ರ ಮೇ 10ರಿಂದ ಇಲ್ಲಿಯವರೆಗೆ 25 ಬಾರಿ ಹೇಳಿದ್ದಾರೆ

2. 'ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಪಾಕಿಸ್ತಾನವು ಅಮೆರಿಕದ ಅದ್ಭುತ ಭಾಗೀದಾರ' ಎಂದು 2025ರ ಜೂನ್ 10ರಂದು ಅಮೆರಿಕದ ಸೇನಾ ಕಮಾಂಡರ್ ಮೈಕಲ್ ಕುರೆಲಾ ಅವರು ಪಾಕಿಸ್ತಾನವನ್ನು ಶ್ಲಾಘಿಸಿದ್ದಾರೆ

3. ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರೊಂದಿಗೆ 2025ರ ಜೂನ್ 18ರಂದು ಟ್ರಂಪ್ ಅವರು ಉಪಾಹಾರ ಸೇವಿಸಿದರು

4. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಶುಕ್ರವಾರವಷ್ಟೇ ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ದಾರ್ ಅವರನ್ನು ಭೇಟಿಯಾಗಿದ್ದಾರೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾಗೀದಾರನಾಗಿದ್ದಕ್ಕಾಗಿ ಪಾಕಿಸ್ತಾನಕ್ಕೆ ರುಬಿಯೊ ಅವರು ಧನ್ಯವಾದ ತಿಳಿಸಿದ್ದಾರೆ

ಸಂಕ್ಷಿಪ್ತ ಸುದ್ದಿ

ಇಬ್ಬರು ಪೊಲೀಸ್ ಅಧಿಕಾರಿಗಳ ಸಾವು

ಹೈದರಾಬಾದ್ (ಪಿಟಿಐ): ಇಲ್ಲಿಗೆ ಸಮೀಪದ ಚೌಟುಪಾಲ್ ಎಂಬಲ್ಲಿ ರಸ್ತೆ ವಿಭಜಕ್ಕೆ ಕಾರು ಡಿಕ್ಕಿಯಾಗಿ ಸಂಭವಿಸಿದ ಅಪಘಾತದಲ್ಲಿ ಆಂಧ್ರಪ್ರದೇಶ ಪೊಲೀಸ್ ಇಲಾಖೆಯ ಗುಪ್ತಚರ ವಿಭಾಗದ ಇಬ್ಬರು ಡಿಎಸ್‌ಪಿಗಳು ಮೃತಪಟ್ಟಿದ್ದಾರೆ. ಇನ್ನೊಬ್ಬ ಅಧಿಕಾರಿಗೆ ಗಂಭೀರ ಗಾಯವಾಗಿದೆ.

ಪೊಲೀಸ್ ಅಧಿಕಾರಿಗಳು ವಿಜಯವಾಡದಿಂದ ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದರು. ಚಾಲಕ, ಮುಂದಿರುವ ವಾಹನಕ್ಕೆ ಕಾರು ಡಿಕ್ಕಿಯಾಗುವುದನ್ನು ತಪ್ಪಿಸಲು ದಿಢೀರ್ ಬ್ರೇಕ್ ಹಾಕಿದಾಗ, ನಿಯಂತ್ರಣ ಕಳೆದುಕೊಂಡ ರಸ್ತೆ ವಿಭಜಕ್ಕೆ ಅಪ್ಪಳಿಸಿ ಅಪಘಾತ ಸಂಭವಿಸಿದೆ.

ಚಂದ್ರಶೇಖರ ರಾವ್ ಮತ್ತು ಸಾಂತಾ ರಾವ್ ಮೃತ ಡಿಎಸ್‌ಪಿಗಳು. ಸಾಂತಾ ರಾವ್ ಅವರು ಹೈದರಾಬಾದ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸಿಂಗಪುರಕ್ಕೆ ತೆರಳಿದ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಭದ್ರತಾ ವ್ಯವಸ್ಥೆಯ ಕೆಲಸಕ್ಕೆ ನಿಯೋಜಿತರಾಗಿದ್ದರು ಎಂದು ಮೂಲಗಳು ತಿಳಿಸಿವೆ.

'ಹಳೆಯ ವಾಹನಗಳು ಮಾಲಿನ್ಯಕಾರಕ: ಪರಿಶೀಲನೆಗೆ ಮನವಿ

ನವದೆಹಲಿ: 10 ವರ್ಷಗಳ ಹಳೆಯ ಡೀಸೆಲ್ ವಾಹನ ಹಾಗೂ 15 ವರ್ಷ ಹಳೆಯ ಪೆಟ್ರೋಲ್ ವಾಹನಗಳು ಮಾಲಿನ್ಯಕಾರಕವೆಂದು ಏಕರೂಪವಾಗಿ ನಿರ್ಧರಿಸಿ ನಿಷೇಧಿಸಿರುವ ಸುಪ್ರೀಂ ಕೋರ್ಟ್ ನಿರ್ಧಾರವನ್ನು ಮರುಪರಿಶೀಲಿಸುವಂತೆ ಕೋರಿ ದೆಹಲಿ ಸರ್ಕಾರವು ಮನವಿ ಸಲ್ಲಿಸಿದೆ.

'ರಾಷ್ಟ್ರ ರಾಜಧಾನಿ ವ್ಯಾಪ್ತಿ (ಎನ್‌ಸಿಆರ್)ಯಲ್ಲಿ ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಸಮಗ್ರ ನೀತಿಯ ಅಗತ್ಯವಿದೆ. ನೈಜ ಮಾಲಿನ್ಯ ಪ್ರಮಾಣವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ಸದೃಢತಾ ಪ್ರಮಾಣಪತ್ರ, ವಾಹನಗಳ ಕ್ಷಮತೆ ಆಧರಿಸಿಯೇ ನಿರ್ಧರಿಸಬೇಕಿದೆ' ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದೆ.

166 ಜನರಿಗೆ ಮಧ್ಯಂತರ ಪರಿಹಾರ ಪಾವತಿ

ಮುಂಬೈ: ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟವರಲ್ಲಿ 147 ಪ್ರಯಾಣಿಕರು, ಇತರ 19 ಮಂದಿಯ ಕುಟುಂಬಸ್ಥರಿಗೆ ಏರ್ ಇಂಡಿಯಾವು ಮಧ್ಯಂತರ ಪರಿಹಾರದ ಮೊತ್ತವನ್ನು ನೀಡಿದೆ.

ಸಂತ್ರಸ್ತರ ಕುಟುಂಬಸ್ಥರ ಆರ್ಥಿಕ ತುರ್ತು ಪರಿಸ್ಥಿತಿ ನಿರ್ವಹಣೆಗೆ ನೆರವಾಗಲು ಮಧ್ಯಂತರ ಪರಿಹಾರವಾಗಿ ₹25 ಲಕ್ಷವನ್ನು ಏರ್ ಇಂಡಿಯಾ ಒಂದು ತಿಂಗಳ ಹಿಂದೆಯೇ ಬಿಡುಗಡೆಗೊಳಿಸಲು ಆರಂಭಿಸಿತ್ತು.

'ದುರಂತದಲ್ಲಿ ಮೃತಪಟ್ಟವರಲ್ಲಿ 166 ಜನರ ಕುಟುಂಬಸ್ಥರಿಗೆ ಮಧ್ಯಂತರ ಪರಿಹಾರ ಬಿಡುಗಡೆಗೊಳಿಸಲಾಗಿದೆ. 52 ಜನರ ದಾಖಲೆ ಪರಿಶೀಲನೆ ನಡೆಯುತ್ತಿದೆ' ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)2/2025–26/3713–28 ದಿನಾಂಕ:25.07.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ

ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2419

ಸಂಯೋಜಿತ ಪ್ಯಾಕೇಜ್:
ಕಾಮಗಾರಿ–ಅ: ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು **ಗಿರಿಯಾಲ (ಹಿರೇಹೊನ್ನಳ್ಳಿ) ಗ್ರಾಮದಲ್ಲಿ** 220ಕೆ.ವಿ ಡಿಜಿಟಲ್ ಸ್ವಿಚಿಂಗ್ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಈ ಕೆಳಗಿನ 220ಕೆ.ವಿ ಪ್ರಸರಣ ಮಾರ್ಗಗಳನ್ನು ಹೆಚ್.ಪಿ.ಸಿ. ವಾಹಕದಿಂದ ನಿರ್ಮಿಸುವುದು:
i. ನಾಗರಝರಿ–ಎಸ್‌ಆರ್‌ಎಸ್ ಹುಬ್ಬಳ್ಳಿ 1, 2 ಮತ್ತು 3 ಮಾರ್ಗ ಮತ್ತು ನಾಗರಝರಿ–ಬಿದ್ನಾಳ ಎಸ್‌ಸಿ ಮಾರ್ಗದಿಂದ 220ಕೆ.ವಿ ಗಿರಿಯಾಲ (ಹಿರೇಹೊನ್ನಳ್ಳಿ) ಡಿಜಿಟಲ್ ಸ್ವಿಚಿಂಗ್ ವಿದ್ಯುತ್ ಉಪಕೇಂದ್ರದವರೆಗೆ **4.093 ಕಿ.ಮೀ ಗಳ** ಉದ್ದಕ್ಕೆ 220ಕೆ.ವಿ ಲೈನ್–ಇನ್ ಮಾರ್ಗವನ್ನು ನಿರ್ಮಿಸುವುದು.
ii. 220ಕೆ.ವಿ ಗಿರಿಯಾಲ (ಹಿರೇಹೊನ್ನಳ್ಳಿ) ಡಿಜಿಟಲ್ ಸ್ವಿಚಿಂಗ್ ವಿದ್ಯುತ್ ಉಪಕೇಂದ್ರದಿಂದ ನಾಗರಝರಿ–ಎಸ್‌ಆರ್‌ಎಸ್ ಹುಬ್ಬಳ್ಳಿ 1,2 ಮತ್ತು 3 ಮಾರ್ಗ ಮತ್ತು ನಾಗರಝರಿ–ಬಿದ್ನಾಳ ಎಸ್‌ಸಿ ಮಾರ್ಗದವರೆಗೆ **4.1ಕಿ.ಮೀ. ಗಳ** ಉದ್ದಕ್ಕೆ 220ಕೆ.ವಿ ಲೈನ್–ಔಟ್ ಮಾರ್ಗವನ್ನು ನಿರ್ಮಿಸುವುದು.
iii. 220ಕೆ.ವಿ ಎಸ್‌ಆರ್‌ಎಸ್ ಹುಬ್ಬಳ್ಳಿ–ಶಿರಸಿ ಡಿಸಿ ಮಾರ್ಗದಿಂದ 220ಕೆ.ವಿ ಗಿರಿಯಾಲ (ಹಿರೇಹೊನ್ನಳ್ಳಿ) ಡಿಜಿಟಲ್ ಸ್ವಿಚಿಂಗ್ ವಿದ್ಯುತ್ ಉಪಕೇಂದ್ರದವರೆಗೆ **12.173 ಕಿ.ಮೀ.ಗಳ** ಉದ್ದಕ್ಕೆ ಲಿಲೋ ಮಾರ್ಗವನ್ನು ನಿರ್ಮಿಸುವುದು.
iv. 220ಕೆ.ವಿ ನರೇಂದ್ರ–ಹಾವೇರಿ (ಶಿಗ್ಗಾಂವ) ಎಸ್‌ಸಿ ಮಾರ್ಗ ಮತ್ತು ನರೇಂದ್ರ–ಬಿದ್ನಾಳ್ ಎಸ್‌ಸಿ ಮಾರ್ಗದಿಂದ 220ಕೆ.ವಿ ಗಿರಿಯಾಲ (ಹಿರೇಹೊನ್ನಳ್ಳಿ) ಡಿಜಿಟಲ್ ಸ್ವಿಚಿಂಗ್ ವಿದ್ಯುತ್ ಉಪಕೇಂದ್ರದವರೆಗೆ **4.819 ಕಿ.ಮೀ. ಗಳ** ಉದ್ದಕ್ಕೆ ಲಿಲೋ ಮಾರ್ಗವನ್ನು ನಿರ್ಮಿಸುವುದು.

ಕಾಮಗಾರಿ–ಆ: ಗದಗ ಜಿಲ್ಲೆ, ಗದಗ ತಾಲ್ಲೂಕು **ಮುಳಗುಂದದಲ್ಲಿ 2x20ಎಂ.ವಿ.ಎ, 110/11ಕೆವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆ.ವಿ ಗದಗ–ಲಕ್ಷ್ಮೇಶ್ವರ ಎಸ್‌ಸಿ ಮಾರ್ಗದಿಂದ ಪ್ರಸ್ತಾಪಿತ 110ಕೆ.ವಿ ಮುಳಗುಂದ ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **0.423ಕಿ.ಮೀ. ಗಳ** ಉದ್ದಕ್ಕೆ 110ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಕಾಮಗಾರಿ–ಇ: ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು **ಅಮಲಝರಿ (ಕಿಶೋರಿ)ಯಲ್ಲಿ 2x20ಎಂ.ವಿ.ಎ, 110/11ಕೆವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆ.ವಿ ಮಂಟೂರ–ಮರೇಗುದ್ದಿ ಎಸ್‌ಸಿ ಮಾರ್ಗದಿಂದ ಪ್ರಸ್ತಾಪಿತ 110ಕೆ.ವಿ ಅಮಲಝರಿ (ಕಿಶೋರಿ) ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **1.356ಕಿ.ಮೀ. ಗಳ** ಉದ್ದಕ್ಕೆ 110ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್:**https://kptcl.karnataka.gov.in** ನ ಹೈಪರ್‌ಲಿಂಕ್ "ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ:30.07.2025 ರಂದು 15:00 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ: 30.08.2025ರಂದು 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು**. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್) ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇಮಹಡಿ, ಕಾವೇರಿ ಭವನ, ಬೆಂಗಳೂರು–560 009

ರಾಜಸ್ಥಾನ: ಶಾಲೆ ಕಟ್ಟಡ ಕುಸಿತದಲ್ಲಿ ಮಕ್ಕಳನ್ನು ಕಳೆದುಕೊಂಡ ಮಹಿಳೆಯ ಅಳಲು

'ಎಲ್ಲವನ್ನೂ ಕಳೆದುಕೊಂಡೆ... ಮನೆ ಖಾಲಿಯಾಗಿದೆ'

ಝಾಲಾವಾಢ (ಪಿಟಿಐ): ದಿನಗಳ ಹಿಂದೆಯಷ್ಟೆ, ರಾಜಸ್ಥಾನದ ಝಾಲಾವಾಢದ ಸಾಧಾರಣ ಮನೆಯೊಂದರ ಅಂಗಳದಲ್ಲಿ ಇಬ್ಬರು ಮಕ್ಕಳ ಕಿಲಕಿಲ ನಗು ಪ್ರತಿಧ್ವನಿಸುತ್ತಿತ್ತು. ಆದರೆ, ಇಂದು ಆ ನಗು ಇಲ್ಲದೆ ಮನೆಯಲ್ಲಿ ನೀರವ ಮೌನ ಆವರಿಸಿದೆ. ಯಾಕೆಂದರೆ ಶುಕ್ರವಾರ ಜಿಲ್ಲೆಯಲ್ಲಿ ಸಂಭವಿಸಿದ ಶಾಲಾ ಕಟ್ಟಡ ಕುಸಿತದಿಂದ ಮೃತಪಟ್ಟ ಏಳು ಮಕ್ಕಳಲ್ಲಿ ಈ ಇಬ್ಬರು ಮಕ್ಕಳೂ ಸೇರಿದ್ದಾರೆ.

ಶುಕ್ರವಾರ ಬೆಳಿಗ್ಗೆ, ಪಿಪಲೋದಿ ಸರ್ಕಾರಿ ಶಾಲೆಯ ಮಕ್ಕಳು ಬೆಳಗಿನ ಪ್ರಾರ್ಥನೆಗಾಗಿ ಸೇರಿದ್ದಾಗ ಕಟ್ಟಡದ ಒಂದು ಭಾಗ ಕುಸಿದು ಬಿದ್ದಿದೆ. ಈ ವೇಳೆ ಏಳು ಮಂದಿ ಮೃತಪಟ್ಟಿದ್ದು, 28 ಮಕ್ಕಳು ಗಾಯಗೊಂಡಿದ್ದಾರೆ.

ಬಿಕ್ಕಳಿಸುತ್ತಾ ಮಾತನಾಡಿದ 12 ವರ್ಷದ ಬಾಲಕಿ ಮೀನಾ ಮತ್ತು 6 ವರ್ಷದ ಬಾಲಕ ಕನ್ಹಾ ಅವರ ತಾಯಿ, 'ದೇವರು ನನ್ನನ್ನು ಕರೆದುಕೊಂಡು ಹೋಗಿ, ಮಕ್ಕಳನ್ನು ಉಳಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು' ಎಂದು ಕಣ್ಣೀರಿಟ್ಟರು. ಘಟನೆಯಲ್ಲಿ ಮೀನಾ ಮತ್ತು ಕನ್ಹಾ ಹೊರತಾಗಿ, 12 ವರ್ಷ ವಯಸ್ಸಿನ ಪಾಯಲ್, ಪ್ರಿಯಾಂಕಾ, ಕುಂದನ್ ಹಾಗೂ ಎಂಟು ವರ್ಷದ ಹರೀಶ್, ಕಾರ್ತಿಕ್ ಕೂಡಾ ಮೃತಪಟ್ಟಿದ್ದಾರೆ

'ನಾನು ಎಲ್ಲವನ್ನೂ ಕಳೆದುಕೊಂಡೆ... ನನ್ನ ಇಬ್ಬರು ಮಕ್ಕಳನ್ನೂ ಕಳೆದುಕೊಂಡೆ. ನನ್ನ ಮನೆ ಖಾಲಿಯಾಗಿದೆ... ಈ ಅಂಗಳದಲ್ಲಿ ಆಟವಾಡಲು ಈಗ ಯಾರೂ ಉಳಿದಿಲ್ಲ. ಮಕ್ಕಳ ಬದಲು ದೇವರು ನನ್ನನ್ನು ಕರೆಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಅವರು ಹೇಳಿದರು. ದುರಂತವು ಹಲವು ಕುಟುಂಬಗಳನ್ನು ಶೋಕದಲ್ಲಿ ಮುಳುಗಿಸಿದ್ದರೂ, ಮಹಿಳೆಯದ್ದು ಎದ್ದುಕಾಣುವ ಹೃದಯವಿದ್ರಾವಕ ದುಃಖವಾಗಿದೆ.

ಶನಿವಾರ ಬೆಳಿಗ್ಗೆ ಏಳು ಮಕ್ಕಳ ಅಂತ್ಯಕ್ರಿಯೆ ನಡೆಸಲಾಗಿದ್ದು, ಅದರಲ್ಲಿ ಐವರು ಮಕ್ಕಳನ್ನು ಒಂದೇ ಚಿತೆಯ ಮೇಲೆ ಒಟ್ಟಿಗೆ ಸುಡಲಾಯಿತು, ಉಳಿದ ಇಬ್ಬರನ್ನು ಪ್ರತ್ಯೇಕವಾಗಿ ಸುಡಲಾಯಿತು. ಇದಕ್ಕೂ ಮೊದಲು, ಏಳು ಮಕ್ಕಳ ಶವಗಳನ್ನು ಅವರ ಕುಟುಂಬಗಳಿಗೆ ನೀಡುತ್ತಿದ್ದಂತೆ ಇಲ್ಲಿನ ಎಸ್‌ಆರ್‌ಜಿ ಆಸ್ಪತ್ರೆಯ ಶವಾಗಾರದ ಹೊರಗೆ ತಾಯಂದಿರ ಆಕ್ರಂದನ ಮುಗಿಲು ಮುಟ್ಟಿತ್ತು.

ಸುರಕ್ಷತಾ ಕ್ರಮ ಪರಿಶೀಲನೆ ಕಡ್ಡಾಯ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳನ್ನು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಭೇಟಿ ಮಾಡಿದರು – ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೇಶದ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಶಾಲೆಗಳಲ್ಲಿನ ಮಕ್ಕಳ ಸುರಕ್ಷತಾ ಕಾರ್ಯವಿಧಾನ ಹಾಗೂ ಸೌಲಭ್ಯಗಳ ಪರಿಶೀಲನೆಯನ್ನು ಕಡ್ಡಾಯವಾಗಿ ನಡೆಸಬೇಕು ಎಂದು ಕೇಂದ್ರ ಶಿಕ್ಷಣ ಸಚಿವಾಲಯವು ನಿರ್ದೇಶನ ನೀಡಿದೆ.

ಮಕ್ಕಳ ಸುರಕ್ಷತೆ ಹಾಗೂ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ತುರ್ತು ಕ್ರಮ ಕೈಗೊಳ್ಳಬೇಕು. ತುರ್ತು ಸಂದರ್ಭದಲ್ಲಿ ಸ್ಥಳಾಂತರ, ಪ್ರಥಮ ಚಿಕಿತ್ಸೆ ಹಾಗೂ ಸುರಕ್ಷತಾ ಕ್ರಮಗಳ ಕುರಿತು ಶಾಲೆಯ ಸಿಬ್ಬಂದಿ ಹಾಗೂ ಮಕ್ಕಳಿಗೆ ತರಬೇತಿ ನೀಡಬೇಕು. ಶಾಲಾ ಕಟ್ಟಡಗಳಲ್ಲಿ ಅಗ್ನಿ ಸುರಕ್ಷತೆ, ತುರ್ತು ನಿರ್ಗಮನ, ಎಲೆಕ್ಟ್ರಿಕಲ್ ವಯರಿಂಗ್ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಲು ಸೂಚಿಸಲಾಗಿದೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರ.

PM SHRI
Pradhan Mantri ScHools for Rising India
Creating holistic and well-rounded individuals equipped with key 21st Century skills

ಜವಾಹರ್ ನವೋದಯ ವಿದ್ಯಾಲಯಗಳಲ್ಲಿ IX ಮತ್ತು XI ನೇ ತರಗತಿಯಲ್ಲಿ 2026-27 ಶೈಕ್ಷಣಿಕ ವರ್ಷಕ್ಕಾಗಿ ಖಾಲಿ ಇರುವ ಸೀಟುಗಳ ಭರ್ತಿಗಾಗಿ ಆಯ್ಕೆ ಪರೀಕ್ಷೆಯ ಅಧಿಸೂಚನೆ

2026–27 ನೇ ಶೈಕ್ಷಣಿಕ ವರ್ಷದ IX ಮತ್ತು XI ತರಗತಿಯಲ್ಲಿ ಖಾಲಿ ಇರುವ ಸ್ಥಾನಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ನವೋದಯ ವಿದ್ಯಾಲಯಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಲ್ಯಾಟರಲ್ ಎಂಟ್ರಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 23.09.2025 | ಪ್ರವೇಶ ಪರೀಕ್ಷೆಯ ದಿನಾಂಕ : 07.02.2026

ಸಾಮಾನ್ಯ ಲಕ್ಷಣಗಳು
- 6 ರಿಂದ 12 ನೇ ತರಗತಿಯವರೆಗೂ ಸಹ–ಶಿಕ್ಷಣ ಮತ್ತು ಸಂಪೂರ್ಣ ವಸತಿ ಶಾಲೆಗಳು.
- ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣ.
- ಸಿ ಬಿ ಎಸ್ ಇ ಯಿಂದ ಮಾನ್ಯತೆ ಪಡೆದಿದೆ. ಬೋರ್ಡ್ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ.
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯ. ಸಾಮಾನ್ಯವಾಗಿ ವಿದ್ಯಾಲಯಗಳು ಗ್ರಾಮೀಣ ಪ್ರದೇಶದಲ್ಲಿವೆ.
- ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕಗಳು, ಲೇಖನ ಸಾಮಗ್ರಿ ಮತ್ತು ಆವಶ್ಯಕ ದಿನ ಬಳಕೆಯ ವಸ್ತುಗಳು ಸೇರಿದಂತೆ ಉಚಿತ ಶಿಕ್ಷಣ.
- ಸಹ–ಪಠ್ಯ ಚಟುವಟಿಕೆಗಳು, ಕ್ರೀಡೆಗಳು, ಎನ್.ಸಿ.ಸಿ., ಎನ್.ಎಸ್.ಎಸ್., ಯೋಗದ ಮೂಲಕ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ.

ವಿಶೇಷ ಲಕ್ಷಣಗಳು
ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ ಇದರ ಪರಿಣಾಮವಾಗಿ
- JEE MAIN - 2025: 12103 ವಿದ್ಯಾರ್ಥಿಗಳಲ್ಲಿ 4492 [37.11%] ವಿದ್ಯಾರ್ಥಿಗಳು ಅರ್ಹತೆ ಪಡೆದಿರುತ್ತಾರೆ.
- JEE ADVANCE - 2024 ರಲ್ಲಿ 3126 ವಿದ್ಯಾರ್ಥಿಗಳಲ್ಲಿ 1083 [34.64%] ವಿದ್ಯಾರ್ಥಿಗಳು ಅರ್ಹತೆ ಪಡೆದಿರುತ್ತಾರೆ.
- NEET - 2025 ರಲ್ಲಿ 23105 ವಿದ್ಯಾರ್ಥಿಗಳಲ್ಲಿ 16491 [71.37%] ವಿದ್ಯಾರ್ಥಿಗಳು ಅರ್ಹತೆ ಪಡೆದಿರುತ್ತಾರೆ.
- 2024–25ರಲ್ಲಿ 10ನೇ ತರಗತಿಯಲ್ಲಿ 99.49% ಮತ್ತು 12ನೇ ತರಗತಿಯಲ್ಲಿ 99.29 % ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ.
- 2025 ರ UPSC ಪರೀಕ್ಷೆ ಮೂಲಕ NVSನ 38 ಹಳೆಯ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಅರ್ಹತೆ

ತರಗತಿ IX
- ಅಭ್ಯರ್ಥಿಯು ಅರ್ಜಿ ಸಲ್ಲಿಸಲು ಬಯಸುವ ಜಿಲ್ಲೆಯ ಮೂಲ ನಿವಾಸಿಯಾಗಿರಬೇಕು ಮತ್ತು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ VIIIನೇ ತರಗತಿಯಲ್ಲಿ 2025–26 ನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಪ್ರವೇಶ ಬಯಸುವ ವಿದ್ಯಾರ್ಥಿಗಳು ಆಯಾ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜ ನ ವಿ ಗಳಿಗೆ ನೋಂದಾಯಿಸಲು ಅರ್ಹರಾಗಿರುತ್ತಾರೆ
- ಅರ್ಜಿ ಸಲ್ಲಿಸುವ ಅಭ್ಯರ್ಥಿ 01.05.2011 ರಿಂದ 31.07.2013 ರ (ಎರಡೂ ದಿನಾಂಕಗಳು ಸೇರಿ) ಒಳಗೆ ಜನಿಸಿರಬೇಕು. ಇದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗ ಸಹಿತ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

ತರಗತಿ XI
- ಅಭ್ಯರ್ಥಿಯು , ಜವಾಹರ್ ನವೋದಯ ವಿದ್ಯಾಲಯವು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ, 2025 – 26ರ ಶೈಕ್ಷಣಿಕ ವರ್ಷದಲ್ಲಿ (ಏಪ್ರಿಲ್ 2025 ರಿಂದ ಮಾರ್ಚ್ 2026 ರ ಅವಧಿ) / 2025 (ಜನವರಿಯಿಂದ ಡಿಸೆಂಬರ್ 2026 ರ ಅವಧಿಯವರೆಗೆ) ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 10ನೇ ತರಗತಿಯನ್ನು ಓದಿರಬೇಕು.
- ಅಭ್ಯರ್ಥಿಯ ಜನ್ಮ ದಿನಾಂಕವು 01.06.2009 ರಿಂದ 31.07.2011 (ಎರಡೂ ದಿನಾಂಕಗಳು ಸೇರಿ).

ಆಯ್ಕೆ ಪರೀಕ್ಷೆ

9 ನೇ ತರಗತಿಯ ಆಯ್ಕೆ ಪರೀಕ್ಷೆ
- ಹಿಂದಿ, ಇಂಗ್ಲೀಷ್, ಗಣಿತ ಮತ್ತು ವಿಜ್ಞಾನ.
- OMR ಆಧಾರಿತ ವಸ್ತುನಿಷ್ಠ ಪ್ರಕಾರ [Objective Type]
- ದ್ವಿಭಾಷೆಯಲ್ಲಿ ಪ್ರಶ್ನೆ ಪತ್ರಿಕೆ. [ಇಂಗ್ಲೀಷ್ ಮತ್ತು ಹಿಂದಿ]
- ಪಠ್ಯಕ್ರಮ ಮತ್ತು ಆಯ್ಕೆಯ ಮಾನದಂಡಗಳಿಗಾಗಿ ದಯವಿಟ್ಟು ನ.ವಿ.ಸ. ವಿವರಣಾ ಪತ್ರ (Prospectus) ನೋಡಿ.

11 ನೇ ತರಗತಿಯ ಆಯ್ಕೆ ಪರೀಕ್ಷೆ
- ಮಾನಸಿಕ ಸಾಮರ್ಥ್ಯ, ಇಂಗ್ಲೀಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ.
- OMR ಆಧಾರಿತ ವಸ್ತುನಿಷ್ಠ ಪ್ರಕಾರ [Objective Type]
- ದ್ವಿಭಾಷೆಯಲ್ಲಿ ಪ್ರಶ್ನೆ ಪತ್ರಿಕೆ. [ಇಂಗ್ಲೀಷ್ ಮತ್ತು ಹಿಂದಿ]
- ಪಠ್ಯಕ್ರಮ ಮತ್ತು ಆಯ್ಕೆಯ ಮಾನದಂಡಗಳಿಗಾಗಿ ದಯವಿಟ್ಟು ನ.ವಿ.ಸ. ವಿವರಣಾ ಪತ್ರ (Prospectus) ನೋಡಿ.
- ವಿದ್ಯಾರ್ಥಿಯು 10ನೇ ತರಗತಿಯ ಅಧ್ಯಯನದ ಜಿಲ್ಲೆ ಮತ್ತು ನಿವಾಸ ಒಂದೇ ಆಗಿದ್ದರೆ ಮಾತ್ರ ಅಭ್ಯರ್ಥಿಯನ್ನು ಆಯಾ ಜಿಲ್ಲಾ ಮಟ್ಟದ ಅರ್ಹತೆ(ಮೆರಿಟ್) ಗೆ ಪರಿಗಣಿಸಲಾಗುತ್ತದೆ.

Link for Registration
IX https://cbseitms.nic.in/2025/nvsix_9
XI https://cbseitms.nic.in/2025/nvsix_11

ನವೋದಯ ವಿದ್ಯಾಲಯ ಸಮಿತಿ ಪ್ರಕಟಣೆ

ಕಮೊನ್ ವಿಯೆಟ್ನಾಂ! 15
ವಿಯೆಟ್ನಾಂ ದೇಶದ ಮೆಕಾಂಗ್ ನದಿ ಪರಿಸರದಲ್ಲಿ ಸುತ್ತಾಡಿದ ಅನುಭವ ಕಥನ

ಬೆಂಗಳೂರು ಸಮೀಪ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಲು ಸರ್ಕಾರ ತೀರ್ಮಾನಿಸಿದೆ. ಇದಕ್ಕಾಗಿ ಮಾಗಡಿ ಮತ್ತು ಕನಕಪುರ ಸಮೀಪ ಆಯ್ಕೆ ಮಾಡಿದ ಸ್ಥಳವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಉನ್ನತ ಮಟ್ಟದ ತಂಡವು ಪರಿಶೀಲಿಸಿದೆ. ಇದರಿಂದ ಈ ಭಾಗದ ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಆದರೆ, ರಿಯಲ್ ಎಸ್ಟೇಟ್ ಉದ್ಯಮಿಗಳು ಖುಷಿಯಾಗಿದ್ದಾರೆ. ಪ್ರಜಾವಾಣಿಯ ಹಿರಿಯ ವರದಿಗಾರ ಈ ಸ್ಥಳಗಳಿಗೆ ಭೇಟಿ ನೀಡಿ ಸಿದ್ಧಪಡಿಸಿದ ಬರಹ

ಮಾಗಡಿ ತಾಲ್ಲೂಕು ಸೋಲೂರು ಹೋಬಳಿಯಲ್ಲೂ ವಿಮಾನ ನಿಲ್ದಾಣ ನಿರ್ಮಾಣದ್ದೇ ಚರ್ಚೆ...

ಜೀವ್ನಾನಾ? ಏರ್‌ಪೋರ್ಟಾ?

• ಗುರು ಪಿ.ಎಸ್.

ನಮ್ ಹೊಲದಲ್ಲಿ ಏರ್‌ಪೋರ್ಟ್ ಆಯ್ತುದಾ? ಬಸವೇನಹಳ್ಳಿಯ ರೈತ ಗಂಗಾಧರಯ್ಯನವರಿಗೆ ಇದೇ ಚಿಂತೆ

ರಸ್ತೆ ಪಕ್ಕದ ಹೊಲದಲ್ಲಿ ಎತ್ತುಗಳು ಮೇಯುತ್ತಿದ್ದವು. ಚಡ್ಡಿ, ಬಿಳಿಯ ಬನಿಯನ್ ಧರಿಸಿ ಹೆಗಲ ಮೇಲೆ ಚೌಕಳಿ ಟವಲ್ ಹಾಕಿದ್ದ ರೈತರೊಬ್ಬರು ಕೆಲಸ ಮಾಡುತ್ತಿದ್ದರು. ಈ ಹೊಲವನ್ನು ತಲತಲಾಂತರಗಳಿಂದ ಉತ್ತು ಬಿತ್ತು ಬೆಳೆ ತೆಗೆದ ಕುರುಹುಗಳು ಢಾಳವಾಗಿ ಕಾಣಿಸುತ್ತಿದ್ದವು. ಈ ರೈತನನ್ನು ಮಾತನಾಡಿಸುವ ಸಲುವಾಗಿಯೇ ಹೊಲಕ್ಕೆ ಹೋದೆ. ಕೂಡಲೇ ಆತಂಕಕ್ಕೆ ಒಳಗಾದಂತೆ ಕಂಡುಬಂದ ಬಸವೇನಹಳ್ಳಿಯ ರೈತ ಗಂಗಾಧರಯ್ಯ ‘ನೀವು ಏರ್‌ಪೋರ್ಟ್‌ನವರಾ’ ಎಂದು ಕೇಳಿದರು. ನಾನು ನನ್ನ ಪರಿಚಯ ಮಾಡಿಕೊಂಡೆ. ಕೊಂಚ ಸಮಾಧಾನವಾದಂತೆ ಕಂಡುಬಂದರೂ, ‘ನಮ್ ವಲ್ದಲ್ಲಿ ಏರ್‌ಪೋರ್ಟ್ ಆಯ್ತದಾ’ ಎಂದು ದುಗುಡದಿಂದಲೇ ಕೇಳಿದರು. ‘ಇನ್ನೂ ಖಚಿತವಾಗಿಲ್ಲ. ಇಲ್ಲೇ ಆಗಬೇಕು ಅಂತ ನಿಮಗೆ ಆಸೆ ಇದೆಯೇ’ ಎಂದು ನಾನು ನಗುತ್ತಾ ಕೇಳುತ್ತಿದ್ದಂತೆ ಅವರು ಮುಖಕಿವುಚಿಕೊಂಡು ಸಿಟ್ಟಿನಲ್ಲೇ ನೋಡಿದವರು ‘ಯಾಕಪ್ಪ, ನಾವ್ ಬದ್ಕೋದು ನಿನ್ಗೆ ಇಷ್ಟ ಇಲ್ವಾ? ರಾಗಿ ಬೆಳೆಯೋದ್ರಲ್ಲಿ ಇಡೀ ಜಿಲ್ಲೆಗೇ ನಮ್ ತಾಲ್ಲೂಕ್ ನಂಬರ್ ಒನ್. ಅರ್ಧ ಬೆಂಗಳೂರನ್ನೇ ಸಾಕ್ತೀವಿ ಗೊತ್ತಾ’ ಎಂದು ಹೆಮ್ಮೆಯಿಂದ ಹೇಳಿದರು. ಕೂಡಲೇ ಏನನ್ನೋ ನೆನಪು ಮಾಡಿಕೊಂಡವರಂತೆ ‘ಆದ್ರೆ, ಇಲ್ಲಿ ಏರ್‌ಪೋರ್ಟ್ ಆದ ದಿನವೇ ರೈತ್ರು ಸತ್ವಿ ಅಂದ್ಕೊಳ್ಳಿ’ ಎಂದು ಕಣ್ಣುತುಂಬಿಕೊಂಡರು 45 ವರ್ಷದ ಈ ರೈತ.

ನಾನು ಮಾಗಡಿ ರಂಗಪ್ಪನಪಾಳ್ಯಕ್ಕೆ ಭೇಟಿ ಕೊಟ್ಟಾಗ ಜಯಮ್ಮ ಅವರು ಕೊಟ್ಟಿಗೆ ಸ್ವಚ್ಛ ಮಾಡುತ್ತಿದ್ದರು. ನನ್ನನ್ನು ನೋಡುತ್ತಿದ್ದಂತೆ ಕೆಲಸವನ್ನು ಅಷ್ಟಕ್ಕೇ ಬಿಟ್ಟು ದಡದಡನೆ ಓಡಿ ಬಂದರು. ನಾನು ಅವರನ್ನು ಮಾತನಾಡಿಸುವ ಮೊದಲೇ ‘ನಾವ್ ಭೂಮ್ತಾಯಿ ಮಕ್ಳು. ನಮ್ಗೆ ಭೂಮಿ ಬೇಕು. ನನಗೆ ಎಪ್ಪತ್ತೆಂಟು ವರ್ಸ. ಲೋನ್ ತಕ್ಕಂಡು ಅಸು ಕಟ್ಕೊಂಡು ವಲಕ್ಕೆ ಗೊಬ್ಬರ ಆಕ್ಕೊಂಡು ಯಂಗೋ ಜೀವ್ನಾ ಮಾಡ್ತೀವಿ. ಅದೂನು ಕಿತ್ಕಂಡ್‌ಬುಟ್ರೆ ನಮ್ ಮನೆ ಕತೆ ಏನಪ್ಪ? ಅಲ್ದೆ ಚಿಕ್ದಾಗಿ ಮುನಿಯಪ್ಪನ ಗುಡಿ ಕಟ್ಕೊಂಡೀವಿ, ನಮ್ ಹಿರೀಕರ ಗೋರಿಗಳೆಲ್ಲ ಇಲ್ಲೇ ಅವೆ. ಅವುಕ್ಕೆಲ್ಲ ಎಡೆಯಿಟ್ಟು ಪೂಜೆ ಮಾಡ್ಕೊಂಡೀರ್ತೀವಿ. ಈಗ ಭೂಮಿ ಬೇಕೆಂದ್ರೆ ನಾವ್ ಬಿಟ್ಕೊಡಲ್ಲ. ನಮ್ಮನ್ನ ಪೊಲೀಸ್ ಟೇಸನ್‌ಗೆ ಕರ್ಕೊಂಡು ಹೋಗ್ತಾರಾ ಹೋಗಲಿ, ಪರಪ್ಪನ ಜೈಲ್ಗೆ ಆಕ್ತಾರಾ, ಆಕಲಿ, ನಾನಂತೂ ಎದರಲ್ಲ’–ಹೀಗೆ ಒಂದೇ ಉಸಿರಲ್ಲಿ ತನ್ನೊಡಲ ಬೇಗುದಿಯನ್ನು ಹೊರ ಹಾಕಿದರು ಜಯಮ್ಮ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೆಂಪಚಿಕ್ಕನಹಳ್ಳಿಯ ನರಸಿಂಹಯ್ಯ ನಾಲ್ಕು ಹಸುಗಳನ್ನು ಸಾಕಿದ್ದಾರೆ. ದಿನಕ್ಕೆ 40 ಲೀಟರ್ ಹಾಲು ಕರೆಯುತ್ತಾರೆ. ಇವರ ಬಳಿ ಒಂದು ಎಕರೆ ಹೊಲವಿದ್ದು ಅದರಲ್ಲಿ ಅಡಿಕೆ ಗಿಡಗಳನ್ನು ಬೆಳೆಸಿದ್ದಾರೆ. ‘ಭೂಮಿ ಇದ್ರೆ ಸಾಯೋವರೆಗೂ ನಾನು, ನನ್ ಹೆಂಡ್ತಿ ಜೀವ್ನಾ ಮಾಡ್ಕೊಂಡಿರಬಹುದು. ನಮ್ ಭೂಮಿ ಕೇಳೋ ಬದಲು ಒಂದು ತೊಟ್ಟು ವಿಸ ಕೊಟ್ಟುಬುಟ್ರೆ ಒಳ್ಳೆದು’ ಎಂದು ಕಣ್ಣೀರು ಹಾಕಿದರು.

ಇದೇ ಊರಿನ ಸುಚಿಕರ ಅವರ ತಾಪತ್ರಯವೇ ಬೇರೆ. ತಾತ–ಮುತ್ತಾತರ ಕಾಲದಿಂದ ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆ. ಇವರ ಬಳಿ ಸರಿಯಾದ ದಾಖಲೆಗಳಿಲ್ಲ. ಹೀಗಾಗಿ ದಾಖಲೆಗಳು ಸರಿಯಿಲ್ಲ ಎಂದು ಪರಿಹಾರ ಕೊಡದೇ ಹೋದರೆ ಹೇಗೆ? ಎನ್ನುವ ದಿಗಿಲು ಇವರದು.

‘ಡ್ರೋನ್ ಕ್ಯಾಮ್ರಾ ಬುಟ್ಟಿದ್ರು, ಅಲ್ಲಲ್ಲಿ ಏನೇನೋ ಮಾರ್ಕ್ ಮಾಡಿದ್ರು, ಎಲ್ಲರೂ ಹಿಂದಿಲೀ ಮಾತಾಡ್ತಿದ್ರು. ನಾವು ಏನ್ ವಿಸಯ ಅಂತ ಕೇಳೋದ್ರೊಳಗೆ ಡುರ್ರ್ ಅಂತ ವೋಗೇಬುಟ್ರು’ ಎನ್ನುವ ಮೂಲಕ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಅಧಿಕಾರಿಗಳು ಬಂದು ಹೋದ ಮಾಹಿತಿ ಕೊಟ್ಟರು ಮರಿಕುಪ್ಪೆ ಚಿಕ್ಕಣ್ಣ.

ನೆಲಮಂಗಲದ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಭೇಟಿ ಮಾಡಲು ಅವರ ಕಚೇರಿಗೆ ಹೋದೆ. ಅದು ಹವಾನಿಯಂತ್ರಿತ ಕಚೇರಿ. ಹಳ್ಳಿಗಳಲ್ಲಿ ಓಡಾಡಿ ಸುಸ್ತಾಗಿದ್ದ ನನಗೆ ಆ ಕೋಣೆಯೊಳಗೆ ಕಾಲಿಡುತ್ತಿದ್ದಂತೆ ಹಿತವೆನಿಸಿತು. ಬಿಳಿ ಬಣ್ಣದ ಉಡುಪಿನಲ್ಲಿ ಕಂಗೊಳಿಸುತ್ತಿದ್ದ ಉದ್ಯಮಿ ಆತ್ಮೀಯವಾಗಿ ಬರಮಾಡಿಕೊಂಡರು. ಆ ಕ್ಷಣಕ್ಕೆ ಹಳ್ಳಿಗಳಲ್ಲಿ ರೈತರ ಮುಖದಲ್ಲಿ ಎದ್ದು ಕಾಣಿಸುತ್ತಿದ್ದ ಆತಂಕ ಕಣ್ಮುಂದೆ ಬಂದಿತು.

ನೆಲಮಂಗಲ ಭಾಗಕ್ಕೇ ಏರ್‌ಪೋರ್ಟ್ ಏಕೆ ಬರಬೇಕು ಎನ್ನುವುದನ್ನು ಪ್ರತಿಪಾದಿಸುತ್ತಾ, ‘ಬೆಂಗಳೂರಿಗೆ ನೆಲಮಂಗಲ ಈಗ ಹೃದಯಭಾಗವಿದ್ದಂತೆ. ಕರ್ನಾಟಕದ ಬಹುತೇಕ ಜಿಲ್ಲೆಗಳ ಜನರು ಬೆಂಗಳೂರು ಪ್ರವೇಶಿಸುವುದು ನೆಲಮಂಗಲದ ಮೂಲಕವೇ. ಹಲವು ರಾಷ್ಟ್ರೀಯ ಹೆದ್ದಾರಿಗಳು ಈ ಪ್ರದೇಶದಲ್ಲಿವೆ. ಆದರೆ, ಕನಕಪುರ ರಸ್ತೆಗೆ ಸಂಪರ್ಕ ಅಷ್ಟೊಂದು ಉತ್ತಮವಾಗಿಲ್ಲ’ ಎಂದರು. ಇಷ್ಟಕ್ಕೇ ಅವರ ಪ್ರತಿಪಾದನೆ ನಿಲ್ಲಲಿಲ್ಲ. ‘ಈ ಭಾಗದ ರೈತರಿಗೆ ನಾನು ಸಲಹೆ ಕೊಡುತ್ತಿದ್ದೇನೆ, ಆದಷ್ಟು ಬೇಗ ಎನ್‌ಎ (ಕೃಷಿಯೇತರ ಭೂಮಿ) ಮಾಡಿಸಿಕೊಳ್ಳಿ ಎಂದು. ಏಕೆಂದರೆ, ಈ ಭಾಗದಲ್ಲಿ ಏರ್‌ಪೋರ್ಟ್ ಬಂದರೆ, ರೈತರಿಗೆ ಕಂದಾಯ ಭೂಮಿ ಆಧಾರದ ಮೇಲೆ ಪರಿಹಾರ ಕೊಡುತ್ತಾರೆ. ಆಗ ಪರಿಹಾರ ಮೊತ್ತ ಕಡಿಮೆಯಾಗುತ್ತದೆ. ಕೃಷಿಯೇತರ ಭೂಮಿಯಾಗಿ ಪರಿವರ್ತನೆ ಮಾಡಿಸಿದರೆ ಪರಿಹಾರ ಜಾಸ್ತಿ ಬರುತ್ತದೆ’– ಹೀಗೆ ಸಾಗಿತ್ತು ಅವರ ಮಾತಿನ ವರಸೆ!

ರಿಯಲ್ ಎಸ್ಟೇಟ್ ಉದ್ಯಮಿಯ ಮಾತಿಗೆ ಪೂರಕ ಎನ್ನುವಂತಹ ಜಾಹೀರಾತುಗಳು ಸೋಷಿಯಲ್ ಮೀಡಿಯಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವು. ‘ಬೆಂಗಳೂರಿನ ಸೆಕೆಂಡ್ ಏರ್‌ಪೋರ್ಟ್ ಈ ಜಾಗದಲ್ಲೇ ಬರೋದು. ನೋಡಿ, ಈ ಲೇಔಟ್‌ನಿಂದ ಹತ್ತೇ ಕಿಲೋಮೀಟರ್ ದೂರದಲ್ಲಿ ಹೊಸ ಏರ್‌ಪೋರ್ಟ್ ಆಗೋದು ಗ್ಯಾರಂಟಿ...’

‘ಇಲ್ಲಿ ನೀವು ಸೈಟ್ ತಗೊಂಡ್ರೆ ಎರಡೇ ವರ್ಷದಲ್ಲಿ ರೇಟ್ ಡಬಲ್ ಆಗೋದು ಕನ್ಫರ್ಮ್. ಇಲ್ಲಿ ಭೂಮಿಗೆ ಚಿನ್ನ, ಚಿನ್ನದ ಬೆಲೆ ಬರುತ್ತೆ. ಈಗಲೇ ಈ ನಂಬರ್‌ಗೆ ಕಾಲ್ ಮಾಡಿ, ಸೈಟ್ ಬುಕ್ ಮಾಡಿ...’

ಎರಡನೇ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸೂಕ್ತ ಎನ್ನಬಹುದಾದ ಮೂರು ಸ್ಥಳಗಳಲ್ಲಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ನಾನು ಕುಣಿಗಲ್ ರಸ್ತೆಯ ನೆಲಮಂಗಲ ಬಳಿಯ ಸೋಲೂರು ಹೋಬಳಿ ವ್ಯಾಪ್ತಿಯ ಹಳ್ಳಿಗಳಲ್ಲಿ ಸುತ್ತಾಡಿದೆ. ಮಾಗಡಿ ತಾಲ್ಲೂಕಿಗೆ ಸೇರುವ ಈ ಹೋಬಳಿಯ ಹಳ್ಳಿಗಳಲ್ಲಿ ವಿಮಾನ ನಿಲ್ದಾಣ ನಿರ್ಮಾಣ ವಿಷಯವೇ ಚರ್ಚೆಯ ವಸ್ತು. ಬಸವೇನಹಳ್ಳಿ ಅಕ್ಕಪಕ್ಕ ಇರುವ ಕೆಂಪಚಿಕ್ಕನಹಳ್ಳಿ, ಮರಿಕುಪ್ಪೆ, ಮಾಗಡಿ ರಂಗಪ್ಪನಪಾಳ್ಯದ ಗ್ರಾಮಗಳಿಗೆ ಭೇಟಿ ಕೊಟ್ಟಾಗ ಇದು ಖಾತರಿ ಆಯಿತು.



ಮುಂದೆ ಏನಾಗುತ್ತೋ ಎಂಬ ದುಗುಡದಲ್ಲಿ ಬಸವೇನಹಳ್ಳಿಯ ಗಂಗಯ್ಯ

***

ಕನಕಪುರ ರಸ್ತೆಯ ಕಗ್ಗಲೀಪುರ ಸಮೀಪ ಮತ್ತು ಹಾರೋಹಳ್ಳಿ ಸುತ್ತಮುತ್ತಲಿನ ಹಳ್ಳಿಗಳಲ್ಲಿಯೂ ಎರಡನೇ ಏರ್‌ಪೋರ್ಟ್ ನಿರ್ಮಾಣ ವಿಚಾರ ಜೋರಾಗಿಯೇ ಚರ್ಚೆಯಲ್ಲಿದೆ. ಕೆಂಪು ಮುಕ್ಕಳಿಸುತ್ತಿದ್ದ ಹೊಲದಲ್ಲಿ ಹಿಪ್ಪುನೇರಳೆ ಗಿಡ ಬೆಳೆದಿತ್ತು. ಯುವ ರೈತನೊಬ್ಬ ಬುಟ್ಟಿಯಲ್ಲಿ ಗೊಬ್ಬರವನ್ನು ಹೊತ್ತು ಸಾಗಿಸುತ್ತಿದ್ದ. ಮುಂದೆ ಸಾಗಿದಾಗ ಹಾರೋಹಳ್ಳಿ ಬಳಿಯ ಕಿರಣಗೇರಾದ ನಾಗವೇಣಿ ಸಿಕ್ಕರು.

‘ಏರ್‌ಪೋರ್ಟ್ ಆದ್ರೆ ನಮ್ ಮಕ್ಕಳಿಗೆ ಕೆಲ್ಸ ಸಿಕ್ಕುತ್ತೆ ಅಂತಾರೆ. ಕೆಲ್ಸವೂ ಇಲ್ಲ, ಏನೂ ಇಲ್ಲ. ದುಡ್ಡು ಕೈಗೆ ಬಂದ್ ನಮ್ ಮಕ್ಳು ಪೋಲಿ ಬೀಳ್ತಾವೆ ಅಷ್ಟೆ. ಇಲ್ಲೊಂದ್ ದೊಡ್ ಆಸ್ಪತ್ರೆ ಆಯ್ತು. ಸ್ಥಳೀಕರಿಗೆ ಕೆಲ್ಸ ಕೊಡ್ತೀವಿ ಅಂದ್ರು. ಈ ಅಕ್ಕಪಕ್ಕ ಹಳ್ಳಿಗಳ ಒಬ್ರಿಗೂ ಅಲ್ಲಿ ಕೆಲ್ಸ ಕೊಡ್ಲಿಲ್ಲ. ಇನ್ನು, ದೇವನಹಳ್ಳಿ ಏರ್‌ಪೋರ್ಟ್‌ಗೆ ಭೂಮಿ ಕೊಟ್ಟವರ ಕತೆ ಏನಾಗದೆ ಅಂತ ನಮ್ ಕಣ್ ಮುಂದೆ ಅದೆ. ನಮ್ ಭೂಮಿನ ನಾವು ಕೊಡಲ್ಲ’ ಎಂದು ಕಡ್ಡಿಮುರಿದಂತೆ ನಾಗವೇಣಿ ಹೇಳಿದರು.

ದಾರಿ ಮಧ್ಯದಲ್ಲಿ ಕಟ್ಟೆ ಮೇಲೆ ಕುಳಿತು ಹರಟುತ್ತಿದ್ದ ರೈತರು ಸಿಕ್ಕರು. ಅವರಲ್ಲಿ ಒಬ್ಬರು ತಮ್ಮ ಬಳಿ ಒಂದು ಎಕರೆ ಹೊಲ ಇರುವುದಾಗಿ ಹೇಳಿ, ‘ಒಂದ್ ಕೋಟಿ ಕೊಟ್ರೆ ವಲ ಮಾರ್ತೀನಿ. ಬಂದ್ ದುಡ್ಡಲ್ಲಿ ಮಗಳ ಮದ್ವೆ ಮಾಡ್ತೀನಿ. ಆಮ್ಯಾಲೆ ಬಾಡ್ಗೆ ಮನೆ ಮಾಡ್ಕಂಡು ಜೀವ್ನಾ ಸಾಗಿಸ್ತೀನಿ’ ಎಂದರು. ಉಳಿದವರು ‘ನಮ್ಗೇನು ಅರ್ಜೆಂಟ್ ಇಲ್ಲ. ಒಳ್ಳೆ ರೇಟ್ ಸಿಕ್ರೆ ಆಗ ಯೋಚ್ನೆ ಮಾಡ್ತೀವಿ’ ಎಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಿದರು.

ಬಾನು ಬಣ್ಣ ಬದಲಿಸಿತ್ತು. ನೇಸರ ಇಂಚಿಂಚಾಗಿ ಮರೆಯಾಗುತ್ತಿದ್ದ. ನಾನು ಕನಕಪುರ ರಸ್ತೆಯಲ್ಲಿನ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರೊಂದಿಗೆ ಮಾತನಾಡಲು ಯತ್ನಿಸಿದಾಗ ಅವರು, ಜಯನಗರದ ಪ್ರತಿಷ್ಠಿತ ಕ್ಲಬ್‌ವೊಂದಕ್ಕೆ ಬರಲು ಆಹ್ವಾನ ನೀಡಿದರು. ಅಲ್ಲಿಗೆ ಹೋದಾಗ ಕತ್ತಲಾಗಿತ್ತು. ಕ್ಲಬ್ ಮುಂದಿನ ಕಾರಂಜಿ ಎದುರು ಅವರು ಕುಳಿತಿದ್ದರು. ಹಿನ್ನೆಲೆಯಲ್ಲಿ ಇಂಪಾದ ಸಂಗೀತ. ಆಹ್ಲಾದಕರ ವಾತಾವರಣ. ಮತ್ತೆ ಹಳ್ಳಿಗಳಲ್ಲಿ ಆತಂಕದ ಮುಖ ಹೊತ್ತ ರೈತರು ನೆನಪಾದರು.

ಉದ್ಯಮಿ ಮಾತು ಶುರುವಿಟ್ಟುಕೊಂಡವರು, ‘ನೆಲಮಂಗಲದಲ್ಲಿ ಏರ್‌ಪೋರ್ಟ್ ಮಾಡಿದರೆ ಎರಡೂ ಏರ್‌ಪೋರ್ಟ್ ಬೆಂಗಳೂರು ಉತ್ತರಕ್ಕೇ ಮಾಡಿದಂತಾಗುತ್ತದೆ. ಅದರ ಬದಲು, ಕನಕಪುರ ರಸ್ತೆಯೇ ಸೂಕ್ತ. ನೈಸ್ ರೋಡ್ ಇರುವುದರಿಂದ ಕನಕಪುರಕ್ಕೆ ಸಂಪರ್ಕ ಕಷ್ಟ ಆಗಲ್ಲ. ಇದೇ ಭಾಗದಲ್ಲಿ ಎಲೆಕ್ಟ್ರಾನಿಕ್ ಸಿಟಿ, ವೈಟ್‌ಫೀಲ್ಡ್‌ನಂತಹ ಐಟಿ ಹಬ್ ಇರೋದ್ರಿಂದ ಹೆಚ್ಚು ಬಳಕೆಯೂ ಆಗುತ್ತೆ. ಜೊತೆಗೆ, ಈ ಭಾಗದಲ್ಲಿ ರೈತರು ಹಣ್ಣು, ತರಕಾರಿ ಹೆಚ್ಚು ಬೆಳೆಯೋದರಿಂದ ಅವುಗಳ ರಫ್ತಿಗೂ ಸಹಾಯವಾಗುತ್ತದೆ’ ಎಂದರು.

‘ಕೃಷಿ ಭೂಮಿಯನ್ನೇ ಕಿತ್ತುಕೊಂಡ ಮೇಲೆ ಹಣ್ಣು, ತರಕಾರಿ ಎಲ್ಲಿಂದ ರಫ್ತು ಮಾಡುತ್ತೀರಿ’ ನಾನು ಕೇಳಿದೆ. ‘ಎಲ್ಲ ಭೂಮಿಯೇನೂ ಬೇಕಾಗುವುದಿಲ್ಲ. ಏರ್‌ಪೋರ್ಟ್ ಪ್ರದೇಶ ಹೊರತುಪಡಿಸಿ, ಅದರ ಸುತ್ತ ಮುತ್ತ ಇರುವ ರೈತರಿಗೆ ಅನುಕೂಲ ಆಗುತ್ತೆ’ ಎಂದು ಸಮರ್ಥಿಸಿದರು.

14ನೇ ಪುಟಕ್ಕೆ...

ಬಾಗಿಲುಗಳು ಇಲ್ಲದ ಊರು

ದಾವಲ್ ಮಲಿಕ್

ದಾವಲ್ ಮಲಿಕ್ ಗ್ರಾಮದ ಆದಾಂಬಿ ನೂರ್‌ಅಹ್ಮದ್ ಮುಜಾವರ್ ಕಟ್ಟಿಸಿರುವ ಹೊಸ ಮನೆಗೆ ಬಾಗಿಲು ಇಲ್ಲ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ರೋಣ ತಾಲ್ಲೂಕಿನ ಮಾರನಬಸರಿ ಗ್ರಾಮದ ಆದಾಂಬಿ 24 ವರ್ಷಗಳ ಹಿಂದೆ ಈ ಊರಿಗೆ ಸೊಸೆಯಾಗಿ ಬಂದವರು. ಅದಕ್ಕೂ ಮೊದಲು ಈ ಊರಿನ ವಿಶೇಷತೆ ಬಗ್ಗೆ ಏನೇನೂ ತಿಳಿಯದವರು. ಗ್ರಾಮದ ಯುವಕ ನೂರ್‌ಅಹ್ಮದ್ ಮುಜಾವರ್ ಅವರನ್ನು ವರಿಸಿ ಗ್ರಾಮಕ್ಕೆ ಬಂದ ಸಂದರ್ಭದಲ್ಲಿ ಮನೆಗೆ ಬಾಗಿಲು ಇಲ್ಲದಿರುವುದನ್ನು ಕಂಡು ಹೌಹಾರಿದರು. ಪರದೆ ಸರಿಸಿ ನಿದ್ರೆಗೆ ಜಾರುವುದಾದರೂ ಹೇಗಪ್ಪ ಎನ್ನುವ ಚಿಂತೆಯಲ್ಲಿಯೇ ಕೆಲವು ವಾರಗಳನ್ನು ಕಳೆದರು. ಆನಂತರ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡವರು.

‘ತವರೂರಿನಲ್ಲಿ ಮನೆಗೆ ಬಾಗಿಲುಗಳಿದ್ದವು. ಮದುವೆ ಆಗಿ ಇಲ್ಲಿಗೆ ಬಂದಾಗ ಮನೆಗೆ ಬಾಗಿಲು ಇಲ್ಲದ ಕಾರಣಕ್ಕೆ ಬಾಳ ಕಷ್ಟ ಆಗಿತ್ತು. ಆದರೂ ಎರಡು ತಿಂಗಳಲ್ಲಿ ಹೊಂದಿಕೊಂಡೆ. ಈಗ, ಬೇರೆ ಯಾವುದಾದರೂ ಊರಿಗೆ ಹೋದಾಗ ಬಾಗಿಲು, ಚಿಲಕ ಅಂದರೆ ಹೆದರಿಕೆ ಬರುತ್ತದೆ. ಬಾಗಿಲು ನೋಡಿದಾಗ ಬಂಧಿಯಾದೆ, ಸ್ವಾತಂತ್ರ್ಯ ಕಳೆದುಕೊಂಡೆ ಅಂತ ಅನ್ನಿಸಲು ಶುರುವಾಗುತ್ತದೆ. ಅಷ್ಟರ ಮಟ್ಟಿಗೆ ಈ ಊರಿನ ನೆಲದ ನಂಬಿಕೆಗೆ ಒಗ್ಗಿಹೋಗಿರುವೆ’ ಎಂದು ನಕ್ಕರು ಆದಾಂಬಿ.

ಅಬ್ದುಲ್ ಹಮೀದ್ ಮುಜಾವರ್

ಈ ಊರಿನಲ್ಲಿ ದೊಡ್ಡ ಮನೆ ಕಟ್ಟಿಸಿರುವ ಇವರು, ಸದ್ಯದಲ್ಲೇ ಗೃಹಪ್ರವೇಶ ಮಾಡುವ ಸಂಭ್ರಮದಲ್ಲಿದ್ದಾರೆ. ಹಲವು ಸೌಕರ್ಯ ಹೊಂದಿರುವ ಮನೆಗೆ ಅವರು ಬಾಗಿಲು ಇರಿಸುವ ಬಗ್ಗೆ ಮಾತ್ರ ಯೋಚಿಸಿಯೇ ಇಲ್ಲ!

‘ಬಾಗಿಲುಗಳು ಇಲ್ಲದ ಊರು’ ಎಂಬ ಮಾತು ಕಿವಿಗೆ ಬಿದ್ದರೆ ಅದೊಂದು ಕಾಲ್ಪನಿಕ ಊರು ಇರಬಹುದಾ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಆದರೆ, ಗದಗ ಜಿಲ್ಲೆಯ ಮುಳಗುಂದ ಪಟ್ಟಣದಿಂದ ಅನತಿ ದೂರದಲ್ಲಿರುವ ದಾವಲ್ ಮಲಿಕ್ ಎಂಬ ಗ್ರಾಮದಲ್ಲಿ ನೂರು ಮನೆಗಳಿದ್ದು, ಹೆಚ್ಚಿನ ಮನೆಗಳಿಗೆ ಬಾಗಿಲುಗಳೇ ಇಲ್ಲ. ಈ ಗ್ರಾಮದಲ್ಲಿ ಹೊಸ ಮನೆ ಕಟ್ಟಿಸುವವರು ಕೂಡ ಮನೆಗೆ ಬಾಗಿಲು ಇರಿಸುವುದರ ಬಗ್ಗೆ ಯೋಚಿಸುವುದಿಲ್ಲ.

‘ಇಲ್ಲಿನ ಜನರು ಮನೆಗಳಿಗೆ ಬಾಗಿಲು ಯಾಕೆ ಇರಿಸುವುದಿಲ್ಲ’ ಎಂಬ ಪ್ರಶ್ನೆಯ ಜಾಡು ಹಿಡಿದರೆ, ಅದಕ್ಕೆ ಉತ್ತರವಾಗಿ ಊರಿನ ಹಿರಿಯರ ಬಾಯಲ್ಲಿ ‘ನಂಬಿಕೆ’ಯ ಕಥೆ ತೆರೆದುಕೊಳ್ಳುತ್ತದೆ. ಈ ಊರಿನ ಮನೆಗಳನ್ನು ಬೀಗ ಹಾಕಿ ರಕ್ಷಣೆ ಮಾಡುವ ಅಗತ್ಯವಿಲ್ಲ. ನಮ್ಮ ನಂಬಿಕೆಗೆ ಬಾಗಿಲುಗಳು ಬೇಕಿಲ್ಲ ಎಂದು ಹೇಳುತ್ತಲೇ ಅವರಿಗೆ ಅವರ ಪೂರ್ವಜರು ಹೇಳಿದ ದಾವಲ್ ಮಲಿಕ್ ಪವಾಡವನ್ನು ಉತ್ಸಾಹದಿಂದ ಹೇಳುತ್ತಾರೆ.

‘ನಾವು ಮೂಲತಃ ಆದಿವಾಸಿಗಳು. ಬೊಡ್ಲೆ ಬುರಾನ್ ಶಾವಲಿ ನಮ್ಮ ಮೂಲ ಪುರುಷ. ದಾವಲ್ ಮಲಿಕ್ ಸುಮಾರು 700–800 ವರ್ಷಗಳ ಹಿಂದೆ ಉತ್ತರ ಭಾರತದಿಂದ ಈ ಸ್ಥಳಕ್ಕೆ ಬಂದರು. ಇಲ್ಲಿದ್ದ ಆದಿವಾಸಿಗಳಿಗೆ ಇಸ್ಲಾಂ ಧರ್ಮದ ಬಗ್ಗೆ ತಿಳಿವಳಿಕೆ ಕೊಟ್ಟರು. ಅವರು ಇಲ್ಲಿಂದ ಮುಂದೆ ಹೋಗುವಾಗ ಈ ಊರಿನಲ್ಲಿ ಕಳವು ಆಗುವುದಿಲ್ಲ; ಈ ಜಾಗಕ್ಕೆ ಬಂದು ನಂಬಿಕೆಯಿಂದ ಏನೇ ಬೇಡಿಕೊಂಡರೂ ಈಡೇರುತ್ತದೆ ಎಂದು ಹೇಳಿದರು. ಅವರು ಅಂದು ಹೇಳಿದ ಮಾತಿನ ನಂಬಿಕೆಯಿಂದ ಈಗಲೂ ಈ ಊರಿನ ಮನೆಗಳಿಗೆ ಬಾಗಿಲು ಇರಿಸಿಲ್ಲ’ ಎಂದು ಅಬ್ದುಲ್ ಹಮೀದ್ ಮುಜಾವರ್ ಹೇಳುತ್ತಾರೆ.

ಬೆಟ್ಟದ ಮೇಲಿರುವ ದಾವಲ್ ಮಲಿಕ್ ದರ್ಗಾ

ಚಿತ್ರಗಳು: ಬನೇಶ ಕುಲಕರ್ಣಿ

ದರ್ಗಾಕ್ಕೂ ಬಾಗಿಲಿಲ್ಲ

ಊರಿನ ಜನರು ಅವರ ಪೂರ್ವಜರಿಂದ ಕೇಳಿ ತಿಳಿದಿರುವಂತೆ ದಾವಲ್ ಮಲಿಕ್ ಕುದುರೆ ಏರಿ ದಕ್ಷಿಣಕ್ಕೆ ಬಂದರು. ಇಲ್ಲಿನ ಬೆಟ್ಟದ ಮೇಲೆ ಕುಳಿತು 40 ದಿನ ತಪಸ್ಸು ಮಾಡಿದ್ದರು. ಅವರ ತಪಸ್ಸು ಮಾಡಿದ ಜಾಗದಲ್ಲಿ ದರ್ಗಾ ನಿರ್ಮಿಸಿ, ಕಟ್ಟಿಗೆಯ ಕುದುರೆಗಳನ್ನು ಇರಿಸಿ ಪೂಜಿಸಲಾಗುತ್ತದೆ. ಈ ದರ್ಗಾಕ್ಕೂ ಬಾಗಿಲಿಲ್ಲ. ದಾವಲ್ ಮಲಿಕ್‌ಗೆ ಬಾಗಿಲು ಇಲ್ಲವೆಂದ ಮೇಲೆ ಊರಿನ ಮನೆಗಳಿಗೇಕೆ ಬಾಗಿಲು ಎನ್ನುತ್ತಾರೆ ಸ್ಥಳೀಯರು. ಈ ಊರಿನ ಮನೆಗಳಿಗೆ ಬಾಗಿಲು ಇಲ್ಲದಿದ್ದರೂ ಇಲ್ಲಿವರೆಗೂ ಕಳ್ಳತನ ನಡೆದಿಲ್ಲ. ಭಕ್ತರು ಹೆಚ್ಚಿರುವ ಸಂದರ್ಭದಲ್ಲಿ ಕೂಡ ಪಿಕ್‌ಪಾಕೆಟ್ ಪ್ರಕರಣಗಳು ನಡೆದಿಲ್ಲ. ದಾವಲ್ ಮಲಿಕ್ ದರ್ಗಾಕ್ಕೆ ಮುಸ್ಲಿಮರಲ್ಲದೇ ಹಿಂದೂ, ಕ್ರೈಸ್ತರು ನಡೆದುಕೊಳ್ಳುತ್ತಾರೆ. ಪ್ರತಿ ಗುರುವಾರ ಮತ್ತು ಅಮಾವಾಸ್ಯೆಯಂದು ಭಕ್ತರ ಸಂಖ್ಯೆ ಹೆಚ್ಚಿರುತ್ತದೆ. ಗದಗ ಜಿಲ್ಲೆಯಿಂದಷ್ಟೇ ಅಲ್ಲದೇ ಅಕ್ಕಪಕ್ಕದ ಜಿಲ್ಲೆಗಳು ಹಾಗೂ ಕೇರಳ, ಮಹಾರಾಷ್ಟ್ರದಿಂದಲೂ ಇಲ್ಲಿಗೆ ಭಕ್ತರು ಬರುತ್ತಾರೆ. ಕೆಲಸದ ನಿಮಿತ್ತ ಊರಿನಿಂದ ಹೊರ ಹೋಗಿರುವ ಜನರು ರಂಜಾನ್, ಮೊಹರಂ ಹಬ್ಬದಂದು ಇಲ್ಲಿಗೆ ಬಂದು ಚಾಕರಿಕೆ ಮಾಡುತ್ತಾರೆ.

13ನೇ ಪುಟಕ್ಕೆ...

ಅತೀವ ಭಾವದ ಅನುವಾದವೇ

ಅಮೂರ್ತ ಕಲಾಕೃತಿ



• ರೂಪಾ ಕೆ.ಎಂ.

ಅಮೂರ್ತ ಕಲಾಕೃತಿಗಳಲ್ಲಿ ಅಡಗಿರುವ ಹತ್ತಾರು ಒಳನೋಟಗಳನ್ನು ಅರ್ಥೈಸುವುದು ಹೇಗೆ? ಎಂಬ ಪ್ರಶ್ನೆ ಎದುರಾಗುವುದೇನೋ ಸಹಜ. ಆದರೆ, ಈ ‘ಅರ್ಥೈಸುವಿಕೆ’ಯ ಚೌಕಟ್ಟಿಗೆ ಒಗ್ಗದ ಹತ್ತಾರು ಹೊಳಹುಗಳು ಮೇಲ್ನೋಟಕ್ಕೆ ಅಮೂರ್ತ ಕಲಾಕೃತಿಗಳಲ್ಲಿ ದಿಕ್ಕಾಪಾಲಾದಂತೆ ಕಂಡರೂ, ಅವುಗಳ ಲಯವನ್ನು ಮೆಲ್ಲಗೆ ಹಿಡಿಯಲು ಸಾಧ್ಯವಾಗುವುದೇನಿದ್ದರೂ ಅದು ತೀವ್ರವಾದ ಭಾವಕ್ಕೆ. ಅಂದರೆ ಅಮೂರ್ತ ಕಲೆಯಲ್ಲಿರುವ ಬಣ್ಣ, ರೇಖೆ, ಚಿತ್ತಾರ ಪ್ರತಿಯೊಂದೂ ತನ್ನ ಇರುವಿಕೆಯನ್ನು ವ್ಯಕ್ತಪಡಿಸುವುದೇ ನೋಡುಗರಲ್ಲಿ ಹುಟ್ಟುವ ಅತೀವ ಭಾವಗಳ ಮೂಲಕ.

ತುಸು ಗಾಢ ಕೆಂಬಣ್ಣವನ್ನು ತಾಕಿ, ಮಿಳಿತಗೊಂಡ ಹೊಂಬಣ್ಣವು ಏನು ಹೇಳುತ್ತಿರಬಹುದು?; ಮುಂಜಾವಿನ ಬಾನಿನ ಕೆಂಪೇ, ಮುಸ್ಸಂಜೆಯ ಆಗಸದ ವರ್ಣವೇ ಅಥವಾ ಒಡಲಿನೊಳಗೆ ಅಡಗಿರುವ ರೌದ್ರ ಭಾವವೇ? ಯಾವುದರ ಸಂಕೇತವದು? ಹೀಗೆ ಒಂದು ಬಣ್ಣ ಹುಟ್ಟಿಸುವ ಪ್ರಶ್ನೆಗಳು ಅಸಂಖ್ಯಾತ. ಉತ್ತರವನ್ನು ಕಂಡುಕೊಳ್ಳಲು ತಾಳ್ಮೆಯ ತಂತಿಯನ್ನು ಮೀಟುತ್ತಿರಬೇಕು. ನೋಡುಗರ ದೃಷ್ಟಿಕೋನದಲ್ಲಿ ಭಿನ್ನ ಸಂವೇದನೆಗಳನ್ನು ಹುಟ್ಟಿಸಿ, ಕ್ಯಾನ್ವಾಸ್‌ನ ವ್ಯಾಪ್ತಿ ಹಿರಿದಾಗುವಂತೆ ಮಾಡುವ ಮೋಡಿ ಅಮೂರ್ತ ಕಲೆಯದ್ದು.

ಇಂಥ ಅಮೂರ್ತ ಕಲಾಕೃತಿಗಳ ರಚನೆ ಹಾಗೂ ಆಧುನಿಕ ಕಲಾಪ್ರಕಾರದಲ್ಲಿ ದೊಡ್ಡ ಹೆಸರಾಗಿರುವ ರಾಮ್ ಕುಮಾರ್ ಅವರ ಕಲಾಕೃತಿಗಳ ಪ್ರದರ್ಶನ ‘ಶೇಪ್ ಆಫ್ ಎ ಥಾಟ್ ಲೆಟರ್ಸ್ ಫ್ರಂ ರಾಮ್ ಕುಮಾರ್’ ಶೀರ್ಷಿಕೆಯಡಿ ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿರುವ ದಿ ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿಯಲ್ಲಿ ನಡೆಯುತ್ತಿದೆ.

ರಾಮ್ ಕುಮಾರ್ ಅವರ ಶತಮಾನೋತ್ಸವದ ಸ್ಮರಣಾರ್ಥ ಅಮೂರ್ತ ಕಲಾಕೃತಿಗಳ ಪ್ರದರ್ಶನ

ರಾಮ್ ಕುಮಾರ್ ಅವರ ಶತಮಾನೋತ್ಸವದ (1924-2018) ಸ್ಮರಣಾರ್ಥ ಅವರ ಒಟ್ಟಂದದ ಕಲಾಕೃತಿಗಳು ಹಾಗೂ ಚಿಂತನೆಗಳನ್ನು ಆಧರಿಸಿ ಈ ಕಲಾ ಪ್ರದರ್ಶನವನ್ನು ಆಯೋಜಿಸಲಾಗಿದೆ. ಶಿಮ್ಲಾ ಮತ್ತು ದೆಹಲಿಯಲ್ಲಿ ಬೆಳೆದ ರಾಮ್ ಕುಮಾರ್ ಗುಡ್ಡಗಾಡಿನ ಏಕಾಂಗಿತನವನ್ನು ಹಾಗೂ ಬೆಳೆಯುತ್ತಿರುವ ನಗರದಲ್ಲಿ ಆಳವಾಗಿ ಹೊಕ್ಕಿರುವ ಒಂಟಿತನವನ್ನು ಏಕಕಾಲಕ್ಕೆ ಗ್ರಹಿಸಿ, ಅದನ್ನು ತಮ್ಮ ಹಲವು ಕಲಾಕೃತಿಗಳಲ್ಲಿ ತರಲು ಯತ್ನಿಸಿದ್ದಾರೆ.

ರಾಮ್ ಕುಮಾರ್

ಹಣಕಾಸು ತಜ್ಞರಾಗಿ, ಚಿಂತಕರಾಗಿ ಪ್ರಸಿದ್ಧರಾಗಿದ್ದ ರಾಮ್ ಕುಮಾರ್ ‘ಕಲಾವಿದನಾಗಬೇಕು ಎಂಬ ಆಸೆಗೂ ಮೊದಲು ಬರಹಗಾರನಾಗಬೇಕೆಂಬ ಹಂಬಲವಿತ್ತು’ ಎಂಬುದನ್ನು ಹೇಳಿಕೊಂಡಿದ್ದರು. ಅದಕ್ಕೆ ನಿದರ್ಶನವೆಂಬಂತೆ ಹಿಂದಿಯಿಂದ ಅನುವಾದಗೊಂಡ ಅವರ ‘ದಿ ಫೇಸ್ ಆ್ಯಂಡ್ ಅದರ್ ಸ್ಟೋರೀಸ್’ ಸಣ್ಣ ಕಥಾಸಂಕಲನದಲ್ಲಿ ಓದುಗರನ್ನು ಹಿಡಿದಿಡಬಲ್ಲ ಹಲವು ಕಥೆಗಳಿವೆ.

13ನೇ ಪುಟಕ್ಕೆ...

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ‘ಮ್ಯಾಪ್’

ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿಯು (ಮ್ಯಾಪ್) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1 ಮತ್ತು 2ರಲ್ಲಿ ಸ್ಥಳಾವಕಾಶ ಪಡೆದುಕೊಂಡಿದೆ. ಇಲ್ಲಿ ಹಲವು ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ. ಕಲಾಸಕ್ತರು ತಮ್ಮ ಪ್ರಯಾಣದ ನಡುವೆಯೂ ಇದನ್ನು ನೋಡಿ ಆನಂದಿಸಬಹುದು. ಸದ್ಯಕ್ಕೆ ಭಿಲ್ ಸಮುದಾಯದ ಭೂರಿ ಬಾಯಿ ಅವರ ‘ಫಿಥೋರಾ’ ಶೈಲಿಯ ಚಿತ್ರಗಳ ಪ್ರದರ್ಶನ ಇಲ್ಲಿ ನಡೆಯುತ್ತಿದೆ.

ಲಂಡನ್‌ನಲ್ಲಿ ಲಯನ್ ಕಿಂಗ್ ನೋಡಿದಾಗ...

ನಾಟಕದಲ್ಲಿ ಸಿಂಹ ಮತ್ತು ಹುಲಿ ಪಾತ್ರಧಾರಿಗಳು

ಲಂಡನ್‌ನ ಲೈಸಿಯಮ್ ಥಿಯೇಟರ್‌ನಲ್ಲಿ ಪ್ರದರ್ಶನಗೊಳ್ಳುವ 'ಲಯನ್ ಕಿಂಗ್' ನಾಟಕ ಬಹು ಜನಪ್ರಿಯ. 'ಲಯನ್ ಕಿಂಗ್' ಪುಸ್ತಕ, ಸಿನಿಮಾಗಳಿಗಿಂತಲೂ ನಾಟಕವೇ ಹೆಚ್ಚು ಪರಿಣಾಮಕಾರಿಯಾಗಿದೆ. ಅದಕ್ಕೆ ಕಾರಣ ಇಲ್ಲಿನ ಪಾತ್ರಧಾರಿಗಳು. ಇಡೀ ಜೀವನದಲ್ಲಿ ಮತ್ತೆ ಮತ್ತೆ ತಿರುವುಗಳು ಬರುತ್ತವೆ. ಬದಲಾವಣೆಗಳು ಹಠಾತ್ತನೆ ಎರಗುತ್ತವೆ. ಅವುಗಳನ್ನು ಅಪ್ಪಿಕೊಳ್ಳಬೇಕು, ಒಪ್ಪಿಕೊಳ್ಳಬೇಕು ಎಂಬ ಗಟ್ಟಿಯಾದ ಸಂದೇಶವನ್ನು ನೀಡುತ್ತದೆ.

ನಾಟಕದ ದೃಶ್ಯ

• ಡಾ.ಕೆ.ಎಸ್. ಪವಿತ್ರ

ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ 'ಲಯನ್ ಕಿಂಗ್' ಒಪೆರಾ ನೋಡಿದ್ದೆ. ಅವೆಲ್ಲ ಅರ್ಧದಿಂದ ಒಂದು ಗಂಟೆ ಶೋಗಳು. ಸಿಂಗಪುರದ ಸೆಂಟೋಸಾದಲ್ಲಿ, ಯುನಿವರ್ಸಲ್ ಸ್ಟುಡಿಯೊದಲ್ಲಿ, ಪ್ಯಾರಿಸ್‌ನ ಡಿಸ್ನಿ-ಲ್ಯಾಂಡ್‌ನಲ್ಲಿ ನೋಡಿದ್ದೆ. ಸಿನಿಮಾವನ್ನು, ಅದನ್ನೇ ಆಧರಿಸಿದ ಪುಟ್ಟ ಪುಟ್ಟ ಕಾರ್ಟೂನ್ ಮಾದರಿಯ ಕಥೆ ಪುಸ್ತಕಗಳನ್ನೂ ಮಕ್ಕಳ ಜೊತೆಯಲ್ಲಿ ಓದಿದ್ದೆ. ಆದರೆ ಲಂಡನ್‌ನ ಲೈಸಿಯಮ್ ಥಿಯೇಟರ್‌ನಲ್ಲಿ ನೋಡಿದ 'ಲಯನ್ ಕಿಂಗ್' ಅದ್ಭುತವಾಗಿತ್ತು. ಮೂರು ಗಂಟೆಯಷ್ಟು ಸಂಭಾ-ಷಣೆ-ಹಾಡು-ನಟನೆ-ನೃತ್ಯವನ್ನು ನಟರು ಮಾಡುವುದೆಂದರೆ ಸುಲಭದ ಮಾತೇ.

ಮೂರನೇ ಬೆಲ್ ಹೊಡೆಯುತ್ತಿದ್ದಂತೆ ಇಡೀ ರಂಗಮಂದಿರವನ್ನು ಕತ್ತಲು ಮತ್ತು ನಿಶ್ಶಬ್ದ ಆವರಿಸಿಕೊಂಡವು. ನಾನು, ಮಕ್ಕಳು ಉಸಿರು ಬಿಗಿ ಹಿಡಿದು ಕುಳಿತಿದ್ದೆವು. ಇದ್ದಕ್ಕಿದ್ದಂತೆ ಡ್ರಂಗಳು ಕೊಂಬು-ಕಹಳೆಗಳು ಮೊಳಗಲಾರಂಭಿಸಿದವು. ಇಡೀ ರಂಗಮಂಚದಲ್ಲಿ ಒಮ್ಮೆಲೇ ಜಿರಾಫೆ, ಜೀಬ್ರಾ, ಆನೆಗಳು, ಹೈನಾ ಬರಲಾರಂಭಿಸಿದವು. ಒಳಗಿದ್ದದ್ದು ಮನುಷ್ಯರೇ ಆದರೂ ಹುಲ್ಲು, ಮಣಿ, ಬಣ್ಣ ಮತ್ತು ಪುಕ್ಕಗಳಿಂದ ಮಾಡಿದ್ದ ವಿವಿಧ ವೇಷಗಳು ರಂಗೇರಿಸಿದವು. ಇದ್ದಕ್ಕಿದ್ದಂತೆ ವೇದಿಕೆಯ ಮೇಲೆ ಆಫ್ರಿಕಾದ ಸವನ್ನಾ ಹುಲ್ಲುಗಾವಲು, ಬಂಡೆಗಳು ಕಣ್ಣೆದುರಿಗೆ ನಿಂತುಬಿಟ್ಟವು.

ಸಿಂಬಾ, ನಲಾ, ಮಪೂಸಾ, ಸ್ಕಾರ್ ಮೊದಲಾದವರ ಕಥೆ ಗೊತ್ತಿರುವುದೇ. ಕಥೆ ಸರಳವಾಗಿ ಹೇಳಬೇಕೆಂದರೆ ಇಷ್ಟೇ–ಸಿಂಬಾ ಎಂಬ ಸಿಂಹದ ಮರಿ ಕಾಡಿನ ರಾಜನಾಗಲು ಅದು ಹುಟ್ಟಿದಾಗಿನಿಂದ ಉಂಟಾಗುವ ಅಡ್ಡಿ-ಆತಂಕಗಳು, ಅದರ ತಂದೆಯ ಸಾವು, ಹಲವು ಶತ್ರುಗಳು, ನಿಷ್ಠ ಸೇವಕ-ಮಾರ್ಗದರ್ಶಕರು, ಕೊನೆಗೆ ಶತ್ರುವನ್ನು ಗೆದ್ದು ಜಯಶಾಲಿಯಾಗಿ ತಾನು ರಾಜನಾಗುವುದು.

ಇಡೀ ರಂಗಮಂದಿರವನ್ನು ಸುಡುಗೆಂಪು ಬಣ್ಣದಿಂದ ಅಲಂಕರಿಸಲಾಗಿ-ತ್ತು. ಮೊದಲ ದೃಶ್ಯದಲ್ಲಿ ಸೂರ್ಯೋದಯವಾಗುತ್ತ ಸಿಂಹ ಮರಿಯ ಜನನದ ಸುದ್ದಿಯನ್ನು ಕಾಡಿಗೆ ಘೋಷಿಸುವ ಸನ್ನಿವೇಶಕ್ಕೂ, ರಂಗಮಂದಿರದ ಬಣ್ಣಕ್ಕೂ ತಾಳೆಯಾಗಿ ಸೃಷ್ಟಿಯಾಗುವ ಮಾಂತ್ರಿಕತೆಯೇ ಒಮ್ಮೆಲೇ ಹೊರಜಗ-ತ್ತನ್ನು ನೋಡುಗನ ಮನಸ್ಸಿನಿಂದ ಮರೆಯಾಗಿಸಿಬಿಡುತ್ತದೆ.

ನಂತರ ಒಂದಾದ ಮೇಲೊಂದು ಬಂದ ಹಾಡುಗಳು-ಸರ್ಕಲ್ ಆಫ್ ಲೈಫ್, ಹಕೂನ ಮಾಟಾಟ, ಐ ಜಸ್ಟ್ ಕಾಂಟ್ ವೇಯ್ಟ್ ಟು ಬಿ ಕಿಂಗ್, ತುಂಬಾ ಪ್ರಸಿದ್ಧ. ಇವು ನಮಗೆ ಗೊತ್ತಿದ್ದಂತವು. ಸಿನಿಮಾದಲ್ಲಿ, ಚಿಕ್ಕ ಚಿಕ್ಕ ಲಯನ್ ಕಿಂಗ್ ಶೋಗಳಲ್ಲಿ ನಾವು ನೋಡಿ ಪರಿಚಯವಿದ್ದಂತಹವು. ಇವಲ್ಲದೆ ನಾಟಕಕ್ಕೆಂದೇ ಬರೆದ ಅದೆಷ್ಟು ಹಾಡುಗಳಿದ್ದವು! ಹುಲ್ಲುಗಾವಲಿನ ಪ್ರಾಣಿಗಳನ್ನು ಪರಿಚಯಿಸುವ ಗ್ರಾಸ್‌ಲ್ಯಾಂಡ್ಸ್ ಚ್ಯಾಂಟ್, ಸಿಂಹಿಣಿಗಳು ಬೇಟೆಯಾಡುವ ಹಾಡು, ತಂದೆ-ಮಗನ ಬಾಂಧವ್ಯದ ದೆ ಲಿವ್ ಇನ್ ಯೂ, ಸಿಂಬಾ ತನ್ನನ್ನು ತಾನು ಕಂಡುಕೊಳ್ಳುವ 'ಎಂಡ್‌ಲೆಸ್ ನೈಟ್' ಎಂಬ ಹಾಡು 'ಮ್ಯೂಸಿಕಲ್'- ಗೀತ ನಾಟಕ ಎಂದರೆ ಹೇಗಿರುತ್ತದೆ ಎಂಬುದು ಮಕ್ಕಳಿಗೆ ಸರಿಯಾಗಿ ಗೊತ್ತು ಮಾಡಿತು.

ನಾಟಕದ ಪರಿಕರ-ವೇಷಭೂಷಣಗಳೂ ಅಷ್ಟೆ. ಅವುಗಳನ್ನು ರೂಪಿಸುವಲ್ಲಿ ಬಳಸಿರುವ ತಂತ್ರಗಳು ಕುತೂಹಲಕರವಾಗಿವೆ. ಸುಮಾರು 200 ಪಪೆಟ್‌ಗಳನ್ನು ಈ ನಾಟಕದಲ್ಲಿ ಬಳಸುತ್ತಾರೆ. ಇವುಗಳನ್ನು ಪ್ರತಿನಿತ್ಯದ ಪ್ರದರ್ಶನಕ್ಕಾಗಿ ಕಾಪಾಡಿಕೊಳ್ಳುವುದು ದುಡ್ಡಿನಿಂದ ಸಾಧ್ಯವಿಲ್ಲ. ಅದಕ್ಕೆ ಕಲೆಯೂ, ಕಲಾಪ್ರೀತಿಯೂ ಅತ್ಯವಶ್ಯ. ಇವುಗಳನ್ನು ರೂಪಿಸಿರುವ ಜೂಲಿ ಟೇಮರ್ 'ಡಬಲ್ ಎಫೆಕ್ಟ್' ಎಂಬ ತಂತ್ರವನ್ನು ಉಪಯೋಗಿಸಿದ್ದಾರೆ. ಇಲ್ಲಿ ಮುಖವಾಡ ತಲೆಯ ಮೇಲೆ ಕುಳಿತಿರುತ್ತದೆ. ಅದು ಯಾವ ಪ್ರಾಣಿ ಎಂಬುದು ಮುಖವಾಡದಿಂದ ಗೊತ್ತಾದರೆ, ಕಲಾವಿದನ ಮುಖಭಾವಗಳಿಂದ ಅಭಿನಯದ ಕೌಶಲ ವ್ಯಕ್ತವಾಗುತ್ತದೆ. ನಾವು ಕಲೆಯ ಎರಡು ವಿಭಿನ್ನ ಮುಖಗಳನ್ನು ನೋಡಬಹುದು.

'ಲಯನ್ ಕಿಂಗ್' ನಾಟಕವನ್ನು ನೋಡುತ್ತಾ ಅದರೊಳಗೆ ಮುಳುಗಿ ಹೋದೆವು. ಈ ಕಥೆಯ ಮೂಲ ಷೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್' ಮತ್ತು ಆಫ್ರಿಕಾದ ಜನಪದ ಕಥೆ ಸನ್‌ಡೈಯೇಟಾದಲ್ಲಿ ಇದೆ ಎಂದು ಎಲ್ಲೋ ಓದಿದ ನೆನಪಾಯ್ತು. ಒಂದು ಪಾಶ್ಚಾತ್ಯ ಸಂಸ್ಕೃತಿಯ ಕಥೆ, ಮತ್ತೊಂದು ಭಾರತದಂಥದ್ದೇ ಬಹು ಸಂಸ್ಕೃತಿ ಬಹು ಭಾಷೆಗಳ, ಶ್ರೀಮಂತ-ವರ್ಣಮಯ ವ್ಯಕ್ತಿತ್ವಗಳ ಜನರ ಕಥೆಗಳ ನಾಡಲ್ಲಿ ಬೆಳೆದು ಬಂದ ಕಥೆ. ಎರಡರ ಮಿಶ್ರಣವಿದು. ನಮ್ಮ ಜನಪದ ಕಥೆಗಳಲ್ಲಿ, ಪಂಚತಂತ್ರದ ಕಥೆಗಳಲ್ಲಿ ಮಾಡುವಂತೆ ಎಷ್ಟೆಲ್ಲಾ ಪ್ರಾಣಿಗಳನ್ನು ತಂದು, ಅವುಗಳಿಗೆ ಮನುಷ್ಯರ ಗುಣಗಳನ್ನು ನೀಡಿ, ಅವುಗಳ ಮೂಲಕ ಜನರಿಗೆ ಹಲವು ಸಂದೇಶಗಳನ್ನು 'ಸಂದೇಶ' ಎಂಬುದು ಗೊತ್ತಾಗದಂತೆ ನೀಡುವ ಉಪಾಯ.

'ಲಯನ್ ಕಿಂಗ್' ಜನಪ್ರಿಯವಾಗಿರುವಂತೆಯೇ ಮನೋವೈಜ್ಞಾನಿಕ ನೆಲೆಯಿಂದಲೂ ಸಮಾಧಾನ-ಪರಿಹಾರ ನೀಡುವ ನಾಟಕವಾಗಿಯೂ ಅಧ್ಯಯನ ಮಾಡಿರುವುದು ವಿಶೇಷ. ತನ್ನ ನಷ್ಟ-ಶೋಕವನ್ನು ಸಿಂಬಾ ಒಪ್ಪಿಕೊಳ್ಳುವುದು. ತನ್ನ ಸಾಮರ್ಥ್ಯದ ಬಗ್ಗೆ ಸಂದೇಹ ಪಡುವ ಕ್ಷಣ. ಸುತ್ತಲಿರುವ ಸಿಂಬಾನಿಗೆ ಬೆಂಬಲವಾಗುವ ಸ್ನೇಹಿತರು. ರಫೀಕಿಯಿಂದ ಸಿಂಬಾ ಪಡೆಯುವ ಮಾರ್ಗದರ್ಶನ. ತನ್ನ ಹಿಂದಿನ ತಪ್ಪುಗಳನ್ನು ಎದುರಿಸುವ ಧೈರ್ಯ. ಕೊನೆಯಲ್ಲಿ ಬರುವ 'ಸರ್ಕಲ್ ಆಫ್ ಲೈಫ್' -ಜೀವನ ಚಕ್ರ ಹಾಡು ನೀಡುವ ಜೀವನ ತತ್ತ್ವ. ಇಡೀ ಜೀವನದಲ್ಲಿ ಮತ್ತೆ ಮತ್ತೆ ತಿರುವುಗಳು ಬರುತ್ತವೆ. ಬದಲಾವಣೆಗಳು ಹಠಾತ್ತನೆ ಎರಗುತ್ತವೆ. ಅವುಗಳನ್ನು ಅಪ್ಪಿಕೊಳ್ಳಬೇಕು, ಒಪ್ಪಿಕೊಳ್ಳಬೇಕು. ನಮ್ಮ ಜೀವನದಲ್ಲಿ ಕಷ್ಟಗಳನ್ನು ಎದುರಿಸಬೇಕಾದ ಮಾದರಿಯಾಗಿ ರಭಸವಾದ ಗಾಳಿಗೆ ತೂಗಾಡುವ ಆದರೆ ಕೆಳಕ್ಕುರುಳದ ಹುಲ್ಲುಗಾವಲು ಇವೆಲ್ಲವೂ ಆ ಕ್ಷಣಗಳಲ್ಲಿ 'ಲಯನ್ ಕಿಂಗ್' ನನಗೆ ನೀಡಿದ ಪಾಠಗಳು.

...ಅಮೂರ್ತ ಕಲಾಕೃತಿ

12ನೇ ಪುಟದಿಂದ...

ರಾಮ್ ಕುಮಾರ್ ಅವರು ಕಲಾಸೃಷ್ಟಿಯನ್ನು ಗಂಭೀರವಾಗಿ ತೆಗೆದುಕೊಳ್ಳಲು ಹಲವು ಪ್ರೇರಣೆಗ-ಳಿದ್ದವು. ಪ್ರೊಗ್ರೆಸ್ಸಿವ್ ಕಲಾವಿದರ ಗುಂಪಿನೊಂದಿಗಿನ ಒಡನಾಟ, ಅಂತರರಾಷ್ಟ್ರೀಯ ಕಲಾ ಪ್ರದರ್ಶನಗಳು ಮತ್ತು ಸಂಯೋಜಕರ ಜತೆಗಿನ ಬಾಂಧವ್ಯವೂ ಇದಕ್ಕೆ ಕಾರಣವಾಗಿತ್ತು.

ಅವರು ತಮ್ಮ ಆರಂಭಿಕ ವರ್ಷಗಳಲ್ಲಿ ಫಿಗರೇಟಿವ್ ಕಲಾಕೃತಿಗಳನ್ನು ರಚಿಸಿದ್ದರೂ, ವಿಶಿಷ್ಟ ಬಗೆಯ ಅಮೂರ್ತ ಕಲ್ಪನೆಯ ಕಲಾಕೃತಿಗಳಲ್ಲಿಯೇ ತಮ್ಮ ಕಲಾಭಾಷೆಯನ್ನು ಕಂಡುಕೊಂಡರು. ಅವರ 'ಬನಾರಸಿ' ಕಲಾಕೃತಿಯು ವಿಶಿಷ್ಟವಾಗಿದೆ.

60ರ ದಶಕದಲ್ಲಿ ರಾಮ್ ಕುಮಾರ್ ಬನಾರಸ್‌ಗೆ ಬಂದರು. ಎಂ.ಎಫ್ ಹುಸೇನ್ ಕೂಡ ಜತೆಗೂಡಿದ್ದರು. ಅವರಿಬ್ಬರ ಜುಗಲ್‌ಬಂದಿ ಹೇಗಿತ್ತೆಂದರೆ ಒಬ್ಬರ ಕುಂಚ ಹರಿವ ಗಂಗೆಯಾದರೆ, ಮತ್ತೊಬ್ಬರದ್ದು ಬನಾರಸ್‌ನ ಧ್ಯಾನಸ್ಥ ಘಾಟ್‌ಗಳಂತೆ.

ತಮ್ಮ ಜೀವಿತಾವಧಿಯಲ್ಲಿ ಅವರು ವ್ಯಕ್ತಿಗಳನ್ನು ಹಚ್ಚಿಕೊಂಡಷ್ಟೆ ಸುಲಭವಾಗಿ ನಗರಗಳನ್ನು ಹೃದಯದಾಳಕ್ಕೆ ಇಳಿಸಿಕೊಂಡಿದ್ದರು. ನಗರಕ್ಕೂ ಮನುಷ್ಯನ ಗುಣಗಳನ್ನು ಆರೋಪಿಸಿ, ಅದರಲ್ಲಿಯೂ ವ್ಯಕ್ತಿಯನ್ನು ಹುಡುಕುತ್ತಿದ್ದರು. ಅವರು ತಮ್ಮ ಪತ್ರಗಳಲ್ಲಿ ದೆಹಲಿಯನ್ನು ನಮೂದಿಸಿರುವ ರೀತಿಯನ್ನು ಗಮನಿಸಿದರೆ, ಒಬ್ಬ ಹಳೆಯ ಗೆಳೆಯನನ್ನು ನೆನಪಿಸಿಕೊಂಡಂತಿದೆ. ಕೋಲ್ಕತ್ತದ ಬಾಲಿಗಂಜ್ ಕುರಿತ ಬರಹವೂ ರಸವತ್ತಾಗಿದ್ದು, ಅಲ್ಲಿನ ಬೀದಿಗಳಲ್ಲಿ ಓಡಾಡಿದ ಅನುಭವ ದಕ್ಕುತ್ತದೆ. ಬನಾರಸ್ ಕುರಿತು 'ಈ ನಗರಕ್ಕಾಗಿ ಹಾತೊರೆಯುವ ಭಾವ ತೀವ್ರವಾಗಿದೆ. ಹಾಗೆಯೇ ಒಮ್ಮೆಲೇ ಇದರ ಬಂಧದಿಂದ ಮುಕ್ತರಾದರೆ ಸಾಕು ಎನಿಸುತ್ತದೆ' ಎಂದು ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿಯ ಸಂಸ್ಥಾಪಕ ಅಭಿಷೇಕ್ ಪೊದ್ದಾರ್ ಅವರಿಗೆ ಬರೆದ ಪತ್ರದಲ್ಲಿ ಉಲ್ಲೇಖಗೊಂಡಿದೆ.

ಈ ಕಲಾ ಪ್ರದರ್ಶನದಲ್ಲಿ ಅವರ ಅಮೂರ್ತ ಕಲಾಕೃತಿಗಳ ಜತೆಗೆ ಪ್ರಖರ ಚಿಂತನೆಗಳು, ಅವರು ತಮ್ಮ ಸ್ನೇಹಿತರಿಗೆ ಬರೆದ ಪತ್ರಗಳು ಹಾಗೂ ಅವರು ಬರೆದ ಪುಸ್ತಕಗಳು ನೋಡಲು, ಓದಲು ಲಭ್ಯವಿವೆ. ಸ್ನೇಹಿತರಿಗೆ ಬರೆದ ಪತ್ರಗಳು ಮತ್ತು ಸುತ್ತಲಿನ ಪ್ರಪಂಚದ ಕುರಿತು ಅವರು ಹೊಸೆದ ಸಂಭಾಷಣೆಯ ಸಾರವನ್ನು 'ದಿ ಸ್ಪೇಸಸ್ ಇನ್ ಬಿಟ್ವೀನ್' ಚಲನಚಿತ್ರವಾಗಿಯೂ ನೋಡಬಹುದು.

'ಸಮಯ ನಿಮಗೆ ಮೋಸ ಮಾಡದಂತೆ ಎಚ್ಚರವಹಿಸಿ. ಮೋಸದ ಅರಿವಿದ್ದರೆ, ಅರಿವುಗೇಡಿಯಾಗಿ ಜಾರಿ ಬೀಳುವುದು ತಪ್ಪುತ್ತದೆ' ಎಂಬ ಸಮಯದ ಮಹತ್ವವನ್ನು ಸಾರುವ ಅವರದ್ದೇ ಮಾತುಗಳು ಪ್ರದರ್ಶನದ ಭಾಗವಾಗಿ ಗೋಡೆ ಮೇಲೆ ಬಿತ್ತರಗೊಳ್ಳುತ್ತದೆ.

ವ್ಯಕ್ತಪಡಿಸಲಾಗದ ಭಾವನೆಗಳನ್ನು ಪದಕ್ಕಿಳಿಸುವುದು ಸಹಜ. ಆದರೆ, ಅದು ಅದರ ಮಿತಿಯೂ ಹೌದು ಎಂಬ ಅರಿವು ಅವರಿಗಿತ್ತು. ಭಾಷೆಯ ಇತಿಮಿತಿ ಹಾಗೂ ಕಲೆಯ ಅನಂತ ಸಾಧ್ಯತೆಗಳ ನಡುವೆಯೂ ಅವರು ಬರಹಗಾರರಾಗಿ, ಆಧುನಿಕ ಪ್ರಕಾರದ ಕಲಾವಿದರಾಗಿ ಎರಡೂ ದೋಣಿಗಳಲ್ಲಿ ಸರಾಗವಾಗಿ ಪಯಣವನ್ನು ಮಾಡಿದ್ದರು. ಪ್ರತಿ ಅಮೂರ್ತ ಕಲೆಯು ಧ್ವನಿಸುವ ಹಲವು ಕಥನಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಸ್ನೇಹಿತರೊಬ್ಬರು 'ಈ ಅಮೂರ್ತ ಕಲೆ ಅರ್ಥವಾಗುತ್ತಿಲ್ಲ' ಎಂಬ ಅಳಲನ್ನು ತೋಡಿಕೊಂಡಿದ್ದಾಗ 'ಅಮೂರ್ತ ಕಲಾಕೃತಿಗಳಲ್ಲಿ ಅರ್ಥ ಹುಡುಕಬೇಡಿ. ಸಾಧ್ಯವಾದರೆ ಅನುಭವಕ್ಕೆ ದಕ್ಕುವಂತೆ ಗ್ರಹಿಸಿ' ಎಂಬ ಮಾತು-ಗಳನ್ನಾಡಿರುವುದು ಈ ಕಲಾಕೃತಿಗಳ ಶೀರ್ಷಿಕೆಯ ಜತೆ ಉಲ್ಲೇಖವಾಗಿದೆ.

ಈ ಕಲಾಕೃತಿಗಳ ಶೀರ್ಷಿಕೆಯ ಕೆಳಗೆ, ಅವರು ವ್ಯಕ್ತಪಡಿ-ಸಿದ ಆಳವಾದ ಚಿಂತನೆಗಳನ್ನು ನೀಡಲಾಗಿದೆ. ಅಮೂರ್ತ ಕಲಾಕೃತಿಗಳಲ್ಲಿರುವ ಅನಂತ ಧ್ವನಿಯನ್ನು ಗ್ರಹಿಸುವ ಇಚ್ಛೆಯಿದ್ದರೆ ಒಮ್ಮೆ ಪ್ರದರ್ಶನಕ್ಕೆ ಭೇಟಿ ನೀಡಬಹುದು. ಪ್ರದರ್ಶನವು ಅಕ್ಟೋಬರ್ 26ರವರೆಗೆ ಇರಲಿದೆ.

ಭೂರಿ ಬಾಯಿ ಅವರ ಪಿಥೋರಾ ಶೈಲಿಯ ಕಲಾಕೃತಿ

ಕಥೆ
ಡಿ.ಎಸ್.ಚೌಗಲೆ ಅವರ ಮಂಚ ಮತ್ತು ಕಾಲುಗಳು
prajavani.net/short-story

ಕವನ
ಮುನವ್ವರ್, ಜೋಗಿಬೆಟ್ಟು ಅವರ ಜೋಳಿಗೆ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಬಾಗಿಲುಗಳು ಇಲ್ಲದ ಊರು...

12ನೇ ಪುಟದಿಂದ...

ವಾರಕ್ಕೊಮ್ಮೆ ದರ್ಗಾ ಚಾಕರಿ ಸರದಿ

ದಾವಲ್ ಮಲಿಕ್ ಗ್ರಾಮದಲ್ಲಿ ನೂರು ಮನೆಗಳು, ಸಾವಿರ ಜನಸಂಖ್ಯೆ ಇದೆ. ಮುಜಾವರ್ ಮನೆತನದವ-ರನ್ನು ಹೊರತುಪಡಿಸಿ, ಅನ್ಯಧರ್ಮೀಯರು ಯಾರೂ ಇಲ್ಲ. ಜೀವನೋಪಾಯಕ್ಕಾಗಿ ಕೃಷಿ ಮತ್ತು ವ್ಯಾಪಾರ ನೆಚ್ಚಿಕೊಂಡಿದ್ದಾರೆ. ದರ್ಗಾಕ್ಕೆ ಸೇರಿರುವ 12 ಕೂರಿಗೆ (1 ಕೂರಿಗೆ ಅಂದರೆ 4 ಎಕರೆ) ಜಮೀನಿದ್ದು, ಅದನ್ನು ಇಲ್ಲಿರುವ 65 ಮುಜಾವರ್ ಕುಟುಂಬದವರು ಸಮನಾಗಿ ಹಂಚಿಕೊಂಡು ಕೃಷಿ ಮಾಡುತ್ತಿದ್ದಾರೆ.

ಹಾಗೆಯೇ, ಇಲ್ಲಿನ 65 ಕುಟುಂಬಗಳೂ ದರ್ಗಾದಲ್ಲಿ ಚಾಕರಿ (ಸಕ್ಕರೆ ಓದುವುದು, ಪೂಜಾರಿಕೆ) ಮಾಡುತ್ತಾರೆ. ಈ ಸರದಿ ವಾರಕ್ಕೊಮ್ಮೆ ಬದಲಾಗುತ್ತದೆ.

ಮನೆ ಬಾಗಿಲಿಗೆ ಪರದೆ ಕಟ್ಟಿರುವುದು

ಯಾರು ದರ್ಗಾದಲ್ಲಿ ಪೂಜೆ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೋ ಆ ವಾರ ದರ್ಗಾದಲ್ಲಿ ಸಂಗ್ರಹವಾಗುವ ಕಾಣಿಕೆ ಅವರ ಕುಟುಂಬಕ್ಕೆ ಸೇರುತ್ತದೆ.

ದರ್ಗಾ ಅಭಿವೃದ್ಧಿಗೆ ಟ್ರಸ್ಟ್

ಭಕ್ತರ ಸಂಖ್ಯೆ ಹೆಚ್ಚಾದಂತೆ ದರ್ಗಾ ಅಭಿವೃದ್ಧಿಗಾಗಿ 2016ರಲ್ಲಿ ಹಜರಲ್ ದಾವಲ್ ಮಲಿಕ್ ಟ್ರಸ್ಟ್ ಆರಂಭಿಸಲಾಗಿದೆ. ₹70 ಲಕ್ಷ ವ್ಯಯಿಸಿ ಮೂಲಸೌಕರ್ಯ ಕಲ್ಪಿಸಲಾಗಿದೆ. ಇದಕ್ಕೂ ಮುನ್ನ 1997ರಲ್ಲಿ ಪ್ರಾರಂ-ಭವಾಗಿದ್ದ ನವ ಜವಾನ್ ಕಮಿಟಿ ಮೂಲಕ ಸಾಕಷ್ಟು ಸುಧಾರಣೆ ಮಾಡಲಾಗಿದೆ. ಇಲ್ಲಿನ ಮಕ್ಕಳಿಗಾಗಿ ಹೊಸ ಶಾಲೆ ನಿರ್ಮಾಣವಾಗಿದ್ದು, ಊರೊಳಗನ ಉರ್ದು ಶಾಲೆ ಸದ್ಯದಲ್ಲೇ ಅಲ್ಲಿಗೆ ಸ್ಥಳಾಂತರಗೊಳ್ಳಲಿದೆ.

'ಹಜರತ್ ದಾವಲ್ ಮಲಿಕ್ ಮತ್ತು ಈ ಗ್ರಾಮದ ಇತಿಹಾಸದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಈಗ ಹೇಳುವುದೆಲ್ಲವೂ ಬಾಯಿಂದ ಬಾಯಿ ದಾಟಿ ಬಂದದ್ದು. ಹಾಗಾಗಿ, ಊರಿನ ಇತಿಹಾಸದ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸಿ, ಅದನ್ನು ಪುಸ್ತಕರೂಪದಲ್ಲಿ ಹೊರತರುವ ಯೋಚನೆ ಇದೆ' ಎನ್ನುತ್ತಾರೆ ಅಬ್ದುಲ್ ಹಮೀದ್ ಮುಜಾವರ್.

ಮುನ್ನೋಟ 27-07-2025 ರಿಂದ 02-08-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮನಸ್ಸಿನಲ್ಲಿ ಹೊಸ ಹುರುಪಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಹಿರಿಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ಪಡೆಯುವಿರಿ. ಸರ್ಕಾರಿ ವ್ಯವಹಾ-ರಗಳಲ್ಲಿ ನಿಮಗೆ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಲಭಿಸುವ ಸಾಧ್ಯತೆ ಇದೆ. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಗೌರವಯುತ ನಡವಳಿಕೆಯನ್ನು ಮೈಗೂಡಿಸಿಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಕೃಷಿಭೂಮಿಯಿಂದ ಲಾಭವಿರುತ್ತದೆ. ಸರ್ಕಾರಿ ಅಧಿಕಾರಿಗಳು ಪದೋನ್ನತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಹಲ್ಲುನೋವು ಕೆಲವರನ್ನು ಕಾಡುವ ಸಾಧ್ಯತೆಗಳಿವೆ. ಸಂಗಾತಿಯು ಬಹಳ ಸಂತೋಷದಿಂದ ಇದ್ದರೂ ಕೂಡ, ಒಮ್ಮೊಮ್ಮೆ ಕೆರಳುವರು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಸರ್ಕಾರಿ ಸಂಸ್ಥೆಗಳ ಜತೆಗಿನ ವ್ಯವ-ಹಾರಗಳಿಂದ ಲಾಭವಿದೆ. ವಿದ್ಯಾರ್ಥಿಗಳು ಶ್ರಮಪಟ್ಟು ಓದಿದಲ್ಲಿ ಮಾತ್ರ ಉತ್ತಮ ಫಲಿತಾಂಶವನ್ನು ಪಡೆಯಬಹುದು. ನಿಮ್ಮ ಸಂಗಾತಿ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ಉದ್ಯೋಗದಲ್ಲಿದ್ದ ತೊಂದರೆಗಳು ದೂರವಾಗಿ ಕಷ್ಟಪಟ್ಟು ಕೆಲಸಮಾಡುವಿರಿ. ಕೆಲವು ಹಿರಿಯರಿಗೆ ವಿದೇಶಯಾನದ ಯೋಗವಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮಲ್ಲಿ ಉತ್ತಮ ಗಾಂಭೀರ್ಯ ಮತ್ತು ಬುದ್ಧಿವಂತಿಕೆ ಎರಡೂ ಮೈಗೂಡಿರುತ್ತದೆ. ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ವ್ಯವಹಾರದಲ್ಲಿ ಹಿರಿಯರು ಸಹಾಯ ಮಾಡುತ್ತಾರೆ. ಆಸ್ತಿ ಸಂಬಂಧಿತ ವ್ಯವಹಾರಗಳಿಗೆ ಹೆಚ್ಚು ಹಣ ಖರ್ಚಾಗಬಹುದು. ಮಕ್ಕಳಿಂದ ನಿರೀಕ್ಷಿತ ಸಹಾಯ ಸಿಗುವುದಿಲ್ಲ. ಆರೋಗ್ಯಕ್ಕಾಗಿ ಹಣ ಖರ್ಚಾಗುವ ಸಾಧ್ಯತೆಗಳಿವೆ. ವಿದೇಶಿ ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಆಲೋಚನೆಗಳು ತದ್ವಿರುದ್ಧವಾಗಿರುತ್ತವೆ. ಆದಾಯವು ಬಹಳ ಕಡಿಮೆ ಇರುತ್ತದೆ. ಕೃಷಿಭೂಮಿಯಿಂದ ಆದಾಯ ಹೆಚ್ಚುತ್ತದೆ. ಮಕ್ಕಳಿಂದ ನಿರೀಕ್ಷಿತ ಸಹಾಯ ಸಿಗುವುದಿಲ್ಲ. ಕೆಲವೊಮ್ಮೆ ಸಂಗಾತಿಯು ನಿಮ್ಮನ್ನು ಧಿಕ್ಕರಿಸಬಹುದು. ರಾಜಕಾರಣಿಗಳಿಗೆ ಅನಿರೀಕ್ಷಿತ ಹಿನ್ನಡೆಯಾಗಬಹುದು. ಹಿರಿಯರ ಆಸ್ತಿಯನ್ನು ನೀವು ಕೊಳ್ಳುವ ಯೋಗವಿದೆ. ಉದ್ಯೋಗದಲ್ಲಿ ಸ್ವಲ್ಪ ಆದಾಯ ಜಾಸ್ತಿಯಾಗುವ ಸಂದರ್ಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಮಾತಿನಿಂದ ಕೆಲಸವನ್ನು ಸಾಧಿಸಿಕೊಳ್ಳುವಿರಿ. ಆದಾಯವು ಮಧ್ಯಮಗತಿಯಲ್ಲಿ-ರುತ್ತದೆ. ಕೃಷಿಯಿಂದ ಈಗ ನಿರೀಕ್ಷಿತ ಆದಾಯವಿರುವುದಿಲ್ಲ. ಬಂಧುಗಳ ಸಹಕಾರ ಸಿಗುವುದಿಲ್ಲ. ಆಸ್ತಿ ಖರೀದಿಗೆ ಆತುರ ಬೇಡ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕಫಲ ಮಾತ್ರವಿರುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಹಿನ್ನಡೆಯಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಕಾರ್ಯ ಸಾಧನೆಯನ್ನು ಮಾಡುವತ್ತ ಹೆಚ್ಚು ಗಮನ ಕೊಡುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳಿಂದ ಸಾಕಷ್ಟು ವಿರೋಧವನ್ನು ಎದುರಿಸಬೇ-ಕಾಗಬಹುದು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ವಿದೇಶದಲ್ಲಿ ಓದುತ್ತಿರುವವರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ. ಕೆಲವು ರಾಜಕಾರಣಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಗೊಂದಲಗಳ ಗೂಡಾಗಿದ್ದ ನಿಮ್ಮ ಮನಸ್ಸು ಈಗ ಸ್ವಲ್ಪ ತಿಳಿಯಾಗುತ್ತದೆ. ಆದಾಯ ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ರಾಜಕೀಯ ಬೆಂಬಲ ದೊರೆಯುತ್ತದೆ. ವಿದೇಶದಲ್ಲಿ ಆಸ್ತಿ ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಹೊಸದಾಗಿ ರಾಜಕೀಯಕ್ಕೆ ಬರುತ್ತಿರುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಬಂಧುಗಳೊಡನೆ ಹಣಕಾಸಿನ ವ್ಯವಹಾರ ಖಂಡಿತ ಬೇಡ. ಸಂಗಾತಿಯ ಆದಾಯ ಸ್ವಲ್ಪ ಕಡಿಮೆಯಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ಅತಿಯಾದ ಉದಾಸೀನತೆ ಇರುತ್ತದೆ. ಆದಾಯವು ಈಗ ಸಾಮಾನ್ಯಗತಿಯಲ್ಲಿರುತ್ತದೆ. ಕೃಷಿ ಸಂಬಂಧಿತ ಆಸ್ತಿ ಕೊಳ್ಳಬಹುದು. ಮಕ್ಕಳಿಂದ ಸಂತೋಷದ ಮಾತುಗಳು ಕೇಳಿ ಬರುತ್ತವೆ. ಸಂಗಾತಿಯೊಡನೆ ಕೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಆಭರಣ ಮಾರಾಟಗಾರರಿಗೆ ಹೆಚ್ಚಿನ ಆದಾಯವಿರುತ್ತದೆ. ಸರ್ಕಾರಿ ಕೆಲಸಗಳು ಸ್ವಲ್ಪ ನಿಧಾನ ಗತಿಯಲ್ಲಿ ಆಗುತ್ತವೆ. ಕೆಲವರಿಗೆ ತವರಿನಿಂದ ಜಮೀನು ದೊರಕಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮನಸ್ಸನ್ನು ದೃಢ ಮಾಡಿಕೊಂಡು ಕೆಲಸ ಮಾಡುವಿರಿ. ಆದಾಯ ಕಡಿಮೆ ಇದ್ದರೂ ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದೇಶಿ ಭಾಷಾ ಬೋಧಕರಿಗೆ ಬೇಡಿಕೆ ಹೆಚ್ಚುತ್ತದೆ. ನಿಮ್ಮ ಶತ್ರುಗಳನ್ನು ಅತ್ಯಂತ ಪರಾಕ್ರಮದಿಂದ ಎದುರಿಸುವಿರಿ. ಕೃಷಿಯಲ್ಲಿ ನಿರೀಕ್ಷಿತ ಮಟ್ಟದ ಆದಾಯ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಯ ಹತ್ತಿರದ ಫಲಿತಾಂಶ ಲಭಿಸುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವಿದೇಶಿ ವಸ್ತುಗಳ ಮೇಲೆ ಮೋಹ ಹೆಚ್ಚುತ್ತದೆ. ಆದಾಯವು ಕಡಿಮೆ ಇರುತ್ತದೆ. ರಾಜಕಾರಣಿಗಳು ತಮ್ಮ ಮಾತಿನಿಂದ ಜನರನ್ನು ಸೆಳೆಯಬಹುದು. ನಿಮ್ಮ ಕೆಲಸ ಕಾರ್ಯಗಳಿಗೆ ಸಮಾಜದಿಂದ ಸಹಾಯ ದೊರೆಯುತ್ತದೆ. ಈಗ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಶ್ವಾಸಕೋಶದ ತೊಂದರೆ ಇರುವವರು ಎಚ್ಚರವಹಿಸಿ. ವಿದೇಶಿ ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭವನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಬಹಳ ಉದಾಸೀನ ಮನೋಭಾವ ನಿಮ್ಮಲ್ಲಿ ತುಂಬಿರುತ್ತದೆ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಾಧ್ಯತೆಯಿದೆ. ಸ್ಥಿರಾಸ್ತಿಯನ್ನು ಕೊಳ್ಳಲು ಬೇಕಾದ ಹಣ ಹೊಂದಿಸಲು ಸೂಕ್ತ ಮಾರ್ಗ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ದೇಹದಲ್ಲಿ ಗೆಡ್ಡೆಗಳನ್ನು ಹೊಂದಿರುವವರು ಚಿಕಿತ್ಸೆಯನ್ನು ಪಡೆಯಿರಿ.

ಪದಬಂಧ 2902

ಮೇಲಿನಿಂದ ಕೆಳಕ್ಕೆ

1. ಹೆಣ್ಣಿನ ಹಣೆಯನ್ನು ಶೋಭಿಸುವ ಮಂಗಳ ದ್ರವ್ಯ 3
2. ಸಂಗೀತಗಾರನಿಗೆ ಪಕ್ಕವಾದ್ಯದಿಂದ ಸಿಗುವ ಬಲ 3
3. ಅಗಸ ಬಟ್ಟೆಯೊಗೆಯುತ್ತಾ ಮೇಲೆ ನೋಡಿದಾಗ ಕಾಣಿಸುವ ಆಕಾಶ 3
4. ರಾಮಾಯಣ ಮಹಾಭಾರತ ಯುದ್ಧಗಳಲ್ಲಿ ಬಿಡುತ್ತಿದ್ದ ಹಾವಿನ ಬಾಣ 3
7. ನಿರ್ಗತಿಕ ಸ್ಥಿತಿಗೆ ತಳ್ಳಿದ ಬಡತನ 3
9. ಕನಸ್ಸಿನಲ್ಲಿ ಮದುವೆಯಾಗಿ ಮಾತಾಡು 5
10. ಒಂಟೆಯೂ ಒಳನುಗ್ಗಬಹುದಾದ ಮರಳುಗಾಡಿನಲ್ಲಿ ಹಾಕಿದ ಟೆಂಟು 3
11. ಹತ್ತ, ಹಿತ್ತ, ಹಾಮೇಲೆ ಎಂದು 'ಹ'ಅಕ್ಷರವನ್ನು ಪ್ರೀತಿಯಿಂದ ಬಳಸುವವ 5
12. ಬೌದ್ಧ ವಾಸ್ತು ಶಿಲ್ಪದ ಸ್ಮಾರಕ ತಲೆಕೆಳಕಾಗಿದೆ 2
13. ತಾಪದಿಂದ ಉರಿದುಹೋಗುತ್ತಿರುವ ತಂದೆ 3
15. ತೂಕದಲ್ಲಿ ಭಾರವಾದದ್ದು 2
18. ಸಂಸ್ಕೃತದಲ್ಲಿ ಮೊದಲನೆಯದು 3
19. ಗಂಗೆಯನ್ನು ಸೇರುವ ನದಿ ಕೃಷ್ಣ ವಿಹಾರಕ್ಕೆ ಹೆಸರಾದದ್ದು 3
20. ತನ್ನದೆಂಬುದನ್ನು ಎತ್ತಿಹಿಡಿಯುವ ಪ್ರೀತಿ ವಾತ್ಸಲ್ಯ 3
21. ಹಲವು ರೀತಿಯ ಬಗೆಬಗೆ 3
22. ಬೇಡುವವರು ಕೇಳುವ ಅನ್ನದ ತುತ್ತು 3

ಎಡದಿಂದ ಬಲಕ್ಕೆ

1. ಮಡಿಕೆಯಲ್ಲಿ ಪ್ರವಳ ಶಿಶುವಾಗಿ ಹುಟ್ಟಿದಾತ 4
3. ಶ್ರಾವಣಕ್ಕೆ ಮೊದಲ ಗಾಳಿಯ ತಿಂಗಳು 5
5. ಕೂಡಲಸಂಗಮನನೊಲಿಸಲು ಅಂತರಂಗದ ಶುದ್ಧಿಯ ಜೊತೆ ಬೇಕಾಗುವ ಬಾಹ್ಯ ಶುದ್ಧಿ 4
6. ಮನಸ್ಸಿನ ಆಂತರಿಕ ಶಕ್ತಿ 4
8. ವೇದ, ಪುರಾಣಗಳಾದಿಯಾಗಿ ಎಲ್ಲಾ ವಿದ್ಯೆಯ ತಿರುಳು 5
10. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಲ್ಲಿ ಬರುವ ಮಾರ್ಗದರ್ಶಕ ಮುರುಗ 4
12. ಭೀಮ ಹನುಮರಿಬ್ಬರಿಗೂ ಸಲ್ಲುವ ಗಾಳಿ ಪುತ್ರನೆಂಬ ನಾಮ 5
14. ಬಯಕೆಯ ಪರಿಮಳವನ್ನು ಬೀರುವ ಸಸ್ಯ 5
16. ಪ್ರಕಾಶಮಾನವಾದ ಸೂರ್ಯನ ಬೆಳಕಿನ ದಾಳಿ 5
17. ಮುಂಜಾನೆ ಎದ್ದೊಡನೆ ಕೇಳಿಸುವ ಸುಬ್ಬಲಕ್ಷ್ಮಿಯವರ ಮಂಗಳ ಗೀತೆ 4
19. ಕಾಲ ಕಾಲದ ಮಧ್ಯೆ ಬೇಕಾಗುವ ಶಿಸ್ತು ಸಂಯಮ ಅಷ್ಟಾಂಗಯೋಗದಲ್ಲಿ ಸಿಗಬಹುದು 5
21. ವಿಷಯವನ್ನು ವಿಶ್ಲೇಷಿಸಿ ಲೋಪ ದೋಷಗಳನ್ನು ಹೊರಗೆಳೆವ ಚಿಂತಕ 4
23. ಶ್ರೇಷ್ಠ ದೇವತೆ ಮಹಾದೇವನ ಸತಿ 4
24. ನದಿತೀರದಲ್ಲಿ ಬೆಳೆದ ಸುಸಂಸ್ಕೃತರ ಸಾಮಾಜಿಕ ವ್ಯವಸ್ಥೆ 5
25. ನ್ಯಾಯ ನೀತಿ ಕಟ್ಟಳೆಗೆ ಹೆಸರು ಪಡೆದ ಮಂಜುನಾಥನ ಕ್ಷೇತ್ರ 4



ಪದಬಂಧ ಉತ್ತರ -2901

ಮೇಲಿಂದ ಕೆಳಕ್ಕೆ

1.ಕಳಸ 2.ಪತಿತಪಾವನ 3.ಗಜಪತಿ 4.ಪರಿಣತಿ 6.ಪುರುಷಸೂಕ್ತ 8.ಮಡಿಕೇರಿ 10.ಪಲಾಷ 11.ಸಹಜೀವನ 12.ಮಾಗಡಿ 13.ವಿಮಾನದುರಂತ 14.ಸಹಸ್ರಾಕ್ಷ 15.ನುರಿತವ 16.ನದೀಮೂಲ 18.ಯಕಾರ

ಎಡದಿಂದ ಬಲಕ್ಕೆ

1.ಕಲಾಮಂಟಪ 3.ಗಣಪ 5.ರಿಕಾಪು 7.ಸಮಯಾತೀತ 9.ಪಾರ್ವತಿಪತಿ 11.ಸರಿಸಮಾನ 13.ವಿಷಯಾಸಕ್ತ 15.ನುಡಿನಮನ 17.ದುರಿತಕ್ಷಯ 19.ನನ್ನಾತ 20.ವರ್ತುಲ 21.ತದನಂತರ

‘ಚಿತ್ತಾರ’ದಲ್ಲಿ ಅರಳಿದ ದೀವರ ಸಂಸ್ಕೃತಿ

ಮಲೆನಾಡು ಭಾಗದಲ್ಲಿ ಹಸೆ ಚಿತ್ತಾರಕ್ಕೆ ಹೆಸರುವಾಸಿ ದೀವರ ಸಮುದಾಯ. ಇವರ ಜೀವನ ಶೈಲಿಯನ್ನು ಪ್ರತಿಬಿಂಬಿಸುವ, ಸಂಸ್ಕೃತಿಯನ್ನು ಪ್ರತಿನಿಧಿಸುವ ‘ಲಾಂಗ್ವೇಜ್ ಆಫ್ ಲೈನ್ಸ್’ ಕಲಾ ಪ್ರದರ್ಶನ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು.

ಕಲಾಪ್ರದರ್ಶನದಲ್ಲಿ ಹಸೆ ಚಿತ್ತಾರದ ಕಲಾಕೃತಿಗಳು
ಚಿತ್ರಗಳು: ಎಂ.ಎಸ್.ಮಂಜುನಾಥ್



• ಸಂಜಯ್ ಜಿ.ಎಂ.

ಚಾವಣಿಗೆ ತಟ್ಟಿ ಚಾಚಾ ಚಾವಣಿಗೆ
ಚಿತ್ತಾರ ಇನ್ಯಾರೆ ಬರೆಯೋರು
ಚಿತ್ತಾರ ಇನ್ಯಾರೆ ಬರೆಯೋರು
ಚಿತ್ತಾರ ಬರಿಯಂದ್ರೆ, ಮಂದಾರ ಬರುದಾಳೆ
ಮಂದಾರದ ಮ್ಯಾಲೆ ಮಾದನ ಕೈ..
ಚಿತ್ತಾರದ ಕಡೆಗೆ ನಡುದಾಳೆ ತಂಗ್ಯಮ್ಮ...

ಮಲೆನಾಡಿನ ನೆಲಮೂಲದ ಸಂಸ್ಕೃತಿಯಾದ ‘ದೀವರ’ರ ಪದಗಳನ್ನು ಪದ್ಮಾವತಿ ಮತ್ತು ಸುಧಾ ಅವರು ಹಾಡುತ್ತಿದ್ದರೆ, ಅಲ್ಲಿದ್ದವರು ತಲ್ಲೀನರಾಗಿ ಆಲಿಸುತ್ತಿದ್ದರು. ಇಂಥ ಪದಗಳನ್ನು ಕೇಳುವ ಅಪರೂಪದ ಅವಕಾಶ ಸಿಕ್ಕಿದ್ದು ದೊಮ್ಮಲೂರಿನಲ್ಲಿರುವ ‘ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ (ಬಿಐಸಿ) ನಲ್ಲಿ ‘ಸೆಂಟರ್ ಫಾರ್ ರಿವೈವಲ್ ಆಫ್ ಇಂಡೀಜಿನಿಯಸ್ ಆರ್ಟ್’ ಆಯೋಜಿಸಿದ್ದ ‘ಲಾಂಗ್ವೇಜ್ ಆಫ್ ಲೈನ್ಸ್’ ಕಲಾ ಪ್ರದರ್ಶನದಲ್ಲಿ.

ಭತ್ತದಿಂದ ಸಿದ್ಧಗೊಂಡ ಕಲಾಕೃತಿಗಳು

ಈ ಕಲಾ ಪ್ರದರ್ಶನದಲ್ಲಿ ದೀವರ ಸಮುದಾಯದ ಜೀವನ ಶೈಲಿಯನ್ನು ಪ್ರತಿಬಿಂಬಿಸುವ ಸ್ಮಿತಾ ತುಮಲೂರು ಅವರು ಕ್ಯಾಮೆರಾದಲ್ಲಿ ಸೆರೆ ಹಿಡಿದ ‘ಚಿತ್ರ’ಗಳು ಹಾಗೂ ದೀವರ ಸಂಸ್ಕೃತಿಯ ಭಾಗದಂತಿರುವ ಹಲವು ಕಲಾವಿದೆಯರು ರಚಿಸಿರುವ ‘ಹಸೆ ಚಿತ್ತಾರ’ಗಳಿದ್ದವು. ಇವುಗಳ ಜೊತೆಗೆ ಭತ್ತದ ಮಂಟಪ ಹಾಗೂ ಬೂ ಮಣ್ಣಿ ಬುಟ್ಟಿ ಚಿತ್ತಾರ ಕಲೆಯು ಮಲೆನಾಡಿನ ಸೊಬಗನ್ನು ಮರು ಸೃಷ್ಟಿಸಿದ್ದವು. ‘ಚಿತ್ತಾರ’ ಕಲೆ ಕುರಿತು ವಿಚಾರ ಸಂಕಿರಣ ಹಾಗೂ ಆಸಕ್ತರಿಗಾಗಿ ವಿಶೇಷ ತರಬೇತಿ ಕಾರ್ಯಾಗಾರವನ್ನು ಕೂಡ ಹಮ್ಮಿಕೊಳ್ಳಲಾಗಿತ್ತು.

ಮಲೆನಾಡಿನ ಸಾಗರ, ಸೊರಬ, ಶಿಕಾರಿಪುರ, ತೀರ್ಥಹಳ್ಳಿ ಕಡೆಗಳಲ್ಲಿ ವಾಸವಿರುವ ‘ದೀವರ’ ಸಮುದಾಯವು ತಮ್ಮ ವಿಭಿನ್ನ ಆಚರಣೆ, ಕಲೆ ಹಾಗೂ ಸಂಸ್ಕೃತಿಯ ಜೊತೆಗೆ ಅವರ ‘ಹಸೆ ಚಿತ್ತಾರ’ ಕಲೆಯು ಕೂಡ ಅಷ್ಟೇ ವಿಭಿನ್ನ ಮತ್ತು ವಿಶೇಷ.

ನೈಸರ್ಗಿಕವಾಗಿ ಸಿಗುವ ಹಣ್ಣು, ಕೆಂಪು ಮಣ್ಣು, ಅಕ್ಕಿಯನ್ನು ಬಳಸಿಕೊಂಡು ಕೆಂಪು, ಕಪ್ಪು, ಹಳದಿ, ಬಿಳಿ ಬಣ್ಣಗಳನ್ನು ತಯಾರಿಸುತ್ತಾರೆ. ಪುಂಡಿ ಗಿಡದ ನಾರನ್ನು ಕುಂಚದ ರೀತಿಯಲ್ಲಿ ಉಪಯೋಗಿಸಿಕೊಂಡು ದೀವರ ಸಮುದಾಯದ ಮಹಿಳೆಯರು ಆ ಬಣ್ಣಗಳ ಮೂಲಕವೇ ರೇಖಾಚಿತ್ರಗಳಲ್ಲಿ ತಮ್ಮ ಸಂಸ್ಕೃತಿಯನ್ನು ಅಭಿವ್ಯಕ್ತಿಗೊಳಿಸುತ್ತಾರೆ.

‘ಹಸೆ ಚಿತ್ತಾರ’ ಎನ್ನುವುದು ದೀವರ ಸಮುದಾಯಕ್ಕೆ ಸೇರಿದ ವಿಶೇಷ ಚಿತ್ರಕಲೆ. ಕೇವಲ ನೈಸರ್ಗಿಕ ಬಣ್ಣವನ್ನು ಉಪಯೋಗಿಕೊಂಡು ರೇಖಾಚಿತ್ರಗಳಂತಹ ರಚನೆಗಳ ಮೂಲಕವೇ ಒಂದು ಸಮುದಾಯದ ಜೀವನಶೈಲಿ, ಆಚರಣೆ, ಸಂಸ್ಕೃತಿಯನ್ನು ಅನಾವರಣ ಮಾಡುವ ಶಕ್ತಿ ‘ಹಸೆ ಚಿತ್ತಾರ’ಕ್ಕಿದೆ.

‘ನಾವು ಪ್ರಕೃತಿಯ ಮಕ್ಕಳು, ಪರಿಸರದ ನಡುವೇ ಹುಟ್ಟಿ ಬೆಳೆದವರು. ನಮ್ಮ ಕಲೆ, ಆಚಾರ, ವಿಚಾರ ಎಲ್ಲವೂ ಪ್ರಕೃತಿಯೊಂದಿಗೆ ಸೇರಿಕೊಂಡಿವೆ. ಅವುಗಳನ್ನೇ ಬಳಸಿಕೊಂಡು ನಾವು ‘ಹಸೆ ಚಿತ್ತಾರ’ ಬಿಡಿಸುತ್ತೇವೆ’ ಎನ್ನುತ್ತಾರೆ ದೀವರ ಸಮುದಾಯದ ಸುಧಾ.

ಹಸೆ ಚಿತ್ತಾರದಲ್ಲಿ ತೊಡಗಿರುವ ಖುಷಿ ದಿಗಟೆಕೊಪ್ಪ

‘ಇದು ನಮ್ಮ ತಾಯಿ ಕಲಿಸಿದ ಕಲೆ. ‘ಚಿತ್ತಾರ’ ಕಲೆಯನ್ನು ನಮ್ಮ ಸಮುದಾಯದಲ್ಲಿ ಹಬ್ಬಗಳು, ಮದುವೆ ಇತ್ಯಾದಿ ಯಾವುದೇ ಸಂಭ್ರಮದ ಶುಭ ಕಾರ್ಯಗಳಿದ್ದರೂ ಅಲ್ಲಿ ‘ಚಿತ್ತಾರ’ ಇರಲೇಬೇಕು’ ಎನ್ನುತ್ತಾರೆ ಪದ್ಮಾವತಿ.

ಇಂತಹ ಅಪರೂಪದ ‘ಚಿತ್ತಾರ’ ಕಲೆಯನ್ನು ಬೆಂಗಳೂರಿಗೆ ತಂದವರು ಸೆಂಟರ್ ಫಾರ್ ರಿವೈವಲ್ ಆಫ್ ಇಂಡೀಜಿನಿಯಸ್ ಆರ್ಟ್‌ನ ಸ್ಥಾಪಕಿ ಗೀತಾ ಭಟ್. ಸುಮಾರು 20 ವರ್ಷಗಳಿಂದಲೂ ‘ದೀವರ’ ಸಮುದಾಯದ ಜೊತೆಗೆ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಪ್ರಮುಖ ಕಾರಣವೇ ‘ಚಿತ್ತಾರ’.

‘ಚಿತ್ತಾರ ಕಲೆಗೆ ಮನಸೋತ ನಾನು, ಎರಡು ದಶಕಗಳಿಂದಲೂ ಸೆಂಟರ್ ಫಾರ್ ರಿವೈವಲ್ ಆಫ್ ಇಂಡೀಜಿನಿಯಸ್ ಆರ್ಟ್ ಮೂಲಕ ದೀವರ ಸಮುದಾಯದ ಆಚಾರ-ವಿಚಾರ, ಸಂಸ್ಕೃತಿ, ಕಲೆಗಳ ಕುರಿತು ಅಧ್ಯಯನ ಮಾಡುತ್ತಿದ್ದೇನೆ. ಇದೊಂದು ಅದ್ಭುತ ಅನುಭವ. ಈ ರೀತಿಯ ಸಂಸ್ಕೃತಿಯೊಂದು ನಮ್ಮ ರಾಜ್ಯದಲ್ಲಿದೆ ಎನ್ನುವುದೇ ಬಹಳಷ್ಟು ಜನರಿಗೆ ತಿಳಿದಿಲ್ಲ. ಇಂತಹ ಸಂಸ್ಕೃತಿ, ಕಲೆಯನ್ನು ಹೊರ ಜಗತ್ತಿಗೆ ತಿಳಿಸುವುದೇ ನಮ್ಮ ಉದ್ದೇಶ’ ಎನ್ನುತ್ತಾರೆ ಗೀತಾ ಭಟ್.

ಕಲಾ ಪ್ರದರ್ಶನ ನೋಡಲು ಬಂದಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿ ಪೂರ್ಣಚಂದ್ರ, ‘ಇದು ನಮ್ಮ ಮಣ್ಣಿನ ಕಲೆ, ಮಲೆನಾಡಿನ ಸೊಬಗಿನ ಕಲೆ ಚಿತ್ತಾರ. ಹಸೆ ಚಿತ್ತಾರವು ತಲತಲಾಂತರದಿಂದ ಬಂದ ಮಲೆನಾಡಿನ ಕಲೆ. ನನ್ನ ಊರಿನಲ್ಲಿ ಕಾಣಸಿಗುವಂತಹ ಹಸೆ ಚಿತ್ತಾರವನ್ನು ಬೆಂಗಳೂರಿನಲ್ಲಿ ನೋಡಿ ತುಂಬಾ ಖುಷಿಯಾಯಿತು’ ಎಂದು ಹೆಮ್ಮೆಯಿಂದ ಹೇಳಿದರು.

ಕಲೆಯೊಂದು ಸಂಸ್ಕೃತಿ, ಸಮುದಾಯದ ಪ್ರತಿರೂಪದಂತೆ ‘ದೀವರ’ ಸಮುದಾಯದ ಜೀವನಶೈಲಿಯಲ್ಲೇ ‘ಚಿತ್ತಾರ’ ಉಳಿದುಕೊಂಡು ಬಂದಿದೆ. ಅಲ್ಲಿನ ಮಹಿಳೆಯರ ಸೌಂದರ್ಯ ಪ್ರಜ್ಞೆ ಹಾಗೂ ಜೀವನಾಸಕ್ತಿಯ ಪ್ರತೀಕವಾಗಿರುವ ‘ದೀವರ’ ಕಲೆಯನ್ನು ಮುಂದಿನ ತಲೆಮಾರಿಗೆ ಉಳಿಸಿಕೊಂಡು ಹೋಗಬೇಕಾಗಿದೆ.

ಮೊದಲ ಓದು

ಬಸವಣ್ಣನ ಅಂತರಂಗ ಬಹಿರಂಗ



ಕಲ್ಯಾಣಪುರ
ಲೇ: ವಿಕ್ರಮ ವಿಸಾಜಿ
ಪ್ರ: ನೆಲದ ನುಡಿ
ಸಂ: 78927 29847

ಬಸವಣ್ಣ ಕಲ್ಯಾಣ ಬಿಟ್ಟಿದ್ದು ಹೇಗೆ? ಬಿಡುವ ಮುನ್ನ ಅವರ ಮನದೊಳಗಿನ ವಿಪ್ಲವ ಹೇಗಿತ್ತು? ಮಾನವೀಯ ಮೌಲ್ಯಗಳಿಗೆ ಆತುಬಿದ್ದಾಗ ಅಣ್ಣ ಅನುಭವಿಸಿದ ಅಸಹಾಯಕತನ ಎಂಥದ್ದು? ಕನಸುಗಳೆಂದು ಕನವರಿಸುವಾಗ ಹೊರಗಿನ ಹೋರಾಟ, ಒಳಗಿನ ಸಂಘರ್ಷಕ್ಕೆ ಮೌನದ ಮೊರೆ ಹೋಗಿದ್ದು ಯಾಕೆ? ವಚನ ಕ್ರಾಂತಿಗೂ ಮೊದಲಿನ ನೀರವ ರಾತ್ರಿಗಳನ್ನು ಅಣ್ಣ ಹೇಗೆ ಕಳೆದ? ಅಕ್ಕ ನಾಗಲಾಂಬಿಕೆ ಅವರು ನೀಡುವ ಸಮಾಧಾನ, ಅಲ್ಲಮ ಪ್ರಭುಗಳ ಮುನ್ಸೂಚನೆ, ಶರಣರು ಕಲ್ಯಾಣ ತೊರೆಯುವಾಗ ಒಳಗೊಳಗೆ ಅಣ್ಣ ಅನುಭವಿಸಿದ ಕುಸಿತ ಎಂಥದ್ದು? ನೀಲಾಂಬಿಕೆ ಬಸವಣ್ಣನನ್ನು ಒಪ್ಪಿಕೊಂಡ, ಅಪ್ಪಿಕೊಂಡ ಪ್ರೀತಿಯೂ, ಗಂಗಾಂಬಿಕೆ ಪ್ರಶ್ನೆಗಳ ಕೂರಂಬುಗಳನ್ನು ಬಸವಣ್ಣನತ್ತ ಬೀರುತ್ತಲೇ ಒಳ ಹೊರಗಿನ ಸಂಘರ್ಷಕ್ಕೆ ಸ್ಪಷ್ಟ ರೂಪ ಕೊಡುವ ರೀತಿ, ಮೂರು ಸ್ತ್ರೀಪಾತ್ರಗಳು ಮಹಾಮಂತ್ರಿ ಬಸವೇಶ್ವರರನ್ನೂ, ಅನುಭವ ಮಂಟಪದ ಮತ್ತು ಶರಣರ ಪ್ರಿಯ ಬಸವಣ್ಣನನ್ನು ಅನಾವರಣಗೊಳಿಸುತ್ತ ಹೋಗುತ್ತಾರೆ, ನಾಟಕಕಾರರು.

ಹನ್ನೆರಡನೆ ಶತಮಾನದ ವಸ್ತುವಾದರೂ ಓದುವಾಗ, ಇದು ಈ ಕಾಲದ ರಾಜಕಾರಣಕ್ಕೂ ಅನ್ವಯವಾಗುತ್ತ ಹೋಗುತ್ತದೆ. ಪ್ರಭುತ್ವ ಬಯಸುವುದು ಏನು? ಧರ್ಮ ಏನು ಹೇಳುತ್ತದೆ? ಮಹಾಮನೆಯಲ್ಲಿ ನಡೆದ ಸಂವಾದಗಳೆಲ್ಲವೂ ಸಾರ್ವಕಾಲಿಕ ಎನಿಸತೊಡಗುತ್ತವೆ. ಇಲ್ಲಿ ಅಲ್ಲಮ ಪ್ರಭುಗಳ ಅರಿವು, ಬಿಜ್ಜಳನ ಅಧಿಕಾರ ಎರಡೂ ಮಾತಿನಲ್ಲಿಯೇ ಸಂಘರ್ಷಕ್ಕೆ ಒಳಪಡುತ್ತವೆ. ಕಲ್ಯಾಣಪುರದ ಓಣಿಯೊಳಗಣ ಕತ್ತಲು, ಬಸವಣ್ಣನ ಹೃದಯ ಜ್ಯೋತಿ ಎರಡರ ನಡುವಿನ ಸಂಘರ್ಷದ ಕಥನ ಬಲು ಕಾಡುವಂಥದ್ದು.

ಪ್ರತಿ ಅಂಕದ ಮೊದಲಿಗೆ ಆಯ್ದ ವಚನಗಳ ಸಾಲು, ಆ ನಾಟಕ ಸಾಗುವ ದಿಕ್ಕನ್ನು ಸ್ಪಷ್ಟಪಡಿಸುತ್ತ ಹೋಗುತ್ತವೆ. ಬೆಳಗು ಮತ್ತು ಬೈಗುಗಳನ್ನು ಮೌನವಾಗಿಯೇ ಕಳೆಯುವ ಬಸವಣ್ಣನ ಮನದ ನೀರವ ಓದುಗರನ್ನು ಕಾಡತೊಡಗುತ್ತದೆ. ಕ್ರಾಂತಿಕಾರಿಯೊಬ್ಬ ಸಾಮಾನ್ಯ ಮನುಷ್ಯನಾಗಿ ಅನುಭವಿಸುವ ಅಸಹಾಯಕತನ ಈ ನಾಟಕದ ಜೀವಾಳವಾಗಿದೆ. ಕಲ್ಯಾಣಪುರದ ಓಣಿಯೊಳಗಣ ಕತ್ತಲು, ಬಸವಣ್ಣನ ಹೃದಯ ಜ್ಯೋತಿ ಎರಡರ ನಡುವಿನ ಸಂಘರ್ಷದ ಕಥನ ಬಲು ಕಾಡುವಂಥದ್ದು.

ಪುಟ: 89 ₹120

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಅಕ್ಷಿಪಕ್ಷಿ

ಅಕ್ಷಿಪಕ್ಷಿ (ನಾ). ಕಣ್ಣಹಕ್ಕಿ

ಕುವೆಂಪು ಅವರು ರಾಮನು ಹರಧನುಸ್ಸಿನ ಬಳಿ ನಿಂತು ತನ್ನ ಒಲವಿನ ಮೀನಾಕ್ಷಿಯ ಕಡೆ ‘ಕಣ್ಣಪಕ್ಷಿ’ಯನ್ನು ಅಟ್ಟಿ ನೋಡಿದನು ಎಂದು ಚಿತ್ರಿಸಿದ್ದಾರೆ. ನೋಟದ ಹಾರುವಿಕೆಯ ಸಮರ್ಥ ಪ್ರತಿಮೆ ಅದು.

‘ಶಂಕರ ಚರಣ ಪಂಕಜಕೆ
ಬಗೆಯ ಪೂಜೆಯ ಸಲಿಸುತಕ್ಷಿಪಕ್ಷಿಯನಟ್ಟಿ...
ತನ್ನ ಮೀನಾಕ್ಷಿಯಂ ಮೈಥಿಲಿಯನೊ-
ಯ್ಯನೆಯೆ
ಕೋಮಳ ಕಟಾಕ್ಷದಿಂದೀಕ್ಷಿಸಿ.’

ನಿದ್ದೆನೈವೇದ್ಯ

ದೇವರಿಗೆ ಹಣ್ಣು, ಕಾಯಿ ಮೊದಲಾದುವುಗಳನ್ನು ಅರ್ಪಿಸುವುದು ನೈವೇದ್ಯ. ರಾಮನು ಹರಧನುಸ್ಸನ್ನು ಹೆದೆ ಏರಿಸುವ ದಿನದ ರಾತ್ರಿಯಲ್ಲಿ ಸೀತೆಯು ರಾಮನ ಬಲಕ್ಕೆ ತನ್ನ ಪ್ರೇಮಬಲವನ್ನು ನೀಡಲೆಂದು ವ್ರತಧಾರಿಯಾದಳು. ಆ ರಾತ್ರಿ ತನ್ನ ಹೃದಯ ಕಮಲದಿಂದ ಗಿರಿಜೇಶನನ್ನು ಪೂಜಿಸಿ ‘ನಿದ್ದೆ ನೈವೇದ್ಯ’ವನ್ನು ಸಮರ್ಪಣೆ ಮಾಡಿದಳು. ಕುವೆಂಪು ಅವರು ಸೀತೆಯು ಮಾಡಿದ ಧ್ಯಾನಪೂರ್ಣ ಜಾಗರಣೆಯನ್ನು ‘ನಿದ್ದೆ ನೈವೇದ್ಯ’ ನುಡಿಯಿಂದ ಬಣ್ಣಿಸಿದ್ದಾರೆ.

‘ಹೃತ್‌ಪದ್ಮದಿಂದೆ ಭೂಜಾತೆ ಗಿರಿಜೇಶನಂ
ಪೂಜಿಸಿದಳಾ ರಾತ್ರಿ, ನಿದ್ದೆ ನೈವೇದ್ಯಮಂ
ನೀಡಿ.’

ಜೇವ್ನಾನಾ? ಏರ್‌ಪೋರ್ಟಾ?

12ನೇ ಪುಟದಿಂದ...

ಕನಕಪುರ ರಸ್ತೆ ಪ್ರದೇಶದಲ್ಲಿಯೇ ಆನೆ ಕಾರಿಡಾರ್ ಹಾದು ಹೋಗುತ್ತದೆ. ಸಾಕಷ್ಟು ಅರಣ್ಯ ಪ್ರದೇಶವೂ ಇದೆ. ಇಲ್ಲಿ ವಿಮಾನ ನಿಲ್ದಾಣವಾದರೆ ಪ್ರಾಣಿಪಕ್ಷಿಗಳಿಗೂ ತೊಂದರೆ ಎಂಬ ಮಾತುಗಳ ನಡುವೆಯೇ, ಈ ಪ್ರದೇಶದಲ್ಲಿ ಭೂಮಿ ಬೆಲೆ ಎಕರೆಗೆ ಎಷ್ಟು ಹೆಚ್ಚಾಗಿದೆ ಎಂಬ ಚರ್ಚೆಯನ್ನೂ ನಡೆಸಿದೆವು. ‘ಮುಖ್ಯರಸ್ತೆ ಬದಿಯಲ್ಲಿನ ಜಮೀನಿಗೆ ಎಕರೆಗೆ ಮೂರುವರೆ ಕೋಟಿಯಿಂದ ನಾಲ್ಕು ಕೋಟಿ ರೂಪಾಯಿ’ ಎಂದು ಮುಖ ಅರಳಿಸಿದರು.

ರೈತರು–ಮಹಿಳೆಯರ ಆತಂಕ, ದುಃಖ, ಅಸಹಾಯಕತೆಯನ್ನೆಲ್ಲ ಕಂಡು, ಕೇಳಿಸಿಕೊಂಡ ನನಗೆ ಮಾಗಡಿ ರಂಗಪ್ಪನಪಾಳ್ಯದಲ್ಲಿ ಹತ್ತು ವರ್ಷದ ಬಾಲಕ ಎದುರಾದ. ಈತ ನಮ್ಮ ಮಾತುಕತೆಯನ್ನು ಕೇಳಿಸಿಕೊಂಡಿದ್ದ. ನಾನು ಈತನನ್ನು ಅಲ್ಲೆಲ್ಲ ನೋಡಿದ್ದೆ. ಈ ಕಾರಣದಿಂದಲೇ ‘ಇಲ್ಲೇ ಏರ್‌ಪೋರ್ಟ್ ಬಂದ್ರೆ ನಿನಗೆ ಖುಷಿ ಆಗುತ್ತಾ?, ತೀರಾ ಹತ್ತಿರದಿಂದಲೇ ಏರೋಪ್ಲೇನ್‌ಗಳನ್ನೆಲ್ಲ ನೋಡಬಹುದು ಅಲ್ವಾ’ ಎಂದೆ. ಆಗ ಆ ಬಾಲಕ ‘ಏರ್‌ಪೋರ್ಟ್ ಇಲ್ಲೇ ಆಗಬಹುದು. ಆದರೆ, ನಾವೇ ಇಲ್ಲಿ ಇರಲ್ವಲ್ಲ, ಆಗ ಏನ್ ನೋಡೋದು’ ಎಂದ! ನಾನು ಮೌನಕ್ಕೆ ಜಾರಿದೆ.

‘ಏರ್‌ಪೋರ್ಟ್ ಬೇಕೋ, ಬೇಡವೋ ಅಂತ ಕೇಳೋಕೆ ಮೀಡಿಯಾದವ್ರು ಬಂದಿದ್ದಾರೆ. ನೀನು ಬಾ, ಅಕ್ಕಪಕ್ಕದ ಮನೆಯವರನ್ನೂ ಕರ್ಕೊಂಡು ಬಾ’ ಎಂದು ಬಸವೇನಹಳ್ಳಿಯ ಗೋವಿಂದರಾಜ್ ಕರೆ ಮಾಡುತ್ತಿದ್ದಂತೆ, ಹತ್ತಾರು ಜನ ಸೇರಿಯೇ ಬಿಟ್ಟರು. ಈ ಗುಂಪಿನಲ್ಲಿದ್ದ ಸುಮಾರು 70 ವರ್ಷದ ಗಂಗಯ್ಯ, ‘ಸರ್ಕಾರದೋರು ದುಡ್ ಕೊಡ್ಬೌದು. ಆದ್ರೆ, ಆ ದುಡ್ ಕೊನೇತಂಕ ಉಳಿತದಾ? ಆದ್ರೆ ಭೂಮಿ ಉಳಿತದೆ. ಇಮಾನ ನಿಲ್ದಾಣನಾ ಬೇಕಾದ್ರೆ ಬ್ಯಾರೆ ಎಲ್ಲಾದರೂ ಮಾಡ್ಕೊಳ್ಳಿ, ನಾನು ಇದೇ ಊರಲ್ಲಿ ಉಟ್ಟೀವ್ನಿ, ಇದೇ ಊರಲ್ಲೇ ಸಾಯ್ಬೇಕು’ ಎಂದು ನಡುಗುವ ದನಿಯಲ್ಲೂ ದೃಢವಾಗಿಯೇ ಹೇಳಿದರು. ತಮ್ಮ ಸುಕ್ಕುಗಟ್ಟಿದ ಕೈಯಲ್ಲಿ ನನ್ನ ಕೈಯನ್ನ ಒತ್ತಿ ಹಿಡಿದು, ಬಾಗುವಂತೆ ಕಣ್ಸನ್ನೆ ಮಾಡಿ, ವಿನಂತಿ ದನಿಯಲ್ಲಿ ‘ಯಂಗಾರ ಮಾಡಿ ಆ ಇಮಾನ ನಿಲ್ದಾಣ ನಮ್ ಕಡೆ ಬರದಂಗ್ ಮಾಡು ಮಗನೆ’ ಎಂದರು. ನನಗೆ ಅವರ ಕಳೆಗುಂದಿದ ಮುಖವನ್ನು ನೋಡಲು ಧೈರ್ಯವೇ ಸಾಲಲಿಲ್ಲ.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮ್ಯಾಚಿಕ್!

1.ಒಂದು ಕಡ್ಡಿ ಚಲಾಯಿಸಿ ಸಮೀಕರಣ ಸರಿ ಮಾಡಿ.

13+4=16

2. ಎರಡು ಕಡ್ಡಿ ಚಲಾಯಿಸಿ ಸಮೀಕರಣ ಸರಿ ಮಾಡಿ.

30-2=17

ನಿಮ್ಮ G.K. ಎಷ್ಟು OK?

1.ಶಕುಂತಲೆಯನ್ನು ಯಾವ ಋಷಿ ಸಾಕಿ-ಸಲುಹಿದ್ದ?	1.
2.ಚನ್ನಮಲ್ಲಿಕಾರ್ಜುನ ಯಾರ ವಚನಗಳ ಅಂಕಿತನಾಮ?	2.
3.ಭಾರತದ ಮೊದಲ ಮಹಿಳಾ ಪ್ರಧಾನಿ ಯಾರು?	3.
4.ಕೆಳದಿಯ ಕೀರ್ತಿಕೇತನವೆಂದು ಹೆಸರಾದ ಮಹಿಳೆ ಯಾರು?	4.
5.ಭಾರತದ ಮೊದಲ ವಿಶ್ವ ಸುಂದರಿ ಯಾರು?	5.

ಚಿಕ್ಕ ಲೆಕ್ಕ

$$153 = 1^3 + 5^3 + 3^3$$
$$= 1 + 125 + 27 \quad = 153$$

ಜಾಣಪದ ಆಟ

ಪದ–ಸಂಪತ್ತಿಗೆ ಸವಾಲ್

ಇಲ್ಲಿ 7 ಜನ ಗೆಳೆಯರು ನಿಮ್ಮ ಪದಸಂಪತ್ತಿಗೆ ಸವಾಲೆಸೆದಿದ್ದಾರೆ. ಇವರ ಹೆಸರಿನ ಹಿಂದೆ ಒಂದಕ್ಷರ ಸೇರಿಸಿ ಅವುಗಳನ್ನು ಅರ್ಥಬದ್ಧ ಪದಗಳನ್ನಾಗಿ ಪರಿವರ್ತಿಸಿ.

1		ರವಿ
2		ಹರಿ
3		ಮಾನು
4		ಗೋಪಿ
5		ರಾಜು
6		ರಂಗ
7		ಕರ್ಣ

ಶಬ್ದಾಟ

ಈ ಶಬ್ದದಲ್ಲಿ ಒಂದೊಂದೇ ಅಕ್ಷರ ತೆಗೆಯುತ್ತಾ ಹೋದಂತೆ ಉಳಿಯುವ ಪದಗಳೆಲ್ಲವೂ ಅರ್ಥಬದ್ಧಪದಗಳೇ ಆಗಿರಲಿವೆ.

ಸೀತಾರಾಮುನಿಜನಮನ
ತಾರಾಮುನಿಜನಮನ
ರಾಮುನಿಜನಮನ
ಮುನಿಜನಮನ
ನಿಜನಮನ
ಜನಮನ
ನಮನ
ಮನ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗುಂಡನ ರೊಬೊ ಆಟ

ಗುಂಡ ರೊಬೊ ಪ್ರದರ್ಶನ ಕಾರ್ಯಕ್ರಮಕ್ಕೆ ಹೋಗಿದ್ದ. ಅಲ್ಲಿ ಹಲವು ಮಳಿಗೆಗಳಿದ್ದವು. ಆ ಪೈಕಿ ರಿಮೋಟ್ ಕಾರ್‌ನ ಮಳಿಗೆಯೂ ಇತ್ತು. ಅಲ್ಲಿಗೆ ಭೇಟಿ ನೀಡಿದ ಗುಂಡ ರಿಮೋಟ್ ಕೈಗೆತ್ತಿಕೊಂಡು ಅದನ್ನು ಆನ್ ಮಾಡಿದ. ಎಷ್ಟೇ ಪ್ರಯತ್ನಿಸಿದರೂ ಕಾರು ಮುಂದಕ್ಕೆ ಹೋಗಲೇ ಇಲ್ಲ. ಸ್ವಲ್ಪ ಹೊತ್ತಿನಲ್ಲಿ ಹಿಂದಿನಿಂದ ಯಾರೋ ‘ಹಲೋ’ ಎಂದಂತಾಯಿತು. ಗುಂಡ ಹಿಂದೆ ತಿರುಗಿ ನೋಡಿದಾಗ ಅಲ್ಲೊಂದು ರೊಬೊ ಬಂದು ನಿಂತಿತ್ತು. ಗುಂಡ ಒಮ್ಮೆ ಬೆಚ್ಚಿಬಿದ್ದ. ಅರಿವಿಲ್ಲದೇ ಆ ರೊಬೊನ ರಿಮೋಟ್ ಹಿಡಿದು ನಿಯಂತ್ರಿಸುತ್ತಿದ್ದ ಗುಂಡ ಅಲ್ಲಿಂದ ಕಾಲ್ಕಿತ್ತ.



ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಮೋಕ್ಷಿತ, ಎಚ್.ಡಿ.ಕೋಟೆ
ನಿಸರ್ಗ ಆನಂದ್, ಹೂವಿನಹಡಗಲಿ
ಮಹಮ್ಮದ್ ರೆಹಾನ ನದಾಫ, ಗದಗ
ಶಾನ್ವಿ ಆರ್.ಕೆ., ಬೆಂಗಳೂರು
ಹೃತಿಕಾ ಈ. ಚೌದ್ರಿ, ದಾವಣಗೆರೆ
ಗುರುಚರಣ ಟಿ., ತುಮಕೂರು

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಸಲ	+	ಮನ	+	ತೋ	=	
2	ವಾಸ	+	ಹಾಲು	+	ಕು	=	
3	ಜೋತಿ	+	ಹಾಗ	+	ಡು	=	
4	ವಕ್ರ	+	ಜೀನ	+	ಚ	=	
5	ಚಿರ	+	ವಾದ	+	ರು	=	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಅಪಾಯಕಾರಿ 2.ನಿರಾಕರಿಸು 3.ತೂಗುಸೇತುವೆ 4.ಸಮಾಜಮುಖಿ 5.ಬಹಳದಿನ

ಶಬ್ದಾಟ: ಬಂಗಾರದ ಕನ್ನಡಕ

ಜಾಣಪದ ಆಟ: 1.ಕರಡಿ–ಗರಡಿ–ಪರಡಿ 2.ನೆರಳು–ಬೆರಳು–ಕೊರಳು 3.ತಕ್ಷಣ–ಲಕ್ಷಣ–ಶಿಕ್ಷಣ 4.ಮಾಗಡಿ–ಅಂಗಡಿ–ಗೊಂಗಡಿ 5.ಮೊಸರು–ಹೆಸರು–ಕೆಸರು 6.ಕೇಸರ–ನೇಸರ–ಬೇಸರ

ಮೋಜಿನ ಇಂಗ್ಲಿಷ್:
1.NICE-RICE-MICE
2.HEAT-MEAT-SEAT
3.WIND-MIND-KIND
4.SING-WING-KING
5.WOOD-FOOD-GOOD

ಕಮೊನ್ ವಿಯೆಟ್ನಾಂ!

ಮೆಕಾಂಗ್ ಡೆಲ್ಟಾ... ಅವಸರವಿಲ್ಲಿ ಉಲ್ಟಾಪಲ್ಟಾ


ವುಂಗ್ ತಾವ್‌ನ ಸಮುದ್ರದ ದಂಡೆಯಲ್ಲಿರುವ ಬೆಟ್ಟದ ಮೇಲೆ ನಿಂತಿರುವ ಕ್ರಿಸ್ತ

ಮೆಕಾಂಗ್ ನದಿಯ ಕವಲಿನಲ್ಲಿ ಹೀಗೊಂದು ದೋಣಿ ವಿಹಾರ

ಮೆಕಾಂಗ್ ನದಿಯ ತೇಲುವ ಮಾರುಕಟ್ಟೆ

ಹೋ ಚಿ ಮಿನ್ ಸಿಟಿಯ ರಾತ್ರಿಯ ಮನಮೋಹಕ ನೋಟ

ಪ್ರತಿಮೆಯಿಂದ ಟನಲ್‌ವರೆಗೆ

ಒಂದೊಮ್ಮೆ ಫ್ರೆಂಚ್ ವಸಾಹತು ಆಗಿದ್ದ ವಿಯೆಟ್ನಾಂನಲ್ಲಿ ಹೆಜ್ಜೆ-ಹೆಜ್ಜೆಗೂ ಫ್ರೆಂಚರ ಕುರುಹುಗಳು ಸಿಗುತ್ತವೆ. ಹೋ ಚಿ ಮಿನ್ ಸಿಟಿಯಲ್ಲಿರುವ ಸೈಗಾನ್ ಒಪೇರಾ ಹೌಸ್ ಅವುಗಳಲ್ಲೊಂದು. ಇಲ್ಲಿ ನಡೆಯುವ ಎ.ಒ ಬಿದಿರಿನ ಷೋ ಜಗತ್ಪ್ರಸಿದ್ಧ. ಯುದ್ಧ ಅವಶೇಷಗಳ ಮ್ಯೂಸಿಯಂ, ಇಂಡಿಪೆಂಡೆನ್ಸ್ ಪ್ಯಾಲೆಸ್, ಸೆಂಟ್ರಲ್ ಪೋಸ್ಟ್ ಆಫೀಸ್, ಸಿಟಿ ಹಾಲ್ – ಹೋ ಚಿ ಮಿನ್ ಸಿಟಿಯಲ್ಲಿ ನೋಡಲೇಬೇಕಾದ ಪ್ರಮುಖ ಕೇಂದ್ರಗಳು. ಈ ಊರಿನ 'ಕಾ ಪೇ ಮ್ಯೂವ್' (ಉಪ್ಪು ಮಿಶ್ರಿತ ಕಾಫಿ) ಕುಡಿಯದಿದ್ದರೆ ವಿಯೆಟ್ನಾಂ ಪ್ರವಾಸ ಪೂರ್ಣಗೊಳ್ಳುವುದಿಲ್ಲ. ಕು ಚಿ ಟನಲ್‌ಗಳು ವಿಯೆಟ್ನಾಂ ಯುದ್ಧದ ಕಥೆ ಹೇಳುವುದಕ್ಕೆ ನಿಮಗಾಗಿ ಕಾದಿರುತ್ತವೆ. ಬ್ರೆಜಿಲ್‌ನ ರಿಯೊ ಡಿ ಜನೈರೊ ಬಿಟ್ಟರೆ ಪ್ರಪಂಚದಲ್ಲಿ ತುಂಬಾ ಎತ್ತರವಾದ ಕ್ರಿಸ್ತನ ಪ್ರತಿಮೆ ಇರುವ ವುಂಗ್ ತಾವ್ ಸಹ ಹೋ ಚಿ ಮಿನ್ ಸಿಟಿಗೆ ಹತ್ತಿರದಲ್ಲಿದೆ.

ವಿಯೆಟ್ನಾಂ ದೇಶದ ಮೆಕಾಂಗ್ ನದಿ ಪರಿಸರದಲ್ಲಿ ಬದುಕು ಸಾವಧಾನದ ಮಂತ್ರ ಪಠಿಸುತ್ತಿದೆ. ಈ ಪರಿಸರದಲ್ಲಿ ಸುತ್ತಾಡಿದ ಲೇಖಕರು ತಮ್ಮ ಅನುಭವವನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ.

ಪ್ರವಾಸ

• ಪ್ರವೀಣ ಕುಲಕರ್ಣಿ

ವಿಯೆಟ್ನಾಂನ ಝಗಮಗಿಸುವ ಹೋ ಚಿ ಮಿನ್ ಸಿಟಿಯಿಂದ ನಮ್ಮನ್ನು ಮೆಕಾಂಗ್ ಡೆಲ್ಟಾ ಕಡೆಗೆ ಕರೆದೊಯ್ಯುತ್ತಿದ್ದ ಬಸ್ಸು ಬಲು ನಿಧಾನವಾಗಿ ಚಲಿಸುತ್ತಿತ್ತು. ಬಸ್ಸಿನಲ್ಲಿದ್ದ ಎಲ್ಲರಿಗೂ ಚಾಲಕನ ಮೇಲೆ ವಿಪರೀತ ಸಿಟ್ಟು ಬರುತ್ತಿತ್ತು. ಅಂತೂ ನಾವು ಮೈ ಥೋ ನಗರ ತಲುಪಿ, ಥಾಯ್‌ಸನ್ ಎಂಬ ಪುಟ್ಟ ದ್ವೀಪದತ್ತ ದೋಣಿಯಲ್ಲಿ ಹೊರಟಾಗ ಅನ್ನಿಸಿದ್ದು: 'ಮೆಕಾಂಗ್ ನದಿಯ ಪರಿಸರದಲ್ಲಿ ಬದುಕು ಸಾವಧಾನದ ಮಂತ್ರ ಪಠಿಸುತ್ತಿದೆ' ಎಂದು. ಪ್ರಾಯಶಃ ಬಸ್ಸಿನಲ್ಲಿ ಬರುವಾಗ ನಮ್ಮ ಚಾಲಕ ಅದರ ಸಣ್ಣದೊಂದು ಝಲಕ್ ತೋರಿಸುತ್ತಿದ್ದ ಅಥವಾ ಸಾವಧಾನದ ದಿನಚರಿಗೆ ನಮ್ಮನ್ನು ಅಣಿಗೊಳಿಸುತ್ತಿದ್ದ!

ಗಂಟೆಗೆ 400 ಕಿ.ಮೀ. ವೇಗದಲ್ಲಿ ಓಡುವ ಫೆರಾರಿಯನ್ನು ತಂದುಬಿಟ್ಟರೂ ಥಾಯ್‌ಸನ್ ದ್ವೀಪವು ಆ ಕಾರಿಗೆ ತಾಳ್ಮೆಯ ಪಾಠವನ್ನು ಹೇಳಿಕೊಡುತ್ತದೆ. ಗಡಿಯಾರದ ಮುಳ್ಳು ಸಹ ಇಲ್ಲಿ ನಿಧಾನ ಗತಿಯಲ್ಲಿ ತಿರುಗುತ್ತದೆ. ಮರದ ಪುಟ್ಟ ದೋಣಿಗೆ ಹುಟ್ಟು ಹಾಕುತ್ತಾ, ಪುಳಕ್ ಎಂಬ ನೀರಿನ ಸದ್ದಿಗೆ ಕಿವಿಗೊಡುತ್ತಾ, ತಾಳೆಮರಗಳಿಂದ ಸುತ್ತುವರಿದ ಇಲ್ಲಿನ ಇಕ್ಕಟ್ಟಾದ ಕಾಲುವೆಗಳಲ್ಲಿ ಸಂಚರಿಸುವಾಗ, 'ಸಾವಧಾನದ ಬದುಕು ಎಷ್ಟು ಚಂದ, ಅಲ್ಲವೇ' ಎಂದು ಇಲ್ಲಿನ ಗಾಳಿ ಕಿವಿಯಲ್ಲಿ ಉಸುರಿದಂತಾಗುತ್ತದೆ. ಹೇಳಿ ಕೇಳಿ ಥಾಯ್‌ಸನ್ ದ್ವೀಪ ಮೆಕಾಂಗ್ ನದಿಯ ಕಂದನಲ್ಲವೇ ಮತ್ತೆ? ಟಿಬೆಟನ್ ಪ್ರಸ್ಥಭೂಮಿಯಲ್ಲಿ ಹುಟ್ಟಿ ಚೀನಾ, ಮ್ಯಾನ್ಮಾರ್, ಲಾವೋಸ್, ಥಾಯ್ಲೆಂಡ್, ಕಾಂಬೋಡಿಯಾ ದೇಶಗಳನ್ನು ಹಾದು, ವಿಯೆಟ್ನಾಂ ತಲುಪುವ ಹೊತ್ತಿಗೆ 4,500 ಕಿ.ಮೀ.ನಷ್ಟು ದೂರ ಕ್ರಮಿಸುವ ಮೆಕಾಂಗ್‌ಗೆ ಒಂದಿನಿತೂ ದಣಿವಿಲ್ಲ. ಸಾಗರವನ್ನು ಬೇಗ ತಲುಪಬೇಕೆಂಬ ಆತುರವೂ ಇಲ್ಲ. ಬದಲಿಗೆ, ಮುಖಜಭೂಮಿಗೆ ಹೊಂದಿಕೊಂಡ ತನ್ನ ಒಡಲಿನಲ್ಲಿ ಸ್ವರ್ಗದ ತುಣುಕುಗಳನ್ನು ಸೃಷ್ಟಿಸುವಲ್ಲಿ ಅದು ಸದಾ ಮಗ್ನ!

ತಿಳಿ ಕಂದುಬಣ್ಣದ ನೀರನ್ನು ಎರಡೂ ತೀರಗಳ ಜೀವಜಗತ್ತಿಗೆ ಮೊಗೆ ಮೊಗೆದು ಕೊಡುವ ಮೆಕಾಂಗ್‌ಗೆ ರಸವತ್ತಾದ ಹಣ್ಣು-ಹಂಪಲಗಳು, ತೆಂಗು-ತಾಳೆಯ ಮರಗಳು, ತರಹೇವಾರಿ ಭತ್ತದ ಪೈರುಗಳು, ಅಪರೂಪದ ಔಷಧಿ ಸಸ್ಯಗಳು, ಹತ್ತಾರು ವಿಧಗಳ ಪುಷ್ಪಗಳು ಎಲ್ಲವನ್ನೂ ತನ್ನ ದಂಡೆಯಲ್ಲೇ ಬೆಳೆಯಬೇಕು ಎನ್ನುವ ಉಮೇದಿ. ಮೀನುಪ್ರಿಯರ ಮೇಲೂ ಈ ನದಿಗೆ ವಿಶೇಷ ಕಕ್ಕುಲಾತಿ. ಮೆಕಾಂಗ್‌ನ ಮೀನುಗಳಿಗೆ ಬಲೆ ಹಾಕಲು ನದಿಯಲ್ಲೇ ಒಂದು ಪುಟ್ಟ ತೇಲುವ ಗ್ರಾಮ ನಿರ್ಮಾಣವಾಗಿದೆ. ಇಲ್ಲಿ ತಾಜಾ ಮೀನುಗಳು ಬಲೆಗೆ ಬೀಳುವಾಗ ಪಕ್ಕದ ದ್ವೀಪದಲ್ಲಿ ಮಸಾಲೆ ಸಿದ್ಧವಾಗುತ್ತಿರುತ್ತದೆ. 'ಮೀನು ಗ್ರಾಮ'ವನ್ನು ದೂರದಿಂದಲೇ ತೋರಿಸಿದ ನಮ್ಮ ಗೈಡ್ ಆ್ಯಂಡ್ರ್ಯೂ ನಮ್ಮನ್ನು ನದಿ ದಂಡೆಯಲ್ಲಿದ್ದ ಒಂದು ತೋಟಕ್ಕೆ ಕರೆದೊಯ್ದರು. ಅಲ್ಲಿ 'ಹನಿ ಟೀ' (ಜೇನು ಚಹಾ!) ಆಸ್ವಾದಿಸಿದ ನಾವು, ಬಾಳೆ ಮತ್ತು ಶುಂಠಿಯಿಂದ ತಯಾರಿಸಿದ ಸಿಹಿಯಾದ ಕುರುಕುಲು ತಿನಿಸುಗಳನ್ನು ಸ್ವಾಹಾ ಮಾಡಿದೆವು. ದ್ವೀಪದ ಹಳ್ಳಿಗಳಲ್ಲಿ ನಮ್ಮ ಸಂಚಾರ ಶುರುವಾಯಿತು.

ನಮ್ಮನ್ನು ಕರೆದೊಯ್ಯಲು ಇ-ರಿಕ್ಷಾ ಇದ್ದುವಾದರೂ ನಡಿಗೆಯೇ ದ್ವೀಪದ ಮುಖ್ಯ ಸಾರಿಗೆ ಸಾಧನವಾಗಿದೆ. ಇಲ್ಲಿ ಸೈಕಲ್‌ಗಳ ಬಳಕೆ ಕೂಡ ಹೆಚ್ಚು. ನಿಧಾನಗತಿಯಲ್ಲಿ ಹೆಜ್ಜೆ ಹಾಕಿದಾಗ, ಇಲ್ಲಿನ ಜಗತ್ತು ವಿವರವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ದಾರಿ ಪಕ್ಕದಲ್ಲಿ ಬೆಳೆದು ನಿಂತ ತರಹೇವಾರಿ ಹಣ್ಣುಗಳು ಬಾಯಲ್ಲಿ ನೀರೂರಿಸುತ್ತವೆ. ಹಾಗೆ ಹಸಿರು-ಹಣ್ಣು ಕಣ್ತುಂಬಿಕೊಳ್ಳುತ್ತಾ ಸಭಾಂಗಣದಂತಿದ್ದ ಅಂಗಡಿಯೊಂದನ್ನು ನಾವು ಹೊಕ್ಕೆವು. ದಾರಿಯ ತೋಟಗಳಲ್ಲಿ ಕಂಡಿದ್ದ ಹಣ್ಣುಗಳು ಸ್ಲೈಸ್ ರೂಪದಲ್ಲಿ ನಮ್ಮ ಟೇಬಲ್ ಮೇಲಿದ್ದವು. ರಸವತ್ತಾದ ಹಣ್ಣುಗಳು ಹೊಟ್ಟೆಗೆ ಇಳಿಯುವಾಗ 'ಡಾನ್ ಕಾ ತಯ್ ತು' ಜನಪದ ಹಾಡುಗಳು ಸ್ಥಳೀಯ ಕಲಾವಿದರಿಂದ ಅಲೆ ಅಲೆಯಾಗಿ ತೇಲಿಬಂದವು. ಡಾನ್ ತಾನ್, ಡಾನ್ ತಾ ಬಾ, ಡಾನ್ ಕಿಮ್, ಡಾನ್ ಕೊ, ಡಾನ್ ಟಾಮ್ ಎಂಬ ಜನಪದ ವಾದ್ಯಗಳ ಜತೆಗೆ ಕೊಳಲಿನ ಹಿಮ್ಮೇಳವೂ ಈ ಸಂಗೀತ ಕಛೇರಿಗಿತ್ತು. ತೆಂಗಿನ ಫ್ಯಾಕ್ಟರಿಗೂ ಭೇಟಿ ಕೊಟ್ಟೆವು. ಅಲ್ಲಿಯೇ ತಯಾರಾಗಿದ್ದ ಕೊಬ್ಬರಿ ಮಿಠಾಯಿ, ಚಾಕೊಲೇಟ್ ಸವಿದೆವು. ಕೊಬ್ಬರಿ ಐಸ್‌ಕ್ರೀಂ ಇಲ್ಲಿನ ಮತ್ತೊಂದು ವಿಶೇಷ. ಆಮೇಲೆ ಮರದ ದೋಣಿಯಲ್ಲಿ ರೈತ ಯುವತಿಯೊಬ್ಬಳು ನಮ್ಮನ್ನು ವಿಹಾರಕ್ಕೆ ಕರೆದೊಯ್ದಳು. ಸಮಯದ ಅಭಾವದಿಂದ ನಮ್ಮ ಮೆಕಾಂಗ್ ಡೆಲ್ಟಾ ಯಾನ ಆತುರವಾಗಿಯೇ ಮುಗಿದುಹೋಯಿತು. ವಾಪಸ್ ಬಂದ ಬಳಿಕ ಕೃಪಾಲ್ ಅಮನ್ನಾ ಅವರಿಂದ ಗೊತ್ತಾಗಿದ್ದು, ಈ ನದಿಯಲ್ಲಿ ನಮ್ಮ ಕಾಶ್ಮೀರದ ಡಲ್ ಸರೋವರದಂತೆ ತೇಲುವ ಮಾರುಕಟ್ಟೆಯೂ ಇದೆ ಎಂದು. ಡಲ್ ಸರೋವರಕ್ಕಿಂತಲೂ ದೊಡ್ಡ ತೇಲುವ ಮಾರುಕಟ್ಟೆ ಇಲ್ಲಿಯದು. ನಮ್ಮ ದೋಣಿಗಳು ಮಾರುಕಟ್ಟೆಯಲ್ಲಿರುವ ದೋಣಿಗಳ ಹತ್ತಿರಕ್ಕೆ ಹೋದರೆ ಅಲ್ಲಿ ವಿಯೆಟ್ನಾಂ ಬುಡಕಟ್ಟು ಜನಾಂಗಗಳ ತರಹೇವಾರಿ ಖಾದ್ಯಗಳೂ ಸವಿಯಲು ಸಿಗುತ್ತವೆ. ಅಂದದ ವಿಂಗ್ ಟ್ರಾಂಗ್ ಪಗೋಡಾ ಕೂಡ ಇಲ್ಲಿದೆ. ಇಲ್ಲಿನ ಹತ್ತಾರು ಜಲಮಾರ್ಗಗಳಲ್ಲಿ ಸಂಚರಿಸುತ್ತಾ ಹೋದರೆ ಹೊಸ ಹೊಸ ಜಗತ್ತುಗಳು ತೆರೆದುಕೊಳ್ಳುತ್ತಾ ಹೋಗುತ್ತವೆ. ವಿಯೆಟ್ನಾಂನ ಪ್ರವಾಸಿ ತಾಣಗಳ ಪೈಕಿ ಮೆಕಾಂಗ್ ಡೆಲ್ಟಾ ಒಂದು ಧ್ರುವತಾರೆ.

ಸುತ್ತಲಿನ ಪರಿಸರ ಹೆಕ್ಕಿ ಕೊಟ್ಟಿದ್ದನ್ನು ತೃಪ್ತಿಯಿಂದ ಉಣ್ಣು, ಮೈಮುರಿದು ದುಡಿ, ಪ್ರಕೃತಿಗೆ ಹೊಂದಿಕೊಂಡು ಬಾಳು – ಇದು ವಿಯೆಟ್ನಾಂ ಜನರ ಫಿಲಾಸಫಿ. ಇಲ್ಲಿನ ಹೆಣ್ಣು-ಗಂಡುಗಳೆಲ್ಲರದ್ದೂ ಏಕೆ ಜೀರೊ ಸೈಜ್ ಅರ್ಥಾತ್ ಸಪೂರ ದೇಹ ಎಂಬ ಪ್ರಶ್ನೆಗೆ ಅವರ ಊಟದ ಬೌಲ್‌ನಲ್ಲಿ ಉತ್ತರ ಸಿಕ್ಕಿತು. ಒಂದಿಷ್ಟು ಅಕ್ಕಿ ಪದಾರ್ಥ (ಗಂಜಿ, ನೂಡಲ್ಸ್, ಅನ್ನ), ಹೇರಳವಾದ ಹಣ್ಣು-ತರಕಾರಿ, ಸೊಪ್ಪು, ಮೇಲೊಂದಿಷ್ಟು ಮೀನು, ಇನ್ನೂ ಬೇಕಾದರೆ ಮಾಂಸ – ಈ ಆದ್ಯತೆಯಲ್ಲೇ ಅವರ ಊಟ. ಅಂದಹಾಗೆ, ಬೊನ್ ಬೊ ಥಾಟ್ ನಾಟ್ (ಅಕ್ಕಿಹಿಟ್ಟು, ತಾಳೆಬೆಲ್ಲದ ಕೇಕ್), ಬೊನ್ ಮಾಮ್ (ಮೀನು ನೂಡಲ್ಸ್ ಸೂಪು), ಕಾ ಖೊ ತೊ (ಹುರಿದು, ಬೇಯಿಸಿದ ಮೀನು) ಮೊದಲಾದ ಖಾದ್ಯಗಳ ಆತಿಥ್ಯ ನಿಮಗಿಲ್ಲಿ ಸಿಕ್ಕುತ್ತದೆ.

ನದಿತೀರದ ಬಿಂಬಗಳು ನೆನಪಿನ ಭಿತ್ತಿಯ ಆಲ್ಬಂನಲ್ಲಿ ಭದ್ರವಾಗುತ್ತಿರುವಾಗ ನಮ್ಮ ಬಸ್ ಮತ್ತೆ ನಿಧಾನವಾಗಿ ಹೋ ಚಿ ಮಿನ್ ಸಿಟಿಯತ್ತ ಹೊರಟಿತು. ರಸ್ತೆಯ ಅಕ್ಕಪಕ್ಕದ ಭತ್ತದ ಗದ್ದೆಗಳನ್ನು ಕಂಡಾಗ ನಾವು ಕರ್ನಾಟಕದ ವಿಜಯನಗರ ಜಿಲ್ಲೆಯ ಕಂಪ್ಲಿ ಪರಿಸರದಲ್ಲಿ ಸಾಗುತ್ತಿರುವಂತೆ ಭಾಸವಾಯಿತು. ಒಂದೇ ವ್ಯತ್ಯಾಸವೆಂದರೆ ಮೆಕಾಂಗ್ ಡೆಲ್ಟಾದ ಹಸಿರು ಮುಕ್ಕಳಿಸುವ ಗದ್ದೆಗಳ ನಡುವೆ ರೈತರ ಪೂರ್ವಜರ ಗೋರಿಗಳೂ ಇದ್ದವು!

ಹೌದು, ವಾಪಸ್ ವಿಮಾನ ಏರುವಾಗ ಮನಸ್ಸು 'ಕಮೊನ್ (ಧನ್ಯವಾದ) ವಿಯೆಟ್ನಾಂ' ಎಂದು ಹೇಳುತ್ತಿತ್ತು.

ತಲುಪುವುದು ಹೇಗೆ?

ಬೆಂಗಳೂರಿನಿಂದ ಈಗ ಹೋ ಚಿ ಮಿನ್ ಸಿಟಿಗೆ 'ವಿಯೆಟ್‌ಜೆಟ್ ಏರ್' ವಾರಕ್ಕೆ ನಾಲ್ಕು ದಿನ (ಸೋಮವಾರ, ಬುಧವಾರ, ಶುಕ್ರವಾರ ಮತ್ತು ಭಾನುವಾರ) ಅಗ್ಗದ ದರದಲ್ಲಿ ನೇರ ವಿಮಾನಯಾನ ಸೌಲಭ್ಯ ಕಲ್ಪಿಸಿದೆ. ಈ ನಗರದ ಸುತ್ತಲಿನಲ್ಲೇ ಅನೇಕ ಪ್ರವಾಸಿ ತಾಣಗಳಿದ್ದು, 4-5 ದಿನಗಳ ಪ್ರವಾಸ ಯೋಜಿಸಬಹುದು.

ಸ್ನೇಕ್ ವೈನ್!

ನೀವು ಬಗೆಬಗೆಯ ವೈನ್ ಕುಡಿದಿರಬಹುದು. ಆದರೆ, ಸ್ನೇಕ್ ವೈನ್ ಕುಡಿದಿದ್ದೀರಾ? ಅದೂ ಹಾವಿರುವ ಬಾಟಲಿಯಿಂದಲೇ ಬಾಗಿಸಿಕೊಂಡ ವೈನ್ ಅನ್ನು? ಹೌದು, ಮೆಕಾಂಗ್ ಡೆಲ್ಟಾದ ಅತ್ಯಂತ ಜನಪ್ರಿಯ ಪೇಯ ಸ್ನೇಕ್ ವೈನ್. ಹಾವು, ಚೇಳನ್ನು ಮುಳುಗಿಸಿಟ್ಟಿದ್ದ ವೈನ್‌ನ ಬಾಟಲಿಗಳನ್ನು ಕಂಡು ನಮಗೆಲ್ಲ ಗಾಬರಿಯಾಯಿತು. ಭತ್ತದಿಂದ ತಯಾರಿಸಿದ ವೈನ್‌ನಲ್ಲಿ ವಿಷಕಾರಿಯಾದ ಜೀವಂತ ಹಾವು ಹಾಕಿ, ಹುದುಗು ಬರಿಸುತ್ತಾರೆ. ವಿಶೇಷ ಗಿಡಮೂಲಿಕೆಗಳನ್ನೂ ಅದಕ್ಕೆ ಹಾಕುತ್ತಾರೆ. ಆಗ ಹಾವಿನ ವಿಷ ನಿಷ್ಕ್ರಿಯವಾಗುವುದಂತೆ. ಹಾಗೆ ತಯಾರಾದ ವೈನ್ ಆರೋಗ್ಯವನ್ನು ವೃದ್ಧಿಸುತ್ತದೆ ಎಂಬ ಪ್ರತೀತಿ ಇಲ್ಲಿನ ಜನರಲ್ಲಿದೆ. ಆದರೆ, ಇಂತಹ ವೈನ್ ಯಾವಾಗಲೂ ಸುರಕ್ಷಿತವಲ್ಲ ಎಂದು ವೈದ್ಯಲೋಕ ಎಚ್ಚರಿಸುತ್ತದೆ.

ADVERTORIAL

ಬ್ರಹ್ಮಾಂಡದ ಕೇಂದ್ರ

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com



ನರ್ಮದಾ ಘಾಟ್‌ನಲ್ಲಿ ವಿರಾಜಮಾನವಾಗಿ ನಿಂತಿರುವ ದೇವಿ ಅಹಿಲ್ಯಾ ಬಾಯಿ ಹೋಲ್ಕರ್ ಅವರ ಭವ್ಯ ಪ್ರತಿಮೆಯ ಮುಂದೆ ನಾನು ನಿಂತಿದ್ದೆ. ಅದರ ಮೇಲೆ "1727ರಿಂದ 1795" ಎಂಬ ಕೆತ್ತನೆ ಎದ್ದು ಕಾಣುತ್ತಿತ್ತು. ಅದನ್ನು ನೋಡನೋಡುತ್ತಲೇ ದೂರದೃಷ್ಟಿಯ ಆ ರಾಣಿಯ ಬಗ್ಗೆ ಹೃದಯಾಂತರಾಳದಿಂದ ಗೌರವ ತುಂಬಿಬಂತು. ಶತಮಾನಗಳ ನಂತರವೂ ಬೆರಗು ಮೂಡಿಸುವಂತೆ ಇಂದೋರ್ ನಗರದ ಭೂಚಿತ್ರಣವನ್ನು ಪರಿವರ್ತಿಸಿದ, ರಸ್ತೆಗಳನ್ನು ಹಾಗೂ ನದಿ ದಂಡೆಯ ಘಟ್ಟಗಳನ್ನು ನಿರ್ಮಿಸಿದ ಹಿರಿಮೆ ಅವರದ್ದು. ಅವರ ಸಾಧನೆಗಳು ಕೇವಲ ಆ ಕಾಲಘಟ್ಟಕ್ಕೆ ಮಾತ್ರವಲ್ಲ, ಇಂದಿನ ಮಾನದಂಡಗಳ ದೃಷ್ಟಿಯಿಂದಲೂ ಕ್ರಾಂತಿಕಾರಕ ಎನ್ನಿಸುವಂಥದ್ದಾಗಿವೆ.

ಒಂದೊಮ್ಮೆ ಮಧ್ಯ ಭಾರತದ ಪ್ರಮುಖ ಮರಾಠ ಸಾಮ್ರಾಜ್ಯಗಳಲ್ಲೊಂದಾಗಿದ್ದ ಹೋಲ್ಕರ್ ವಂಶಜರ ಆಳ್ವಿಕೆಯಲ್ಲಿದ್ದ ಇಂದೋರ್ ನಗರವು ಪ್ರಾಚೀನ ವೈಭವಕ್ಕೆ ಇಣುಕು ನೋಟ ನೀಡುವ ಕಿಟಕಿಯಂತೆ ಭಾಸವಾಗುತ್ತವೆ. ಆಜಾಬಾಜಿನಲ್ಲಿರುವ ಉಜ್ಜಯಿನಿ, ಮಂಡು, ಓಂಕಾರೇಶ್ವರ ಮತ್ತು ಮಹೇಶ್ವರ ಈ ಸ್ಥಳಗಳಿಗೆ ತೆರಳಲು ಕೂಡ ಇದು ಪ್ರಶಸ್ತ ಸ್ಥಳವಾಗಿದೆ. ಜೊತೆಗೆ, ಖಾದ್ಯ ಪ್ರಿಯರ ಸ್ವರ್ಗವೂ ಆಗಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ನಮ್ಮ ಕುಟುಂಬದವರು, ಅಂದರೆ ವೀಣಾ, ಸುಧೀರ್, ನೀಲ್, ಹೆತಾ, ಕಂದಮ್ಮ ರಯಾ, ನನ್ನ ಮಗಳು ಸಾರಾ ಹಾಗೂ ನನ್ನ ತಾಯಿ ಇಂದೋರ್ ಮತ್ತು ಮಹೇಶ್ವರಕ್ಕೆ ಪ್ರವಾಸಕ್ಕೆ ತೆರಳಿದ್ದೆವು. ಅದು ವಿವಿಧ ಪೀಳಿಗೆಯವರನ್ನು ಒಳಗೊಂಡಿದ್ದ ಪ್ರವಾಸ. ವಿಭಿನ್ನ ಆಸಕ್ತಿಗಳಿರುವವರು ಇದ್ದಾಗ ಎಲ್ಲರಿಗೂ ಒಪ್ಪಿಗೆಯಾಗುವ ಪ್ರವಾಸವನ್ನು ಯೋಜಿಸುವುದು ಒಂದು ಕಸರತ್ತೇ ಹೌದು. ಹೀಗಾಗಿ, "ನಮ್ಮೆಲ್ಲರ ಸಮಯ" ಹಾಗೂ "ನಮ್ಮದೇ ಸಮಯ" ಇವೆರಡಕ್ಕೂ ಒಪ್ಪುವಂತಹ ಸೂಕ್ತ ಸಂಯೋಜನೆಯಿಂದ ಕೂಡಿದ ಪ್ರವಾಸ ಯೋಜಿಸಲು ನಮ್ಮ ಕಸ್ಟಮೈಸ್ಡ್ ಹಾಲಿಡೇಸ್ ವಿಭಾಗದವರನ್ನು ಅವಲಂಬಿಸಿದ್ದೆವು. ಇದರಿಂದಾಗಿ, ನಮ್ಮ ಸಾಮಾನು-ಸರಂಜಾಮಿನ ವ್ಯವಸ್ಥಾಪನೆ ಬಗ್ಗೆ ಯಾವುದೇ ಚಿಂತೆಯಿಲ್ಲದೆ ಮುಕ್ತವಾಗಿ ಪ್ರಯಾಣಿಸಲು ನಮಗೆ ಸಾಧ್ಯವಾಯಿತು.

ಸ್ಥಳೀಯರು "ಬ್ರಹ್ಮಾಂಡದ ಕೇಂದ್ರ" ಎಂಬ ಅರ್ಥ ನೀಡುವ ಹೆಸರಿನಿಂದ ಕರೆಯುವ ದ್ವೀಪದಲ್ಲಿರುವ ಬಾಲೇಶ್ವರ ದೇಗುಲಕ್ಕೆ ಪ್ರಶಾಂತವಾಗಿ ಹರಿದು ಸಾಗುವ ನರ್ಮದಾ ನದಿಯಲ್ಲಿ ದೋಣಿ ಯಾನದ ಮೂಲಕ ನಮ್ಮ ಅನ್ವೇಷಣೆ ಮೊದಲಾಯಿತು. ನೀರಿನಿಂದ ಸುತ್ತುವರಿದಿರುವ ಹಾಗೂ ಶಾಂತ ಪರಿಸರದ ಮಡಿಲಿನಲ್ಲಿರುವ ಆ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕುವುದೇ ಒಂದು ರೀತಿಯ ಸಮಾಧಾನ ಭಾವ ಮೂಡಿಸುತ್ತದೆ. ಇನ್ನು ಸಂಜೆ ಅಲ್ಲಿ ನರ್ಮದಾ ಆರತಿ ಕಣ್ತುಂಬಿಕೊಂಡೆವು. ಅಲ್ಲಿನ ಘಾಟ್‌ಗಳನ್ನು ದೀಪಗಳಿಂದ ಬೆಳಗಿಸುವ, ಮಂತ್ರಘೋಷಗಳಿಂದ ಅನುರಣಿಸುವಂತೆ ಮಾಡುವ ಹಾಗೂ ಶ್ರದ್ಧಾಭಕ್ತಿಗಳಿಂದ ಕೂಡಿದ ಈ ಆಧ್ಯಾತ್ಮಿಕ ವಿಧಿಯು ಮನಸ್ಸನ್ನು ಹಗುರಾಗಿಸುವ ದಿವ್ಯ ಕ್ಷಣಗಳನ್ನು ಕೊಡಮಾಡುತ್ತದೆ.

ಮರುದಿನ ಬೆಳಿಗ್ಗೆ ವೀಣಾ, ಸುಧೀರ್ ಹಾಗೂ ನನ್ನ ಅಮ್ಮ 12 ಪವಿತ್ರ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಓಂಕಾರೇಶ್ವರಕ್ಕೆ ತೆರಳಿದರು. ನೀಲ್, ಹೆತಾ, ಕೂಸು ರಯಾ ಹಾಗೂ ನಾನು ಇಂದೋರ್‌ನಲ್ಲೇ ಅಡ್ಡಾಡಲೆಂದು ಉಳಿದುಕೊಂಡೆವು. ಪುನಃ ನದಿಯ ಸೆಳೆತಕ್ಕೆ ಓಗೊಟ್ಟು ಅಲ್ಲಿನ ಘಾಟ್‌ಗಳೆಡೆಗೆ ಹೊರಟೆವು. ಗತಕಾಲದ ಅಲ್ಲಿನ ಮೆಟ್ಟಿಲುಗಳ ಮೇಲೆ ಸಾಗುವಾಗ ಅವು ನಮ್ಮನ್ನು ಕಾಲಾತೀತ ಲೋಕಕ್ಕೆ ಕರೆದೊಯ್ಯುತ್ತಿವೆಯೇನೋ ಎಂಬಂತೆ ಭಾಸವಾಗುತ್ತದೆ. ಅದಕ್ಕೆ ಮುನ್ನ ನಾನು ವಾರಣಾಸಿಯ ಘಾಟ್‌ಗಳನ್ನು ನೋಡಿದ್ದೆ. ಅವಕ್ಕೆ ಹೋಲಿಸಿದರೆ ನರ್ಮದಾ ತಟದ ಘಾಟ್‌ಗಳು ಹೆಚ್ಚು ಸೌಮ್ಯವೂ ಪ್ರಶಾಂತತೆಯಿಂದ ಕೂಡಿರುವಂತೆಯೂ ಕಂಡುಬರುತ್ತವೆ. ಚಳಿಗಾಲದ ಸಂದರ್ಭದಲ್ಲಿ ಮತ್ತೊಮ್ಮೆ ಇಲ್ಲಿಗೆ ಬಂದು ನಿರುಮ್ಮಳವಾಗಿ ಸುಮ್ಮನೇ ಕುಳಿತು ಕಾಲವೇ ಸ್ತಬ್ಧವಾಗುವ ಭಾವವನ್ನು ಅನುಭವಿಸಬೇಕು ಎಂದು ನನ್ನಷ್ಟಕ್ಕೆ ನಾನು ಸಂಕಲ್ಪ ಮಾಡಿಕೊಂಡೆ.

ಅಲ್ಲಿನ ಘಟ್ಟಗಳ ಬಳಿಯೇ ಶಿಲ್ಪಕಲಾ ಕೆತ್ತನೆಯ ದೇವಾಲಯವೊಂದಿದೆ. ಅಲ್ಲಿ ವಿವಾಹಪೂರ್ವ ಫೋಟೋ ಷೂಟ್‌ಗಳು ನಡೆಯುವುದು ಸಾಮಾನ್ಯ. ದುಬೈ ಅಥವಾ ಪ್ಯಾರಿಸ್‌ನಂತಹ ಸ್ಥಳಗಳಲ್ಲಿ ಫೋಟೋ ಷೂಟ್‌ಗಳನ್ನು ಆಯೋಜಿಸುವಂತೆ ನಮ್ಮ ವೀಣಾ ವರ್ಲ್ಡ್‌ಗೆ ಸಾಕಷ್ಟು ಕೋರಿಕೆಗಳು ಬರುತ್ತವೆ. ಆದರೆ, ಪರಂಪರೆ ಹಾಗೂ ಸೊಬಗು ಮೇಳೈಸಿದಂತಿರುವ ನರ್ಮದಾ ತಟದ ಈ ದೇಗುಲದ ಸಾನ್ನಿಧ್ಯದಲ್ಲಿ, ಭಾರತದಲ್ಲಿ ಇಂತಹ ಅದೆಷ್ಟು ಅಮೂಲ್ಯ ನಿಧಿಗಳು ಇವೆಯಲ್ಲವೇ ಎಂದೆನ್ನಿಸಿತು. ಅದೇ ವೇಳೆ, ಸ್ಥಳೀಯ ಛಾಯಾಗ್ರಾಹಕರೊಬ್ಬರು ನಮ್ಮ ಬಳಿ ಬಂದು, "ಫೋಟೋ ಷೂಟ್ ಮಾಡಿಸಿಕೊಳ್ಳಿ" ಎಂದು ಕೇಳಿದರು. ನಾನು ಹಿಂದೆ-ಮುಂದೆ ಯೋಚಿಸುತ್ತಿರುವಾಗಲೇ ಒಪ್ಪಿಗೆ ಸೂಚಿಸುವಂತೆ ನೀಲ್ ಕಡೆಯಿಂದ ಉತ್ತೇಜನದ ಧ್ವನಿ ಬಂತು. ಫೋಟೋ ಷೂಟ್‌ಗೆ ಒಪ್ಪಿಕೊಳ್ಳುವಂತೆ ನೀಲ್ ಹೇಳಿದ್ದು ಒಳ್ಳೆಯದೇ ಆಯಿತು. ಅವು ನಮಗೆ ಬಹಳ ಸಂತಸದ ಕ್ಷಣಗಳಾದವು. ಮರೆಯಲಾಗದ ಅನುಭವವನ್ನು ಹಾಗೂ ಹೃದಯವನ್ನು ಬೆಚ್ಚಗಾಗಿಸುವ ಸುಂದರ ಛಾಯಾಚಿತ್ರಗಳನ್ನು ನಮಗೆ ಲಭ್ಯವಾಗಿಸಿದವು.

ನಂತರ, ಅದೇ ದಿನ ನಾವೆಲ್ಲರೂ ಒಂದೆಡೆ ಸೇರಿ ಮಹೇಶ್ವರದ ಕೈಮಗ್ಗದ ಘಟಕಗಳಿಗೆ ಭೇಟಿ ನೀಡಿದೆವು. ಮಹೇಶ್ವರಿ ಎಂಬ ಹೆಸರಿನ ಹೆಸರಾಂತ ಸೀರೆಗಳನ್ನು ಸಿದ್ಧಪಡಿಸುವ ಘಟಕಗಳು ಇವಾಗಿವೆ. ಅಂದಂತೆ, ಮಹೇಶ್ವರವು ಪರಂಪರೆಯಲ್ಲಿ ಬೇರುಬಿಟ್ಟ ಜವಳಿ ವಲಯವೇ ಹೌದು. ಅಲ್ಲಿನ ರೇಹ್ವಾ ಸೊಸೈಟಿಯಲ್ಲಿ ಕುಶಲಕರ್ಮಿಗಳು ನೂಲಿನ ಎಳೆಗಳಿಗೆ ಬಣ್ಣ ಲೇಪಿಸುವುದನ್ನು, ಮಗ್ಗಗಳಲ್ಲಿ ನೂಲು ನೇಯುವುದನ್ನು ಹಾಗೂ ನಾಜೂಕಿನಿಂದ ವಿನ್ಯಾಸಗಳ ಚಿತ್ತಾರ ಮೂಡಿಸುವುದನ್ನು ನೋಡಿ ನಾವೆಲ್ಲರೂ ಬೆರಗುಗೊಂಡೆವು. ಅಲ್ಲಿ ಪ್ರತಿಯೊಂದು ಸೀರೆಯ ಮೇಲೂ ಅದನ್ನು ನೇಯ್ದ ವ್ಯಕ್ತಿಯ ಹೆಸರನ್ನೂ ಅಚ್ಚೊತ್ತುವುದು ವಿಶೇಷವೇ ಸೈ. ಕೆಲವಾರು ಸೀರೆಗಳು ಹಾಗೂ ದುಪ್ಪಟ್ಟಾಗಳನ್ನು ಖರೀದಿಸಿ ಅಲ್ಲಿಂದ ನಿರ್ಗಮಿಸಿದೆವು.

ಅದಾದ ಮೇಲೆ ನಮ್ಮ ಖಾದ್ಯ-ಸವಿ ಸಾಹಸಗಾಥೆಯು ಇಂದೋರ್‌ನ ಛಪ್ಪನ್ ದುಖಾನ್‌ನೊಂದಿಗೆ ಶುರುವಾಯಿತು. ಇದು 56 ಆಹಾರ ಮಳಿಗೆಗಳಿರುವ ಒಂದು ಸ್ಟ್ರೀಟ್ ಫುಡ್ ರಸ್ತೆಯಲ್ಲಿದೆ. ನಾವು ಅಲ್ಲಿದ್ದ ಸಂದರ್ಭದಲ್ಲಿ ಮಳೆ ಬರುತ್ತಿತ್ತಾದರೂ ನಮ್ಮ ಉತ್ಸಾಹವೇನೂ ಕಡಿಮೆಯಾಗಲಿಲ್ಲ. ಹುಳಿಯುಕ್ತ ಕಚೋರಿ ಇನ್ನಿತರ ತಿನಿಸು ಸವಿದು ನಂತರ ಸ್ಥಳೀಯ ಜನಜನಿತ ಜಾನ್ನಿ ಹಾಟ್ ಡಾಗ್ಸ್‌ಗೆ ಹೋಗಿ ದಬೇಲಿ, ಕಾರ್ನ್ ಚಾಟ್ ಹಾಗೂ ಕುಲ್ಹಾದ್ ಪಿಜ್ಜಾಗಳ ರುಚಿ ನೋಡಿದೆವು (ಹೌದು, ಮಣ್ಣಿನ ಬೋಗುಣಿಯಲ್ಲಿ ನೀಡಲಾಗುವ ಪಿಜ್ಜಾ ಅದು!). ಅವುಗಳ ಪ್ರತಿಯೊಂದು ತುಣುಕು ಕೂಡ ವಿಶಿಷ್ಟ ಸ್ವಾದದಿಂದಾಗಿ ಬಾಯಲ್ಲಿ ನೀರೂರಿಸುತ್ತಿತ್ತು. ಅಲ್ಲಿ ಹೊಟ್ಟೆ ತುಂಬಾ ವಿವಿಧ ತಿನಿಸುಗಳನ್ನು ಸವಿದು ಹಸನ್ಮುಖದೊಂದಿಗೆ ಹೊರಟೆವು.

ನಂತರ ಹೋಲ್ಕರ್ ವಂಶಸ್ಥರು 19ನೇ ಶತಮಾನದ ಅಂತ್ಯ ಹಾಗೂ 20ನೇ ಶತಮಾನದ ಆರಂಭದ ಕಾಲಘಟ್ಟದಲ್ಲಿ ನಿರ್ಮಿಸಿದ ಲಾಲ್‌ಬಾಗ್ ಅರಮನೆಗೆ ಹೋದೆವು. ಯೂರೋಪ್ ಶೈಲಿಯಿಂದ ಪ್ರೇರಿತವಾಗಿರುವ ಈ ಅರಮನೆಯು ಅಮೃತಶಿಲೆಯ ಸ್ತಂಭಗಳು, ಸ್ವರ್ಣಲೇಪಿತ ಒಳಮಾಳಿಗೆಗಳು ಹಾಗೂ ನರ್ತನಕ್ಕೆ ಅನುಕೂಲವಾಗಲೆಂದು ಸ್ಪ್ರಿಂಗುಗಳನ್ನು ಬಳಸಿ ನಿರ್ಮಿಸಲಾದ ಬಾಲ್ ರೂಮ್‌ನಿಂದ ಕೂಡಿದೆ. ಒಂದೊಮ್ಮೆ ಕಂಗೊಳಿಸುವ ಗುಲಾಬಿ ಉದ್ಯಾನಗಳಿಂದ ಸುತ್ತುವರಿಯಲ್ಪಟ್ಟಿದ್ದ ಈ ಲಾಲ್‌ಬಾಗ್ ಪ್ರಸ್ತುತ ರಾಜವೈಭವ, ಸೊಬಗು ಹಾಗೂ ಚರಿತ್ರೆಯ ಕುರುಹಾಗಿದೆ.

ಅಲ್ಲಿಂದ ಮುಂದೆ ರಾಜವಾಡ ಅರಮನೆಗೆ ಹೋದೆವು. ಇದು ಇಂದೋರ್‌ನ ಹೃದಯ ಭಾಗದಲ್ಲಿರುವ ಏಳು ಅಂತಸ್ತುಗಳ ನಿರ್ಮಿತಿಯಾಗಿದೆ. 200ಕ್ಕೂ ಹೆಚ್ಚು ವರ್ಷಗಳ ಹಿಂದೆ ನಿರ್ಮಾಣಗೊಂಡ ಈ ಅರಮನೆಯು ಮರಾಠಾ, ಮೊಘಲ್ ಹಾಗೂ ಫ್ರೆಂಚ್ ಶೈಲಿಯ ಸಂಯೋಜನೆಯಿಂದ ಕೂಡಿದೆ. ಕಲ್ಲಿನ ಬುನಾದಿಯ ಮೇಲಿರುವ ಮರದ ಅಂತಸ್ತುಗಳ ಈ ಅರಮನೆಯು ಕೆಲವು ವರ್ಷಗಳ ಹಿಂದೆ ಬೆಂಕಿ ಅವಘಡಕ್ಕೆ ತುತ್ತಾದರೂ ಸಾಂಸ್ಕೃತಿಕ ಹೆಗ್ಗುರುತಾಗಿ ಗಮನ ಸೆಳೆಯುತ್ತದೆ. ಸನಿಹದಲ್ಲೇ, ಹೋಲ್ಕರ್ ಛಾತ್ರಿಗಳು, ಅಂದರೆ ಹೋಲ್ಕರ್ ಆಳ್ವಿಕೆಗಾರರಿಗೆ ಸಮರ್ಪಿಸಲಾದ ಸ್ಮಾರಕಗಳಿದ್ದು, ಹಿಂದಿನ ಶತಮಾನಗಳ ರಾಜಠೀವಿಯ ನೆನಪುಗಳನ್ನು ಮೀಟುತ್ತವೆ.

ರಾತ್ರಿ ಸರಾಫ ಬಜಾರ್‌ಗೆ ಎಡತಾಕಿದೆವು. ಇದು ಹಗಲಿನಲ್ಲಿ ಆಭರಣ ಮಾರುಕಟ್ಟೆಯಾಗಿ ಹಾಗೂ ರಾತ್ರಿಯಲ್ಲಿ ಖಾದ್ಯ ತಾಣವಾಗಿ ಚಲನಶೀಲತೆಯಿಂದಿರುವ ಪ್ರದೇಶವಾಗಿದೆ. ತಮ್ಮ ವ್ಯಾಪಾರ ತಾಣವು ಸದಾ ಲವಲವಿಕೆ ಹಾಗೂ ಸುರಕ್ಷಿತವಾಗಿರಬೇಕೆಂಬ ಉದ್ದೇಶದಿಂದ ಆಭರಣ ವರ್ತಕರು ರೂಪಿಸಿದ ಯೋಜನೆ ಇದಾಗಿದೆ. ಅಲ್ಲಿ ನಾವು ಜೋಶಿ ವಡಾವಾಲಾಗೆ ಹೋದೆವು. ಇಂದೋರ್ ಪ್ರವಾಸದಲ್ಲಿ ನನ್ನ ಕಟ್ಟಕಡೆಯ ಆಹಾರದ ಸವಿ ಅದಾಗಿತ್ತು! ಅಲ್ಲಿ ಬಾಯಲಿ ನೀರೂರಿಸುವ ಗರಡು ಚಾಟ್, ಭುತ್ತೆ ಕಾ ಕೀಸ್, ಬಿಸಿಬಿಸಿ ತಂದೂರಿ, ಮಾಲ್ಪುವಾ, ರಾಬ್ಡಿಯೊಂದಿಗೆ ಜಲೇಬಿ ಹಾಗೂ ನನ್ನ ಅಚ್ಚುಮೆಚ್ಚಿನ ಜಾಮೂನ್ ಸವಿದೆ. ರಾತ್ರಿ 10ರಿಂದ ಬೆಳಗಿನ ಜಾವ 3ರವರೆಗೆ ಚಟುವಟಿಕೆಯಿಂದಿರುವ ಮಾರುಕಟ್ಟೆ ಇದಾಗಿದ್ದು, ತಡರಾತ್ರಿಯ ಅಲೆಮಾರಿಗಳಿಗೆ ಹೇಳಿ ಮಾಡಿಸಿದಂತಿದೆ.

ನಮ್ಮ ಈ ಪ್ರವಾಸವು ಕೇವಲ ಪ್ರೇಕ್ಷಣೀಯ ಸ್ಥಳದ ದರ್ಶನವಾಗಲೀ ಅಥವಾ ಆಹಾರ ಸವಿಯುವ ಅವಧಿಯಾಗಲೀ ಆಗಿರಲಿಲ್ಲ. ಅದಕ್ಕೊಂದು ಕೌಟುಂಬಿಕ ಆಯಾಮವಿತ್ತು. ಸಾರಾ, ನೀಲ್ ಹಾಗೂ ಹೆತಾ ಒಂದು ರೂಮಿನಲ್ಲಿ ಉಳಿದುಕೊಂಡಿದ್ದರು. ಪುಟಾಣಿ ರಯಾಗೆ ಆಗಷ್ಟೇ ಅತ್ತೆಯೂ ಆಗಿದ್ದ ಸಾರಾಳಿಗೆ ಅದೇ ಕಾರಣಕ್ಕಾಗಿ ಸಂಭ್ರಮಿಸುವ ಅವಧಿಯೂ ಆಗಿತ್ತು. ಪುಟ್ಟಿಯ ಖುಷಿಗಾಗಿ ಕತೆಗಳನ್ನು ಹಾಗೂ ಹಾಡುಗಳನ್ನು ಹೇಳುತ್ತಾ ನಾವೂ ಸಂತಸಪಟ್ಟೆವು. ಇಲ್ಲಿ ಹೇಳಬೇಕಾದ ಮತ್ತೊಂದು ಸಂಗತಿಯೆಂದರೆ, ಪುಟ್ಟ ಕೂಸಿನೊಂದಿಗೆ ಪ್ರವಾಸ ಮಾಡುವುದು ಜನರು ಅಂದುಕೊಂಡಿರುವುದಕ್ಕಿಂತಲೂ ಸುಲಭವಾದುದಾಗಿದೆ. ಅದರಲ್ಲೂ, ಕುಟುಂಬ ಸದಸ್ಯರ ಬೆಂಬಲವಿದ್ದರಂತೂ ಇದು ಇನ್ನಷ್ಟು ಸಲೀಸು. ಆ ಪ್ರವಾಸದ ವೇಳೆ ನಾವು ಅನುಭವಿಸಿದ ಅನುಬಂಧದ ಕ್ಷಣಗಳು ಅಮೂಲ್ಯವಾದವು.

ಪ್ರವಾಸದ ಕಡೆಯ ದಿನ ವಿಮಾನ ನಿಲ್ದಾಣಕ್ಕೆ ಹೊರಡಲು ಬ್ಯಾಗ್‌ಗಳನ್ನು ಪ್ಯಾಕ್ ಮಾಡಿದೆವು. ನಾವು ಪ್ರತಿಯೊಬ್ಬರೂ ಡಿಜಿಯಾತ್ರಾ ಚೆಕ್-ಇನ್ ಮಾಡಿರುವುದನ್ನು ಸಾರಾ ಖಾತರಿಪಡಿಸಿಕೊಂಡಳು. ಆಕೆ ಡಿಜಿಟಲ್ ವಿಧಾನದಲ್ಲಿ ತನ್ನ ಅಜ್ಜಿಯನ್ನು ಮುನ್ನಡೆಸುತ್ತಿದ್ದುದನ್ನು ನೋಡುವುದು ಅತ್ಯಾಪ್ತವೆನ್ನಿಸುತ್ತಿತ್ತು. ಭಾರತೀಯ ಕುಟುಂಬಗಳ ಪ್ರವಾಸಗಳು ಹೀಗೆಯೇ ಇರುತ್ತವೆ ನೋಡಿ. ತಂತ್ರಜ್ಞಾನವನ್ನು ಲೀಲಾಜಾಲವಾಗಿ ಬಳಸುವ ಯುವ ತಲೆಮಾರಿನವರು ಹಾಗೂ ಅನುಭವಿಗಳಾದ ಹಿರಿಯರು ಪರಸ್ಪರ ಒಂದನ್ನೊಂದು ಕಲಿಯುವುದು, ಸ್ಥಳ, ಸಮಯ ಹಾಗೂ ನೆನಪುಗಳನ್ನು ಹಂಚಿಕೊಳ್ಳುವ ಸಂದರ್ಭಗಳು ಅವಾಗಿರುತ್ತವೆ.

ಇಂದೋರ್ ನಮ್ಮನ್ನು ಸಮ್ಮೋಹನಗೊಳಿಸಿತ್ತು. ಭಾರತದ ಅತ್ಯಂತ ಸ್ವಚ್ಛ ನಗರಿಯೆಂಬ ಹೆಗ್ಗಳಿಕೆಗೆ ಪಾತ್ರವಾದ ಈ ನಗರವು ನಮಗೆ ಒಂದು ವಿರಾಮದ ಅವಧಿಯನ್ನಷ್ಟೇ ಅಲ್ಲದೆ ಅದಕ್ಕೂ ಮಿಗಿಲಾದುದನ್ನು ಮೊಗೆದು ನೀಡಿತ್ತು. ಆನಂದದ ಕ್ಷಣಗಳು, ಪರಂಪರೆಯ ದರ್ಶನ, ಕೌಟುಂಬಿಕ ಅನುಬಂಧ ಹಾಗೂ ಎಣಿಕೆಗೂ ಮೀರಿದ ನೆನಪುಗಳನ್ನು ಲಭ್ಯವಾಗಿಸಿತು. ಭವ್ಯ ಅರಮನೆಗಳ ನೋಟ, ನದಿದಂಡೆಯ ಘಟ್ಟಗಳ ಪ್ರಶಾಂತ ರಮಣೀಯತೆ, ಕೈನೇಯ್ಗೆಯ ಸೀರೆಗಳ ಪಾರಂಪರಿಕ ಸ್ಪರ್ಶ ಹಾಗೂ ನಡುರಾತ್ರಿ ಸವಿದ ಖಾದ್ಯಗಳ ಸವಿ ಹೀಗೆ ಅಲ್ಲಿನ ಪ್ರತಿಕ್ಷಣವೂ ಅರ್ಥಪೂರ್ಣವಾಗಿತ್ತು.

ನಿಮ್ಮ ಬ್ಯಾಗುಗಳನ್ನೂ ಸಿದ್ಧಪಡಿಸಿಕೊಳ್ಳಿ; ಪ್ರೀತಿಪಾತ್ರರನ್ನೂ ಒಗ್ಗೂಡಿಸಿಕೊಳ್ಳಿ ಹಾಗೂ ಹೊರಡಲು ತಯಾರಾಗಿ. ಜೀವಂತಿಕೆಯನ್ನು ಉಕ್ಕಿಸುವ ಭರಪೂರ ಕತೆಗಳಿಂದ ತುಂಬಿದ ತಾಣಗಳು ನಮ್ಮ ಭಾರತದಲ್ಲಿ ಬಹಳಷ್ಟಿವೆ. ನೀವು ಎಂದೆಂದೂ ಮರೆಯಲಾಗದ ಕೌಟುಂಬಿಕ ಪ್ರವಾಸವನ್ನು ಅನುಭವಿಸಲು ತಡ ಇನ್ನೇಕೆ?

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್‌ಸೈಟ್ www.veenaworld.com ನಲ್ಲೂ ಓದಬಹುದು.

ನಿಮ್ಮೊಳಗಿನ ಅನ್ವೇಷಕನನ್ನು ಬಡಿದೆಬ್ಬಿಸಲು ಸಿದ್ಧರಿದ್ದೀರಾ?
ಬನ್ನಿ ಪರ್ಯಟನೆ ಮಾಡೋಣ!

ಭೋಪಾಲ್ ಸಾಂಚಿ ಮದಾಯಿ (4D) Nov 16 Feb 8 -31K - 41K	ಇಂದೋರ್ ಉಜ್ಜಯಿನಿ ಮಂಡು (5D) Sep 16, 30, Oct 7, 22 35000 - 50000	ಭೋಪಾಲ್ ಪಚಮಟೀ, ಮದಾಯಿ (6D) Nov 18 45000 - 55000	ಬೆಸ್ಟ್ ಆಫ್ ಮಧ್ಯಪ್ರದೇಶ್ (8D) Oct 5, 26, Nov 9, 23 57000-67000
ಟೈಗರ್ ಮ್ಯಾರಥಾನ್ ಮಧ್ಯಪ್ರದೇಶ್ (8D) Nov 15 65000 - 75000	ಜ್ಯೂವೆಲ್ಸ್ ಆಫ್ ಮಧ್ಯಪ್ರದೇಶ್ (10D) Oct 3, Dec 5 - 65K - 75K	ವಂಡರ್ಸ್ ಆಫ್ ಮಧ್ಯಪ್ರದೇಶ್ (13D) Nov 16, Dec 7 - 90K - 100K	ಆಲ್ ಆಫ್ ಮಧ್ಯಪ್ರದೇಶ್ 17 Days - Nov 19 106000 - 116000

T&C apply.

Email: travel@veenaworld.com | veenaworld.com
Toll-Free: 1800 313 5555 | 1800 22 7979
Veena World Bengaluru: Jayanagar 887 997 2217 | Indiranagar 887 997 9500

Book Online 365 days 24x7 Visit veenaworld.com

ಸಮೃದ್ಧ ಭಾರತದ ಮಡಿಲಿನಲ್ಲಿ ವಿಹರಿಸಿ 'ವೀಣಾ ವರ್ಲ್ಡ್'ನೊಂದಿಗೆ
ಮಧ್ಯಪ್ರದೇಶ
ಚಲೋ, ಬ್ಯಾಗ್ ಭರೋ, ನಿಖಲ್ ಪಡೋ!

VEENA WORLD
Travel. Explore. Celebrate Life.

ಫಿಡೆ ಮಹಿಳಾ ವಿಶ್ವಕಪ್: ಇಂದು ಎರಡನೇ ಆಟ

ಡ್ರಾ ಮಾಡಿಕೊಂಡ ಹಂಪಿ, ದಿವ್ಯಾ

ಶನಿವಾರ ನಡೆದ ಫಿಡೆ ವಿಶ್ವಕಪ್ ಫೈನಲ್‌ನ ಮೊದಲ ಕ್ಲಾಸಿಕಲ್ ಆಟದಲ್ಲಿ ದಿವ್ಯಾ ದೇಶಮುಖ್ ವಿರುದ್ಧ ಕೋನೇರು ಹಂಪಿ (ಎಡ) ಅವರು ನಡೆಯನ್ನು ಬರೆದುಕೊಂಡರು ಫಿಡೆ ಚಿತ್ರ

ಬಟುಮಿ (ಜಾರ್ಜಿಯಾ), (ಪಿಟಿಐ): ಪ್ರತಿಭಾನ್ವಿತ ಐಎಂ ಆಟಗಾರ್ತಿ ದಿವ್ಯಾ ದೇಶಮುಖ್ ಅವರು ಫಿಡೆ ಮಹಿಳಾ ಚೆಸ್ ವಿಶ್ವಕಪ್ ಫೈನಲ್‌ನ ಮೊದಲ ಕ್ಲಾಸಿಕಲ್ ಆಟದಲ್ಲಿ ದಿಗ್ಗಜ ಆಟಗಾರ್ತಿ ಕೋನೇರು ಹಂಪಿ ವಿರುದ್ಧ ಪಾಯಿಂಟ್ ಹಂಚಿಕೊಂಡರು. ಶನಿವಾರ ನಡೆದ ಈ ಆಟದಲ್ಲಿ ಇಬ್ಬರಿಗೂ ಮುನ್ನಡೆಯುವ ಅವಕಾಶಗಳಿದ್ದವು.

ಎರಡು ಬಾರಿಯ ರ‍್ಯಾಪಿಡ್ ವಿಶ್ವ ಚಾಂಪಿಯನ್ ಆಗಿರುವ ಗ್ರ್ಯಾಂಡ್‌ಮಾಸ್ಟರ್ ಹಂಪಿ ಭಾನುವಾರ ನಡೆಯುವ ಎರಡನೇ ಆಟದಲ್ಲಿ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ. ಈ ಆಟವೂ ಡ್ರಾ ಆದಲ್ಲಿ ಸೋಮವಾರ ಅಲ್ಪಾವಧಿಯ ಟೈಬ್ರೇಕ್ ಆಟಗಳ ಮೂಲಕ ಪಂದ್ಯದ ವಿಜೇತರನ್ನು ನಿರ್ಧರಿಸಲಾಗುವುದು.

19 ವರ್ಷ ವಯಸ್ಸಿನ ದಿವ್ಯಾ ತಮ್ಮ ಪ್ರಮುಖ ಪಡೆಯನ್ನು ಬಲಿಗೊಟ್ಟು ಅನುಭವಿ ಎದುರಾಳಿಗೆ ರಾಜನನ್ನು ಕ್ಯಾಸಲ್ ಮಾಡುವ ಅವಕಾಶ ನಿರಾಕರಿಸಿದರು. ಕಂಪ್ಯೂಟರ್ ಪ್ರಕಾರ 14ನೇ ನಡೆಯವರೆಗೆ ದಿವ್ಯಾ ಅವರಿಗೆ ಮೇಲುಗೈಯಿತ್ತು. ಆದರೆ ಕಳೆದುಕೊಂಡ ಪಡೆಯಿಂದಾದ ನಷ್ಟ ಸರಿದೂಗಿಸಲು ಅವರು ಪರದಾಡಬೇಕಾಯಿತು. ಈ ಹಂತದಲ್ಲಿ ಇಬ್ಬರೂ ಕೆಲವು ಪಡೆಗಳನ್ನು ಕಳೆದುಕೊಂಡರು.

41 ನಡೆಗಳ ನಂತರ 'ನಡೆಗಳ ಪುನರಾವರ್ತನೆ' (ತ್ರೀ ಫೋಲ್ಡ್ ರಿಪಿಟೇಷನ್) ಆಧಾರದಲ್ಲಿ ಆಟ ಡ್ರಾ ಆಯಿತು.

'ಇಬ್ಬರೂ ಆಕ್ರಮಣಕ್ಕೆ ಸಿದ್ಧತೆ ನಡೆಸುವ ಹಂತದಲ್ಲಿ ತಪ್ಪುಗಳನ್ನು ಮಾಡಿದರು. ಹಂಪಿ 10ನೇ ನಡೆಯಲ್ಲಿ ಮತ್ತು ದಿವ್ಯಾ 14ನೇ ನಡೆಯಲ್ಲಿ ಮಾಡಿದ ತಪ್ಪುಗಳಿಂದ ಮೇಲುಗೈ ಕಳೆದುಕೊಂಡು ಪಂದ್ಯ ಸಮಬಲಕ್ಕೆ ಬಂದಿತು' ಎಂದು ಗ್ರ್ಯಾಂಡ್‌ಮಾಸ್ಟರ್ ಪ್ರವೀಣ್ ತಿಪ್ಸೆ ಅಭಿಪ್ರಾಯಪಟ್ಟರು.

ಡ್ರಾ ಪಂದ್ಯದಲ್ಲಿ ತಾನ್–ಲೀ

ಮೂರನೇ ಸ್ಥಾನಕ್ಕಾಗಿ ಚೀನಾದ ಇಬ್ಬರು ಆಟಗಾರ್ತಿಯರ ನಡುವೆ ನಡೆಯುತ್ತಿರುವ ಸೆಣಸಾಟದ ಮೊದಲ ಆಟವನ್ನು ಮಾಜಿ ವಿಶ್ವ ಚಾಂಪಿಯನ್ ಝೊಂಗ್‌ಯಿ ತಾನ್ ಅವರು ಅಗ್ರ ಶ್ರೇಯಾಂಕದ ಲೀ ಟಿಂಗ್ಜಿ ಜೊತೆ ಡ್ರಾ ಮಾಡಿಕೊಂಡರು. 34ನೇ ನಡೆಯಲ್ಲಿ ಆಟ ಡ್ರಾ ಆಯಿತು.

ಮರುಹೋರಾಟಕ್ಕೆ ಗಿಲ್, ರಾಹುಲ್ ಬಲ

ಮ್ಯಾಂಚೆಸ್ಟರ್ ಟೆಸ್ಟ್: ಬೆನ್ ಸ್ಟೋಕ್ಸ್ ಅಮೋಘ ಶತಕ • ಕಾರ್ಸ್ ಬೀಸಾಟ

ಶುಭಮನ್ ಗಿಲ್ ಮತ್ತು ಕೆ.ಎಲ್. ರಾಹುಲ್ ಪಿಟಿಐ ಚಿತ್ರ

ಬೆನ್ ಸ್ಟೋಕ್ಸ್ ಶತಕ ಸಂಭ್ರಮ –ಎಎಫ್‌ಪಿ ಚಿತ್ರ

• ಸಿದ್ದಿ ಕಿರಣ್

ಮ್ಯಾಂಚೆಸ್ಟರ್: ಭಾರತದ ಬ್ಯಾಟರ್‌ಗಳ ಮುಂದೆ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ಸಹ ಆಟಗಾರರು ರನ್‌ಗಳ ದೊಡ್ಡ ಗುಡ್ಡೆ ಪೇರಿಸಿದರು. ಅಮೋಘ ಶತಕ ಬಾರಿಸಿದ ಬೆನ್ ಸ್ಟೋಕ್ಸ್ ಬಲದಿಂದ ಇಂಗ್ಲೆಂಡ್ ತಂಡವು ಭಾರತಕ್ಕೆ ಸೋಲಿನ ಆತಂಕ ಮೂಡಿಸಿತು. ಆದರೆ ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ನಾಯಕ ಶುಭಮನ್ ಗಿಲ್ ಸೋಲು ತಪ್ಪಿಸಲು ದಿಟ್ಟ ಆಟವಾಡಿದರು. ಭಾರತದ ಮರುಹೋರಾಟಕ್ಕೆ ಬಲತುಂಬಿದರು.

ವಿಶ್ವದ ಅಗ್ರಮಾನ್ಯ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿರುವ ಬೆನ್ ಸ್ಟೋಕ್ಸ್ ಶನಿವಾರ ಸಿಡಿಸಿದ ಅಮೋಘ ಶತಕವು (141; 198ಎಸೆತ) ದಾಖಲೆಯ ಪುಟ ಸೇರಿತು. ಇದರಿಂದಾಗಿ ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 157.1 ಓವರ್‌ಗಳಲ್ಲಿ 669 ರನ್ ಗಳಿಸಿತು. ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಆತಿಥೇಯರು ಗಳಿಸಿದ ಅತಿದೊಡ್ಡ ಇನಿಂಗ್ಸ್ ಮೊತ್ತ ಇದಾಗಿದ್ದು, 311 ರನ್‌ಗಳ ಮುನ್ನಡೆಯನ್ನೂ ಸಾಧಿಸಿತು.

ಪ್ರವಾಸಿ ಬಳಗದ ಗಾಯದ ಮೇಲೆ ಬರೆ ಎಳೆಯುವ ಕೆಲಸವನ್ನು ವೇಗಿ ಕ್ರಿಸ್ ವೋಕ್ಸ್ ಮಾಡಿದರು. ಇನಿಂಗ್ಸ್‌ನ ಮೊದಲ ಓವರ್‌ನ ಸತತ ಎರಡು ಎಸೆತಗಳಲ್ಲಿ ಯಶಸ್ವಿ ಜೈಸ್ವಾಲ್ ಮತ್ತು ಸಾಯಿ ಸುದರ್ಶನ್ ವಿಕೆಟ್ ಕಬಳಿಸಿದರು. ಆಗ ತಂಡದ ಖಾತೆಯಲ್ಲಿ ಒಂದೂ ರನ್ ಇರಲಿಲ್ಲ!

ಈ ಹಂತದಲ್ಲಿ ಭಾರತ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಮೂಡಿತ್ತು. ಆದರೆ ಗಿಲ್ (ಬ್ಯಾಟಿಂಗ್ 78) ಮತ್ತು ಕೆ.ಎಲ್. ರಾಹುಲ್ (ಔಟಾಗದೇ 87) ಆತಂಕ ದೂರ ಮಾಡಿದರು. ಅದರಿಂದಾಗಿ ದಿನದಾಟದ ಮುಕ್ತಾಯಕ್ಕೆ ಭಾರತ ತಂಡವು 2 ವಿಕೆಟ್‌ಗಳಿಗೆ 174ರನ್ ಗಳಿಸಿತು. ಪಂದ್ಯದಲ್ಲಿ ಇನ್ನೊಂದು ದಿನ ಬಾಕಿಯಿದೆ. ಇಂಗ್ಲೆಂಡ್ ತಂಡದ ಬಾಕಿ ಚುಕ್ತಾ ಮಾಡಲು ಇನ್ನೂ 137 ರನ್ ಕೂಡಗಳಿಸಬೇಕಿದೆ.

ಸ್ಟೋಕ್ಸ್ ಮಿಂಚು: ಪಂದ್ಯದ ನಾಲ್ಕನೇ ದಿನವಾದ ಶನಿವಾರ ಸ್ಟೋಕ್ಸ್ ಅವರು ಸ್ಪಷ್ಟ ಯೋಜನೆಯೊಂದಿಗೆ ಕ್ರೀಸ್‌ಗೆ ಬಂದರು. ದಿನದ ಎರಡನೇ ಓವರ್ ಹಾಕಿದ ಮೊಹಮ್ಮದ್ ಸಿರಾಜ್ ಎಸೆತವನ್ನು ಸ್ಟೋಕ್ಸ್ ಬೌಂಡರಿಗೆ ಬಾರಿಸಿದರು. ಇನ್ನೊಂದು ಎಸೆತದಲ್ಲಿ ಎಡಗೈ ಬ್ಯಾಟರ್ ಸ್ಟೋಕ್ಸ್ ಅವರು ಕವರ್ಸ್ ಮೂಲಕ ಬೌಂಡರಿ ಗೆರೆ ದಾಟಿಸಿದರು. ಶುಕ್ರವಾರದ ಆಟದಲ್ಲಿ ಸ್ಟೋಕ್ಸ್ ಅವರು ಎಸೆತ ಗಳನ್ನು ಟೈಮಿಂಗ್ ಮಾಡುವಲ್ಲಿ ತುಸು ಪರದಾಡಿದ್ದರು. ಸ್ನಾಯು ಸೆಳೆತವೂ ಅವರನ್ನು ಕಾಡಿತ್ತು. ಆದರೆ ಜೋ ರೂಟ್ ಅವರ ಅಮೋಘ ಬ್ಯಾಟಿಂಗ್‌ನಿಂದಾಗಿ ಭಾರತದ ಆಟಗಾರರು ಸುಸ್ತಾದರು. ಗಾಯಗೊಂಡು ನರಳಿದರು. ಶನಿವಾರ ಸ್ಟೋಕ್ಸ್ ಆಟವೇನೂ ಭಿನ್ನವಾಗಿರಲಿಲ್ಲ. ಫೀಲ್ಡರ್‌ಗಳಿಗೆ ಭರಪೂರ ಕೆಲಸ ಹಚ್ಚಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಅವರು ಮೂರು ವರ್ಷಗಳ ನಂತರ ಶತಕ ಗಳಿಸಿದರು. ಇದು ಅವರಿಗೆ 14ನೇಯದ್ದಾಗಿದೆ.

ಭಾರತ ತಂಡದ ಪ್ರಮುಖ ವೇಗಿ ಜಸ್‌ಪ್ರೀತ್ ಬೂಮ್ರಾ, ಸಿರಾಜ್, ಸ್ಪಿನ್ ಜೋಡಿ ರವೀಂದ್ರ ಜಡೇಜ ಮತ್ತು ವಾಷಿಂಗ್ಟನ್ ಸುಂದರ್ ಅವರೆಲ್ಲರೂ ಧಾರಾಳವಾಗಿ ರನ್‌ಗಳನ್ನು ಬಿಟ್ಟು ಕೊಟ್ಟರು. ಸ್ಟೋಕ್ಸ್ ಅಷ್ಟೇ ಅಲ್ಲ. 10ನೇ ಕ್ರಮಾಂಕದ ಬ್ರೈಡನ್ ಕಾರ್ಸ್ (47 ರನ್) ಕೂಡ ತಮ್ಮ ಬ್ಯಾಟಿಂಗ್ ಪ್ರತಿಭೆ ಮೆರೆದರು.

ಈ ನಡುವೆ ಫೀಲ್ಡಿಂಗ್ ನಿಯೋಜನೆ, ಬೌಲಿಂಗ್ ಸಂಯೋಜನೆ ಮತ್ತು ತಂತ್ರಗಾರಿಕೆಯನ್ನು ನಿರ್ವಹಿಸುವಲ್ಲಿ ಸುಸ್ತಾಗಿದ್ದ ಶುಭಮನ್ ಗಿಲ್ ಅವರಿಗೆ ಒಂದಿಷ್ಟು ಹೊತ್ತು ವಿಶ್ರಾಂತಿ ಪಡೆಯುವ ಅವಕಾಶವೂ ಸಿಗಲಿಲ್ಲ. ಇಂಗ್ಲೆಂಡ್ ಆಲೌಟ್ ಆಗಿ, ಎರಡನೇ ಇನಿಂಗ್ಸ್ ಆರಂಭವಾಯಿತು. ಆದರೆ ಇನಿಂಗ್ಸ್‌ನ ಆರನೇ ಎಸೆತವನ್ನು ನಾಲ್ಕನೇ ಕ್ರಮಾಂಕದ ಬ್ಯಾಟರ್ ಗಿಲ್ ಅವರೇ ಬಂದು ಎದುರಿಸ-ಬೇಕಾಯಿತು.

ಆದರೆ ಗಿಲ್ ಮತ್ತು ರಾಹುಲ್ ದಿನದಾಟ ಮುಗಿಯುವವರೆಗೂ ಬೌಲರ್‌ಗಳಿಗೆ ಯಾವುದೇ ಅವಕಾಶ ನೀಡಲಿಲ್ಲ. ದೀರ್ಘ ಜೊತೆಯಾಟವಾಡಿ, ಐದನೇ ದಿನಕ್ಕೂ ಆಟ ಕಾಯ್ದಿಟ್ಟುಕೊಂಡರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 358 (114.1 ಓವರ್‌ಗಳಲ್ಲಿ)
ಇಂಗ್ಲೆಂಡ್: 669 (157.1 ಓವರುಗಳಲ್ಲಿ)
(ಗುರುವಾರ 7 ವಿಕೆಟ್‌ಗೆ 554)

ಸ್ಟೋಕ್ಸ್ ಸಿ ಸುದರ್ಶನ್ ಬಿ ಜಡೇಜ 141 (198ಎ, 4x11, 6x3)
ಡಾಸನ್ ಬಿ ಬೂಮ್ರಾ 26 (65ಎ, 4x3)
ಕಾರ್ಸ್ ಸಿ ಸಿರಾಜ್ ಬಿ ಜಡೇಜ 47 (54ಎ, 4x3, 6x2)
ಆರ್ಚರ್ ಔಟಾಗದೇ 2 (3ಎ)
ಇತರೆ: 38 (ಬೈ 8, ಲೆಗ್‌ಬೈ 15, ನೋಬಾಲ್ 14, ವೈಡ್ 1)
ವಿಕೆಟ್ ಪತನ: 8–563 (ಲಿಯಾಮ್ ಡಾಸನ್, 139.3), 9–658 (ಬೆನ್‌ಸ್ಟೋಕ್ಸ್, 155.3), 10–669 (ಬ್ರೈಡನ್ ಕಾರ್ಸ್, 157.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 33–5–112–2; ಅನ್ಶುಲ್ ಕಂಬೋಜ್ 18–1–89–1; ಮೊಹಮ್ಮದ್ ಸಿರಾಜ್ 30–4–140–1; ಶಾರ್ದೂಲ್ ಠಾಕೂರ್ 11–0–55–0; ರವೀಂದ್ರ ಜಡೇಜ 37.1–0–143–4; ವಾಷಿಂಗ್ಟನ್ ಸುಂದರ್ 28–4–107–2

ಎರಡನೇ ಇನಿಂಗ್ಸ್:
ಭಾರತ: 2 ವಿಕೆಟ್‌ಗೆ 174 (63 ಓವರ್, ಶನಿವಾರದ ಅಂತ್ಯಕ್ಕೆ)

ಜೈಸ್ವಾಲ್ ಸಿ ರೂಟ್ ಬಿ ವೋಕ್ಸ್ 0 (4ಎ)
ರಾಹುಲ್ ಬ್ಯಾಟಿಂಗ್ 87 (210ಎ, 4x8)
ಸುದರ್ಶನ್ ಸಿ ಬ್ರೂಕ್ ಬಿ ವೋಕ್ಸ್ 0 (1ಎ)
ಗಿಲ್ ಬ್ಯಾಟಿಂಗ್ 78 (167ಎ, 4x10)
ಇತರೆ: 9 (ಬೈ 4, ನೋಬಾಲ್ 4, ವೈಡ್ 1)
ವಿಕೆಟ್ ಪತನ: 1–0 (ಯಶಸ್ವಿ ಜೈಸ್ವಾಲ್, 0.4), 2–0 (ಸಾಯಿ ಸುದರ್ಶನ್, 0.5)
ಬೌಲಿಂಗ್: ವೋಕ್ಸ್ 15–3–48–2; ಆರ್ಚರ್ 11–2–40–0; ಕಾರ್ಸ್ 10–2–29–0; ಡಾಸನ್ 22–8–36–0; ಜೋ ರೂಟ್ 5–1–17–0.

ಸಂಕ್ಷಿಪ್ತ ಸುದ್ದಿ

37 ಎಸೆತಗಳಲ್ಲಿ ಶತಕ ಸಿಡಿಸಿದ ಟಿಮ್ ಡೇವಿಡ್

ಟಿಮ್ ಡೇವಿಡ್ ಶತಕ ಸಂಭ್ರಮ ಎಎಫ್‌ಪಿ ಚಿತ್ರ

ಬಸೆಟಿಯರ್ (ಸೇಂಟ್ ಕಿಟ್ಸ್), (ಎಪಿ): ಟಿಮ್ ಡೇವಿಡ್ (ಔಟಾಗದೇ 102, 37ಎ, 4x6, 6x11) ಅವರು ಶುಕ್ರವಾರ ಟಿ20 ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ಪರ ಅತಿ ವೇಗದ ಶತಕ ದಾಖಲಿಸಿದರು.

ಕೇವಲ ಮಿಂಚಿನ ಶತಕದ ನೆರವಿನಿಂದ ಆಸ್ಟ್ರೇಲಿಯಾ ಶುಕ್ರವಾರ ಮೂರನೇ ಟಿ20 ಪಂದ್ಯದಲ್ಲಿ 6 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸಿತು.

ಈ ಗೆಲುವಿನೊಡನೆ ಆಸ್ಟ್ರೇಲಿಯಾ ಐದು ಪಂದ್ಯಗಳ ಸರಣಿಯಲ್ಲಿ 3–0 ಗೆಲುವಿನ ಮುನ್ನಡೆ ಪಡೆಯಿತು. ವೆಸ್ಟ್ ಇಂಡೀಸ್‌ನ ಆರಂಭ ಆಟಗಾರ ಶಾಯ್ ಹೋಪ್ (ಔಟಾಗದೇ 102, 57, 4x8, 6x6) ಅವರ ಶತಕ ಫಲ ನೀಡಲಿಲ್ಲ. ಆತಿಥೇಯರು 20 ಓವರುಗಳಲ್ಲಿ 4 ವಿಕೆಟ್‌ಗೆ 214 ರನ್ ಬಾರಿಸಿದರು.

ಗೆಲ್ಲಲು 215 ಗಳಿಸಬೇಕಿದ್ದ ಕಾಂಗರೂ ಪಡೆ 23 ಎಸೆ-ತಗಳಿರುವಂತೆ 4 ವಿಕೆಟ್ ನಷ್ಟದಲ್ಲಿ ಅದನ್ನು ಗುರಿಸಾಧಿಸಿತು. 'ಪಂದ್ಯದ ಆಟಗಾರ'ನಾದ ಡೇವಿಡ್ ಅವರು ಮುರಿಯದ ಐದನೇ ವಿಕೆಟ್‌ಗೆ ಮಿಚೆಲ್ ಓವೆನ್ (ಔಟಾಗದೇ 36, 16ಎ, 2x3, 3x6) ಜೊತೆಗೂಡಿ 128 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಒಂದು ಹಂತದಲ್ಲಿ ಆಸ್ಟ್ರೇಲಿಯಾ 87 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡು ತೊಂದರೆಗೆ ಸಿಲುಕಿತ್ತು.

ಐಸಿಸಿ ಸದಸ್ಯ ರಾಷ್ಟ್ರಗಳ ಆಟಗಾರರಲ್ಲಿ ಟಿಮ್ ಡೇವಿಡ್ ಅವರ ಶತಕ ಮೂರನೇ ಅತಿ ವೇಗದ್ದು ಎನಿಸಿದೆ. ಭಾರತದ ರೋಹಿತ್ ಶರ್ಮಾ ಮತ್ತು ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ತಲಾ 35 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಟಿ.ಟಿ.: ಸತ್ಯನ್–ಆಕಾಶ್ ಜೋಡಿಗೆ ಡಬಲ್ಸ್ ಪ್ರಶಸ್ತಿ

ಲಾಗೋಸ್ (ನೈಜೀರಿಯಾ) (ಪಿಟಿಐ): ಭಾರತದ ಸತ್ಯನ್ ಜ್ಞಾನಶೇಖರನ್ ಮತ್ತು ಆಕಾಶ್ ಪಾಲ್ ಅವರು ಶನಿವಾರ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾರತದ ಜೋಡಿ ಫೈನಲ್‌ನಲ್ಲಿ ಫ್ರಾನ್ಸ್‌ನ ಲಿಯೊ ಡಿ ನೊಡ್ರೆಸ್–ಜೂಲ್ಸ್ ರೋಲೆಂಡ್ ಜೋಡಿಯನ್ನು 11–7, 11–3, 11–4, 9–11, 13–11 ರಿಂದ ಕೇವಲ 22 ನಿಮಿಷಗಳಲ್ಲಿ ಸೋಲಿಸಿದರು.

ಆದರೆ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಅನುಭವಿ ಶ್ರೀಜಾ ಅಕುಲಾ, ಎರಡನೇ ಶ್ರೇಯಾಂಕದ ಹೊನೊಕಾ ಹಶಿಮೊಟೊ ಅವರೆದುರು 48 ನಿಮಿಷಗಳ ಸೆಣಸಾಟದಲ್ಲಿ ಸೋಲನುಭವಿಸಿದರು. ಹಶಿಮೊಟೊ ಕೊನೆಯಲ್ಲಿ ಹೋರಾಡಿ 11–7, 11–3, 11–4, 9–11, 13–11 ರಿಂದ ಗೆದ್ದರು.

ವಿಶ್ವ ವಿಶ್ವವಿದ್ಯಾಲಯಗಳ ಕ್ರೀಡಾ ಕೂಟ: ಪ್ರಣೀತ್ ಕೌರ್‌ಗೆ ಬೆಳ್ಳಿ

ಎಸ್ಸೆನ್ (ಜರ್ಮನಿ): ಒತ್ತಡದಲ್ಲಿ ಗುರಿತಪ್ಪಿದ ಭಾರತದ ಬಿಲ್ಲುಗಾರ್ತಿ ಪ್ರಣೀತ್ ಕೌರ್ ಅವರು ವಿಶ್ವ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಬೆಳ್ಳಿ ಪದಕಕ್ಕೆ ತೃಪ್ತಿಪಡಬೇಕಾಯಿತು. ಅವರು ಶನಿವಾರ ನಡೆದ ಫೈನಲ್‌ನಲ್ಲಿ ಕೇವಲ ಒಂದು ಪಾಯಿಂಟ್ ಅಂತರದಲ್ಲಿ ದಕ್ಷಿಣ ಕೊರಿಯಾದ ಮೂನ್ ಇಯುನ್ ಅವರಿಗೆ ಸೋತರು.

ಕ್ವಾಲಿಫಿಕೇಷನ್ ಸುತ್ತಿನ ನಂತರ ಪ್ರಣೀತ್ ಅಗ್ರಸ್ಥಾನದಲ್ಲಿ ಇದ್ದರು. ಈ ಕೂಟದ ಆರ್ಚರಿಯಲ್ಲಿ ಭಾರತದ ಒಟ್ಟು ನಾಲ್ಕು ಪದಕಗಳನ್ನು ಗೆದ್ದಂತೆ ಆಗಿದೆ. ಇದಕ್ಕೆ ಮೊದಲು, ಮಿಶ್ರ ತಂಡ ವಿಭಾಗದಲ್ಲಿ ಚಿನ್ನ, ಪುರುಷರ ತಂಡ ವಿಭಾಗದಲ್ಲಿ ಬೆಳ್ಳಿ ಮತ್ತು ಮಹಿಳೆಯರ ಟೀಮ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿತ್ತು.

ಮಹಾರಾಣಿ ಟ್ರೋಫಿ ಕ್ರಿಕೆಟ್ ಟೂರ್ನಿಗೆ ಕೆಎಸ್‌ಸಿಎ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಇದೇ ಮೊದಲ ಬಾರಿಗೆ ಮಹಿಳೆಯರಿಗಾಗಿ 'ಮಹಾರಾಣಿ ಟ್ರೋಫಿ' ಲೀಗ್ ಕ್ರಿಕೆಟ್ ಟೂರ್ನಿಯ ಆಯೋಜಿಸಲು ಸಿದ್ಧತೆ ನಡೆಸಿದೆ.

ಈ ಆರಂಭಿಕ ಟಿ20 ಲೀಗ್‌ನಲ್ಲಿ ಐದು ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಟೂರ್ನಿಯ ಪಂದ್ಯಗಳನ್ನು ನಗರದ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಸಲಾಗುವುದು. ಫೈನಲ್ ಮಾತ್ರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಎಂದು ಸಂಸ್ಥೆಯ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಭಾನುವಾರದಿಂದ ಟೂರ್ನಿಯ ಕೆಲವು ಫ್ರ್ಯಾಂಚೈಸಿಗಳು ಪ್ರತಿಭಾಶೋಧ ಆರಂಭಿಸಲಿವೆ. ಅದಕ್ಕಾಗಿ ಟ್ರಯಲ್ಸ್ ಆಯೋಜಿಸಲಾಗುತ್ತಿದೆ. ಪುರುಷರ ವಿಭಾಗದಲ್ಲಿ ಗ್ರಾಮಾಂತರ ಪ್ರದೇಶದ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಮಹಾರಾಜ ಟ್ರೋಫಿ ಟೂರ್ನಿಯು ಕೆಲವು ವರ್ಷಗಳಿಂದ ನಡೆಯುತ್ತಿದೆ. ರಾಜ್ಯದ ಮಹಿಳಾ ಕ್ರಿಕೆಟ್ ಪ್ರತಿಭಾನ್ವಿತರಿಗೂ ಅವಕಾಶ ಕೊಡುವ ಉದ್ದೇಶದಿಂದ ಈ ಟೂರ್ನಿ ಆರಂಭಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ರಾಜನುಕುಂಟೆಯಲ್ಲಿರುವ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ಭಾನುವಾರ ಮೈಸೂರು ವಾರಿಯರ್ಸ್ ತಂಡವು ಪ್ರತಿಭಾ ಶೋಧ ಆಯೋಜಿಸಿದೆ.

ನ್ಯೂಜಿಲೆಂಡ್‌ಗೆ ರೋಚಕ ಜಯ

ಹರಾರೆ (ಎಎಫ್‌ಪಿ): 'ಪಂದ್ಯದ ಆಟಗಾರ' ಮ್ಯಾಟ್ ಹೆನ್ರಿ ಅವರು ಕೊನೆಯ ಓವರಿನಲ್ಲಿ ಬರೇ 3 ರನ್ ನೀಡಿ 2 ವಿಕೆಟ್ ಪಡೆಯುವುದರೊಂದಿಗೆ ನ್ಯೂಜಿಲೆಂಡ್ ಟಿ20 ಕ್ರಿಕೆಟ್ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಶನಿವಾರ ದಕ್ಷಿಣ ಆಫ್ರಿಕಾ ತಂಡವನ್ನು 3 ರನ್‌ಗಳಿಂದ ಸೋಲಿಸಿತು.

ನ್ಯೂಜಿಲೆಂಡ್ 5 ವಿಕೆಟ್‌ಗೆ 180 ರನ್ ಗಳಿಸಿತ್ತು. ಮೊತ್ತ ಬೆನ್ನತ್ತಿದ ಹರಿಣಗಳ ಪಡೆಗೆ ಗೆಲ್ಲಲು ಕೊನೆಯ ಓವರಿನಲ್ಲಿ 7 ರನ್‌ಗಳು ಬೇಕಿದ್ದವು.

ಸ್ಕೋರುಗಳು: ನ್ಯೂಜಿಲೆಂಡ್: 20 ಓವರುಗಳಲ್ಲಿ 5 ವಿಕೆಟ್‌ಗೆ 180 (ಟಿಮ್ ಸೀಫರ್ಟ್ 30, ಡೆವಾನ್ ಕಾನ್ವೆ 47, ರಚಿನ್ ರವೀಂದ್ರ 47; ಲುಂಗಿ ಗಿಡಿ 24ಕ್ಕೆ2); ದಕ್ಷಿಣ ಆಫ್ರಿಕಾ 20 ಓವರುಗಳಲ್ಲಿ 6 ವಿಕೆಟ್‌ಗೆ 177 (ಲುಹಾನ್ ಡಿ ಪ್ರಿಟೋರಿಯಸ್ 51, ರೀಝಾ ಹೆಂಡ್ರಿಕ್ಸ್ 37, ಡೆವಾಲ್ಡ್ ಬ್ರೆವಿಸ್ 31; ಮ್ಯಾಟ್ ಹೆನ್ರಿ 19ಕ್ಕೆ2).

ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ವೆನ್ನಲಾ ಕಲಗೂಟ್ಲಾ

ಬ್ಯಾಡ್ಮಿಂಟನ್: ವೆನ್ನಲಾ, ತನ್ವಿಗೆ ಕಂಚು

ಸೋಲೊ (ಇಂಡೊನೇಷ್ಯಾ) (ಪಿಟಿಐ): ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿಯರಾದ ತನ್ವಿ ಶರ್ಮಾ ಮತ್ತು ವೆನ್ನಲಾ ಕಲಗೂಟ್ಲಾ ಅವರು ಏಷ್ಯಾ ಜೂನಿಯರ್ ವೈಯಕ್ತಿಕ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದರು.

ಭಾರತದ ಬ್ಯಾಡ್ಮಿಂಟನ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಬ್ಬರು ಆಟಗಾರ್ತಿಯರು ಒಂದೇ ಆವೃತ್ತಿಯಲ್ಲಿ ತಲಾ ಒಂದು ಪದಕ ಗೆದ್ದು ವಿಜಯ ವೇದಿಕೆಯಲ್ಲಿ ನಿಂತ ಸಾಧನೆ ಮಾಡಿದರು. ಉಭಯ ಆಟಗಾರ್ತಿಯರು ಸೆಮಿಫೈನಲ್‌ಗಳನ್ನು ಪ್ರವೇಶಿಸಿದ್ದರು.

ನಾಲ್ಕರ ಸುತ್ತಿನ ಮೊದಲ ಪಂದ್ಯದಲ್ಲಿ ವೆನ್ನಲಾ 15–21, 18–21ರಿಂದ ಚೀನಾದ ಲಿಯು ಸಿ ಯಾ ವಿರುದ್ಧ ಸೋತರು. 37 ನಿಮಿಷ ನಡೆದ ಈ ಪಂದ್ಯದಲ್ಲಿ ವೆನ್ನಲಾ ಅವರು ಎದುರಾಳಿಗೆ ಕಠಿಣ ಪೈಪೋಟಿಯೊಡ್ಡಿದ್ದರು.

ಇನ್ನೊಂದು ಪಂದ್ಯದಲ್ಲಿ ತನ್ವಿ ಶರ್ಮಾ 13–21, 14–21ರಿಂದ ಎಂಟನೇ ಶ್ರೇಯಾಂಕದ ಯಿನ್ ಯೀ ಕಿಂಗ್ ವಿರುದ್ಧ ಪರಾಭವಗೊಂಡರು.

ಟಿ.ಟಿ: ತನಿಷ್ಕಾ, ತಮೋಘ್ನಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ತನಿಷ್ಕಾ ಕಪಿಲ್ ಕಾಲಭೈರವ ಹಾಗೂ ಎಂ. ತಮೋಘ್ನ

ಮೈಸೂರು: ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ ಹಾಗೂ ಬೆಂಗಳೂರಿನ ಎಂ. ತಮೋಘ್ನ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದ ಒಳಗಿನ ಬಾಲಕಿಯರು ಹಾಗೂ ಬಾಲಕರ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದ ಜಿಮ್ನಾಷಿಯಂ ಹಾಲ್‌ನಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ತನಿಷ್ಕಾ 6-11, 11-9, 11-9, 11-7ರಿಂದ ರಾಶಿ ರಾವ್ ಅವರನ್ನು ಸುಲಭವಾಗಿ ಮಣಿಸಿದರು.

ಸೆಮಿಫೈನಲ್ಸ್‌ನಲ್ಲಿ ತನಿಷ್ಕಾ 11-5, 11-1, 11-8ರಿಂದ ಕ್ರಿಶಾ ಕರ್ಕೆರಾ ಅವರನ್ನು ಹಾಗೂ ರಾಶಿ 11-8, 11-6, 11–5ರಿಂದ ಸಾಕ್ಷ್ಯ ಸಂತೋಷ್ ಅವರನ್ನು ಪರಾಭವಗೊಳಿಸಿದ್ದರು.

ತೀವ್ರ ಪೈಪೋಟಿಯಿಂದ ಕೂಡಿದ್ದ ಬಾಲಕರ ವಿಭಾಗದ ಫೈನಲ್‌ನಲ್ಲಿ ತಮೋಘ್ನ 8-11, 11-7, 15-13, 1-11, 11-8ರಿಂದ ರೆಯಾಂಶ್ ಜಲನ್ ಅವರನ್ನು ಮಣಿಸಿದರು.

ಸೆಮಿಫೈನಲ್ಸ್‌ನಲ್ಲಿ ತಮೋಘ್ನ 5-11, 11-7, 11-8, 9-11, 11-7ರಿಂದ ವೇದಾಂತ್ ವಸಿಷ್ಠ ಅವರನ್ನು ಹಾಗೂ ರೆಯಾಂಶ್ 11 -4, 10-12, 13-15, 12-10, 11-2ರಿಂದ ಆದ್ಯೋತ್ ಎದುರು ಗೆಲುವು ದಾಖಲಿಸಿದ್ದರು.

ಯುಎಇಯಲ್ಲಿ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ

ಸೆ.14ಕ್ಕೆ ಭಾರತ–ಪಾಕ್ ಪಂದ್ಯ

ಕರಾಚಿ/ನವದೆಹಲಿ (ಪಿಟಿಐ): ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಸೆಪ್ಟೆಂಬರ್ 9 ರಿಂದ 28ರವರೆಗೆ ಪುರುಷರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ನಡೆಯಲಿದೆ. ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 14ರಂದು ಮುಖಾಮುಖಿಯಾಗಲಿವೆ.

ಲೀಗ್ ಹಂತದಲ್ಲಿ ಉಭಯ ತಂಡಗಳು ಒಂದೇ ಗುಂಪಿನಲ್ಲಿ ಆಡಲಿವೆ. ಸೂಪರ್ ಫೋರ್ ಹಂತದಲ್ಲಿ ಭಾರತ ಮತ್ತು ಪಾಕ್ ತಂಡಗಳು ಸೆ. 21ರಂದು (ಭಾನುವಾರ) ಮತ್ತೆ ಹಣಾಹಣಿ ನಡೆಸುವ ನಿರೀಕ್ಷೆ ಇದೆ. ಈ ಟೂರ್ನಿಯಲ್ಲಿ ಭಾರತವು ತನ್ನ ಮೊದಲ ಪಂದ್ಯವನ್ನು ಸೆ 10ರಂದು ಯುಎಇ ಎದುರು ಆಡಲಿದೆ. ಭಾರತ ತಂಡವು ತನ್ನ ಎಲ್ಲ ಪಂದ್ಯಗಳನ್ನೂ ದುಬೈನಲ್ಲಿ ಆಡಲಿದೆ.

ಎ ಗುಂಪಿನಲ್ಲಿ; ಭಾರತ, ಪಾಕಿಸ್ತಾನ, ಯುಎಇ ಮತ್ತು ಒಮನ್, ಬಿ ಗುಂಪಿನಲ್ಲಿ; ಶ್ರೀಲಂಕಾ, ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ಹಾಂಗ್‌ಕಾಂಗ್ ತಂಡಗಳು ಆಡಲಿವೆ.

'ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ದಿನಾಂಕಗಳನ್ನು ಪ್ರಕಟಿಸಲು ನನಗೆ ಅತೀವ ಸಂತಸವಾಗಿದೆ. ಈ ಪ್ರತಿಷ್ಠಿತ ಟೂರ್ನಿಯು ಸೆ 9ರಿಂದ 28ರವರೆಗೆ ನಡೆಯಲಿದೆ. ಸೊಗಸಾದ ಕ್ರಿಕೆಟ್ ಟೂರ್ನಿ ಇದಾಗಲಿದೆ' ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥ ಮೊಹಸಿನ್ ನಖ್ವಿ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

ಟೂರ್ನಿಯಲ್ಲಿ ಒಟ್ಟು 19 ಪಂದ್ಯಗಳು ನಡೆಯಲಿವೆ. ದುಬೈ ಮತ್ತು ಅಬುಧಾಬಿಯಲ್ಲಿ ಕೆಲವು ಪಂದ್ಯಗಳು ಆಯೋಜನೆಗೊಳ್ಳಲಿವೆ.

ಜುಲೈ 24ರಂದು ನಡೆದಿದ್ದ ಎಸಿಸಿ ಸಭೆಯಲ್ಲಿ ಈ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. 25 ಸಹ ಸದಸ್ಯ ರಾಷ್ಟ್ರಗಳ ತಂಡಗಳು ಸಭೆಯಲ್ಲಿ ಭಾಗವಹಿಸಿದ್ದವು. ಈ ಟೂರ್ನಿಯ ಆತಿಥ್ಯವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಹಿಸಲಿದೆ. ಆದರೆ ತಟಸ್ಥ ಸ್ಥಳವಾದ ಯುಎಇಯಲ್ಲಿ ಟೂರ್ನಿ ನಡೆಯಲಿದೆ.